ಹುಬ್ಬಳ್ಳಿ
ಮಂಗಳವಾರ, 30 ಜೂನ್ 2026
ಸಂಪುಟ 16, ಸಂಚಿಕೆ 97, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಜರ್ಮನಿ: ಗುಂಡಿನ ದಾಳಿಗೆ 6 ಸಾವು | 02
ಬಂಗಾಳ: ಏನಾಸಂ ಅನುಷ್ಠಾನಕ್ಕೆ ಚಾಲನೆ | 02
ಸೇನಾ ಬಲಕ್ಕೆ ಸಿಂದೂರ ಸಾಕ್ಷಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ನಮ್ಮ ಮನೋದ್ರಿಕ್ತ ಮನಸ್ಸನ್ನು ಜಯಿಸುವ ಗುರುವಿನ ಶಕ್ತಿಯ ಮುಂದೆ ಸಾವಿರ ಆನೆಗಳನ್ನು ಜಯಿಸುವುದು ಏನೂ ಅಲ್ಲ.

▲ಶ್ರೀ ರಮಣ ಮಹರ್ಷಿ

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಪ್ರತಿಪಕ್ಷ ನಾಯಕರಾಗಿ ಖರ್ಗೆ ಮರು ನೇಮಕ

• **ಹೊಸದಿಲ್ಲಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಪಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.

• ಪುಟ ೭

ಅಪರಾಧ ನಡೆದ ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

• **ಪುಣೆ:** ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ.

• ಪುಟ ೭

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

• ಪುಟ ೭

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

• ಪುಟ ೭

ವಿದ್ಯುತ್ ಖಾಸಗೀಕರಣ: ಕ್ಯಾಬಿನೆಟ್ ಅಭಿಪ್ರಾಯ ಪರಿಗಣನೆ- ಡಿಕೆಶಿ

• ಪುಟ ೩

ಸಾಗರ ಬಂದ್ ಉತ್ತಮ

• ಪುಟ ೩



ಸ್ಕ್ಯಾನ್ ಅಸ್ತ್ರ

ನಕಲಿ ಔಷಧಗಳ ವಿರುದ್ಧ ಭಾರತದ ಡಿಜಿಟಲ್ ಕವಚ

• ಪುಟ ೭

ಸುದ್ದಿ ಸಮಗ್ರ

ಮನೆ ಮನೆಗೆ ಬಿಎಲ್‌ಒ ಭೇಟಿ | ಸಿಇಒ ಅನ್ಬುಕುಮಾರ್ ಮಾಹಿತಿ


ಇಂದಿನಿಂದ ಎಸ್‌ಐಆರ್

ಎಸ್‌ಐಆರ್ ಪ್ರಕ್ರಿಯೆ-2026ರ ವೇಳಾಪಟ್ಟಿ

ಪ್ರಕ್ರಿಯೆಯ ವಿವರ	ನಿಗದಿಪಡಿಸಿದ ದಿನಾಂಕ
■ ಅರ್ಹತಾ ದಿನಾಂಕ	ಅಕ್ಟೋಬರ್ 1, 2026
■ ಬಿಎಲ್‌ಒಗಳಿಂದ ಮನೆಮನೆಗೆ ಭೇಟಿ, ಪರಿಶೀಲನೆ	ಜೂನ್ 30 ರಿಂದ ಜುಲೈ 29
■ ಮತಗಟ್ಟೆಗಳ ತಾರ್ಕಿಕ ಮರುಹೊಂದಾಣಿಕೆ-ವಿಂಗಡಣೆ	ಜುಲೈ 29 ರೊಳಗೆ
■ ಕರಡು ಮತದಾರರ ಪಟ್ಟಿ ಪ್ರಕಟಣೆ	ಆಗಸ್ಟ್ 5
■ ಹಕ್ಕು, ಆಕ್ಷೇಪಣೆ ಸಲ್ಲಿಸುವ ಅವಧಿ	ಆ.5 ರಿಂದ ಸೆ.4
■ ಆಕ್ಷೇಪಣೆಗಳ ಪರಿಶೀಲನೆ, ವಿಲೇವಾರಿ ಪ್ರಕ್ರಿಯೆ	ಆ.5 ರಿಂದ ಅ.3
■ ಅಂತಿಮ ಮತದಾರರ ಪಟ್ಟಿ ಪ್ರಕಟಣೆ	ಅಕ್ಟೋಬರ್ 7

59,050 ಬಿಎಲ್‌ಒಗಳಿಗೆ ತರಬೇತಿ

5.54 ಕೋಟಿ ಮತದಾರರು



• **ಬೆಂಗಳೂರು:** ಯಾವುದೇ ಅರ್ಹ ವ್ಯಕ್ತಿ ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ನಡೆಸಲಾಗುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮಂಗಳವಾರದಿಂದ (ಜೂ.30) ಆರಂಭವಾಗಲಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಲಿದ್ದು, ಜು.29ಕ್ಕೆ ಮುಕ್ತಾಯವಾಗಲಿದೆ. ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ವಿ.ಅನ್ಬುಕುಮಾರ್ ಸೋಮವಾರ ವಿವರ ನೀಡಿದರು.

ರಾಜ್ಯದಾದ್ಯಂತ ಒಟ್ಟು 59,050 ಬಿಎಲ್‌ಒಗಳಿಗೆ ತರಬೇತಿ ನೀಡಿ ನಿಯೋಜಿಸಲಾಗಿದೆ. ಎಲ್ಲಾ 31 ಜಿಲ್ಲಾ ಚುನಾವಣಾಧಿಕಾರಿಗಳು, 4 ಅಪರ ಜಿಲ್ಲಾ ಚುನಾವಣಾಧಿಕಾರಿಗಳು, 224 ಮತದಾರರ ನೋಂದಣಾಧಿಕಾರಿಗಳು, 336 ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು 7,556 ಬಿಎಲ್‌ಒ ಮೇಲ್ವಿಚಾರಕರು ಸೇರಿ ಒಟ್ಟು 68,123 ಸಿಬ್ಬಂದಿ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲಿದ್ದಾರೆ. ಅಲ್ಲದೆ, ರಾಜಕೀಯ ಪಕ್ಷಗಳಿಂದ 1,15,112 ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಿಸಲಾಗಿದೆ ಎಂದು ತಿಳಿಸಿದರು.

5.54 ಕೋಟಿ ಮತದಾರರ ಮನೆ ಬಾಗಿಲಿಗೆ ನಮೂನೆ: ಗಣತಿ ನಮೂನೆಗಳನ್ನು (ಎಮ್ಯುನರೇಷನ್ ಫಾರಂ) ಮುದ್ರಿಸಲಾಗಿದ್ದು, ಜಿಲ್ಲಾ ಚುನಾವಣಾಧಿಕಾರಿಗಳ ಮೂಲಕ ಬೂತ್ ಮಟ್ಟದ ಅಧಿಕಾರಿಗಳಿಗೆ ವಿತರಣೆ ಮಾಡಲಾಗಿದೆ. ಕರ್ನಾಟಕದಲ್ಲಿ ಜೂ.16ಕ್ಕೆ ಮತದಾರರ ಪಟ್ಟಿ ಫ್ರೀಜ್ ಮಾಡಲಾಗಿದೆ. ಪ್ರಸಕ್ತ 5,54,32,314 ಮತದಾರರಿದ್ದು, ಇವರು ಈ ವಿಶೇಷ ಸಮಗ್ರ ಪರಿಷ್ಕರಣೆಯ ವ್ಯಾಪ್ತಿಗೆ ಒಳಪಡಲಿದ್ದಾರೆ.

➡ಪುಟ ೪



▸▸ ಬಿಎಲ್‌ಒಗಳಿಗೆ ನೆಟ್‌ವರ್ಕ್ ಸಮಸ್ಯೆ ಅಥವಾ ತಾಂತ್ರಿಕ ತೊಂದರೆ ನಿವಾರಿಸಿ ಫಾರ್ಮ್‌ಗಳನ್ನು ಡಿಜಿಟಲೈಸ್ ಮಾಡಲು ಪ್ರತಿ ತಾಲೂಕಿನಲ್ಲಿ ಕನಿಷ್ಠ 2 ರಿಂದ 3 ಬಿಎಲ್‌ಒ ಫೆಸಿಲಿಟೇಷನ್ ಸೆಂಟರ್ ಸ್ಥಾಪನೆ

▸▸ ಸಾರ್ವಜನಿಕರ ದೂರು ಹಾಗೂ ಮಾಹಿತಿ ಹಂಚಿಕೆಗಾಗಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಮತದಾರರ ನೆರವು ಕೇಂದ್ರ ಸ್ಥಾಪನೆ

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ನಿಗದಿತ ಅವಧಿಯೊಳಗೆ ಭರ್ತಿ ಮಾಡಿದ ಗಣತಿ ನಮೂನೆಯನ್ನು ಸಲ್ಲಿಸುವ ಎಲ್ಲಾ ಮತದಾರರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದು. ಗಣತಿ ನಮೂನೆಯು ಸ್ವೀಕೃತವಾಗದ ಸಂದರ್ಭಗಳಲ್ಲಿ ಮತದಾರರ ಹೆಸರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ. ಅಲ್ಲದೆ ಮನೆ ಮನೆ ಭೇಟಿ ಹಂತದಲ್ಲಿ ಯಾವುದೇ ದಾಖಲೆ ಸಂಗ್ರಹಿಸುವುದಿಲ್ಲ.

➡ಪುಟ ೪

ಮತದಾನದ ಹಕ್ಕು ಕಳೆದುಕೊಂಡರೆ ಸರ್ಕಾರದ ಸವಲತ್ತುಗಳನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ಮತದ ಹಕ್ಕು ನಿಮ್ಮ ಬದುಕಿನ ಹಕ್ಕನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯದ ಜನತೆಗೆ ಸರ್ಕಾರ ಎಲ್ಲ ರೀತಿಯ ಸಹಾಯ ಮಾಡಲು ಬದ್ಧತೆ ಇಟ್ಟುಕೊಂಡಿದೆ.

■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ



• **ಬೆಂಗಳೂರು:** ಗಣಿಗಾರಿಕೆ ಸೇರಿ ನಾನಾ ಚಟುವಟಿಕೆಗಳಿಗೆ ಸರ್ಕಾರಿ ಜಾಗ ಪಡೆದು ವರ್ಷಗಳ ಕಾಲ ಚಟುವಟಿಕೆ ಆರಂಭಿಸದಿದ್ದರೆ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಸೋಮವಾರ ಅರಣ್ಯ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಕೈಗಾರಿಕೆ ಹಾಗೂ ಗಣಿಗಾರಿಕೆ ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ನಿಗದಿತ ಕಾಲಮಿತಿಯೊಳಗೆ ನೀಡುವ ವ್ಯವಸ್ಥೆ ಮಾಡಬೇಕು ಎಂದರು. ಸರ್ಕಾರದ ಜಾಗವನ್ನು ಪಡೆದು ಐದಾರು ವರ್ಷ ಕಾಲ ಖಾಲಿ ಬಿಟ್ಟರೆ ಸರ್ಕಾರಕ್ಕೆ ಯಾವುದೇ ಆದಾಯ ದೊರೆಯುವುದಿಲ್ಲ. ಅಲ್ಲದೆ, ಈ ಅವಧಿಯಲ್ಲಿ ಉತ್ಪಾದನಾ ವೆಚ್ಚ, ಸರಕುಗಳ ಬೆಲೆ ಹಾಗೂ ಯೋಜನೆಯ ಒಟ್ಟು ಮೌಲ್ಯವೂ ಹೆಚ್ಚಾಗುತ್ತದೆ. ಇಂತಹ ವಿಳಂಬವನ್ನು ಸಹಿಸುವುದಿಲ್ಲ ಎಂದು ಹೇಳಿದರು.

ಸಿಎಂ ಸೂಚನೆಗೆ ಪ್ರತಿಕ್ರಿಯಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ತುಷಾರ ಗಿರಿನಾಥ್ ಅವರು, ಬಾಕಿ ಇರುವ ಎಲ್ಲಾ ಹಳೆಯ ಅರಣ್ಯ ಅನುಮತಿ ಪ್ರಕರಣಗಳನ್ನು ಜು.15ರೊಳಗೆ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಇಲಾಖೆಯ ಆಡಳಿತ ವ್ಯವಸ್ಥೆ, ಪ್ರಮುಖ ಯೋಜನೆಗಳು ಹಾಗೂ ವಿವಿಧ ಹಂತಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಸಮಗ್ರ ಮಾಹಿತಿ ಪಡೆದ ಮುಖ್ಯಮಂತ್ರಿಗಳು, ನಮ್ಮ ಅರಣ್ಯ ಪ್ರಾಣಿ ಸಂಪತ್ತು ಅಮೂಲ್ಯವಾದದ್ದು. ಸಂರಕ್ಷಣೆ ಪರಿಣಾಮಕಾರಿಯಾಗಿ ಆಗಬೇಕು ಎಂದು ನಿರ್ದೇಶಿಸಿದರು.

➡ಪುಟ ೪

ಅರಣ್ಯವಾಸಿಗಳನ್ನು ಕಡೆಗಣಿಸಬೇಡಿ

ಅರಣ್ಯ ಭೂಮಿ ಒತ್ತುವರಿ ತೆರವು, ಮಾನವ ವನ್ಯಜೀವಿ ಸಂಘರ್ಷ ತಡೆ ಹಾಗೂ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟು ಅವರಿಗೆ ತೊಂದರೆ ನೀಡಬಾರದು. ನಿಯಮಾನುಸಾರ ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿಕೆ

ಮಾದರಿ ಚುನಾವಣೆ: ಭಾರತ ನಂ.1



• **ಶ್ರೀನಗರ:** ವಿಶ್ವದ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನು ಹೊಂದಿದ್ದು, ಚುನಾವಣೆಯ ಪ್ರತಿ ಹಂತವೂ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಂದಲೇ ಪರಿಶೀಲನೆಗೆ ಒಳಪಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಸೋಮವಾರ ಹೇಳಿದ್ದಾರೆ.

3 ದಿನಗಳ ಕಾಶ್ಮೀರ ಪ್ರವಾಸದಲ್ಲಿರುವ ಅವರು ಶ್ರೀನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮತದಾರರ ಪಟ್ಟಿ ಸಿದ್ಧಪಡಿಸುವುದರಿಂದ ಹಿಡಿದು ಮತದಾನ, ಮತ ಎಣಿಕೆವರೆಗೆ ಪ್ರತಿ ಹಂತವೂ ಸಂಪೂರ್ಣ ಪಾರದರ್ಶಕವಾಗಿರುತ್ತದೆ ಎಂದರು. ಮತದಾರರ ಪಟ್ಟಿ ತಯಾರಿ, ಮತದಾನ, ಮತ ಎಣಿಕೆ ಸೇರಿ ಎಲ್ಲ ಹಂತಗಳನ್ನು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಪರಿಶೀಲಿಸುತ್ತಾರೆ.

➡ಪುಟ ೪

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ನಾಯಕತ್ವ

ಭಾರತವು ಪ್ರಸ್ತುತ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಆ್ಯಂಡ್ ಎಲೆಕ್ಟೋರಲ್ ಅಸಿಸ್ಟನ್ಸ್ ಸಂಸ್ಥೆಯ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದೆ ಎಂದು ಜ್ಞಾನೇಶ್ ಕುಮಾರ್ ತಿಳಿಸಿದರು. ಭಾರತದ ನಾಯಕತ್ವವು ದೇಶದ ಚುನಾವಣಾ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ದೊರೆತಿರುವ ಮಾನ್ಯತೆಯ ಪ್ರತೀಕವಾಗಿದೆ ಎಂದು ಅವರು ಹೇಳಿದರು. ಭಾರತೀಯ ಚುನಾವಣಾ ಪ್ರಕ್ರಿಯೆ ಗಮನಿಸಿ, 2026ರಲ್ಲಿ ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಅಂತಾರಾಷ್ಟ್ರೀಯ ಐಡಿಇಎ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನೂ ಹೊಂದಿದೆ ಎಂದು ಜ್ಞಾನೇಶ್ ಕುಮಾರ್ ಹೇಳಿದರು.

ದೇಣಿಗೆ ದುರ್ಬಳಕೆ ಆರೋಪಿಗಳ ಪರ ವಾದಿಸಿದರೆ ದಂಡ

ವಕಾಲತ್ತು ವಹಿಸದಿರಲು ನಿರ್ಧಾರ

• **ಹೊಸದಿಲ್ಲಿ/ಅಯೋಧ್ಯೆ:** ಶ್ರೀರಾಮ ಮಂದಿರಕ್ಕೆ ಬಂದ ದೇಣಿಗೆ ಹಣದ ದುರ್ಬಳಕೆ ಆರೋಪದ ಪ್ರಕರಣ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದ್ದು, ಆರೋಪಿಗಳ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚುತ್ತಿರುವ ನಡುವೆ ಫೈಜಾಬಾದ್ ಬಾರ್ ಅಸೋಸಿಯೇಷನ್ ಮಹತ್ವದ ನಿರ್ಧಾರ ಕೈಗೊಂಡಿದೆ. ಬಂಧಿತ ಎಂಟು ಆರೋಪಿಗಳ ಪರವಾಗಿ ಯಾವುದೇ ವಕೀಲರು ವಕಾಲತ್ತು ವಹಿಸಬಾರದು ಎಂದು ಅಸೋಸಿಯೇಷನ್ ತೀರ್ಮಾನಿಸಿದ್ದು, ಸಿಬಿಐ ತನಿಖೆಗೆ ಆಗ್ರಹಿಸಿ ಕೋರ್ಟ್ ಮೊರೆ ಹೋಗುವುದಾಗಿ ಘೋಷಿಸಿದೆ. ಬಾರ್ ಅಸೋಸಿಯೇಷನ್ ಅಧ್ಯಕ್ಷ ಕಲಿಕಾ ಪ್ರಸಾದ್ ಮಾತನಾಡಿ, ಅಸೋಸಿಯೇಷನ್ ನಿರ್ಧಾರ ಉಲ್ಲಂಘಿಸಿ ಯಾರಾದರೂ ಆರೋಪಿಗಳ ಪರ ವಾದಿಸಿದರೆ 5 ಲಕ್ಷ ರೂ. ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜತೆಗೆ ಮಂದಿರ ಟ್ರಸ್ಟ್ ನಿರ್ವಹಣೆಗೆ ಸಂಬಂಧಿಸಿದ ಚಂಪತ್ ರಾಯ್, ಅನಿಲ್ ಮಿಶ್ರಾ, ಗೋಪಾಲ್ ವಿರುದ್ಧವೂ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

➡ಪುಟ ೪

ತುರ್ತು ವಿಚಾರಣೆಗೆ ನಿರಾಕರಣೆ



ದೇಣಿಗೆ ಹಣದ ಅವ್ಯವಹಾರದ ಆರೋಪಗಳ ಕುರಿತು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಕ ಕಾಲಮಿತಿಯ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬಂದಿತು. ಆದರೆ, ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್, ಶೀಲ ನಾಗು ಅವರಿದ್ದ ರಜೆ ಪೀಠ ತುರ್ತು ವಿಚಾರಣೆಯ ಅಗತ್ಯವೇನು ಎಂದು ಪ್ರಶ್ನಿಸಿ, ಬೇಸಿಗೆ ರಜೆ ಬಳಿಕ ಪ್ರಕರಣವನ್ನು ಪಟ್ಟಿ ಮಾಡುವುದಾಗಿ ತಿಳಿಸಿತು. 'ಆಕಾಶವೇನೂ ಕುಸಿದು ಬೀಳುವುದಿಲ್ಲ, ಇಷ್ಟು ತುರ್ತು ಏನು?' ಎಂದು ಪೀಠ ಮೌಖಿಕವಾಗಿ ಅಭಿಪ್ರಾಯಪಟ್ಟಿತು. ಸುಪ್ರೀಂ ಕೋರ್ಟ್ ಜುಲೈ 13ರಂದು ಪುನರಾರಂಭವಾಗಲಿದೆ.

ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

• **ಕರಾಚಿ:** ಪಾಕಿಸ್ತಾನ ಅಫ್ಘಾನಿಸ್ತಾನದ ಮೇಲೆ ಗಡಿಯಾಚೆಗಿನ ವಾಯುದಾಳಿಗಳನ್ನು ನಡೆಸಿದ್ದು, ಈ ದಾಳಿಯಲ್ಲಿ ಕನಿಷ್ಠ 36 ನಾಗರಿಕರು ಮೃತಪಟ್ಟಿದ್ದು, ಮೂರು ಪೂರ್ವ ಪ್ರಾಂತ್ಯಗಳಲ್ಲಿ 163 ಜನರು ಗಾಯಗೊಂಡಿದ್ದಾರೆ ಎಂದು ಅಫ್ಘಾನಿಸ್ತಾನದ ತಾಲಿಬಾನ್ ನೇತೃತ್ವದ ಸರ್ಕಾರ ಸ್ಪಷ್ಟನೆ ನೀಡಿದೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಪಾಕಿಸ್ತಾನದ ಯುದ್ಧ ವಿಮಾನಗಳು ರಾತ್ರಿ ವೇಳೆ ಪಕ್ತಿಯಾ, ಪಕ್ತಿಕಾ ಮತ್ತು ಕುನಾರ್ ಪ್ರಾಂತ್ಯಗಳಲ್ಲಿನ ವಸತಿ ಪ್ರದೇಶಗಳ ಮೇಲೆ ವೈಮಾನಿಕ ದಾಳಿ ನಡೆಸಿವೆ. ಈ ಬಗ್ಗೆ ತಾಲಿಬಾನ್ ಮುಖ್ಯ ವಕ್ತಾರ ಜಬೀಹುಲ್ಲಾ ಮುಜಾಹಿದ್ ಅವರು ಹೇಡಿತನದ ಆಕ್ರಮಣ ಮತ್ತು ಅಮಾನವೀಯ ಕೃತ್ಯ ಎಂದು ಎಕ್ಸ್ ಪೋಸ್ಟ್‌ನಲ್ಲಿ ಖಂಡಿಸಿದ್ದಾರೆ.

➡ಪುಟ ೪

ಪ್ರಿಯಕರ ಆಸ್ಪತ್ರೆಗೆ ದಾಖಲು | ಸುರಭಿ ತಾಯಿ ಕಿಡಿ

ಲವ್ ಜಿಹಾದ್: ಯುವತಿ ಸಾವು

• **ಚಿಕ್ಕಬಳ್ಳಾಪುರ:** ಜಿಲ್ಲೆಯ ನಂದಿಗಿರಿಧಾಮ ಸಮೀಪ ಹೋಮ್ ಸ್ಟೇ ಒಂದರಲ್ಲಿ ಯುವತಿಯೊಬ್ಬಳು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದ್ದು, ಇದು ಲವ್ ಜಿಹಾದ್ ಕೊಲೆ ಎಂದು ಮೃತ ಯುವತಿಯ ತಾಯಿ ಆರೋಪಿಸಿದ್ದಾರೆ. ಮೃತ ಯುವತಿಯನ್ನು ಬೆಂಗಳೂರು ಮೂಲದ ಸಾಯಿ ಸುರಭಿ (26) ಎಂದು ಗುರುತಿಸಲಾಗಿದ್ದು, ಇತ್ತೀಚೆಗೆ ಮುದ್ದೇನಹಳ್ಳಿ ಆಸ್ಪತ್ರೆಯಲ್ಲಿ ಫಿಸಿಯೋಥೆರಪಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದಳು ಎನ್ನಲಾಗಿದೆ.

ಬೆಂಗಳೂರು ಮೂಲದ ಸಾಯಿ ಸುರಭಿ ಹಾಗೂ ಕೇರಳದ ಕೋಝಿಕ್ಕೋಡ್ ನಿವಾಸಿ, ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಕಳೆದ ಶನಿವಾರ ನಂದಿ ಗಿರಿಧಾಮ ಸಮೀಪ ಇರುವ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇಗೆ ಬಂದು ತಂಗಿದ್ದರು ಎನ್ನಲಾಗಿದೆ. ಸೋಮವಾರ ರೂಮ್ ಚೆಕ್-ಔಟ್ ಸಮಯ ಮುಗಿದರೂ ರೂಮ್ ತೆರೆಯದಿದ್ದಾಗ ಹೋಂ ಸ್ಟೇ ಕೇರ್‌ಟೇಕರ್ ಬಂದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಮೃತ ಸುರಭಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈಕೆಯ ಪ್ರಿಯಕರ ಕೇರಳ ಮೂಲದ ಸಂಜೀತ್ ಅಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

➡ಪುಟ ೪



ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಸಾಯಿ ಸುರಭಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಸ್ನೇಹಿತರ ಮೂಲಕ ಕೇರಳ ಮೂಲದ ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಪರಿಚಯವಾಗಿದ್ದ. ನಂತರ ಆಕೆಯನ್ನು ಪ್ರೀತಿಸುವುದಾಗಿ ಹೇಳಿ ಸಂಜೀತ್ ಕಿರುಕುಳ ನೀಡಲಾರಂಭಿಸಿದ್ದ.

➡ಪುಟ ೪

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

• **ಹೊಸದಿಲ್ಲಿ:** ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮೂರು ಭಾಷಾ ನೀತಿ ಕುರಿತು ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಪ್ರಸ್ತುತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸ ತ್ರಿಭಾಷಾ ನೀತಿಯನ್ನು ಅನುಸರಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಪ್ರಸ್ತುತ 7, 8 ಮತ್ತು 9ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಮೂರನೇ ಭಾಷೆಯ ಪರೀಕ್ಷೆ ಬರೆಯುವ ಅಗತ್ಯವಿಲ್ಲ ಎಂದು ಸಿಬಿಎಸ್‌ಇ ಸ್ಪಷ್ಟನೆ ನೀಡಿದೆ. 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕನಿಷ್ಠ ಎರಡು ಸ್ಥಳೀಯ ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಮೂರು ಭಾಷೆಗಳನ್ನು ಅಧ್ಯಯನ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಸಿಬಿಎಸ್‌ಇ ಘೋಷಿಸಿದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,40,000** (2,40,000) ಅಪರಂಜಿ ಚಿನ್ನ: **1,43,020** (1,43,950) ಆಭರಣ ಚಿನ್ನ: **1,31,100** (1,31,950) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,728** (372↓) ಎನ್‌ಎಸ್‌ಇ **23,946** (109↓)

$1 = ₹94.41

ಕಿರುಸುದ್ದಿ

ಪ್ರತಿಭಾ ಪುರಸ್ಕಾರ

•**ಹುಬ್ಬಳ್ಳಿ:** ಅಖಿಲ ಭಾರತ ವೀರಶೈವ ಲಿಂಗಾಯತ ಶಿವಸಿಂಪಿ ಸಂಘದ ಆಶ್ರಯದಲ್ಲಿ ಹುಬ್ಬಳ್ಳಿ ಮಹಾನಗರ ವ್ಯಾಪ್ತಿಯಲ್ಲಿ ಬರುವ ಶಿವಸಿಂಪಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ 2026ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 90ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಗುರುಸಿದ್ದಪ್ಪ ನಾಗಪ್ಪ ಲಕ್ಷ್ಮೇಶ್ವರ, ಜಯಶೀಲ, ಶಟಲಿಂಗಪ್ಪ ಲಕ್ಷ್ಮೇಶ್ವರ ಅವರ ದತ್ತಿ ಶಿಕ್ಷಣ ನಿಧಿಯಿಂದ ನಗದು ಪುರಸ್ಕಾರ ನೀಡಲಾಗುವುದು. ಜು.10ರ ರೊಳಗೆ ವಿದ್ಯಾರ್ಥಿಗಳು ಅಂಕಪಟ್ಟಿ, ಇತ್ತೀಚಿನ ಭಾವ ಚಿತ್ರ, ಆಧಾರ್ ಕಾರ್ಡ್ ನಕಲಿ ಪ್ರತಿ ನೀಡಬೇಕು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಬೀಳ್ಕೊಡುಗೆ ಇಂದು

•**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ಜೂ.30ರಂದು ಬೆಳಗ್ಗೆ 11.30ಕ್ಕೆ ವಿಭಾಗದ ಸಭಾಂಗಣದಲ್ಲಿ ಸಂವಹನ ಕೂಟದ ವಾರ್ಷಿಕ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ, ಪತ್ರಿಕೋದ್ಯಮ ಶಿಕ್ಷಕರಿಗೆ ಸನ್ಮಾನ ಹಾಗೂ 'ಮಾಧ್ಯಮ ಮತ್ತು ಕಾನೂನು' ಗ್ರಂಥ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅರುಣ ಕುಮಾರ ಹಬ್ಬು ಆಗಮಿಸಿ, ಮಾಧ್ಯಮ ಮತ್ತು ಕಾನೂನುಗಳು ಎಂಬ ಪುಸ್ತಕ ಬಿಡುಗಡೆ ಮಾಡಲಾಗುವುದು. ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಜೆ.ಎಂ.ಚಂದುನವರ ಭಾಗವಹಿಸುವರು. ಅಧ್ಯಕ್ಷತೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಸಂಜಯಕುಮಾರ ಮಾಲಗತ್ತಿ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಗದೀಶ ಕಣವಿಗೆ ಸನ್ಮಾನ



•**ನವಲಗುಂದ:** ಜಗದೀಶ ಕಣವಿ ಸ್ನೇಹಪರ ಹಾಗೂ ಭಾವನಾತ್ಮಕ ವ್ಯಕ್ತಿಗಳು, ಕೆಲಸದಲ್ಲಿನ ಕಾಳಜಿ, ತಾಳ್ಮೆ ಇತರ ಅಧಿಕಾರಿಗಳಿಗೆ ಮಾದರಿಯಾಗಲಿ ಹಾಗೇ ನಿಮ್ಮ ನಿವೃತ್ತಿ ಜೀವನವು ಆರೋಗ್ಯ, ಶಾಂತಿ, ಸಂತೋಷ ಮತ್ತು ಹೊಸ ಉತ್ಸಾಹದಿಂದ ಕೂಡಿರಲಿ ಎಂದು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ವ್ಯಾಪಾರಸ್ಥರಾದ ರಿಯಾಜ್ ನಾಶಿಪುಡಿ ಅವರು ಹೃತ್ಪೂರ್ವಕವಾಗಿ ಹಾರೈಸುತ್ತೇನೆ ಎಂದರು. ಅವರು ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಜಗದೀಶ ಕಣವಿ ಅವರ ಸೇವಾನಿವೃತ್ತಿ ಹಿನ್ನಲೆ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ವತಿಯಿಂದ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ಸಿಬ್ಬಂದಿ ವರ್ಗ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ಸದಸ್ಯರಾದ ಮಲ್ಲಪ್ಪ ಬೆಂಡಿಗೇರಿ, ಮಹಮ್ಮದ ಅಲಿ ಭಾಗವಾನ, ಫರೀದಾ ಜಿಗಳೂರ, ಶಬ್ಬಿರ್ ಧಾರವಾಡ, ಬಾಬುಶಾ ಮಕಾನದಾರ ಸೇರಿದಂತೆ ಅನೇಕರಿದ್ದರು.

ಮತದಾರರು ಹೆಸರು ನೋಂದಾಯಿಸಿಕೊಳ್ಳಿ



•**ನವಲಗುಂದ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಧಾರವಾಡ, ಪುರಸಭೆ ನವಲಗುಂದ, SVEEP ಸಮಿತಿ ಧಾರವಾಡ ಹಾಗೂ ನವಲಗುಂದ ಪುರಸಭೆಯ ಸಂಯುಕ್ತ ಆಶ್ರಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವಲಗುಂದದಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ–2026 ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ತಹಸೀಲ್ದಾರ ಸುಧೀರ ಸಾಹುಕಾರ್ ಉದ್ಘಾಟಿಸಿ ಮಾತನಾಡಿ, ಪ್ರಜಾಪ್ರಭುತ್ವದ ಯಶಸ್ಸಿಗೆ ಮತದಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. 18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಅರ್ಹ ನಾಗರಿಕರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದರು. ಕಾಲೇಜ್ ಪ್ರಾಂಶುಪಾಲ ಡಾ.ಎಂ.ಬಿ.ಬಾಗಡಿ, ಪುರಸಭೆ ಮುಖ್ಯಾಧಿಕಾರಿ ಶರಣು ಪುಜಾರ, ಉಪನ್ಯಾಸಕ ವಸಂತ ಮುಂದಿನಮನಿ, ಚುನಾವಣಾ ವಿಭಾಗದ ಅಧಿಕಾರಿಗಳು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿ, ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ–2026 ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸುವಂತೆ ಪ್ರತಿಜ್ಞೆ ಸ್ವೀಕರಿಸಿದರು.



ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ರಾಷ್ಟ್ರೀಯ ಸಂಖ್ಯಾಶಾಸ್ತ್ರ ದಿನದ ಅಂಗವಾಗಿ ಶಿಕ್ಷಕಿ ಉಮಾ ಪಾಟೀಲ ಹಾಗೂ ಬಸಪ್ಪ ಹೆಗ್ಗಣ್ಣವರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಂಕ್ರಪ್ಪ, ಶಿವಪ್ಪ, ದ್ರಾಕ್ಷಾಯಿಣಿ, ಪಾರ್ವತಿ, ದ್ಯಾವನಕೊಂಡ ಗ್ರಾಮದ ಚಂದ್ರು, ಆಲದಕಟ್ಟಿ ಚಂದ್ರು ಹೆಗ್ಗಣ್ಣವರ ಸೇರಿದಂತೆ ಮತ್ತಿತರರು ಇದ್ದರು.

ನಾಡಪ್ರಭು ಕೆಂಪೇಗೌಡ ಜಯಂತಿ

•**ಧಾರವಾಡ:** ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರ ನಿರ್ಮಾಣ ಮಾಡುವ ಮೂಲಕ ಇಂದು ವಿಶ್ವದ ಭೂಪಟದಲ್ಲಿ ಬೆಂಗಳೂರು ಎದ್ದು ಕಾಣುವಂತೆ ಮಾಡಿದ ಕೀರ್ತಿ ಶೇಖರು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಸೋಮವಾರ ನಾಡಪ್ರಭು ಕೆಂಪೇಗೌಡ ಜಯಂತಿ ಉದ್ಘಾಟಿಸಿ ಮಾತನಾಡಿ, ಕೆಂಪೇಗೌಡರು 500 ವರ್ಷಗಳ ಹಿಂದಿನ ದೂರದೃಷ್ಟಿಯ ಯೋಜನೆಗಳು ಕರ್ನಾಟಕಕ್ಕೆ ಇಂದಿಗೂ ಪ್ರಸ್ತುತ. ಅವರ ಸರ್ವಧರ್ಮ ಸಮನ್ವಯತೆ, ಯೋಜನಾಬದ್ಧ ನಗರ ನಿರ್ಮಾಣ, ಕೃಷಿ ಪರಿಸರ ಬೆಳವಣಿಗೆಗೆ ಜಾರಿಗೆ ತಂದ ನೀತಿಗಳು, ವ್ಯಾಪಾರ, ವಾಣಿಜ್ಯಕ್ಕಾಗಿ ಹಾಕಿಕೊಟ್ಟ ಯೋಜನೆಗಳೇ ಇಂದಿಗೂ ಮಾದರಿಯಾಗಿವೆ ಎಂದರು. ಹುಬ್ಬಳ್ಳಿ ವರದಶ್ರೀ ಪೌಂಡೇಶನ ಸಂಸ್ಥಾಪಕ ಮಲ್ಲಿಕಾರ್ಜುನ ರಡ್ಡೇರ, ಕಾರ್ಯದರ್ಶಿ ಸಿದ್ದು ಸಿರಸಂಗಿ ನಾಡಪ್ರಭು ಕೆಂಪೇಗೌಡರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಹು–ಧಾ ಮಹಾನಗರ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಕಾಶ ಹಳಿಯಾಳ, ಡಿಡಿಪಿಐ ಉಮೇಶ ಬೊಮ್ಮಕ್ಕನವರ, ಮುಖಂಡರಾದ ಕೃಷ್ಣಗೌಡ, ರಾಘವೇಂದ್ರಗೌಡ, ಮಾಣಿಕ್ಯ ಚಿಲ್ಲೂರ, ಹನುಮಂತಪ್ಪ ನೆಗಳೂರ ಇದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿದರು. ಜಯಲಕ್ಷ್ಮೀ ಎಚ್ ನಿರೂಪಿಸಿದರು.



ಧಾರವಾಡ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಸೋಮವಾರ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹಾಗೂ ಗಣ್ಯರು ಸೇರಿದಂತೆ ಉದ್ಘಾಟಿಸಿದರು.

ಮೂರು ದಿನಗಳ ಸಸ್ಯಸಂತೆ ಯಶಸ್ವಿ | ಡಾ.ಕೋಳೇಕರ್ ಸಲಹೆ

ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಕೆ ಅಗತ್ಯ

•**ಧಾರವಾಡ:** ಪ್ರಗತಿಪರ ರೈತರು, ಕೃಷಿ ವಿಜ್ಞಾನಿಗಳು ಹಾಗೂ ಕೃಷಿ ಅಧಿಕಾರಿಗಳ ಸಲಹೆಗಳನ್ನು ಆಧರಿಸಿ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡರೆ, ರೈತರು ಆರ್ಥಿಕವಾಗಿ ಸಬಲತೆ ಸಾಧಿಸಲು ಸಾಧ್ಯ ಎಂದು ಕೃಷಿ ಇಲಾಖೆ ಬೆಳಗಾವಿಯ ಜಂಟಿ ನಿರ್ದೇಶಕ ಡಾ.ಎಚ್.ಡಿ.ಕೋಳೇಕರ ಹೇಳಿದರು.

ಇಲ್ಲಿನ ಕುಂಭಾಪುರ ಫಾರ್ಮ್ ನಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಮ್ಮಿಕೊಂಡಿದ್ದ ಸಸ್ಯ ಸಂತೆಯ ಮೂರನೇ ದಿನ ಸೋಮವಾರ ಸಮಾರೋಪ ಸಮಾರಂಭದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು.

ನಾಗರಿಕರು ಕೂಡ ಪರಿಸರ ಸಮತೋಲನದ ಕಡೆಗೆ ಗಮನ ಹರಿಸಿ ಪ್ರತಿ ಕುಟುಂಬಕ್ಕೊಂದು ಗಿಡವನ್ನು ನೆಟ್ಟರೆ ಪರಿಸರವನ್ನು ಸಂರಕ್ಷಿಸಬಹುದು. ಕಡಿಮೆ ಖರ್ಚು ಮಾಡಿ ಹೆಚ್ಚಿನ ಆದಾಯ ಗಳಿಸುವುದರ ಕಡೆ ರೈತರು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾದೇಶಿಕ ವಿಸ್ತರಣಾ ಕೇಂದ್ರದ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಡಾ. ಜೆ.ಬಿ. ಗೋಪಾಲಿ ಮಾತನಾಡಿ, ಸಸ್ಯ ಸಂತೆಯಿಂದಾಗಿ ಎಲ್ಲ ತೋಟಗಾರಿಕೆ ಬೆಳೆಗಳ ಸಸಿಗಳನ್ನು ಒಂದೇ ಸೂರಿನಡಿ ರೈತರಿಗೆ ಲಭ್ಯವಾಗಲಿದೆ ಎಂದರು.

ತೋಟಗಾರಿಕೆ ಉಪ ನಿರ್ದೇಶಕ ಸಂತೋಷ ಸಪ್ಪಂಡಿ, ಪ್ರಾಧ್ಯಾಪಕ ಡಾ.ಶಿವಯೋಗಿ ರಾವಳದ ಇದ್ದರು.



ಹೆಚ್ಚು ಸಸಿಗಳ ಮಾರಾಟ

ಸಸ್ಯ ಸಂತೆಯಲ್ಲಿ ವಿವಿಧ ತೋಟಗಾರಿಕಾ ಮಳಿಗೆಗಳು, ಇನ್ನಿತರ ಮಳಿಗೆಗಳ ಪ್ರದರ್ಶನ ಹಾಗೂ ಮಾರಾಟ ಮಾಡಲಾಯಿತು. ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತ ಬಾಂಧವರು ಹಾಗೂ ನಾಗರಿಕರು ಪಾಲ್ಗೊಂಡಿದ್ದ ಈ ಸಸ್ಯ ಸಂತೆಯಲ್ಲಿ ಮೂರನೇ ದಿನ ಸುಮಾರು 7000ಕ್ಕೂ ಅಧಿಕ ಬೆಳೆಗಳ ಸಸಿಗಳು ಮಾರಾಟವಾಗಿವೆ.

ಸಂಖ್ಯಾಶಾಸ್ತ್ರಕ್ಕೆ ಮಹಾಲನೋಬಿಸ್‌ರ ಕೊಡುಗೆ ಅಪಾರ

•**ಹುಬ್ಬಳ್ಳಿ:** ಸಂಖ್ಯಾಶಾಸ್ತ್ರ ಪಿತಾಮಹರೆಂದು ಖ್ಯಾತರಾದ ಪಿ.ಸಿ. ಮಹಾಲನೋಬಿಸ್ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಸಂಖ್ಯಾಶಾಸ್ತ್ರ ಕಾರ್ಯಾಲಯ ವತಿಯಿಂದ ಸಂಖ್ಯಾಶಾಸ್ತ್ರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ನಾಗೇಶ.ಎಸ್. ಮಾತನಾಡಿ, ಪಿ.ಸಿ.ಮಹಾಲನೋಬಿಸ್ ಅವರ ಬದುಕು ಹಾಗೂ ಸಂಖ್ಯಾಶಾಸ್ತ್ರ ಕ್ಷೇತ್ರಕ್ಕೆ ಅವರು ನೀಡಿದ ಅಪೂರ್ವ ಕೊಡುಗೆಗಳನ್ನು ಸ್ಮರಿಸುವ ಮಹತ್ವದ ದಿನವೇ ಸಂಖ್ಯಾಶಾಸ್ತ್ರ ದಿನ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಸಂಖ್ಯಾಶಾಸ್ತ್ರ ಕಾರ್ಯಾಲಯದ ವಲಯ ನಿರ್ದೇಶಕ ಹರೀಶ್ವರನ್, ಭಾರತದ ಸಂಖ್ಯಾಶಾಸ್ತ್ರ ವ್ಯವಸ್ಥೆಯ ಮೂಲಪುರುಷ ಪಿ.ಸಿ. ಮಹಾಲನೋಬಿಸ್ ಅವರನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಗುಣಮಟ್ಟದ ಅಂಕಿಅಂಶಗಳನ್ನು ಸಂಗ್ರಹಿಸಿ ಹಾಗೂ ಒದಗಿಸುವ ಮೂಲಕ ಅವರಿಗೆ ನಿಜವಾದ ಗೌರವ ಸಲ್ಲಿಸಬಹುದು ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಸಂಖ್ಯಾಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಶಾರದಾ ಭಟ್ ಮಾತನಾಡಿ, ಸಂಖ್ಯಾಶಾಸ್ತ್ರಜ್ಞರ ಗೌರವ ಮತ್ತು ಮೌಲ್ಯ ಜಗತ್ತಿನಾದ್ಯಂತ ಹೆಚ್ಚಿಸಿದ ಮಹನೀಯರು ಮಹಾಲನೋಬಿಸ್ ಎಂದರು.

ಹಿರಿಯ ಪ್ರಾಧ್ಯಾಪಕ ಡಾ.ಎ.ಎಸ್. ತಳವಾರ, ಉಪನಿರ್ದೇಶಕ ಮಾದೇವಪ್ಪ, ಸಹಾಯಕ ನಿರ್ದೇಶಕ ಪ್ರಮೋದ ಪಂಡಿತ ಇದ್ದರು.



ವಟ ಸಾವಿತ್ರಿ ವ್ರತ ಆಚರಣೆ

•**ಅಳ್ನಾವರ:** ವಟ ಸಾವಿತ್ರಿ ವ್ರತದ ಅಂಗವಾಗಿ ಸೋಮವಾರ ಪಟ್ಟಣದ ಮುತ್ತೈದೆಯರು ವಟವರಕ್ಷಕ್ಕೆ ವಿಶೇಷ ಪೂಜೆಸಲ್ಲಿಸಿ, ಪತಿಯ ದೀರ್ಘಾಯುಷ್ಯ, ಉತ್ತಮ ಆರೋಗ್ಯ ಹಾಗೂ ಕುಟುಂಬದ ಸುಖ–ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಹಿಳೆಯರು ಸಂಪ್ರದಾಯಬದ್ಧವಾಗಿ ವಟವೃಕ್ಷಕ್ಕೆ ದಾರ ಸುತ್ತಿ, ಪೂಜೆ ನೆರವೇರಿಸಿದರು.



ಡಾ.ದಂಡೀನಗೆ ಮರಣೋತ್ತರ ಪದ್ಮಶ್ರೀ ನೀಡಲು ಒತ್ತಾಯ

•**ಹುಬ್ಬಳ್ಳಿ:** ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ್ದಲ್ಲದೇ ಲಕ್ಷಾಂತರ ಬಡಮಕ್ಕಳಿಗೆ ಶಿಕ್ಷಣ ಭಾಗ್ಯ, ಸಾವಿರಾರು ಪದವೀಧರ ರಿಗೆ ಉದ್ಯೋಗ ನೀಡಿದ ಕನಕದಾಸ ಶಿಕ್ಷಣ ಸಂಸ್ಥೆಗಳ ರೂವಾರಿ ಡಾ.ಬಿ.ಎಫ್.ದಂಡೀನಗೆ ಸರ್ಕಾರ ಮರಣೋತ್ತರ ಪದ್ಮಶ್ರೀ ಗೌರವ ನೀಡುವಂತೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಆಗ್ರಹಿಸಿದರು.

ಮಾತನಾಡಿ, ಶಿಕ್ಷಣ ತಜ್ಞ ಬಿ.ಎಫ್.ದಂಡೀನರನ್ನು ಕಚುಸಾಪ ಶಿಕ್ಷಕ ಸಾಹಿತಿಗಳ ಪ್ರಪ್ರಥಮ ರಾಜ್ಯಮಟ್ಟದ ಸಮ್ಮೇಳನ ಸರ್ವಾಧ್ಯಕ್ಷರಾಗಿ ಗೌರವಿಸಿತು. ಸುಮಾರು 80ಕ್ಕೂ ಹೆಚ್ಚು ಶಾಲೆ, ಕಾಲೇಜ್ ತೆರೆಯುವ ಮೂಲಕ ಅವರು ಉತ್ತರ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಮಕ್ಕಳಿಗೆ ಮಕ್ಕಳಿಗೆ ಅಕ್ಷರ ಭಾಗ್ಯ ನೀಡಿದ ಧೀಮಂತರು. ಕೇಂದ್ರ ಸರ್ಕಾರ ಮರಣೋತ್ತರ ಪದ್ಮಶ್ರೀ ಗೌರವ ನೀಡಲು ರಾಜ್ಯ ಸರ್ಕಾರ ಸಿಫಾರಸು ಮಾಡುವಂತೆ ಒತ್ತಾಯಿಸಿದರು. ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ಅಧ್ಯಕ್ಷತೆಯಲ್ಲಿ ಸಿದ್ದಲಿಂಗೇಶ, ಪ್ರಭಾಕರ, ರಮೇಶ ವೈದ್ಯ, ವಂದನಾ ರಮೇಶ ಮುಂತಾದವರು ಮಾತನಾಡಿದರು. ಎರಡು ನಿಮಿಷ ಮೌನಾಚರಣೆ ಮಾಡಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಪಂಚಗಂಗಾ ಕಂಪನಿ ವಿರುದ್ಧ ಕ್ರಮಕ್ಕೆ ಆಗ್ರಹ

•**ಧಾರವಾಡ:** ರೈತರಿಗೆ ಕಳಪೆ ಈರುಳ್ಳಿ ಬೀಜ ನೀಡಿರುವ ಪಂಚಗಂಗಾ ಬೀಜ ಕಂಪನಿಯ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕಬ್ಬೇನೂರು ಗ್ರಾಮದ ರೈತರು ನಗರದ ಜಿಲ್ಲಾ ತೋಟಗಾರಿಕಾ ಇಲಾಖೆ ಕಚೇರಿ ಪ್ರತಿಭಟನೆ ನಡೆಸಿದರು.

ಕಬ್ಬೇನೂರು ಸೇರಿದಂತೆ ಸುತ್ತಲಿನ ಗ್ರಾಮದ ರೈತರು 500 ಎಕರೆ ಭೂಮಿಯಲ್ಲಿ ಪಂಚಗಂಗಾ ಕಂಪನಿ ಈರುಳ್ಳಿ ಬೀಜ ಖರೀದಿಸಿ ಬಿತ್ತನೆ ಮಾಡಿದ್ದು, ಶೇ.75 ಮೊಳಕೆ ಬಾರದೇ ಹಾಳಾದರೆ, ಇನ್ನುಳಿದ ಶೇ.25ರಷ್ಟು ಬೀಜ ಮೊಳಕೆಯೊಡೆದೆ ಒಣಗಿ ಹೋಗಿದೆ ಎಂದು ಅಳಲು ತೋಡಿಕೊಂಡರು.

ಇದೇ ವೇಳೆ ಗ್ರಾಮದ ಕೆಲವು ರೈತರು ಅವರ ಹೊಲಗಳಲ್ಲಿ ಬೇರೆ ಕಂಪನಿ ಬೀಜ ಬಿತ್ತಿರುವುದರಿಂದ ಅವರ ಬೆಳೆಯು ಚೆನ್ನಾಗಿ ಬೆಳೆದಿದ್ದು, ಆದ್ದರಿಂದ ಇದು ಬೀಜದ ಸಮಸ್ಯೆ ಎಂದು ನಮಗೆ ತಿಳಿದಿದೆ ಎಂದು ದೂರಿದರು.

ಈಗಾಗಲೇ ಗ್ರಾಮದ ಬಹುತೇಕ ರೈತರು ಬಿತ್ತನೆ ಮಾಡಿರುವ ಈರುಳ್ಳಿ ಬೆಳೆದಿಲ್ಲ. ಜತೆಗೆ ಈ ಬಗ್ಗೆ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಲು ಕಂಪನಿ ಅಧಿಕಾರಿಗಳಿಗೆ ತಿಳಿಸಿದರೂ, ಸಹ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ರೈತರು ಆರೋಪ ಮಾಡಿದರು.

ರೈತರು ಹೊಲಗಳ ಪ್ರತಿ ಎಕರೆಗೆ 15 ರಿಂದ 20 ಸಾವಿರ ರೂ. ಖರ್ಚು ಆರ್ಥಿಕ ಸಂಕಷ್ಟದಲ್ಲಿದ್ದು, ಜತೆಗೆ ಮತ್ತೊಮ್ಮೆ ಬಿತ್ತನೆಗೆ ಮಾಡುವಷ್ಟು ಖರ್ಚು ರೈತರಿಗೆ ಇಲ್ಲ ಆದ್ದರಿಂದ ಕೂಡಲೆ ಎಲ್ಲ ರೈತರಿಗು ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸಿದರು.

ನಂತರ ರೈತರ ಮನವಿಗೆ ಸ್ಪಂದಿಸಿದ ತೋಟಾಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಕಾಶೀನಾಥ ಭದ್ರಣ್ಣವರ ಮಾತನಾಡಿ, ಕೂಡಲೇ ಕಬ್ಬೇನೂರ ಗ್ರಾಮಕ್ಕೆ ತೋಟಗಾರಿಕೆ ವಿವಿ ವಿಜ್ಞಾನಿಗಳನ್ನು ಕಳುಹಿಸಿ ಈರುಳ್ಳಿ ಬೀಜದ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಮಲ್ಲಿಕಾರ್ಜುನ ಕರಗುಂದ, ಮಾಂತೇಶ ಕರಡಿಗುಡ್ಡ, ವಿನಾಯಕ ಕರಡಿಗುಡ್ಡ, ಯಲ್ಲಪ್ಪಗೌಡ ಮೂದಿಗೌಡ್ರ, ದಯಾನಂದ ಹಸಬಿ, ರುದ್ರಗೌಡ ಪರತಗೌಡ, ಈರನಗೌಡ ರಾಚನಗೌಡ್ರ, ಸಂಗಣ್ಣ ಹಸಬಿ ಸೇರಿದಂತೆ ಇತರರು ಇದ್ದರು.



ಮತದಾರರ ಶಿಕ್ಷಣ, ಜಾಗೃತಿ ಜಾಥಾ

•**ನವಲಗುಂದ:** ಮತದಾರರ ಪಟ್ಟಿ ದೋಷರಹಿತವಾಗಿ ರೂಪಿಸುವ ನಿಟ್ಟಿನಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನವಲಗುಂದ ಪಟ್ಟಣದಲ್ಲಿ ಸೋಮವಾರ ದಿವಸ ವಿಶೇಷ ಎಸ್‌ಐಆರ್ ಬಗ್ಗೆ ಸಮಿತಿಯಡಿ ಮತದಾರರ ಶಿಕ್ಷಣ ಮತ್ತು ಜಾಗೃತಿ ಜಾಥಾ ಕಾರ್ಯಕ್ರಮವನ್ನು ಪಟ್ಟಣದ ತಾಲೂಕ ತಹಶೀಲ್ದಾರ್ ಕಾರ್ಯಾಲಯದಿಂದ ಪ್ರಾರಂಭಗೊಂಡು 2 ತಂಡಗಳಾಗಿ ವಿಂಗಡಿಸಿ ಮಾಡೆಲ್ ಹೈಸ್ಕೂಲ್ ಮೈದಾನದವರೆಗೆ ನವಲಗುಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿಲಾಯಿತು.

ಎರಡೂ ತಂಡಗಳು ಮುಖ್ಯ ಮಾರುಕಟ್ಟೆಯಲ್ಲಿ ಸಮಾವೇಶಗೊಂಡು ಸಹಾಯಕ ಮತದಾರರ ನೋಂದಣಾಧಿಕಾರಿ ದೇವರಾಜ, ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ತಹಶೀಲ್ದಾರ್ ಸುಧೀರ ಸಾಹುಕಾರ ಇವರುಗಳು ಕಾರ್ಯಕ್ರಮವನ್ನುದ್ದೇಶಿಸಿ ಸಾರ್ವಜನಿಕವಾಗಿ ಎಸ್‌ಐಆರ್ ಬಗ್ಗೆ ಮತಗಟ್ಟೆ ಅಧಿಕಾರಿಗಳು, ಜೂ.30ರಿಂದ ಜು.29ರವರೆಗೆ ಮತದಾರರ ಮನೆ ಮನೆಗೆ ಬಂದು ಸದರಿ ನಮೂನೆಗಳಲ್ಲಿ ಮತದಾರರ ನೋಂದಣಿಯ ನಮೂನೆಯ 2 ಪ್ರತಿಗಳನ್ನು ಸಲ್ಲಿಸುತ್ತಿದ್ದು, ತಮಗೆ ಸಂಬಂಧಿಸಿದ ನಿಖರ ಮಾಹಿತಿಯನ್ನು ಸರಿಯಾಗಿ ಭರ್ತಿ ಮಾಡಿ ಒಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗಳಿಗೆ ಕೊಡಲು ಹಾಗೂ ಒಂದು ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಹಾಗೂ ಸದರಿ ಮತದಾರರ ಪಟ್ಟಿಯ ಕರಡು ಪ್ರತಿಯನ್ನು ಪ್ರಚುರ ಪಡಿಸಿದ ನಂತರ ಅದನ್ನು ವೀಕ್ಷಿಸಿ ಏನಾದರೂ ನ್ಯೂನ್ಯತೆಗಳು ಕಂಡು ಬಂದಲ್ಲಿ ಮನವಿಯ ಮೂಲಕ ಸರಿಪಡಿಸಿಕೊಳ್ಳಲು ತಿಳಿಸಿದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಎಸ್.ಪಿ.ಪೂಜಾರ ಹಾಗೂ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಮತ್ತು ಅಂಗನವಾಡಿ ಕಾರ್ಯಕರ್ತೆಯರಾದ ಬಿಎಲ್‌ಒ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಬೂತ್ ಮಟ್ಟದಿಂದ ಜೆಡಿಎಸ್ ಸಂಘಟಿಸಿ: ಜಿಲ್ಲಾಧ್ಯಕ್ಷ ಗುರುರಾಜ

•**ಧಾರವಾಡ:** ಜಾತ್ಯಾತೀತ ಜನತಾದಳದ ಯುವ ಘಟಕದ ಬೂತ್ ಮಟ್ಟದ ಮಹತ್ವದ ಸಂಘಟನಾ ಸಭೆಯು ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ ಅಧ್ಯಕ್ಷತೆಯಲ್ಲಿ ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಸೋಮವಾರ ಯಶಸ್ವಿಯಾಗಿ ಜರುಗಿತು.

2028ರ ಚುನಾವಣೆಯೇ ಗುರಿ: ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ ಮಾತನಾಡಿ, 2028ರ ಚುನಾವಣೆಯಲ್ಲಿ ಜೆಡಿಎಸ್ ರಾಜ್ಯದಲ್ಲಿ ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಈ ನಿಟ್ಟಿನಲ್ಲಿ ಜಿಲ್ಲೆಯ ಪ್ರತಿ ಬೂತ್ ಮಟ್ಟದಿಂದಲೂ ಪಕ್ಷವನ್ನು ಅತ್ಯಂತ ಬಲಿಷ್ಠವಾಗಿ ಸಂಘಟಿಸಲು ಕಟ್ಟುನಿಟ್ಟಿನ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪಕ್ಷದ ಬಲವರ್ಧನೆಗೆ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಹಾಗೂ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಶೀಘ್ರದಲ್ಲೇ ಧಾರವಾಡ ಜಿಲ್ಲೆಗೆ ಬರಲಿದ್ದು, ಉಭಯ ನಾಯಕರಿಗೆ ಅದ್ದೂರಿ ಸ್ವಾಗತ ಕೋರಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಇದೇ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಪಕ್ಷಕ್ಕೆ ಭಾರಿ ಹಿನ್ನಡೆಯಾಗಿದ್ದು, ಕಾಂಗ್ರೆಸ್‌ನ ಸಿದ್ಧಾಂತ ಹಾಗೂ ನಾಯಕತ್ವದಿಂದ ಬೇಸತ್ತು ಪಕ್ಷ ತೊರೆದ ಹಲವು ಪ್ರಮುಖ ಮುಖಂಡರು ಹಾಗೂ ಕಾರ್ಯಕರ್ತರು ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ ಅವರ ಸಮ್ಮುಖದಲ್ಲಿ ಅಧಿಕೃತವಾಗಿ ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾದರು.

ಹೊಸದಾಗಿ ಪಕ್ಷಕ್ಕೆ ಬಂದ ಮುಖಂಡರನ್ನು ಶಲ್ಯ ಹೊದಿಸಿ, ಪಕ್ಷದ ಧ್ವಜ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಈ ಸೇರ್ಪಡೆಯು ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಬಲವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಮುಖಂಡರು ವಿಶ್ವಾಸ ವ್ಯಕ್ತಪಡಿಸಿದರು. ಸಭೆಯಲ್ಲಿ ಯುವ ಘಟಕದ ಜಿಲ್ಲಾಧ್ಯಕ್ಷ ಭೀಮರಾಯ ಗುಡೇನಕಟ್ಟಿ, ಕಾರ್ಯಾಧ್ಯಕ್ಷ ಪುನೀತ್ ಹಡಗಲಿ, ಪಕ್ಷದ ಮುಖಂಡರಾದ ಸುರೇಶ ನವಲೂರ, ಮಹದೇವ ಕಾಂಬಳೆ, ನಿತಿನಕುಮಾರ್, ವಿನಾಯಕ ಗುಡ್ಡದಕೇರಿ, ರೋಹಿತ್ ಹೂಗಾರ ಸೇರಿದಂತೆ ಅನೇಕರು ಇದ್ದರು.



ಗಂಜಿಗಟ್ಟಿಯಲ್ಲಿ ಭಾವೈಕ್ಯದ ಮೊಹರಂ



•**ಕಲಘಟಗಿ:** ತಾಲೂಕಿನ ಗಂಜಿಗಟ್ಟಿ ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆ ಸಂಕೇತವಾಗಿ ಮೊಹರಂ ಹಬ್ಬವನ್ನು ಭಕ್ತಿಯಿಂದ ಆಚರಿಸಲಾಯಿತು. ಗ್ರಾಮದ ಇತಿಹಾಸ ಮತ್ತು ಪರಂಪರೆ ಎತ್ತಿಹಿಡಿಯುವಂತೆ ಎರಡೂ ಸಮುದಾಯದ ಜನರು ಒಂದಾಗಿ ಹಬ್ಬದ ಆಚರಣೆಗಳಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಹಬ್ಬದ ಅಂಗವಾಗಿ ಗ್ರಾಮದಲ್ಲಿ ಮೆರವಣಿಗೆ ಜೊತೆಗೆ ಕೋಲಾಟ ಮೇಳ ಹೆಜ್ಜೆ ಮಜಲು ಮೇಳ ಆಯೋಜಿಸಲಾಗಿತ್ತು. ಗ್ರಾಮಸ್ಥರೆಲ್ಲರೂ ಒಟ್ಟಾಗಿ ಸಾಂಪ್ರದಾಯಿಕ ಡೊಳ್ಳು ಮತ್ತು ತಮಟೆ ವಾದನಗಳೊಂದಿಗೆ ಹೆಜ್ಜೆ ಹಾಕಿದರು.

ಗಂಜಿಗಟ್ಟಿ ಗ್ರಾಮದ ಮೊಹರಂ ಆಚರಣೆ ಕೇವಲ ಒಂದು ಧಾರ್ಮಿಕ ಹಬ್ಬವಾಗಿರದೆ, ಜಾತಿ–ಮತಗಳ ಬೇಧವನ್ನು ಮರೆತು ಮನುಷ್ಯತ್ವ ಮತ್ತು ಭಾವೈಕ್ಯತೆ ಒಟ್ಟಾಗಿ ಆಚರಿಸುವ ಸುಂದರ ಸಂಪ್ರದಾಯಕ್ಕೆ ಕೈಗನ್ನಡಿಯಾಗಿದೆ. ತಲೆಮಾರುಗಳಿಂದ ನಡೆದುಕೊಂಡು ಬಂದ ಈ ಸಾಮರಸ್ಯದ ಹಬ್ಬ ಇಂದಿನ ಸಮಾಜಕ್ಕೆ ಅತ್ಯಂತ ಮಾದರಿಯಾಗಿದೆ.

ಈ ವೇಳೆ ಊರಿನ ಹಿರಿಯರಾದ ಮಲ್ಲಪ್ಪ ಶಿಗಿಗಟ್ಟಿ, ಭೀಮಣ್ಣ ಗಾಣಿಗೇರ, ನಿಂಗಯ್ಯ ಕುರ್ದಿಕೇರಿ, ಮಂಜುನಾಥ ಧಾರವಾಡ, ನಿಂಗಪ್ಪ ಮುತ್ತಣ್ಣವರ, ಕುಮಾರ ಗಾಣಿಗೇರ, ಇಮಾಮಸಾಬ ವಾಲೀಕಾರ, ಖಾದರಸಾಬ್ ವಾಲೀಕಾರ ಗ್ರಾಮಸ್ಥರು ಇದ್ದರು.

ಪರೀಕ್ಷಾ ಹಗರಣ ವಿರುದ್ಧ ಪ್ರತಿಭಟನೆ

•**ಹುಬ್ಬಳ್ಳಿ:** ಪರೀಕ್ಷಾ ಹಗರಣ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರಂಭಿಸಿದ ಹೋರಾಟ ಆಂದೋಲನದ ಬೆಂಬಲಾರ್ಥವಾಗಿ ಹು–ಧಾ ಯುವ ಕಾಂಗ್ರೆಸ್ ಘಟಕ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಇಲ್ಲಿಯ ಕಾರವಾರ ರಸ್ತೆಯ ಕಾಂಗ್ರೆಸ್ ಕಚೇರಿ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ಅರವಿಂದ ನಗರದ ಬಿಜೆಪಿ ಕಚೇರಿ ವರೆಗೂ ಹೋಗಲು ಯತ್ನಿಸಿದರು. ಈ ವೇಳೆ ಮಾರ್ಗ ಮಧ್ಯದಲ್ಲಿ ಪೊಲೀಸರು ತಡೆದರು. ಕೇಂದ್ರ ಸರ್ಕಾರ ಹಾಗೂ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹು–ಧಾ ಮಹಾನಗರ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅರ್ಜುನ ಪಾಟೀಲ ಮಾತನಾಡಿ, ದೇಶದ ವಿದ್ಯಾರ್ಥಿಗಳ ಭವಿಷ್ಯದಲ್ಲಿ ಯಾವುದೇ ರಾಜಿಗೆ ಅವಕಾಶವಿಲ್ಲ, ಭಾರತದ ಯುವ ಜನರ ಹಕ್ಕುಗಳಿ ಹಾಗೂ ಆಶಯಗಳನ್ನು ರಕ್ಷಣೆಗೆ ಯುವ ಕಾಂಗ್ರೆಸ್ ನಿರಂತರ ಹೋರಾಟ ನಡೆಸಲಿದೆ ಎಂದರು.

ಪ್ರತಿಭಟನೆಯಲ್ಲಿ ವಾಸಿಂ ಹುಕ್ಕೇರಿ, ಶಾನು ಖಾನ, ಲಿಂಗರಾಜ ನೂಲ್ವಿ, ರಾಹುಲ್ ಯು., ತಾಕಿ ಅಹ್ಮದ್ ಇದ್ದರು.



ಮೆಡಿಹೆಲ್ತ್ ಎಕ್ಸ್‌ಪೋ–2026 ಯಶಸ್ವಿ



•**ಹುಬ್ಬಳ್ಳಿ:** ಇಲ್ಲಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಕೆಎಲ್‌ಇ ತಂತ್ರಜ್ಞಾನ ನಾವೀನ್ಯತೆ ಮತ್ತು ಉದ್ಯಮ ಶೀಲತಾ ಕೇಂದ್ರ (ಕೆಎಲ್‌ಇ–ಸಿಟಿಐಇ) ವತಿಯಿಂದ ಮೆಡಿಹೆಲ್ತ್ ಎಕ್ಸ್‌ಪೋ–2026 ಮೆಡ್‌ಟೆಕ್ನಾವೀನ್ಯತಾ ಪ್ರದರ್ಶನ ಹಾಗೂ ಉತ್ತರ ಕರ್ನಾಟಕ ಇನ್ಕ್ಯುಬೇಟರ್ಸ್ ಕನ್ಸೋರ್ಟಿಯಂ ಸಮಾರಂಭ ನಡೆಯಿತು.

ಉತ್ತರ ಕರ್ನಾಟಕದ ವಿವಿಧ ಭಾಗಗಳಿಂದ ಆಗಮಿಸಿದ ಸ್ಟಾರ್ಟ್ ಆಪಯಪ್ ಸಂಸ್ಥಾಪಕರು, ಆರೋಗ್ಯ ಕ್ಷೇತ್ರದ ತಜ್ಞರು, ಶಿಕ್ಷಣ ತಜ್ಞರು, ಹೂಡಿಕೆದಾರರು ಭಾಗವಹಿಸಿದ್ದರು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಪ್ರಕಾಶ ತೇವರಿ, ಡಾ.ಅನಂತ ಕೊಪ್ಪ ಚಾಲನೆ ನೀಡಿದರು. ಕೆಎಲ್ ಇ–ಸಿಟಿಐಇ ನಿರ್ದೇಶಕ ಡಾ.ವಿನಾಯಕ ಹೊಸಮನಿ, ಸಹ ನಿರ್ದೇಶಕ ಹರೀಶ ಆಗಡಿ ಇದ್ದರು.

ಐಐಟಿ ಧಾರವಾಡ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್, ಐಐಐಟಿ, ಜೈನ್ ಕಾಲೇಜ್, ಕೃಷಿ ವಿಶ್ವವಿದ್ಯಾಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಮುಖ ಸಂಸ್ಥೆಗಳು ಭಾಗವಹಿಸಿದ್ದವು.

ಮೆಡಿಹೆಲ್ತ್ ಎಕ್ಸ್ಪೋ 2026ರಲ್ಲಿ ಕೆಎಲ್ ಇ–ಸಿಟಿಐಇಯಲ್ಲಿ ಇನ್ಕ್ಯುಬೇಟ್ ಆಗಿರುವ ಸ್ಟಾರ್ಟ್ ಆ್ಯಪ್‌ಗಳು ಅಭಿವೃದ್ಧಿ ಪಡಿಸಿರುವ ಅತ್ಯಾಧುನಿ ಹೆಲ್ತ್‌ತಂತ್ರಜ್ಞಾನ ಪರಿಹಾರಗಳನ್ನು ನೇರ ಉತ್ಪನ್ನ ಪ್ರದರ್ಶನಗಳು ಹಾಗೂ ವಿಶೇಷ ಸ್ಟಾರ್ಟ್ ಆ್ಯಪ್‌ಗಳು ಭಾಗವಹಿಸಿದ್ದವು. ನವೋದ್ಯಮಿಗಳು, ಆರೋಗ್ಯತಜ್ಞರು, ಕೈಗಾರಿಕಾಪರಿಣಿತರು, ಹೂಡಿಕೆದಾರರು ಹಾಗೂ ಸಂಶೋಧಕರೊಂದಿಗೆ ಸಂವಾದ ನಡೆಸಲು, ಸಹಭಾಗಿತ್ವ ಬೆಳೆಸಲು ಹಾಗೂ ವಾಣಿಜ್ಯೀಕರಣದ ಅವಕಾಶಗಳನ್ನು ಅನ್ವೇಷಿಸಲು ಮಹತ್ವದ ವೇದಿಕೆಯಾಗಿತ್ತು.

ಮತಪಟ್ಟಿ ಪರಿಷ್ಕರಣೆಗೆ ಕೈಜೋಡಿಸಿ

•**ಅಳ್ನಾವರ:** ಮತದಾರ ಪಟ್ಟಿ ಸಮಗ್ರ ಪರಿಷ್ಕರಣೆ ಕಾರ್ಯ ಪ್ರಾರಂಭವಾಗುತ್ತಿದ್ದು, ಪ್ರತಿಯೊಬ್ಬರು ಇದರಲ್ಲಿ ಪಾಲ್ಗೊಂಡು ಕಾರ್ಯವನ್ನು ಯಶಸ್ವಿಗೆ ಸಹಕರಿಸುವಂತೆ ಅಳ್ನಾವರ ತಾಲೂಕು ಸ್ವೀಪ ಸಮಿತಿ ಅಧ್ಯಕ್ಷ ತಾಪಂ ಕಾನಿ ಅಧಿಕಾರಿ ಪ್ರಶಾಂತ ತುರಕಾಣಿ ಹೇಳಿದರು.

ತಾಲೂಕಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದ ನೇತೃತ್ವ ವಹಿಸಿ ಮಾತನಾಡಿ ಮತಗಟ್ಟೆ ಅಧಿಕಾರಿಗಳು ಪ್ರತಿ ಮನೆಗೂ ಭೇಟ್ಟಿ ನೀಡಿ ಪೂರೈಸಲಾಗುವ ನಿಗದಿತ ನಮೂನೆ ಪಾಂಗಳನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಮರಳಿಸುವದು ಕಡ್ಡಾಯವಾಗಿದೆ ಎಂದರು.

ಜಾಥಾದಲ್ಲಿ ತಾಪಂ ಸಹಾಯಕ ನಿರ್ದೇಶಕ ಸಂತೋಷಕುಮಾರ ತಳಕಲ್, ಪಪಂ ಮುಖ್ಯಾಧಿಕಾರಿ ಪ್ರಕಾಶ ಮಗದುಮ್, ಕಂದಾಯ ಅಧಿಕಾರಿ ಶಿವಾನಂದ ಪಟ್ಟಿಹಾಳ, ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿ ಜನರಿಗೆ ಮತಪಟ್ಟಿ ಪರಿಷ್ಕರಣೆಯ ಜಾಗೃತಿ ಮೂಡಿಸಿದರು.

ಗ್ರಾಮಾಂತರ ಭಾಗದಲ್ಲಿಯೂ ಜಾಥಾ ಹಮ್ಮಿಕೊಳ್ಳಲಾಗಿತ್ತು. ಪಂಚಾಯತ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.



ಕನ್ನಡಿಗರಿಗೆ ಕಾಂಗ್ರೆಸ್ ಮತ್ತೊಮ್ಮೆ ಮಹಾದ್ರೋಹ: ಆರ್.ಅಶೋಕ



ಬೆಂಗಳೂರು: ನಾಡದ್ರೋಹಿ ಕೈ ಸರ್ಕಾರವು ಕನ್ನಡಿಗರಿಗೆ ಮತ್ತೊಮ್ಮೆ ಮಹಾದ್ರೋಹ ಮಾಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಂಗಾರು ಕ್ಷೀಣಿಸಿ ಕರ್ನಾಟಕದಲ್ಲಿ ಬರದ ಭೀತಿ ಆವರಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹನಿ ನೀರಿಗೂ ಜನ ಪರದಾಡುವ ಭೀಕರ ಪರಿಸ್ಥಿತಿ ಎದುರಾಗಿದೆ. ಆದರೆ, ಈ ಕಳ್ಳ ಕಾಂಗ್ರೆಸ್ ಸರ್ಕಾರ ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿದೆ ಎಂದು ದೂರಿದ್ದಾರೆ. ಕುಡಿಯುವ ನೀರಿನ ನೆಪವೊಡ್ಡಿ ಕಾವೇರಿ ಕೊಳ್ಳದ ಜೀವನಾಡಿ ಕೆಆರ್‌ಎಸ್ ಡ್ಯಾಂನಿಂದ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸಲಾಗುತ್ತಿದೆ!.

ಕಳೆದ ಮೂರು ದಿನಗಳಿಂದ ಪ್ರತಿದಿನ 2,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದು ಕನ್ನಡಿಗರ ಬೆನ್ನಿಗೆ ಚುಚ್ಚುತ್ತಿರುವ ಚೂರಿಯಲ್ಲದೆ ಮತ್ತಿನ್ನೇನು ಮುಖ್ಯಮಂತ್ರಿಗಳೇ? ಈ ನಾಡದ್ರೋಹಿ ಕಾಂಗ್ರೆಸ್ ಇತಿಹಾಸವೇ ಇಷ್ಟು, ಅಧಿಕಾರವಿಲ್ಲದಾಗ ನಮ್ಮ ನೀರು ನಮ್ಮ ಹಕ್ಕು ಎಂದು ನಾಟಕದ ಬೊಬ್ಬೆ! ಅಧಿಕಾರ ಸಿಕ್ಕಾಗ ನಮ್ಮ ನೀರು ತಮಿಳುನಾಡಿನ ಹಕ್ಕು ಎನ್ನುತ್ತಾ ಅಧಿಕಾರಕ್ಕಾಗಿ ತಮಿಳುನಾಡಿನ ಎದುರು ಸಂಪೂರ್ಣ ಶರಣಾಗತಿ ಆಗುವುದು. ನಾಡಿನ ಜನತೆಯ ಹಿತ ಕಾಯದೆ ಹೈಕಮಾಂಡ್ ಅಣತಿಯಂತೆ ತುಳುನಾಡಿನ ಜೊತೆ ರಾಜಿ ಮಾಡಿಕೊಳ್ಳುವುದು ಎಂದು ಟೀಕಿಸಿದ್ದಾರೆ.

ನೀರಿಲ್ಲದೆ, ಬೆಳೆಯಿಲ್ಲದೆ ಕಾವೇರಿ ಕೊಳ್ಳದ ನಮ್ಮ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವರ ಶವಯಾತ್ರೆ ಮಾಡುತ್ತೀರಾ? ಬೆಂಗಳೂರಿನ ಜನ ಟ್ಯಾಂಕರ್ ಮಾಫಿಯಾ ಸುಲಿಗೆಗೆ ಸಿಕ್ಕಿ ಪರದಾಡಿದರೆ ಟ್ಯಾಂಕರ್ ಯಾತ್ರೆ ಮಾಡುತ್ತೀರಾ? ಎಂದು ಅಶೋಕ ಪ್ರಶ್ನಿಸಿದ್ದಾರೆ. ಕನ್ನಡ ನಾಡಿನ ಜನತೆಗೆ ಕನಿಷ್ಠ ನೀರಿನ ಭದ್ರತೆ, ನೀರಿನ ಹಕ್ಕು ನೀಡಲಾಗದ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನತೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದವರು ಎಚ್ಚರಿಸಿದ್ದಾರೆ.



ಚಿಕ್ಕಮಗಳೂರಿನಲ್ಲಿ ಎಸ್‌ಐಆರ್ ಕುರಿತು ಅರಿವು ಮೂಡಿಸಲು ಸೋಮವಾರ ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಸಿದರು. ಶಿಕ್ಷಕರು ಮತ್ತು ಸ್ಥಳೀಯರು ಸಾಥ್ ನೀಡಿದರು.

ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದಕ್ಕೆ ಮುಂದು: ಗೃಹಸಚಿವ ಪರಮೇಶ್ವರ್

ಬೆಂಗಳೂರು: ಪೆರು ಗಣರಾಜ್ಯದೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಅದರ ರಾಜಧಾನಿ ಲಿಮಾನಂತಹ ಪ್ರಮುಖ ನಗರ ಹಾಗೂ ಬೆಂಗಳೂರು ನಗರದ ನಡುವೆ ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ಅತ್ಯಂತ ಉತ್ಸುಕವಾಗಿದೆ ಎಂದು ಡಿಸಿಎಂ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.

» ಪೆರು ರಾಜಧಾನಿ ಲಿಮಾ-ಬೆಂಗಳೂರು ಬಾಂಧವ್ಯ ಗಟ್ಟಿಗೊಳಿಸುವ ಹಿನ್ನೆಲೆ



ಭಾರತ ಮತ್ತು ಪೆರು ನಡುವಿನ 63 ವರ್ಷಗಳ ನಿರಂತರ ರಾಜತಾಂತ್ರಿಕ ಬಾಂಧವ್ಯ ಹಾಗೂ ಪೆರು ಗಣರಾಜ್ಯದ 205ನೇ ಸ್ವಾತಂತ್ರ್ಯ ದಿನಾಚರಣೆಯಂಗವಾಗಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಉನ್ನತ ಮಟ್ಟದ ರಾಜತಾಂತ್ರಿಕ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ವೇಳೆ ಪೆರುವಿನ ಲ್ಯಾಟಿನ್ ಅಮೆರಿಕನ್ ವಿಮೋಚನಾ ಚಳವಳಿಗಳು ಮತ್ತು ಮಹಾತ್ಮ ಗಾಂಧಿ ಅವರ ನೇತೃತ್ವದ ಭಾರತದ ಸ್ವಾತಂತ್ರ್ಯ ಹೋರಾಟದ ನಡುವಿನ ಆಳವಾದ ಸಾಮ್ಯತೆಗಳನ್ನು ಸ್ಮರಿಸಿದರು.

ಭಾರತದ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಶೇ. 40ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ಮೂಲಕ ಪ್ರಥಮ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ಇಡೀ ದೇಶವನ್ನೇ ಮುನ್ನಡೆಸುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಅಭೂತಪೂರ್ವ ಯಶಸ್ಸು, ಅಲ್ಲಿ ಹರಿದುಬಂದ ಬೃಹತ್ ಹೂಡಿಕೆಗಳು ರಾಜ್ಯದ ಪ್ರಗತಿಯನ್ನು ಮತ್ತಷ್ಟು ಸಾಬೀತುಪಡಿಸಿವೆ ಎಂದು ಮಾಹಿತಿ ನೀಡಿದರು.

ಇದು ಭವಿಷ್ಯದಲ್ಲಿ ಉಭಯದೇಶಗಳ ನಡುವಿನ 10 ಬಿಲಿಯನ್ ಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ದೊಡ್ಡ ಮುನ್ನುಡಿಯಾಗಲಿದೆ ಎಂದು ಡಾ. ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು. ಪೆರು ರಾಯಭಾರಿ ಜೇವಿಯರ್ ಮ್ಯಾನುಯೆಲ್ ಪೌಲಿನಿಚ್ ವೆಲಾರ್ಡ್, ಬೆಂಗಳೂರಿನಲ್ಲಿರುವ ಪೆರುವಿನ ಗೌರವ ಕಾನ್ಸುಲ್ ವಿಕ್ರಮ್ ವಿಶ್ವನಾಥ್ ಹಾಗೂ ಉನ್ನತ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ರೈತರ ಮನಸ್ಸಿಗೆ ನೋವಾಗುವ ಯೋಜನೆ ಬೇಡ: ಸೋಮಣ್ಣ



ಚನ್ನಪಟ್ಟಣ: ರೈತರ ಮನಸ್ಸಿಗೆ ನೋವಾಗುವ ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು. ರಾಜ್ಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಜನರಿಗೆ ಬೇಡವಾದ ಯೋಜನೆಗಳನ್ನು ಬಲವಂತವಾಗಿ ಜಾರಿಗೊಳಿಸುವ ಅಗತ್ಯ ವಿಲ್ಲ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು. ಚನ್ನಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಾವು ಈಗಾಗಲೇ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದಾಗಿ ಹೇಳಿದರು. ಸಿಎಂ ಆಗಿ ಅಧಿಕಾರ ವಹಿಸಿ ಕೊಂಡು ಒಂದು ತಿಂಗಳಷ್ಟೇ ಆಗಿದೆ. ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಕೊಡದೆ ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಿ ಎಂದು ನಾನು ಸಲಹೆ ನೀಡಿದ್ದೇನೆ. ರೈತರಿಗೆ ಅನಾನುಕೂಲವಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತವಲ್ಲ, ಬೇರೆ ಸೂಕ್ತ ಸ್ಥಳದಲ್ಲಿ ಟೌನ್‌ಶಿಪ್ ನಿರ್ಮಿಸಿದರೆ ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದರು. ಬೈರಮಂಗಲ ಕೆರೆಯ ಸಂರಕ್ಷಣೆ, ಶುದ್ಧೀಕರಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಸಿಎಂಗೆ ಸಲಹೆ ನೀಡಿರುವುದಾಗಿ ತಿಳಿಸಿದ ಅವರು, ರಾಜ್ಯದಲ್ಲಿ ಇನ್ನೂ ನೂರು ಟೌನ್‌ಶಿಪ್‌ಗಳನ್ನು ನಿರ್ಮಿಸುವ ಅವಕಾಶಗಳಿವೆ. ಆದರೆ ರೈತರ ಭಾವನೆಗಳಿಗೆ ಧಕ್ಕೆ ತರುವ ರೀತಿಯ ಯೋಜನೆಗಳನ್ನು ಕೈಗೊಳ್ಳಬಾರದು ಎಂಬುದೇ ನನ್ನ ಸ್ಪಷ್ಟ ಅಭಿಪ್ರಾಯ ಎಂದರು.

ಲಾರಿ-ಬಸ್ ಅಪಘಾತ: 12ಕ್ಕೂ ಹೆಚ್ಚು ಮಂದಿಗೆ ಗಾಯ

ಚಿತ್ರದುರ್ಗ: ಜಿಲ್ಲೆಯ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ-ಬಸ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಬಸ್ಸಿನಲ್ಲಿದ್ದ 12ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದ್ದು, ಓರ್ವನ ಸ್ಥಿತಿ ಗಂಭೀರವಾಗಿದ್ದು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ಹೈವೆಯಲ್ಲಿ ಈ ಘಟನೆ ನಡೆದಿದೆ. ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಮತ್ತೊಂದು ಬದಿಯಲ್ಲಿ ಚಲಿಸುತ್ತಿದ್ದ ಬಸ್ಸಿಗೆ ಲಾರಿ ಡಿಕ್ಕಿಯಾಗಿದೆ. ಸಿಂಧನೂರು ಕಡೆಯಿಂದ ಬೆಂಗಳೂರಿಗೆ ಹೊರಟಿದ್ದ ಬಸ್ಸಿಗೆ ಲಾರಿ ಡಿಕ್ಕಿ ಹೊಡೆದಿದೆ. ಬಸ್ಸಿನಲ್ಲಿ ಒಟ್ಟು 34 ಮಂದಿ ಪ್ರಯಾಣಿಸುತ್ತಿದ್ದರು. ಗಾಯಾಳುಗಳನ್ನು ಚಳ್ಳಕೆರೆ ತಾಲೂಕು ಆಸ್ಪತ್ರೆಗೆ ದಾಖಲಿಸಿದ್ದು, ಸ್ಥಳಕ್ಕೆ ಪಿಎಸ್‌ಐ ಶಿವಕುಮಾರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ತಳಕು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಶಿಕ್ಷಣದಲ್ಲಿ ಮತ ರಾಜಕೀಯ ಬೆರೆಸದಿರಿ: ಮಹದೇವಪ್ಪ

ಬೆಂಗಳೂರು: ಎನ್‌ಸಿಇಆರ್‌ಟಿ 9ನೇ ತರಗತಿಯ ಪುಸ್ತಕದಿಂದ ಭಾರತದ ಸಂವಿಧಾನ ಪ್ರಸ್ತಾವನೆ ಮತ್ತು ಜಾತ್ಯಾತೀತತೆ ಎಂಬ ಅಂಶವನ್ನು ತೆಗೆದುಹಾಕಿ, ತುರ್ತು ಪರಿಸ್ಥಿತಿಯ ದುಷ್ಪರಿಣಾಮಗಳು ಎಂಬ ಅಂಶವನ್ನು ಸೇರಿಸಲಾಗಿದೆ. ಶೈಕ್ಷಣಿಕ ಪಠ್ಯದ ಮೂಲಕವೇ ಮಕ್ಕಳಲ್ಲಿ ರಾಜಕೀಯ ವಿಷವನ್ನು ತುಂಬುವ ಕೆಲಸ ಮಾಡುತ್ತಿದ್ದು ಶಿಕ್ಷಣದೊಳಗೆ ಮತ ರಾಜಕೀಯವನ್ನು ಬೆರೆಸುವ ಕೆಲಸವನ್ನು ಮಾಡುತ್ತಿರುವುದು ಖಂಡನೀಯವಾದ ಸಂಗತಿಯಾಗಿದೆ ಎಂದು ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ. ಜಾತ್ಯಾತೀತತೆ ಎಂದರೆ ಜಾತಿ ಮತ್ತು ಧರ್ಮದ ಬೇಧವಿಲ್ಲದೇ ಎಲ್ಲರನ್ನೂ ಸಮಾನವಾಗಿ ಕಾಣುವುದು ಎಂದರ್ಥ. ಭಾರತೀಯ ಜನಗಳಾದ ನಾವು ಎಂದು ಹೇಳುವ, ಐಕ್ಯತೆ ಮತ್ತು ಭಾವೈಕ್ಯತೆಯ ಸಂದೇಶದ ನಮ್ಮ ಸಂವಿಧಾನದ ಪೀಠಿಕೆ ತೆಗೆದು ಹಾಕಿ ಅಲ್ಲಿ ಸರ್ಕಾರದ ವಿರುದ್ಧ ಕೆಟ್ಟ ಭಾವನೆ ಬರುವಂತೆ ತುರ್ತು ಪರಿಸ್ಥಿತಿಯ ಅಧ್ಯಾಯ ಸೇರಿಸಿದ್ದು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ಪ್ರಕಟಣೆಯಲ್ಲಿ ಹೊರಡಿಸಿದ್ದಾರೆ.

ರಾಜ್ಯದ ವಿದ್ಯುತ್ ನಿಗಮ ಖಾಸಗೀಕರಣ ಕುರಿತು ಸಂಪುಟ ಸಭೆಯಲ್ಲಿ ಚರ್ಚೆ

ಅಭಿಪ್ರಾಯ ಪರಿಗಣನೆ

ಬೆಂಗಳೂರು: ರಾಜ್ಯದ ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡದಿರುವ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ನೌಕರರ ಅಭಿಪ್ರಾಯ ಪರಿಗಣಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ವಿವಿಧ ಸಂಘಗಳ ಒಕ್ಕೂಟವು ಸೋಮವಾರ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಖಾಸಗೀಕರಣದ ವಿಚಾರದಲ್ಲಿ ತಾವೊಬ್ಬರೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. 2003ರಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸುವ ಕಾನೂನನ್ನು ಬಿಜೆಪಿ ಸರ್ಕಾರವೇ ತಂದಿತ್ತು. ಆಗ ಅದರ ವಿರುದ್ಧ ಯಾರೂ ಧ್ವನಿ ಎತ್ತಲಿಲ್ಲ. ಈಗ ತಮ್ಮ ಬಳಿ ಬಂದು ಖಾಸಗೀಕರಣಕ್ಕೆ ಅವಕಾಶ ನೀಡಬೇಡಿ ಎಂದು ಮನವಿ ಮಾಡುತ್ತಿರುವುದಾಗಿ ಅವರು ಹೇಳಿದರು.

ವಿದ್ಯುತ್ ಮೂಲಸೌಕರ್ಯವನ್ನು ನಿರ್ಮಿಸಿದ್ದು ಸರ್ಕಾರ ಹಾಗೂ ಇಲಾಖೆಯ ಸಿಬ್ಬಂದಿ. ಆದರೆ, ಲಾಭ ಮಾತ್ರ ಖಾಸಗಿ ಕಂಪನಿಗಳಿಗೆ ಸಿಗುವಂತಾಗಬಾರದು. ಮುಂಬೈ, ದಿಲ್ಲಿ ಸೇರಿದಂತೆ ಹಲವು ನಗರಗಳಲ್ಲಿ ಖಾಸಗೀಕರಣ ನಡೆದಿರುವುದನ್ನು ಉಲ್ಲೇಖಿಸಿದರು. ನೌಕರರು ಸರ್ಕಾರದ ಬಗ್ಗೆ ಕಾಳಜಿ ವಹಿಸಿದರೆ ಸರ್ಕಾರವೂ ಅವರ ಹಿತಾಸಕ್ತಿಯನ್ನು ಕಾಪಾಡಲಿದೆ. 2028ರ ಚುನಾವಣೆಯಲ್ಲೂ ಇದೇ ರೀತಿಯ ಬೆಂಬಲ ಮುಂದುವರಿಯಬೇಕು ಎಂದು ಕರೆ ನೀಡಿದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ನೇತೃತ್ವದಲ್ಲಿ ಇಲಾಖೆಯಲ್ಲಿ ಹಲವು ಅಭಿವೃದ್ಧಿ ಯೋಜನೆಗಳು ಜಾರಿಯಾಗಿವೆ. ತಮ್ಮ ಹಿಂದಿನ ಅವಧಿಯಲ್ಲಿ ಇಂಧನ ಭವನ ನಿರ್ಮಾಣ, ಸಿಬ್ಬಂದಿಯ ವೇತನ ಪರಿಷ್ಕರಣೆ ಅವಧಿಯನ್ನು ಏಳು ವರ್ಷದಿಂದ ಐದು ವರ್ಷಕ್ಕೆ ಇಳಿಕೆ ಹಾಗೂ ಇಲಾಖೆಯಲ್ಲಿ 25 ಸಾವಿರಕ್ಕೂ ಹೆಚ್ಚು ನೇಮಕಾತಿಗಳನ್ನು ಯಾವುದೇ ಲಂಚವಿಲ್ಲದೆ ನಡೆಸಲಾಗಿದೆ ಎಂದು ಹೇಳಿದರು.

ಇಂಧನ ಇಲಾಖೆ ಸಿಬ್ಬಂದಿ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು ಎಂದು ಡಿ.ಕೆ.ಶಿವಕುಮಾರ್ ಬಣ್ಣಿಸಿದರು. ಜನರ ಜೀವನದಲ್ಲಿ ವಿದ್ಯುತ್ ಸಿಬ್ಬಂದಿಯ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು. ವಿದ್ಯುತ್ ನಿಗಮ ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಮ್, ಪ್ರಧಾನ ಕಾರ್ಯದರ್ಶಿ ಶಿವರಾಂ, ಖಜಾಂಚಿ ವರದರಾಜ್, ಇಂಜಿನಿಯರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ದೇಸಾಯಿ ಮತ್ತಿತರರಿದ್ದರು.



ಇಂಧನ ಭದ್ರತೆ ಮತ್ತಷ್ಟು ಬಲ

ಮುಂದಿನ 25 ವರ್ಷಗಳ ವಿದ್ಯುತ್ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದೆ. ರೈತರ ಸಹಭಾಗಿತ್ವದಲ್ಲಿ 10 ಸಾವಿರ ಎಕರೆ ಪ್ರದೇಶದಲ್ಲಿ ಸೌರ ಉದ್ಯಾನವನ ಅಭಿವೃದ್ಧಿಪಡಿಸಲಾಗಿದ್ದು, ಮತ್ತೆ 10 ಸಾವಿರ ಎಕರೆ ಭೂಮಿ ನೀಡಲು ರೈತರು ಮುಂದೆ ಬಂದಿದ್ದಾರೆ. ಗೃಹಜ್ಯೋತಿ ಯೋಜನೆ ಅಡಿ 1.67 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ಇದಕ್ಕೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಗಾಗಿ 21 ಸಾವಿರ ಕೋಟಿ ರೂ. ಅನುದಾನ ನೀಡಲಾಗುತ್ತಿದೆ ಎಂದು ಕೆ.ಜೆ.ಜಾರ್ಜ್ ತಿಳಿಸಿದರು.

ಮತ ಬ್ಯಾಂಕ್‌ಗಾಗಿ ಓಲೈಕೆ: ಬಿವೈವಿ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಮತ್ತೆ ವಕ್ಫ್ ಭೂತ ತಲೆ ನುಗ್ಗಿಸಿದೆ! ಸಾವಿರಾರು ರೈತರ ಭೂಮಿ ಹಕ್ಕನ್ನು ವಕ್ಫ್ ಹೆಸರಿನಲ್ಲಿ ಕುಕ್ಕಿ ತಿನ್ನಲು ಹದ್ದಿನ ಕಣ್ಣು ಹಾಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸುದೀರ್ಘ ಪೋಸ್ಟ್‌ವೊಂದನ್ನು ಅವರು ಹಾಕಿದ್ದಾರೆ. ತಲೆತಲಾಂತರಗಳಿಂದ ಬೆವರು ಸುರಿಸಿ, ಉಳುಮೆ ಮಾಡಿ, ಮಣ್ಣನ್ನು ನಂಬಿ ಬದುಕುತ್ತಿರುವ ಮಣ್ಣಿನ ಮಕ್ಕಳಿಗೆ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಗಂಭೀರ ದ್ರೋಹವೆಸಗಿದೆ.

ಭೂ ನ್ಯಾಯ ಮಂಡಳಿಗಳ ಮೂಲಕ ರೈತರಿಗೆ ಹಕ್ಕು ನೀಡುವ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ವಕ್ಫ್ ಮಂಡಳಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳನ್ನು ಮಂಡಳಿಯಿಂದ ಮೊದಲೇ ಯಾಕೆ ಬಿಡುಗಡೆಗೊಳಿಸಲಿಲ್ಲ? ಈ ಕಾಂಗ್ರೆಸ್ ಸರ್ಕಾರದ ಈ ಪ್ರಮಾದದಿಂದ ರೈತರು ಸಮಸ್ಯೆ ಎದುರಿಸುವಂತಾಗಿದೆ. ರಾಜ್ಯ ಸರ್ಕಾರ ಕೂಡಲೇ ಅಗತ್ಯ ನಿರ್ಧಾರ ತೆಗೆದುಕೊಂಡು ನಮ್ಮ ರೈತರ ಹಿತಾಸಕ್ತಿ ರಕ್ಷಿಸದೇ ಹೋದಲ್ಲಿ ರಾಜ್ಯದೆಲ್ಲೆಡೆ ಪಕ್ಷ ಬೀದಿಗಿಳಿದು ರೈತರ ಪರವಾಗಿ ಹೋರಾಡಲಿದೆ ಎಂದು ಎಚ್ಚರಿಸಿದ್ದಾರೆ. ಕೇವಲ ತಮ್ಮ ಮತ ಬ್ಯಾಂಕ್ ಓಲೈಕೆಗಾಗಿ, ಈ ಕಾಂಗ್ರೆಸ್ ಸರ್ಕಾರ ರಿಯಲ್ ಎಸ್ಟೇಟ್ ಏಜೆಂಟರಂತೆ ವರ್ತಿಸುತ್ತಾ ಲ್ಯಾಂಡ್ ಜಿಹಾದ್‌ಗೆ ಬೆನ್ನೆಲುಬಾಗಿ ನಿಂತಿರುವುದು ಅತ್ಯಂತ ಖಂಡನೀಯ ಹಾಗೂ ಅಕ್ಷಮ್ಯ ಅಪರಾಧ. ಇದು ಕೇವಲ ಆರೋಪವಲ್ಲ, ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ರಾಜ್ಯ ಸರ್ಕಾರದ ಅಂಕಿ-ಅಂಶಗಳೇ ಈ ಗಂಭೀರ ಪರಿಸ್ಥಿತಿಯನ್ನು ಬಿಚ್ಚಿಡುತ್ತಿವೆ.

ರೈತರ ಭೂ ದಾಖಲೆಗಳಲ್ಲಿ ಸೃಷ್ಟಿಸಿರುವ ಇಂತಹ ಗೊಂದಲಗಳಿಗೆ ರಾಜ್ಯ ಸರ್ಕಾರ ತಕ್ಷಣವೇ ಇತಿಶ್ರೀ ಹಾಡಬೇಕು. ವಕ್ಫ್ ಹೆಸರಿನಲ್ಲಿ ರೈತರ ಜಮೀನು ಕಬಳಿಸುವ ಧೋರಣೆ ಕೈಬಿಡಬೇಕು. ಇಲ್ಲದಿದ್ದರೆ, ಅನ್ನದಾತರ ಹಿತ ಕಾಯಲು ಮತ್ತು ಅವರ ಹಕ್ಕನ್ನು ರಕ್ಷಿಸಲು ಪಕ್ಷ ರಾಜ್ಯಾದ್ಯಂತ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗಲಿದೆ ಎಂದು ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ವ್ಯವಸ್ಥಿತ ಸಂಚು

ಕಂದಾಯ ಇಲಾಖೆಯ ಮೂಲಕ ನಮ್ಮ ರೈತರ ಭೂಮಿಯ ಮೇಲೆ ಹದ್ದಿನ ಕಣ್ಣಿಟ್ಟಿರುವ ಕಾಂಗ್ರೆಸ್ ಸರ್ಕಾರ, ಭೂದಾಖಲೆಗಳಲ್ಲಿ ನ್ಯಾಯಾಲಯದ ತೀರ್ಪನ್ನು ನುಸುಳಿಸಿ, ವಕ್ಫ್ ಹೆಸರಿನಲ್ಲಿ ರೈತರ ಜಮೀನುಗಳ ಹಕ್ಕನ್ನು ಕಸಿದುಕೊಳ್ಳಲು ವ್ಯವಸ್ಥಿತ ಸಂಚು ರೂಪಿಸಿದೆ ಎಂದು ರೈತರೇ ಆಪಾದಿಸುತ್ತಿದ್ದಾರೆ ಎಂದಿದ್ದಾರೆ.



ಅಕ್ರಮ ಮತದಾರರಿಗೆ ಅವಕಾಶವಿಲ್ಲ: ಸಿ.ಟಿ.ರವಿ



ಚಿಕ್ಕಮಗಳೂರು: ಎಸ್‌ಐಆರ್ ಉದ್ದೇಶವೇ ನೈಜ ಮತದಾರರು ಅವಕಾಶ ಕಳೆದುಕೊಳ್ಳಬಾರದು, ಕಳ್ಳ ಮತಗಳು ಇರಬಾರದು ಎನ್ನುವುದು. ಆದರೆ, ಕಾಂಗ್ರೆಸ್ಸಿಗೆ ಅಕ್ರಮ ಮತದಾರರೂ ಇರಬೇಕು ಎನ್ನುವ ಉದ್ದೇಶವಿದೆ. ಇದಕ್ಕೆ ಅವಕಾಶವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ಎಸ್‌ಐಆರ್ ನಡೆಸುವುದು ಬಿಎಲ್‌ಒಗಳು. ಬಹುತೇಕ ಬಿಎಲ್‌ಒಗಳು ಶಿಕ್ಷಕರು, ಕಂದಾಯ ಇಲಾಖೆ ಅಧಿಕಾರಿಗಳೇ ಆಗಿರುತ್ತಾರೆ. ಕಾಂಗ್ರೆಸ್ ಸರ್ಕಾರ ತೋಳ ಬಂತು ತೋಳ ಎನ್ನುವ ರೀತಿಯಲ್ಲಿ ಜನರಲ್ಲಿ ಭೀತಿ ಹುಟ್ಟಿಸಿ, ತನಗೆ ಬೇಕಾದ ಮತಗಳನ್ನು ಮಾತ್ರ ಉಳಿಸಿಕೊಂಡು, ಉಳಿದ ಮತಗಳನ್ನು ಕತ್ತರಿಸುವ ಯೋಜನೆ ಹಾಕಿಕೊಂಡಂತಿದೆ. ಆದ್ದರಿಂದ ನಾವೂ ಸಹ ಇದನ್ನು ಎಚ್ಚರಿಕೆಯಿಂದ ಗಮನಿಸಲು ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

ಮನೆ ಮನೆಗೆ ಬಂದು ಮ್ಯಾಪಿಂಗ್ ನಡೆಸಿ, ಸಿ ಫಾರ್ಮ್ ನೀಡಲಾಗಿದೆ. ಇದಾದ ಬಳಿಕ ಕರಡು ಮತದಾರರ ಪಟ್ಟಿ ಬರುತ್ತದೆ. ಏನಾದರೂ ದೋಷವಿದ್ದರೆ ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಹೀಗಿರುವಾಗ, ಯಾವ ಆಧಾರದಲ್ಲಿ ಎಸ್‌ಐಆರ್ ವಿರುದ್ಧ ಕಾಂಗ್ರೆಸ್ಸಿಗರು ಆರೋಪ ಮಾಡುತ್ತಿದ್ದಾರೆ? ಮೂರ್‍ನಾಲ್ಕು ಕಡೆ ವೋಟ್ ಇರುವವರಿಗೆ ಅವಕಾಶ ಮುಂದುವರಿಯಬೇಕು ಎನ್ನುವುದು ಕಾಂಗ್ರೆಸ್ ಮನಸ್ಥಿತಿ ಎಂದು ಟೀಕಿಸಿದರು. ಸಿಎಎ ವಿರುದ್ಧವೂ ಹೀಗೇ ಮುಸ್ಲಿಮರ ಪೌರತ್ವ ಕಿತ್ತುಕೊಳ್ಳುತ್ತಾರೆ ಎಂದು ಸುಳ್ಳು ಹಬ್ಬಿಸಲಾಯಿತು. ಸ್ವತಃ ಪ್ರಧಾನ ಮಂತ್ರಿಗಳೇ ಇದು ಯಾರ ಪೌರತ್ವವನ್ನೂ ಕಿತ್ತುಕೊಳ್ಳುವುದಿಲ್ಲ. ಬದಲಿಗೆ ನಿರಾಶ್ರಿತರಿಗೆ ಪೌರತ್ವ ನೀಡುತ್ತದೆ ಎಂದು ಸ್ಪಷ್ಟಪಡಿಸಿದರು.

ನಾಡಬಾಂಬ್ ಮೂಲ ಪತ್ತೆಗೆ ಪೊಲೀಸರ ತೀವ್ರ ತನಿಖೆ

ಬಯಲಾಯ್ತು ಕಾರು ಸ್ಫೋಟ ರಹಸ್ಯ

ತುಮಕೂರು: ಜಿಲ್ಲೆಯ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿ ನಡೆದ ಭೀಕರ ಕಾರು ಸ್ಫೋಟ ಪ್ರಕರಣ ಇಡೀ ರಾಜ್ಯವನ್ನೇ ನಡುಗಿಸಿತ್ತು. ರಮ್ಯಾ ಎಂಬ ಯುವತಿಯ ಅತಿಯಾದ ವ್ಯಾಮೋಹಕ್ಕೆ ಬಿದ್ದಿದ್ದ ನಾಗೇಂದ್ರ ಎಂಬ ಪಾಗಲ್ ಪ್ರೇಮಿ, ಆಕೆ ತನಗೆ ಸಿಗುವುದಿಲ್ಲ ಎಂಬ ಕಾರಣಕ್ಕೆ ನಾಡಬಾಂಬ್ ಸ್ಫೋಟಿಸಿಕೊಂಡು ಕಾರಿನಲ್ಲೇ ಸುಟ್ಟು ಬೂದಿಯಾಗಿದ್ದ. ಕೇವಲ ಎಸ್‌ಎಸ್‌ಎಲ್‌ಸಿ ಓದಿದ್ದ ನಾಗೇಂದ್ರ, ಅಂಕೋಲಾದಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಆದರೆ, ಒಬ್ಬ ಸಾಮಾನ್ಯ ಯುವಕನ ಕೈಗೆ ನಾಡಬಾಂಬ್ ಹೇಗೆ ಸಿಕ್ಕಿತು? ಜೂ.27ರಂದು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ನಾಗೇಂದ್ರ ಎಲ್ಲೆಲ್ಲಿ ಓಡಾಡಿದ್ದ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕ ಹೊರಟ ಕಳ್ಳಂಬೆಳ್ಳ ಪೊಲೀಸರಿಗೆ ದಿಗಿಲು ಮೂಡಿಸುವ ಆಘಾತಕಾರಿ ಮಾಹಿತಿ ಲಭ್ಯವಾಗಿವೆ.

ನಾಗೇಂದ್ರನ ಕೊನೆ 3 ದಿನಗಳ ಓಡಾಟದ ಇತಿಹಾಸ ಪತ್ತೆ: ಪೊಲೀಸರ ತನಿಖೆ ವೇಳೆ ನಾಗೇಂದ್ರನ ಕೊನೆ 3 ದಿನಗಳ ಸಂಪೂರ್ಣ ಟ್ರಾವೆಲ್ ಹಿಸ್ಟರಿ ರಿವೀಲ್ ಆಗಿದೆ. ಜೂ.25ರಂದು ಬೆಂಗಳೂರಿಗೆ ಬಂದು ರಮ್ಯಾಳನ್ನು ಭೇಟಿಯಾಗಿದ್ದ ನಾಗೇಂದ್ರ, ಅಂದು ರಾತ್ರಿಯೇ ಅಂಕೋಲಾಗೆ ವಾಪಸ್ ಆಗಿದ್ದ. ಜೂ.26 ಇಡೀ ದಿನ ಅಂಕೋಲಾದ ಗಲ್ಲಿ ಗಲ್ಲಿಗಳಲ್ಲಿ ಸುತ್ತಾಡಿ, ಅದೇ ರಾತ್ರಿ ಮತ್ತೆ ಬೆಂಗಳೂರಿಗೆ ಬಂದಿದ್ದ. ಜೂ.27ರ ಬೆಳಗ್ಗೆ ಬೆಂಗಳೂರಿನ ಸಿದ್ದಾಪುರದಲ್ಲಿರುವ ರಮ್ಯಾಳ ಮನೆಯ ಬಾಗಿಲು ತಟ್ಟಿದ್ದ ನಾಗೇಂದ್ರ, ರಮ್ಯಾಳನ್ನು ಮಾತನಾಡಿಸಿಕೊಂಡು ಹೋದವನು ನೇರವಾಗಿ ಶಿರಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆದರೆ, ಈ ಮೂರು ದಿನಗಳ ಅವಧಿಯಲ್ಲಿ ನಾಗೇಂದ್ರ 10 ಜನರನ್ನು ಖುದ್ದಾಗಿ ಭೇಟಿಯಾಗಿದ್ದ ಹಾಗೂ 8 ಜನರ ಜತೆ ಫೋನ್ ಕಾಲ್ ಮೂಲಕ ಮಾತನಾಡಿದ್ದ ಎಂಬುದು ದೃಢಪಟ್ಟಿದೆ.

ಪ್ರೀತಿಯ ಜಾಲಕ್ಕೆ ಬಿದ್ದು ಯುವಕನ ದಾರುಣ ಅಂತ್ಯ ನಾಗೇಂದ್ರ ತನಗೆ ಚಿತ್ರಹಿಂಸೆ ಕೊಡುತ್ತಿದ್ದ, ತನ್ನ ಮೇಲೆ ಅನುಮಾನ ಪಡುತ್ತಿದ್ದ ಎಂದು ರಮ್ಯಾ ಆರೋಪ ಮಾಡುತ್ತಿದ್ದರೆ, ಇತ್ತ ನಾಗೇಂದ್ರನ ಸಂಬಂಧಿಕರು ಹಾಗೂ ಪರಿಚಯಸ್ಥರು ಆತನ ವ್ಯಕ್ತಿತ್ವಕ್ಕೆ ಉತ್ತಮ ಎಂದು ತಿಳಿಸಿದ್ದಾರೆ. ಊರಿನಲ್ಲಿ ಯಾರ ತಂಟೆಗೂ ಹೋಗದ ಉತ್ತಮ ವ್ಯಕ್ತಿಯಾಗಿದ್ದ ನಾಗೇಂದ್ರ ಹಾಳಾಗಿದ್ದೇ ರಮ್ಯಾಳನ್ನು ಪ್ರೀತಿ ಮಾಡಿದ ಮೇಲೆ ಎಂದು ಆತನ ನೆಂಟರು ಮತ್ತು ಆಪ್ತರು ಆಕ್ರೋಶ ಹೊರಹಾಕಿದ್ದಾರೆ. ಸಾವಿನ ರಹಸ್ಯದ ಜತೆಗೆ, ಆತ ಬಳಸಿದ ನಾಡಬಾಂಬ್‌ನ ಮೂಲ ಪತ್ತೆ ಮಾಡಲು ತನಿಖೆ ಚುರುಕುಗೊಳಿಸಿದ್ದಾರೆ.

ನಾಡಬಾಂಬ್ ಸಿಕ್ಕಿದ್ದು ಹೇಗೆ?

ಪೊಲೀಸರು ನಾಗೇಂದ್ರನ ಸಂಪರ್ಕದಲ್ಲಿದ್ದ ಆ 10 ಜನರನ್ನು ವಿಚಾರಣೆ ನಡೆಸಿದರೂ ನಾಡಬಾಂಬ್ ಬಗ್ಗೆ ಯಾವುದೇ ಸುಳಿವು ಸಿಕ್ಕಿಲ್ಲ. ಏಕೆಂದರೆ, ಅವರೆಲ್ಲರೂ ನಾಗೇಂದ್ರನ ಸಂಬಂಧಿಕರು ಮತ್ತು ಸ್ನೇಹಿತರಾಗಿದ್ದಾರೆ. ಹಾಗಾದರೆ ಈ ನಾಡಬಾಂಬ್ ಎಲ್ಲಿಂದ ಬಂತು? ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಹಳಿಯಾಳ, ಜೋಯಿಡಾ ಮತ್ತು ದಾಂಡೇಲಿ ಅರಣ್ಯ ಭಾಗದಲ್ಲಿ ಕಾಡುಪ್ರಾಣಿಗಳ ಬೇಟೆಗೆ ಬಳಸುವ ನಾಡಬಾಂಬ್ ನಾಗೇಂದ್ರನ ಕೈಗೆ ಸಿಕ್ಕಿದ್ದು ಹೇಗೆ ಎಂಬುದು ಸದ್ಯದ ಯಕ್ಷಪ್ರಶ್ನೆಯಾಗಿದೆ.

ವಿದ್ಯುತ್ ಖಾಸಗೀಕರಣ: ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಸಾಗರ: ವಿದ್ಯುತ್ ಖಾಸಗೀಕರಣ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಶಿವಮೊಗ್ಗ ಜಿಲ್ಲಾ ಘಟಕ ಸೋಮವಾರ ನೀಡಿದ ಸಾಗರ ಬಂದ್ ಭಾಗಶಃ ಯಶಸ್ಸು ಕಂಡಿದೆ.

ಸಾಗರ ಬಂದ್ ಹಿನ್ನೆಲೆಯಲ್ಲಿ ರೈತ ಸಂಘದ ಪ್ರಮುಖರು ಬೆಳಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅಂಗಡಿ ಮುಂಗಟ್ಟು, ಹೋಟೆಲ್ ಮಾಲೀಕರ ಬಳಿ ತಮ್ಮ ವಹಿವಾಟು ನಿಲ್ಲಿಸುವ ಮೂಲಕ ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದ್ದರು.

ಇನ್ನು ಕೆಲವರು ಬಂದ್ ಮಾಡಲು ನಿರಾಕರಿಸಿದಾಗ ರೈತರು ನಿಮ್ಮ ಅಂಗಡಿಗಳಲ್ಲಿ ಮುಂದಿನ ದಿನಗಳಲ್ಲಿ ಯಾವುದೇ ವಸ್ತುಗಳನ್ನು ಖರೀದಿಸುವುದಿಲ್ಲ ಎನ್ನುವ ಎಚ್ಚರಿಕೆ ಸಹ ನೀಡಿದ್ದು ಕಂಡು ಬಂದಿತು.

ನಗರದ ಪ್ರಮುಖ ಬೀದಿಗಳಲ್ಲಿ ಬಹುತೇಕ ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದರೇ, ಬಸ್ ಸೌಲಭ್ಯ, ಸರ್ಕಾರಿ ಕಚೇರಿ, ಬ್ಯಾಂಕ್, ಶಾಲಾಕಾಲೇಜು ಎಂದಿನಂತೆ ಕಾರ್ಯನಿರ್ವಹಿಸಿವೆ. ಸಾಗರದ ಮಹಾಗಣಪತಿ ದೇವಸ್ಥಾನದ ಬಳಿ ಮೆರವಣಿಗೆಗೆ ಜಿಪಂ ಮಾಜಿ ಸದಸ್ಯ ಬಿ.ಆರ್. ಜಯಂತ್ ಹಸಿರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು.

ಪ್ರತಿಭಟನೆಯಲ್ಲಿ ಸಾವಿರಾರು ರೈತರು ಪಾಲ್ಗೊಂಡಿದ್ದರೇ, ಗ್ರಾಮೀಣ ಭಾಗದಿಂದ ರೈತರು ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಆಗಮಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಳೆಯ ನಡುವೆಯೂ ರೈತರು ವಿದ್ಯುತ್ ಖಾಸಗೀಕರಣದ ವಿರುದ್ಧ ಘೋಷಣೆ ಕೂಗಿ, ಉಪವಿಭಾಗಾಧಿಕಾರಿಗಳ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ಮುಂಗಾರು ಮಳೆ ಮಾತ್ರವಲ್ಲ ಹಿಂಗಾರಲ್ಲೂ ಕೊರತೆ ಸಾಧ್ಯತೆ

ಮಡಿಕೇರಿ: ಈ ಸಾಲಿನಲ್ಲಿ ಮುಂಗಾರು ಮಾತ್ರವಲ್ಲದೆ, ಹಿಂಗಾರು ಅವಧಿಯಲ್ಲೂ ಮಳೆಯ ಕೊರತೆಯಾಗುವ ಸಂಭವವಿದ್ದು, ಈ ನಿಟ್ಟಿನಲ್ಲಿ ಸರಕಾರ ಹಾಗೂ ಇತರ ಸಂಸ್ಥೆಗಳು ಸೂಕ್ತ ಮುಂಜಾಗರೂಕತೆಯ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಬೆಂಗಳೂರಿನ ಹಿರಿಯ ಭೂವಿಜ್ಞಾನಿ ಎಚ್.ಎಸ್.ಎಂ.ಪ್ರಕಾಶ್ ಸಲಹೆ ಮಾಡಿದ್ದಾರೆ.

ಬಯೋಮೆಟಿಯೊರಾಲಜಿ (Geometeorology) ಅಧ್ಯಯನದ ಪ್ರಕಾರ, ಈಗಾಗಲೇ ಕಂಡು ಬಂದಿರುವ ಮಳೆಯ ಕೊರತೆಗೆ ಭಾರತದ ಸುತ್ತಮುತ್ತ ಹಾಗೂ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಇರುವ ಆವಿಯ ಮೂಲಗಳಾದ ಜ್ವಾಲಾಮುಖಿಗಳ ಚಟುವಟಿಕೆಗಳು ಇಳಿಮುಖವಾಗಿರುವುದೇ ಕಾರಣ ಎಂದು ಅವರು ಹೇಳಿದ್ದಾರೆ.

ಮುಂದಿನ ಆರು ತಿಂಗಳುಗಳ ಚಟುವಟಿಕೆಗಳ ಮುನ್ಸೂಚನಾ ವರದಿಗಳ ಅಧ್ಯಯನದ ಪ್ರಕಾರ ಮುಂಗಾರು ಮಾತ್ರವಲ್ಲದೆ, 2026ರ ಹಿಂಗಾರು ಅವಧಿಯಾದ ಅಕ್ಟೋಬರ್, ನವೆಂಬರ್ ಡಿಸೆಂಬರ್ ತಿಂಗಳುಗಳಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ. ಆದರಿಂದಾಗಿ ಮತ್ತಷ್ಟು ಕೊರತೆ ಉಂಟಾಗುವ ಸಾಧ್ಯತೆಯೂ ಇದೆ ಎಂದು ಅವರು ವಿವರಿಸಿದ್ದಾರೆ.

ಎಲ್ ನಿನೋ ಪರಿಸ್ಥಿತಿಗೂ ಸಹ ಸಮುದ್ರದೊಳಗಿನ ಭೀಕರ ಜ್ವಾಲಾಮುಖಿಗಳು ಕಾರಣ ಎನ್ನುವುದನ್ನು ವಿಜ್ಞಾನಿಗಳು ಗಮನಿಸಬೇಕು. ಇದರ ಬಗ್ಗೆ ಸರಕಾರ ಹಾಗೂ ಇತರ ಸಂಸ್ಥೆಗಳು ಸೂಕ್ತ ಮುಂಜಾಗರೂಕತೆಯ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಅವರು ಸಲಹೆ ಮಾಡಿದ್ದಾರೆ.

ವಿಶಿಷ್ಟಚೇತನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸರ್ಕಾರದ ಹೆಜ್ಜೆ | ಸುತ್ತೋಲೆಗೆ ಅಸಮಾಧಾನ

ವಿದ್ಯಾರ್ಥಿಗಳಿಗೆ ಮುಳ್ಳಾದ ಸರ್ಕಾರದ ಭಾಷಾ ವಿನಾಯಿತಿ

ನಂದಿನಿ ಎನ್.

ಬೆಂಗಳೂರು: ವಿಶಿಷ್ಟಚೇತನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಪದವಿಪೂರ್ವ ಕಾಲೇಜು (ಪಿಯುಸಿ) ವಿದ್ಯಾರ್ಥಿಗಳಿಗೆ ರಾಜ್ಯಸರ್ಕಾರ ನೀಡಿದ್ದ ಭಾಷಾ ವಿನಾಯಿತಿ ಅವರ ಇಂಜಿನಿಯರಿಂಗ್ ಶಿಕ್ಷಣದ ಕನಸನ್ನೇ ಮೊಟಕುಗೊಳಿಸಿದೆ.

ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ಕಲಿಯುತ್ತಿದ್ದ ವಿವಿಧ ನ್ಯೂನತೆಯುಳ್ಳ ಅಂಗವಿಕಲ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಆದೇಶದಂತೆ 2024-25 ಹಾಗೂ 2025- 26ನೇ ಸಾಲಿನಲ್ಲಿ ಒಂದು ಭಾಷಾ ವಿಷಯದಿಂದ ವಿನಾಯಿತಿ ನೀಡಿ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆ ಪ್ರಕಾರ ಪ್ರಥಮ, ದ್ವಿತೀಯ ಪಿಯು ವಿದ್ಯಾರ್ಥಿಗಳು ಎರಡು ಭಾಷಾ ವಿಷಯಗಳಲ್ಲಿ ಒಂದನ್ನು ಮಾತ್ರ ಅಧ್ಯಯನ ಮಾಡಿ, ಮತ್ತೊಂದು ವಿಷಯವನ್ನು ಕೈಬಿಡಲು ಅವಕಾಶ ನೀಡಲಾಗಿತ್ತು. ಕೆಲ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು(ಬಹುತೇಕ ನಗರ ಪ್ರದೇಶದ ಅಂಗವಿಕಲ ವಿದ್ಯಾರ್ಥಿಗಳು) ಕೈಬಿಟ್ಟು, ಕೆಲ ವಿದ್ಯಾರ್ಥಿಗಳು ಇಂಗ್ಲಿಷ್ ವಿಷಯವನ್ನು (ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು)ಕೈಬಿಟ್ಟು ಒಂದು ವಿಷಯ ಆಯ್ಕೆ ಮಾಡಿಕೊಂಡಿದ್ದರು. ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಒಂದು ವಿಷಯದ ಹೊರೆ ಕಡಿಮೆಯಾದ ಕಾರಣ ವಿಶೇಷಚೇತನ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದರು. ಶೇಕಡವಾರು ಪರಿಗಣಿಸುವಾಗ ಪರೀಕ್ಷೆ ಬರೆದ ವಿಷಯಗಳ ಸರಾ ಸರಿ ಅಂಕಗಳನ್ನು ತೆಗೆದುಕೊಂಡು ಫಲಿತಾಂಶ ನೀಡಲಾಗಿತ್ತು.




ಪ್ರಕಟವಾಗದ ಇಂಜಿನಿಯರಿಂಗ್ ರ್‍ಯಾಂಕ್: ಉತ್ತಮ ಅಂಕಗಳೊಂದಿಗೆ ದ್ವಿತೀಯ ಪಿಯು ತೇರ್ಗಡೆಯಾಗಿದ್ದ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಪ್ರವೇಶದ ಕನಸುಗಳೊಂದಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ 2026-27ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿದ್ದರು. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸುವ ವಿಶ್ವಾಸ ಹೊಂದಿದ್ದ ಅವರಿಗೆ ಸಿಇಟಿ ಫಲಿತಾಂಶ ಪ್ರಕಟವಾದಾಗ ತಮ್ಮ ಹೆಸರು ರ್‍ಯಾಂಕ್ ಪಟ್ಟಿಯಲ್ಲಿ ಇಲ್ಲದ್ದನ್ನು ಕಂಡು ಗಾಬರಿಯಾಗಿದ್ದರು.

ಪ್ರಕಟವಾಗದ ಮೂರು ಕೋರ್ಸ್‌ಗಳ ಸೀಟು: ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ತಮಗೆ ಇಷ್ಟೆ ಇರುವ ಕಾಲೇಜು ಹಾಗೂ ಕೋರ್ಸಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಮೂರು ದಿನಗಳಷ್ಟೇ ಬಾಕಿ ಇದ್ದರೂ ಬಿ-ಫಾರ್ಮಾ, ಫಾರ್ಮಾ-ಡಿ, ಯೋಗ ಮತ್ತು ನ್ಯಾಚುರೋಪತಿ ಸೀಟುಗಳ ಲಭ್ಯತಾ ಪಟ್ಟಿ (ಸೀಟ್ ಮ್ಯಾಟ್ರಿಕ್ಸ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ತಲುಪಿಲ್ಲ. ಇಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ,ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನು ಕೆಇಎ ಈಗಾಗಲೇ ಪ್ರಕಟಿಸಿದ್ದು, ಆಯ್ಕೆ ದಾಖಲಿಸಲು ಜೂ.30ರ ಬೆಳಗ್ಗೆ 10ರವರೆಗೆ ಸಮಯ ನೀಡಲಾಗಿದೆ. ಆದರೆ, ಬಿ-ಫಾರ್ಮಾ, ಫಾರ್ಮಾ-ಡಿ, ಯೋಗ, ನ್ಯಾಚುರೋಪತಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಿದ್ಧತೆ ನಡೆಸಿರುವ ವಿದ್ಯಾರ್ಥಿಗಳು ಸೀಟು ಲಭ್ಯತಾ ಪಟ್ಟಿ ಪ್ರಕಟವಾಗದ ಕಾರಣ ಅನಿವಾರ್ಯವಾಗಿ ಮೂರು ಕೋರ್ಸ್‌ಗಳನ್ನು ಕೈಬಿಟ್ಟು ಇತರೆ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ.

> ಈಗಾಗಲೇ ವೈದ್ಯಕೀಯ ಪ್ರವೇಶಕ್ಕೆ ನೀಟ್ ಫಲಿತಾಂಶ ವಿಳಂಬವಾಗುತ್ತಿದ್ದು, ವೈದ್ಯಕೀಯ ಆಕಾಂಕ್ಷಿಗಳೂ ಸಿಇಟಿ ಕೌನ್ಸಿಲಿಂಗ್‌ನಲ್ಲಿ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ. ಫಾರ್ಮಾ ಸೇರಿದಂತೆ ಅರೆ ವೈದ್ಯಕೀಯ ಕೋರ್ಸ್‌ಗಳ ವಿದ್ಯಾರ್ಥಿಗಳೂ ಇಂಜಿನಿಯರಿಂಗ್ ನಮೂದಿಸಿದರೆ ಇತರೆ ವಿದ್ಯಾರ್ಥಿಗಳಿಗೆ ಉತ್ತಮ ಕಾಲೇಜುಗಳ ಆಯ್ಕೆಗೆ ತೊಡಕಾಗುತ್ತದೆ. ನಂತರ ಅವರು ಬಿಟ್ಟು ಹೋದರೆ ನಮಗಿಂತ ಹಿಂದಿನ ವಿದ್ಯಾರ್ಥಿಗಳಿಗೆ ಒಳ್ಳೆಯ ಕಾಲೇಜುಗಳು, ವಿಭಾಗ ಸಿಗುತ್ತವೆ. ಇದು ಸರಿಯಾದ ಕ್ರಮವಲ್ಲ ಎಂದು ದೂರುತ್ತಾರೆ.
>
> ■ ಅಂಜನ್ ಕುಮಾರ್, ವಿದ್ಯಾರ್ಥಿ

ಮುಂಬರುವ ಶತಮಾನ ಭಾರತೀಯ ಶತಮಾನ

• **ಬೆಳಗಾವಿ:** ಭಾರತವು ತನ್ನ ಭವ್ಯ ದಾರ್ಶನಿಕ ಪರಂಪರೆ ಮತ್ತು ಸಾಂಸ್ಕೃತಿಕ ಮರು ಜಾಗೃತಿಯ ಮೂಲಕ ಇಡೀ ಜಗತ್ತಿಗೆ ಮಾರ್ಗದರ್ಶನ ನೀಡಲಿದ್ದು, ಮುಂಬರುವ ಶತಮಾನವು 'ಭಾರತೀಯ ಶತಮಾನ'ವಾಗಿ ಮಾನ್ಯತೆ ಪಡೆಯಲಿದೆ ಎಂದು ಕೇಂದ್ರ ಸಾಂಸ್ಕೃತಿಕ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.



ಸೋಮವಾರ ನಗರದ ಗೋಗಟೆ ಕಾಲೇಜಿನ ಕೆ.ಕೆ. ಗೋಣುಗೋಪಾಲ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಬೆಳಗಾವಿಯ ಗುರುದೇವ ರಾನಡೆ ಮಂದಿರದ ತುಲನಾತ್ಮಕ ತತ್ವಶಾಸ್ತ್ರ, ಧಾರ್ಮಿಕ ಅಕಾಡೆಮಿಯ ಶತಮಾನೋತ್ಸವ ಉದ್ಘಾಟನೆ, ಗುರುದೇವ ರಾನಡೆ ಅವರ ಸಂಪೂರ್ಣ ಬರಹಗಳನ್ನೊಳಗೊಂಡ 28 ಸಂಪುಟಗಳ ಮಹಾಗ್ರಂಥಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸತ್ಯದರ್ಶನದ ಪುನರ್ ಪ್ರತಿಪಾದನೆ: ಜಗತ್ತು ಇಂದು ಭಾರತವನ್ನು ಹೊಸ ದೃಷ್ಟಿಕೋನ, ಆಶಾಭಾವನೆ ಮತ್ತು ಗೌರವದಿಂದ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ಗುರುದೇವ ರಾನಡೆ ಅವರ ಕೃತಿಗಳು ಲೋಕಾರ್ಪಣೆಗೊಳ್ಳುತ್ತಿರುವುದು ಕೇವಲ ಗ್ರಂಥಗಳ ಬಿಡುಗಡೆಯಲ್ಲ. ಬದಲಿಗೆ ಇದು ಸತ್ಯದರ್ಶನದ ಅನುಭೂತಿ ಹಾಗೂ ವಿಚಾರ ಪರಂಪರೆಯ ಪುನರ್ ಪ್ರತಿಪಾದನೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಮಾತನಾಡಿ, ಸಮಾಜದಲ್ಲಿ ಇಂದು ಅಧ್ಯಾತ್ಮ ಹಾಗೂ ನೈತಿಕತೆಗೆ ಬೆಂಬಲ ಸಿಗುವುದು ಅಪರೂಪವಾಗುತ್ತಿರುವ ಕಾಲದಲ್ಲೂ ರಾನಡೆ ಅಕಾಡೆಮಿ ಕಳೆದ ಹಲವಾರು ವರ್ಷಗಳಿಂದ ಶ್ಲಾಘನೀಯ ಕೆಲಸ ಮಾಡುತ್ತಿದೆ. ಆಧ್ಯಾತ್ಮಿಕ ದೃಷ್ಟಿಯಲ್ಲಿ ರಾನಡೆ ಅವರು ಮೇರು ಸದೃಶ್ಯ ವ್ಯಕ್ತಿತ್ವ ಹೊಂದಿದವರು ಎಂದರು. ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ದೀನ್ ದಯಾಳ್ ಉಪಾಧ್ಯಾಯ ಸಂಶೋಧನಾ ಸಂಸ್ಥೆ ನಿರ್ದೇಶಕರು ಅತುಲ್ ಜೈನ್, ನವದೆಹಲಿ ಡಾ.ಸಿ.ಎಂ.ತ್ಯಾಗರಾಜ್, ಡಾ.ವಿಷ್ಣುಕಾಂತ್ ಚಟ್ಟಪಲ್ಲಿ, ಡಾ.ಆನಂದ ದೇಶಪಾಂಡೆ, ವಿವಿಧ ವಿವಿ ಕುಲಪತಿಗಳು, ಸುಧೀಂದ್ರ ಗಣಾಚಾರಿ, ರಾಜೇಂದ್ರ ದೇಸಾಯಿ ಇದ್ದರು.

> ಇಂದಿನ ಡಿಜಿಟಲ್ ಹಾಗೂ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಮನುಷ್ಯನ ಆತ್ಮಶೋಧದ ಪ್ರಶ್ನೆ ಅತ್ಯಂತ ಮುಖ್ಯವಾಗಿದೆ. ಇದಕ್ಕೆ ಗುರುದೇವ ರಾನಡೆ ಅವರ ಕೃತಿಗಳು ಮರು ಜಾಗೃತಿ ಮೂಡಿಸಲಿವೆ.
> ■ **ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ**

- ಗುರುದೇವ ರಾನಡೆ ಅಕಾಡೆಮಿ ಶತಮಾನೋತ್ಸವ
- 28 ಸಂಪುಟಗಳ ಕೃತಿ ಲೋಕಾರ್ಪಣೆ
- ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭಾಗಿ

ವಕಾಲತ್ತು ವಹಿಸದಿರಲು ನಿರ್ಧಾರ

ಪುಟ ೧ ➡ **ಆರೋಪಿಗಳಿಗೆ ಮತ್ತೆರಡು ವಾರ ನ್ಯಾಯಾಂಗ ಬಂಧನ:** ಕಳೆದ ವಾರ ಬಂಧಿತರಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್ ಸೇರಿದಂತೆ ಎಂಟು ಮಂದಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಶೇಷ ಭ್ರಷ್ಟಾಚಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪೊಲೀಸರು ಹೆಚ್ಚಿನ ಕಸ್ಟಡಿಯನ್ನು ಕೋರದ ಹಿನ್ನೆಲೆಯಲ್ಲಿ ನ್ಯಾಯಾಲಯವು ಅವರನ್ನು ಇನ್ನೂ ಎರಡು ವಾರ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

> ಇದು ಹಿಂದು ಸಮಾಜದ ಆಕ್ರೋಶಕ್ಕೆ ಸಾಕ್ಷಿ. ಧರ್ಮಕ್ಕೆ ವಿರುದ್ಧವಾಗಿ ನಡೆವವರು, ದ್ರೋಹ ಎಸಗುವವರನ್ನು ಹಿಂದು ಸಮಾಜ ಕ್ಷಮಿಸುವುದಿಲ್ಲ ಎಂಬ ಶಕ್ತಿಶಾಲಿ ಸಂದೇಶವನ್ನು ಹಿಂದು ಸಮಾಜ ಆಪಾದಿತರಿಗೆ ನೀಡಿದೆ.
> ■ **ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ**

5.50 ಕೋಟಿ ಜನರ ಮನೆಗಳಿಗೆ ಹೋಗಿ ಸಹಾಯ: ಮುಖ್ಯಮಂತ್ರಿ

ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸುದ್ದಿಗೋಷ್ಠಿ

• **ಬೆಂಗಳೂರು:** ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ 5.50 ಕೋಟಿ ಜನರಿಗೆ ಮನೆ ಮನೆಗೆ ಹೋಗಿ ಸಹಾಯ ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಕಂದಾಯ ಇಲಾಖೆ ವತಿಯಿಂದ ಶಾಶ್ವತ ನಿವಾಸ ಪ್ರಮಾಣಪತ್ರ ನೀಡಲು ಉಪ ತಹಸೀಲ್ದಾರ್ ಅವರಿಗೆ ಅಧಿಕಾರ ನೀಡಿ ಆದೇಶ ಹೊರಡಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತ್ ಹಾಗೂ ವಾರ್ಡ್‌ಗಳಲ್ಲಿ ಸಹಾಯ ಕೇಂದ್ರ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮಾಹಿತಿ ಹಂಚಿಕೊಂಡರು.

ರಾಜ್ಯದಲ್ಲಿ ಒಟ್ಟು 49,320 ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಅಗತ್ಯ ದಾಖಲೆ ಡೌನ್ಲೋಡ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಯಾರೆಲ್ಲಾ ಜಾತಿ ಪ್ರಮಾಣಪತ್ರದಲ್ಲಿ ದೂರವಾಣಿ ಸಂಖ್ಯೆ ಸರಿಯಾಗಿ ನೀಡಿದ್ದೀರಿ ಅವರು ವಾಟ್ಸ್‌ಆ್ಯಪ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದು ಎಂದು ವಿವರಿಸಿದರು.

ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ ಬಿಎಲ್‌ಎಗಳು ಕೂಡ ನಿಮಗೆ ಈ ಅರ್ಜಿ ಸಲ್ಲಿಕೆಯಲ್ಲಿ ನೆರವು ನೀಡಬಹುದು. ಸರ್ಕಾರ ಈಗಾಗಲೇ 5.50 ಕೋಟಿ ಜನರಿಗೆ ಈಗಾಗಲೇ ಜಾತಿ ಪ್ರಮಾಣಪತ್ರ ಅಧಿಕೃತವಾಗಿ ನೀಡಿರುವ ದಾಖಲೆ ನಮ್ಮ ಬಳಿ ಇದೆ. ಇದರಲ್ಲಿ 2,54,95,767 ಹಿಂದುಳಿದ ವರ್ಗದ ಪ್ರಮಾಣಪತ್ರ, 2,94,51,027 ಎಸ್‌ಸಿ ಹಾಗೂ ಎಸ್‌ಟಿ ಪ್ರಮಾಣಪತ್ರ ವಿತರಿಸಲಾಗಿದೆ. ಇವುಗಳನ್ನು ಡೌನ್ಲೋಡ್ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಮತದಾನದ ಹಕ್ಕು ಕಳೆದುಕೊಳ್ಳುವವರು ಮುಂದೆ ಸರ್ಕಾರದ ಸೌಲಭ್ಯ ಸಿಗುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಪಡಿತರ ಹಂಚಿಕೆಯಲ್ಲಿ ಮತದಾರರಿಗೆ ಮಾತ್ರ ನೀಡಲಾಗುತ್ತಿದೆ. ಇದೇ ರೀತಿ ಬೇರೆ ರಾಜ್ಯಗಳಲ್ಲೂ ಆದೇಶ ಹೊರಡಿಸಲಾಗಿದೆ. ನೀವು ಮುಂದಿನ ದಿನಗಳಲ್ಲಿ ಮತದಾನದ ಹಕ್ಕು ಉಳಿಸಿಕೊಳ್ಳದಿದ್ದರೆ ಗ್ಯಾರಂಟಿ ಯೋಜನೆಗಳು ಸೇರಿದಂತೆ ಪಿಂಚಣಿ ಹಾಗೂ ರಾಜ್ಯ ಸರ್ಕಾರದ ಇತರೆ ಯೋಜನೆಗಳು ಪಡೆಯಲು ತೊಂದರೆ ಆಗಲಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೆಜಿ

◈ ಮತದಾರ ಪಟ್ಟಿ ಪರಿಷ್ಕರಣೆಗೆ ಒಂದು ವರ್ಷ, ಆರು ಕೋಟಿ ಹೆಸರು ಡಿಲೀಟ್
- ಪತ್ರಿಕೆಗಳಲ್ಲಿ ಸುದ್ದಿ ಶೀರ್ಷಿಕೆ
- ಅಂದರೆ ಅಷ್ಟು ಮಂದಿ ಮತದಾರರಲ್ಲದ ಮತದಾರರು ಅಂದಿನಿಂದ ಇಂದಿನವರೆಗೆ ಮತದಾನ ಮಾಡಿದ್ದಾರೆ ಅಂತ ತಾನೆ? ಇದೇ ನಿಜವಾದ ಮತ ಚೋರಿ!

ದಿನ ಭವಿಷ್ಯ

ಮೇಷ
ಕ್ಲಿಷ್ಟಕರ ವಿಷಯ ಜಟಿಲಗೊಳಿಸುವ ಸಮಸ್ಯೆಗೆ ಸಿಲುಕುವಿರಿ. ಸಂತೋಷ ಪಡಲು ನಿಮ್ಮ ಮನಸ್ಥಿತಿ ಬದಲಿಸುವುದೂ ಅಗತ್ಯ. ಜಗಳಕ್ಕೆ ಹೋಗಬೇಡಿ.

ತುಲಾ
ನಿಮ್ಮ ಧೋರಣೆಗೆ ಕೆಲವರ ಆಕ್ಷೇಪ. ಇದರಿಂದ ಇರಿಸುಮುರಿಸು ಉಂಟಾಗುವ ಪ್ರಸಂಗ. ಆತ್ಮೀಯರ ಸಂಗದಲ್ಲಿ ನಿರಾಳತೆ.

ವೃಷಭ
ನಿಮ್ಮ ಉತ್ತಮ ನಿರ್ವಹಣೆಗೆ ಸೂಕ್ತ ಪ್ರತಿಫಲ ಸಿಗಲಿದೆ. ಸಂತಾನ ಅಪೇಕ್ಷಿತರಿಗೆ ಶುಭಪ್ರದ ಬೆಳವಣಿಗೆ. ಆದಾಯ ಹೆಚ್ಚಳ.

ವೃಶ್ಚಿಕ
ದಿನವಿಡೀ ಉತ್ಸಾಹ. ಹೊಣೆಗಾರಿಕೆ ಮುಗಿದು ನಿರಾಳತೆಯ ಭಾವ. ಬಯಸಿದ ಗುರಿ ಸಾಧಿಸುವಿರಿ. ಆದಾಯದಲ್ಲಿ ಹೆಚ್ಚಳ.

ಮಿಥುನ
ಖರ್ಚು ನಿಮ್ಮ ಮಿತಿಯೊಳಗಿರಲಿ. ವ್ಯವಹಾರದಲ್ಲಿ ಯಶಸ್ಸು. ಪ್ರೇಮಿಯಿಂದ ಪೂರಕ ಸ್ಪಂದನ. ಬಾಂಧವ್ಯ ವೃದ್ಧಿಗೆ ಅವಕಾಶ.

ಧನು
ಚಿಂತೆ ತಂದಿದ್ದ ವಿಷಯ ಇತ್ಯರ್ಥ. ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಆರ್ಥಿಕ ವ್ಯವಹಾರದಲ್ಲಿ ಲಾಭ. ಕೌಟುಂಬಿಕ ಸೌಹಾರ್ದ.

ಕಟಕ
ವೃತ್ತಿಯಲ್ಲಿ ಪ್ರಗತಿ. ಬಾಕಿ ಉಳಿದ ಕಾರ್ಯ ಪೂರ್ಣ. ಹೊಸ ಉದ್ಯೋಗವಕಾಶ. ಪ್ರೀತಿಯಲ್ಲೂ ಪೂರಕ ಬೆಳವಣಿಗೆ.

ಮಕರ
ಯಾರದೋ ಮಾತು ಮನಸ್ಸು ಕೆಡಿಸಬಹುದು. ಅಂತಹ ಮಾತಿಗೆ ಆಸ್ಪದ ಕೊಡದಂತೆ ವರ್ತಿಸಿರಿ. ದೌರ್ಬಲ್ಯಕ್ಕೆ ಸುಲಭ ಬಲಿಯಾಗಬೇಡಿ.

ಸಿಂಹ
ನೀವು ಅಚ್ಚರಿಪಡುವ ಬೆಳವಣಿಗೆ ಉಂಟಾದೀತು. ವೃತ್ತಿಯಲ್ಲಿ ಕಿರುಕುಳ ಎದುರಿಸುವಿರಿ. ಕುಟುಂಬ ಸಂಬಂಧ ಬಲಗೊಳಿಸಿ. ಭಾವುಕತೆ ನಿಯಂತ್ರಿಸಿ.

ಕುಂಭ
ಆದಾಯದಲ್ಲಿ ಹೆಚ್ಚಳ. ಆಪ್ತರ ಜತೆಗಿನ ಭಿನ್ನಮತ ಸುಗಮ ಪರಿಹಾರ. ಕಠಿಣ ಕಾರ್ಯ ಇಂದು ಕೈಗೆತ್ತಿಕೊಳ್ಳಬೇಡಿ. ಕಾದುನೋಡಿರಿ.

ಕನ್ಯಾ
ಮನೆಗೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳಬೇಕಾದೀತು. ಆರ್ಥಿಕ ಪ್ರಗತಿ. ಅನಾರೋಗ್ಯ ನಿವಾರಣೆ. ಹಳೆ ಸ್ನೇಹಿತರ ಸಂಪರ್ಕದಿಂದ ಖುಷಿ.

ಮೀನ
ವೃತ್ತಿ ಒತ್ತಡ ಅಧಿಕವಿದ್ದರೂ ಕುಟುಂಬದ ಸಂಗಡ ಆತ್ಮೀಯ ಕಾಲ ಕಳೆಯುವ ಅವಕಾಶವೂ ಸಿಗಲಿದೆ. ಆರ್ಥಿಕ ಒತ್ತಡ.

ರಾಹುಕಾಲ: 3.00 - 4.30
ಗುಳಿಕಕಾಲ: 12.00 - 1.30

ಅದೃಷ್ಟ ಸಂಖ್ಯೆ: 4,9,2,6

ಎಲ್‌ನಿನೊ ತಂದ ಆತಂಕ | ಮುಂಗಾರು ಹಂಗಾಮಿನಲ್ಲಿ ಶೇ.30 ಮಾತ್ರ ಬಿತ್ತನೆ

ರಾಜ್ಯದಲ್ಲಿ ಬರದ ಕರಾಳ ಛಾಯೆ

▸ ವೀರಣ್ಣ ಬಳಿಗಾರ

• **ಬೆಂಗಳೂರು:** ಎಲ್‌ನಿನೊ ಪ್ರಭಾವದಿಂದಾಗಿ ಮುಂಗಾರು ಮಳೆ ಗಣನೀಯವಾಗಿ ಇಳಿಕೆಯಾಗಿದ್ದು, ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದೆ. ಬೆಳೆ ನಷ್ಟದ ಆತಂಕ ಹೆಚ್ಚಾಗಿದೆ. ಕೇವಲ ಶೇ.30ರಷ್ಟು ಮಾತ್ರ ಮುಂಗಾರು ಹಂಗಾಮಿನ ಬಿತ್ತನೆಯಾಗಿದೆ.

ಮುಂಗಾರು ಹಂಗಾಮಿಗೆ ನಿಗದಿಪಡಿಸಿರುವ 84.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೇವಲ ಶೇ.30ರಷ್ಟು ಮಾತ್ರ ಬಿತ್ತನೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ.42 ರಷ್ಟು ಇತ್ತು. ರಾಜ್ಯದಲ್ಲಿ ಇದುವರೆಗೆ ಸಾಮಾನ್ಯಕ್ಕಿಂತ ಶೇ.43 ರಷ್ಟು ಕಡಿಮೆ ಮಳೆ ದಾಖಲಾಗಿದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಿದ ಅಲ್ಪಾವಧಿಯ ಮುಂಗಾರು ಬೆಳೆಗಳು ಈಗಾಗಲೇ ಹಾನಿಯ ಅಂಚಿನಲ್ಲಿವೆ.

ಮೇ ಅಂತ್ಯ, ಜೂನ್ ಆರಂಭದಲ್ಲಿ ಸಾಧಾರಣ ಮಳೆ ಆಗಿದ್ದರಿಂದ ರೈತರು ಬಿತ್ತನೆ ಮಾಡಿದ್ದು, ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಧಾರವಾಡ, ಗದಗ, ಹಾವೇರಿ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳು ಮಾತ್ರ ಬಿತ್ತನೆ ಗುರಿಯನ್ನು ಶೇ.60 ಕ್ಕಿಂತ ಹೆಚ್ಚು ಸಾಧಿಸಿವೆ, ಆದರೂ ಸಮರ್ಪಕ ಮಳೆಯಿಲ್ಲದ ಕಾರಣ ಬೆಳೆಗಳು ಒಣಗುತ್ತಿವೆ. ವಾರದೊಳಗೆ ಮಳೆ ಬಾರದಿದ್ದರೆ ಬೆಳೆ ನಷ್ಟವನ್ನು ಎದುರಿಸುವ ಸಾಧ್ಯತೆ ಇದೆ.

ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕ್ರಮವಾಗಿ ಶೇ.41 ಮತ್ತು ಶೇ.36ರಷ್ಟು ಮಳೆ ಕೊರತೆಯಾಗಿದ್ದು, ಉತ್ತರ ಒಳನಾಡಿನ 13 ಜಿಲ್ಲೆಗಳಲ್ಲಿ ಮಳೆ ಕೊರತೆ ಶೇ.78 ರಿಂದ ಶೇ.99 ರವರೆಗೆ ದಾಖಲಾಗಿದೆ.

ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶೇ.12.86 ರಿಂದ ಶೇ.30 ರಷ್ಟು ಮಾತ್ರ ಬಿತ್ತನೆ ಪೂರ್ಣಗೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಇದುವರೆಗೆ ಕೇವಲ ಶೇ.41 ರಷ್ಟು ಬಿತ್ತನೆ ಮಾತ್ರ ನಡೆದಿದೆ.

ಮುಂದಿನ ಒಂದು ವಾರದೊಳಗೆ ಉತ್ತಮ ಮಳೆಯಾದರೆ ಕನಿಷ್ಠ ಶೇ.50 ರಷ್ಟು ಬೆಳೆಗಳನ್ನು ಉಳಿಸಬಹುದು. ಇಲ್ಲದಿದ್ದರೆ ರೈತರು ಮರುಬಿತ್ತನೆ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಕೃಷಿ ತಜ್ಞರು ತಿಳಿಸಿದ್ದಾರೆ. ಕಳೆದ ವರ್ಷ ಮುಂಗಾರು ಆರಂಭದ ಮೊದಲ 10 ದಿನಗಳಲ್ಲಿ ಮಳೆ ಕೊರತೆಯಿದ್ದರೂ, ನಂತರ ಉತ್ತಮ ಮಳೆಯಾಗಿ 852 ಮಿ.ಮೀ. ಸಾಮಾನ್ಯ ಮಳೆಗಿಂತ 882 ಮಿ.ಮೀ. ಮಳೆ ದಾಖಲಾಗಿತ್ತು.

ಜಲಾಶಯಗಳಲ್ಲಿ ನೀರಿನ ಪ್ರಮಾಣ ಇಳಿಕೆ: ಮುಂಗಾರು ಮಳೆ ಕೊರತೆಯಿಂದ ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿನ ನೀರಿನ ಪ್ರಮಾಣ ವೇಗವಾಗಿ ಕುಸಿಯುತ್ತಿದೆ. ಒಟ್ಟು 896 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯವಿರುವ ಜಲಾಶಯಗಳಲ್ಲಿ ಸುಮಾರು 206 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಜಲಾಶಯಗಳಿಗೆ ಹರಿದು ಬರುವ ನೀರಿನ ಪ್ರಮಾಣ ಕಡಿಮೆಯಾಗಿದೆ. ರಾಜ್ಯದ ಜಲಾಶಯಗಳಲ್ಲಿ ಒಟ್ಟು ಸಾಮರ್ಥ್ಯದ ಕೇವಲ 23 ರಷ್ಟು ನೀರು ಮಾತ್ರ ಉಳಿದಿದೆ.


ಸರ್ಕಾರದಿಂದ ಮುಂಜಾಗ್ರತ ಕ್ರಮ: ಮುಂಗಾರು ಮಳೆ ಕ್ಷೀಣಿಸಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಂಜಾಗ್ರತೆ ವಹಿಸಿದ್ದು, ಬರ ನಿರ್ವಹಣೆಗೆ ಈಗಾಗಲೇ ಜಿಲ್ಲೆಗಳ ಮೇಲುಸ್ತುವಾರಿಯನ್ನು ಸಚಿವರಿಗೆ ವಹಿಸಲಾಗಿದ್ದು, ಸಿಎಂ ಡಿ.ಕೆ ಶಿವಕುಮಾರ್ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದಾರೆ.

ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವಸಿದ್ಧತೆಗೆ ಕಟ್ಟಪ್ಪಣೆ ನೀಡಿದ್ದು, ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗುವಂತೆ ಕರೆ ನೀಡಿದ್ದಾರೆ.

ಮಳೆ ಆಶ್ರಿತ ಪ್ರದೇಶಗಳಲ್ಲಿ ಬಿತ್ತನೆ

ಬೆಳೆ	2025	2026	ಬಿತ್ತನೆ ಗುರಿ
ಭತ್ತ	0.62	0.67	2.38
ಜೋಳ	0.22	0.16	0.51
ರಾಗಿ	0.02	0.02	7.88
ಮೆಕ್ಕೆಜೋಳ	7.67	4.93	13.09
ತೊಗರಿ	4.60	2.22	14.63
ಉದ್ದು	0.64	0.44	0.74
ಹೆಸರುಕಾಳು	3.43	3.01	4.34
ಅವರೆ	0.53	0.02	0.23
ಇತರೆ	0.58	0.71	2.49
ಒಟ್ಟು	18.31	12.18	46.29

> ಎಲ್‌ನಿನೊ ಪ್ರಭಾವ ದೀರ್ಘಕಾಲ ಇರಲಿದ್ದು, ಜುಲೈ 1 ರಿಂದ ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಆದರೆ ಕಳೆದ ವರ್ಷಕ್ಕಿಂತ ಮಳೆ ಪ್ರಮಾಣ ಕಡಿಮೆಯಾಗಲಿದೆ.
> ■ **ಸಿ.ಎಸ್. ಪಾಟೀಲ, ಹವಮಾನ ಇಲಾಖೆಯ ಹಿರಿಯ ವಿಜ್ಞಾನಿ**



ಇಂದಿನಿಂದ ಎಸ್‌ಐಆರ್

ಪುಟ ೧ ➡ ಈಗಾಗಲೇ ಶೇ.91.61 ಮ್ಯಾಪಿಂಗ್ ಮಾಡಲಾಗಿದೆ. ಮನೆ-ಮನೆಗೆ ಭೇಟಿ ನೀಡುವ ಪ್ರಕ್ರಿಯೆಯಲ್ಲಿ ಬಿಎಲ್‌ಒಗಳು ತಮಗೆ ನಿಯೋಜಿಸಲಾದ ಮತಗಟ್ಟೆ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗೂ ಖುದ್ದಾಗಿ ಭೇಟಿ ನೀಡಿ, ಹೆಸರಿರುವ ಎಲ್ಲಾ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸುತ್ತಾರೆ. ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಹಿ ಮಾಡಿದ ನಂತರ, ಹೆಚ್ಚಿನ ಪ್ರಕ್ರಿಯೆ ಮತ್ತು ಡಿಜಿಟಲೀಕರಣಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳು ಅವುಗಳನ್ನು ಸಂಗ್ರಹಿಸುತ್ತಾರೆ. ವಿತರಣಾ ಪ್ರಕ್ರಿಯೆಯ ಸಮಯದಲ್ಲಿ, ಸ್ಟಿಕರ್ ಅಂಟಿಸಲಾಗುತ್ತದೆ. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು ಬೂತ್ ಮಟ್ಟದ ಅಧಿಕಾರಿಗಳು ಅಗತ್ಯವಿರುವಲ್ಲಿ ಮನೆಗಳಿಗೆ ಕನಿಷ್ಠ 3 ಬಾರಿ ಭೇಟಿ ನೀಡುತ್ತಾರೆ ಎಂದು ಅನ್ಬುಕುಮಾರ್ ವಿವರಿಸಿದರು.

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ಪುಟ ೧ ➡ ಈ ಎಲ್ಲಾ ಪ್ರಕ್ರಿಯೆಯ ಮಾಹಿತಿಯನ್ನು ಎಲ್ಲಾ ರೀತಿಯ ಸಾಮಾಜಿಕ ವೇದಿಕೆಯಲ್ಲಿ, ಮತದಾರರ ಗಮನಕ್ಕೆ ತಂದೇ ಮಾಡಲಾಗುವುದು ಎಂದು ಅನ್ಬುಕುಮಾರ್ ತಿಳಿಸಿದರು. ಕರಡು ಮತದಾರ ಪಟ್ಟಿ ಬಿಡುಗಡೆಯ ನಂತರ ಅನುಮಾನಗಳಿದ್ದರೆ ಮತದಾರನಿಗೆ ನೋಟಿಸ್ ನೀಡಿ, ಗುರುತಿಸಲಾದ 12 ದಾಖಲೆಗಳಲ್ಲಿ ಪಡೆಯಲಾಗುತ್ತದೆ. ಗಣತಿ ನಮೂನೆಗಳನ್ನು ಭರ್ತಿ ಮಾಡಲು ಆನ್‌ಲೈನ್‌ನಲ್ಲೂ ವ್ಯವಸ್ಥೆ ಕಲ್ಪಿಸಲಾಗಿದ್ದು, ಆಯೋಗದ ಅಧಿಕೃತ ವೆಬ್‌ಸೈಟ್ voters.eci.gov.in ಅಥವಾ ECINET ಮೊಬೈಲ್ ಆ್ಯಪ್ ಮೂಲಕ ಭರ್ತಿ ಮಾಡಬಹುದಾಗಿದೆ ಎಂದು ಹೇಳಿದರು.

ಮಾದರಿ ಚುನಾವಣೆ: ಭಾರತ ನಂ.1

ಪುಟ ೧ ➡ ಈ ವ್ಯವಸ್ಥೆಯೇ ಭಾರತೀಯ ಚುನಾವಣಾ ಪ್ರಕ್ರಿಯೆಯನ್ನು ವಿಶ್ವದಲ್ಲೇ ಅತ್ಯಂತ ವಿಶ್ವಾಸಾರ್ಹ ಹಾಗೂ ಪಾರದರ್ಶಕವಾಗಿಸಿದೆ ಎಂದು ಅವರು ಹೇಳಿದರು.

ಬಿಎಲ್‌ಒಗಳಿಗೆ ಸಿಇಸಿ ಸಂದೇಶ: ಇದಕ್ಕೂ ಮೊದಲು ಶ್ರೀನಗರದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಬಡ್ಗಮ್ ಜಿಲ್ಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೂತ್ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ಉದ್ದೇಶಿಸಿ ಮಾತನಾಡಿದರು. ಚುನಾವಣಾ ವ್ಯವಸ್ಥೆಯ ಯಶಸ್ಸಿನಲ್ಲಿ ಬಿಎಲ್‌ಒಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಶ್ಲಾಘಿಸಿದರು. ಬಿಎಲ್‌ಒಗಳು ಪ್ರಜಾಪ್ರಭುತ್ವದ ಸ್ತಂಭಗಳಾಗಿದ್ದಾರೆ. ಮತದಾರರ ಮಾಹಿತಿಯನ್ನು ನಿಖರವಾಗಿ ನಿರ್ವಹಿಸುವುದರಿಂದ ಹಿಡಿದು ಚುನಾವಣಾ ಪ್ರಕ್ರಿಯೆಯ ಸುಗಮ ನಿರ್ವಹಣೆಯವರೆಗೆ ಅವರು ಪ್ರಮುಖ ಜವಾಬ್ದಾರಿಯನ್ನು ಹೊರುತ್ತಾರೆ ಎಂದು ಹೇಳಿದರು. ಜಮ್ಮು-ಕಾಶ್ಮೀರದ ಎಲ್ಲಾ ಮತದಾರರು, ಬಿಎಲ್‌ಒಗಳು, ಬಿಎಲ್‌ಒ ಮೇಲ್ವಿಚಾರಕರು, ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳು (ಎಇಆರ್‌ಒ), ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒ) ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಶುಭಾಶಯ ತಿಳಿಸಿದರು.

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

ಪುಟ ೧ ➡ ಈಗಾಗಲೇ 2 ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡವರಿಗೆ ಅದನ್ನು ಮುಂದುವರಿಸಲು ಅವಕಾಶ ನೀಡಲಾಗುವುದು, ಆದರೆ ಒಂದು ಹೆಚ್ಚುವರಿ ಸ್ಥಳೀಯ ಭಾರತೀಯ ಭಾಷೆ ಅಧ್ಯಯನ ಮಾಡಬೇಕಾಗುತ್ತದೆ. ಸಿಬಿಎಸ್‌ಇ ಆದೇಶದ ವಿರುದ್ಧ ಹಲವು ವಿದ್ಯಾರ್ಥಿಗಳು ಮತ್ತು ಪೋಷಕರು ನ್ಯಾಯಾಲಯದ ಮೊರೆಹೋಗಿದ್ದರು ಈ ಬಗ್ಗೆ ಈಗ ಸಿಬಿಎಸ್‌ಇ ಶೈಕ್ಷಣಿಕ ನಿರ್ದೇಶಕ ಪ್ರಾಗ್ಯಾ ಎಂ. ಸಿಂಗ್ ಸ್ಪಷ್ಟನೆ ನೀಡಿದ್ದಾರೆ.

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ

ಪುಟ ೧ ➡ **ತ್ವರಿತವಾಗಿ ಕ್ರಮ ವಹಿಸಲು ಸೂಚನೆ:** ಶರಾವತಿ ಪಂಪ್ ಸ್ಟೋರೇಜ್, ಗೋವಾ ತಮ್ನೇರ್, ಕಳಸಾ ಬಂಡೂರಿ ಮತ್ತು ಬಿಡಿಎ ಪೆರಿಫೆರಲ್ ರಿಂಗ್ ರಸ್ತೆ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಅರಣ್ಯ ಇಲಾಖೆಗಳ ವಿವಿಧ ಹಂತಗಳಲ್ಲಿ ಬಾಕಿ ಇರುವ ಅರಣ್ಯ ಅನುಮತಿ ವಿಚಾರಗಳಲ್ಲಿ ತ್ವರಿತ ಗತಿಯಲ್ಲಿ ಕ್ರಮ ವಹಿಸುವಂತೆ ಸೂಚನೆ ನೀಡಿದರು.



ಬೆಳೆನಾಶ, ಜಾನುವಾರು ಜೀವಹಾನಿ, ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಮಾನವ ಗಾಯ, ಆಸ್ತಿನಾಶ, ಮಾಸಾಶನಗಳಿಗಾಗಿ 2025-26ನೇ ಸಾಲಿನಲ್ಲಿ 63.06 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಮಾನವ ಅರಣ್ಯ ಜೀವಿ ಸಂಘರ್ಷ ತಪ್ಪಿಸಲು ಕೈಗೊಂಡ ಕಾರ್ಯಗಳ ಬಗ್ಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಅವರು, ಪ್ರಾಣಿಗಳು ಸಹ ಈ ಎಲ್ಲಾ ಅಡೆತಡೆ ದಾಟಲು ನಾನಾ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಹೀಗಾಗಿ ಅಧಿಕಾರಿಗಳು ಕೂಡ ಆಗಾಗ ಇತರೆ ಹೊಸ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ರಿತೇಶ್ ಕುಮಾರ್ ಸಿಂಗ್, ಅಂಜುಮ್ ಪರ್ವೇಜ್, ಕರ್ನಾಟಕ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸ್ ಪಲ್ಟಿ: ಇಬ್ಬರ ಸಾವು, 42 ಮಂದಿಗೆ ಗಾಯ

• **ಕೊಳ್ಳೇಗಾಲ:** ತಾಲೂಕಿನ ಮಧುವನಹಳ್ಳಿ ಕ್ರಾಸ್ ಬಳಿ ಕೆಎಸ್‌ಆರ್‌ಟಿಸಿ ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ಘಟನೆ ಜರುಗಿದೆ. ಪಟ್ಟಣದ ಭೀಮನಗರ ಜಾನ್ ಹನುಮಂತಪ್ಪ ಬೀದಿಯ ವಾಸಿ ಅಂಗನವಾಡಿ ಶಿಕ್ಷಕಿ ಪುಟ್ಟನಂಜಮ್ಮ(60) ಹಾಗೂ ಕುದೇರು ಗ್ರಾಮದ ಕೂಲಿ ಕಾರ್ಮಿಕ ಮಾದೇಶ್(50) ಮೃತ ದುರ್ದೈವಿಗಳು. ಮ.ಬೆಟ್ಟದಿಂದ ಕೆ.ಎ-57 ಎಫ್-3964 ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 67 ಪ್ರಯಾಣಿಕರು ತುಂಬಿದ್ದು, ಬಸ್ ಟೈರ್ ಸಿಡಿದ ಪರಿಣಾಮ ರಸ್ತೆ ಬದಿಯ ಕಿರು ಚಾನಲ್ ಮೇಲೆ ಚಾಲಕ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಈ ದುರ್ಘಟನೆಯಿಂದಾಗಿ ಸ್ಥಳದಲ್ಲೇ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನೂಳಿದ 42 ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ದಾಖಲಿಸಿದ್ದಾರೆ.

ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

ಪುಟ ೧ ➡ ಅತ್ಯಂತ ಭೀಕರ ದಾಳಿ ಪಕ್ತಿಯಾ ಪ್ರಾಂತ್ಯದ ಚಮ್ಕಾನಿ ಜಿಲ್ಲೆಯ ಮಂಡೋಖೈಲ್ ಗ್ರಾಮದಲ್ಲಿ ನಡೆದಿದ್ದು, ಮೊದಲ ವೈಮಾನಿಕ ದಾಳಿಯು ಒಂದು ಕುಟುಂಬದ ಮನೆಯ ಮೇಲೆ ನಡೆದಿದ್ದ ಪರಿಣಾಮ, ಓರ್ವ ವೃದ್ಧ ಮತ್ತು ಒಂದು ಮಗು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದುಕುಳಿದವರನ್ನು ರಕ್ಷಿಸಲು ಗ್ರಾಮಸ್ಥರು ಒಟ್ಟುಗೂಡಿದ್ದ ವೇಳೆ, ಪಾಕಿಸ್ತಾನಿ ವಿಮಾನವು ಎರಡನೇ ದಾಳಿಯನ್ನು ನಡೆಸಿತು ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಇದನ್ನು ಡಬಲ್-ಟ್ಯಾಪ್ ಸ್ಟ್ರೈಕ್ ಎಂದು ವಿವರಿಸಲಾಗಿದೆ. ಇದು ವಿವಾದಾತ್ಮಕ ಯುದ್ಧ ತಂತ್ರವಾಗಿದ್ದು, ಆರಂಭಿಕ ದಾಳಿಯ ಸ್ವಲ್ಪ ಸಮಯದ ನಂತರ ಅದೇ ಸ್ಥಳವನ್ನು ಮತ್ತೆ ಹೊಡೆಯಲಾಗುತ್ತದೆ. ಎರಡನೇ ದಾಳಿ ನಡೆದಾಗ ನಿವಾಸಿಗಳು ಗಾಯಗೊಂಡವರಿಗೆ ಸಹಾಯ ಮಾಡಲು ಧಾವಿಸುತ್ತಿದ್ದರು ಎಂದು ಚಮ್ಕಾನಿ ಜಿಲ್ಲೆಯ ಉಪ ಮುಖ್ಯಸ್ಥ ಖಾಲಿದ್ ಅಹ್ಮದ್ ಸಜಾದ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಾಕ್ ಸಮರ್ಥನೆ: ಕರಾಚಿಯಲ್ಲಿನ ಪಾಕಿಸ್ತಾನ ರೇಂಜರ್ಸ್ ಪ್ರಧಾನ ಕಚೇರಿಯ ಮೇಲೆ ಶನಿವಾರದ ದಾಳಿ ಸೇರಿದಂತೆ ಅನೇಕ ಭಯೋತ್ಪಾದಕ ಘಟನೆಗಳಿಗೆ ಪ್ರತಿಕ್ರಿಯೆಯಾಗಿ, ವಾಯುದಾಳಿಗಳಲ್ಲಿ 29 ಭಯೋತ್ಪಾದಕರನ್ನು ಕೊಂದು, ಭಯೋತ್ಪಾದಕರ ಅಡಗುತಾಣಗಳನ್ನು ಗುರಿಯಾಗಿಸಿಕೊಂಡಿದ್ದೇವೆ ಎಂದು ಪಾಕಿಸ್ತಾನ ಸಮರ್ಥಿಸಿಕೊಂಡಿದೆ.

ಕಾರು ಅಡ್ಡಗಟ್ಟಿ ಚಿನ್ನ ವ್ಯಾಪಾರಿ ದರೋಡೆ

• **ಮಂಗಳೂರು:** ಪತ್ನಿ ಮತ್ತು ಮಗನ ಜತೆ ಮುಂಬಯಿನಿಂದ ಕಾರಿನಲ್ಲಿ ಕೇರಳಕ್ಕೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿಯನ್ನು ಅಡ್ಡಗಟ್ಟಿ ಲಕ್ಷಾಂತರ ಮೌಲ್ಯದ ಚಿನ್ನ ಮತ್ತು ನಗದು ಅಪಹರಿಸಿದ ಘಟನೆ ಸೋಮವಾರ ಮುಂಜಾನೆ ಬೈಕಂಪಾಡಿಯಲ್ಲಿ ನಡೆದಿದೆ.

ಕೇರಳದ ಪಯ್ಯನ್ನೂರು ನಿವಾಸಿ, ಚಿನ್ನದ ವ್ಯಾಪಾರಿ ವಿಕಾಸ್ ತನ್ನ ಪತ್ನಿ ಹಾಗೂ ಪುತ್ರನೊಂದಿಗೆ ಕಾರಿನಲ್ಲಿ ಕೇರಳಕ್ಕೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಸೋಮವಾರ ಮುಂಜಾನೆ ಸುಮಾರು 3 ಗಂಟೆಗೆ ಬೈಕಂಪಾಡಿ ಬಳಿ ಎರಡು ಇನ್ನೋವಾ ಕಾರುಗಳು ಹಾಗೂ ಒಂದು ಸ್ವಿಫ್ಟ್ ಕಾರಿನಲ್ಲಿ ಬಂದ 7ರಿಂದ 8 ಮಂದಿ ಅಪರಿಚಿತರು ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿದ್ದಲ್ಲದೆ, ಪತ್ನಿ ಮತ್ತು ಮಗನ ಸಮೇತ ಕಾರನ್ನು ದುಷ್ಕರ್ಮಿಗಳು ಒಯ್ದಿದ್ದಾರೆ. ಬಳಿಕ ಕೂಳೂರು ಬಳಿ ಪತ್ನಿ, ಮಗನನ್ನು ಕಾರಿನಿಂದ ಇಳಿಸಿ ಆರೋಪಿಗಳು ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಉದ್ಯಮಿ ಪತ್ನಿಯ ಕೊರಳು, ಕಿವಿಯಲ್ಲಿದ್ದ ಯಾವುದೇ ಚಿನ್ನಾಭರಣವನ್ನು ತೆಗೆದುಕೊಳ್ಳದೆ ಇರುವುದು ವಿಶೇಷವಾಗಿದೆ. 180ಗ್ರಾಂ ಚಿನ್ನ ಮತ್ತು ನಗದು ಸಹಿತ ಸುಮಾರು 20ಲಕ್ಷ ರೂ. ಮೌಲ್ಯದ ಸೊತ್ತು ದೋಚಿದ್ದಾರೆ ಎಂದು ಪಣಂಬೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಬಿ ಜಿ ರಾಮ್ ಜಿ ಯೋಜನೆಗೆ ಗಾಂಧಿ ಹೆಸರು ಸೇರಿಸಿ: ಖಂಡ್ರೆ

• **ಬೆಂಗಳೂರು:** ಕೇಂದ್ರ ಸರ್ಕಾರವು ವಿಬಿ ಜಿ ರಾಮ್ ಜಿ ಯೋಜನೆಗೆ ಮಹಾತ್ಮಾ ಗಾಂಧಿ ಹೆಸರು ಸೇರಿಸಬೇಕು ಇಲ್ಲವೇ ದೇಶದಲ್ಲಿರುವ 2.68 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ ಮಹಾತ್ಮಾ ಗಾಂಧಿ ಹೆಸರಿಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಒತ್ತಾಯಿಸಿದ್ದಾರೆ.



ಸೋಮವಾರ ದಿಲ್ಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮ ಸ್ವರಾಜ್ಯದ ಪ್ರತಿಪಾದಕರಾಗಿದ್ದ ಮಹಾತ್ಮಾ ಗಾಂಧಿ ಹೆಸರು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಮಹಾತ್ಮಾ ಗಾಂಧಿ ವಿಬಿ ಜಿ ರಾಮ್ ಜಿ ಎಂದು ಮರು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಗಾಂಧೀಜಿ ಅವರು ಭಾರತ ಹಳ್ಳಿಗಳ ದೇಶವಾಗಿದ್ದು, ದೇಶದ ಆತ್ಮ ಇರುವುದೇ ಗ್ರಾಮಗಳಲ್ಲಿ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಆಗದು ಎಂದು ಪ್ರತಿಪಾದಿಸಿದ್ದರು. ಇಂತಹ ಮಹಾಪುರುಷರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ. ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟು, ಸತ್ಯ, ಶಾಂತಿ, ಅಹಿಂಸೆ ಎಂಬ ಅಸ್ತ್ರದಿಂದ ಭಾರತಾಂಬೆಯನ್ನು ಬಂಧಮುಕ್ತಗೊಳಿಸಿದ ಮಹಾತ್ಮನಿಗೆ ನೈಜ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎಂದು ಖಂಡ್ರೆ ತಿಳಿಸಿದ್ದಾರೆ.

ಲವ್ ಜಿಹಾದ್: ಯುವತಿ ಸಾವು

ಪುಟ ೧ ➡ ನೇಣು ಹಾಕಿದ್ದ ಹಗ್ಗ ಕತ್ತರಿಸಿದ ಸ್ಥಿತಿಯಲ್ಲಿ ಕಂಡುಬಂದಿದೆ. ಅಲ್ಲದೆ ಸ್ಥಳದಲ್ಲಿ ಕೆಲವು ಮಾತ್ರೆಗಳು ಪತ್ತೆಯಾಗಿದ್ದು, ವಿಷ ಸೇವಿಸಿರುವ ಸಾಧ್ಯತೆಗಳೂ ದಟ್ಟವಾಗಿವೆ. ರೂಮ್‌ನಲ್ಲಿ ಒಂದು ಡೈರಿ ಸಿಕ್ಕಿದ್ದು, ಅದರಲ್ಲಿ ಹಲವು ವಿಚಾರಗಳನ್ನು ಬರೆಯಲಾಗಿದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸ್ ವಿರುದ್ಧ ಆರೋಪ: ಸಂಜೀತ್ ಅಲಿ ವಿರುದ್ಧ ನಾವು ಈಗಾಗಲೇ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಪೊಲೀಸರು ಆತನ ವಿರುದ್ಧ ಕ್ರಮ ಕೈಗೊಂಡಿದ್ದರೆ ಸುರಭಿ ಬದುಕಿರುತ್ತಿದ್ದಳು ಎಂದು ಮೃತ ಯುವತಿಯ ಮಾವ ಶಂಕರನಾರಾಯಣ ತಿಳಿಸಿದ್ದಾರೆ. ಕಳೆದ ವರ್ಷ ಸುರಭಿ ಮನೆಗೆ ಬಾರದೇ ನಾಪತ್ತೆಯಾಗಿದ್ದಳು. ಪುತ್ರಿ ನಾಪತ್ತೆಯಾದ ಹಿನ್ನೆಲೆಯಲ್ಲಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಕೇಸ್ ದಾಖಲಾಗಿತ್ತು. ಬಳಿಕ ಪೊಲೀಸರು ಸ್ನೇಹಿತರ ಮನೆಯಲ್ಲಿದ್ದ ಸುರಭಿಯನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸಿದ್ದರು ಎನ್ನಲಾಗಿದೆ. ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿರುವ ಸಂಜೀತ್ ಅಲಿಗೆ ಪ್ರಜ್ಞೆ ಬಂದ ನಂತರವಷ್ಟೇ ಇದು ಕೊಲೆಯೋ ಅಥವಾ ಇಬ್ಬರೂ ಸೇರಿ ಮಾಡಿಕೊಂಡ ಆತ್ಮಹತ್ಯೆಯೋ ಎಂಬುದು ಸ್ಪಷ್ಟವಾಗಲಿದೆ ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಎಸ್‌ಪಿ ಕುಶಾಲ್ ಚೌಕ್ಸಿ ತಿಳಿಸಿದ್ದಾರೆ. ಪ್ರಸ್ತುತ ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲವ್ ಜಿಹಾದ್ ಎಂದ ಬಜರಂಗ ದಳ: ಈ ಘಟನೆ ಲವ್ ಜಿಹಾದ್‌ನ ಭಾಗ ಎಂಬುದು ಸ್ಪಷ್ಟವಾಗಿದೆ. ಈಗಾಗಲೇ ಯುವತಿಯ ತಾಯಿ ಸಹ ಅದನ್ನು ಬಹಿರಂಗಪಡಿಸಿದ್ದಾರೆ. ಆಕೆಗೆ ಮಾದಕವಸ್ತು ನೀಡಿ ಮಾದಕವ್ಯಸನಿಯನ್ನಾಗಿಸಿದ್ದ ಎಂದು ತಿಳಿದುಬಂದಿದೆ. ಈ ಘಟನೆ ಹಿಂದೆ ದೊಡ್ಡ ಜಾಲವಿದ್ದು, ಸಮಗ್ರ ತನಿಖೆ ಆಗಬೇಕು. ಅಗತ್ಯವೆನಿಸಿದರೆ ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವರ್ಗಾಯಿಸಬೇಕು ಎಂದು ಬಜರಂಗದಳ ಮುಖಂಡ ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಪುಟ ೧ ➡ ಇದರಿಂದ ಬೇಸತ್ತು ಆಕೆಗೆ ಬೇರೆ ಕಡೆ ವಿದ್ಯಾಭ್ಯಾಸ ಕೊಡಿಸಿದರೂ, ಆತ ಅಲ್ಲಿಗೂ ಹುಡುಕಿಕೊಂಡು ಬಂದು ಕಾಟ ಕೊಡುತ್ತಿದ್ದ. ಅವನು ನನ್ನ ಮಗಳನ್ನು ಸಂಪೂರ್ಣವಾಗಿ ಮರುಳು ಮಾಡಿದ್ದ. ಅಷ್ಟೇ ಅಲ್ಲ, ಆಕೆಯನ್ನು ಡ್ರಗ್ ಅಡಿಕ್ಟ್ ಮಾಡಿದ್ದ. ನಾನು ಕಷ್ಟಪಟ್ಟು ಎರಡು ಮೂರು ಕಡೆ ಚಿಕಿತ್ಸೆ ಕೊಡಿಸಿ ಆಕೆಯನ್ನು ಗುಣಮುಖಳನ್ನಾಗಿ ಮಾಡಿದ್ದೆ. ಇತ್ತೀಚೆಗೆ ಆಕೆ ಆರೋಗ್ಯವಾಗಿದ್ದಳು. ಆದರೆ ಈಗ ಲವ್ ಜಿಹಾದ್‌ಗೆ ಬಲಿಯಾಗಿದ್ದಾಳೆ ಎಂದು ತಾಯಿ ಗೀತಾ ಕಣ್ಣೀರು ಹಾಕಿದ್ದಾರೆ. ಮುದ್ದೇನಹಳ್ಳಿಯಲ್ಲಿ ಶನಿವಾರ ಸತ್ಸಂಗ ಇದೆ, ನಾನು ಅಲ್ಲೇ ಇರುತ್ತೇನೆ ಎಂದು ತಾಯಿಗೆ ಹೇಳಿಹೋಗಿದ್ದಳು. ಆದರೆ ಸಂಜೀತ್ ಅಲಿ ಮತ್ತೊಮ್ಮೆ ಆಕೆಯನ್ನು ಹುಡುಕಿಕೊಂಡು ಬಂದು ಮರುಳು ಮಾಡಿ ಹೋಂ ಸ್ಟೇಗೆ ಕರೆದೊಯ್ದಿದ್ದಾನೆ. ಅವನೇ ಸಂಚು ರೂಪಿಸಿ ನನ್ನ ಮಗಳನ್ನು ಕೊಲೆ ಮಾಡಿದ್ದಾನೆ. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಮೃತಳ ತಾಯಿ ಒತ್ತಾಯಿಸಿದ್ದಾರೆ.

ಅಧಿಕಾರಿಗಳ ಅಪರಾಧ ಪ್ರಮಾಣ ವಿರಳ

• **ಬೆಂಗಳೂರು:** ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೈಕೋರ್ಟ್ ಸೋಮವಾರ ಮೌಖಿಕವಾಗಿ ಹೇಳಿತು.



ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ತಮಗೆ ವಿಧಿಸಿರುವ ಶಿಕ್ಷೆ ಅಮಾನತುಗೊಳಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಕೋರಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್, ಜಿ. ಬಸವರಾಜ ಅವರ ವಿಭಾಗೀಯ ಪೀಠವು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೇಳಿತು.

ವಿಚಾರಣೆಯ ವೇಳೆ ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಅತಿ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯು ರಾಜಕೀಯ ವಿರೋಧಿಯ ಕೊಲೆ ಪಿತೂರಿ ನಡೆಸಿದ್ದಾರೆ. ಅಲ್ಲದೇ, ನೈಜ ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಲಾಗಿದೆ.

ತನಿಖೆಯು ಸಿಬಿಐ ಹೆಗಲಿಗೆ ಬಿದ್ದಿದ್ದರಿಂದ ವಿನಯ್ ಕುಲಕರ್ಣಿ ಮತ್ತಿತರರ ಯೋಜನೆ ವಿಫಲವಾಗಿದೆ. ಸಿಬಿಐ ಕೊಲೆ ಪ್ರಕರಣವನ್ನು ಭೇದಿಸಿದ್ದು, 7-14ನೇ ಆರೋಪಿಗಳು ನೈಜ ಅಪರಾಧಿಗಳು ಪಿತೂರಿ ನಡೆಸಿದ್ದಾರೆಂದು ಪತ್ತೆ ಹಚ್ಚಿದೆ. ಇಂಥ ಅತ್ಯುನ್ನತ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಗೆ ಜಾಮೀನು ನೀಡುವುದು ಹೇಗೆ ಎಂದರು.

ಈ ಹಂತದಲ್ಲಿ ನ್ಯಾ.ನವಾಜ್ ಅವರು ಸರ್ಕಾರಿ ಅಧಿಕಾರಿಗಳು ಅಥವಾ ರಾಜಕಾರಣಿಗಳು ಹೇಯ ಕೃತ್ಯಗಳಲ್ಲಿ ಭಾಗವಹಿಸುವುದು ಬೇರೆ ರಾಜ್ಯಗಳಲ್ಲಿ ಹೆಚ್ಚು, ರಾಜ್ಯದಲ್ಲಿ ವಿರಳ. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿ ಗಳು ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವ ಉದಾಹರಣೆಗಳಿವೆ ಎಂದರು. ಆಗ ರಾಜು ಅವರು, ಕರ್ನಾಟಕದಲ್ಲಿ ಹೀನ ಕೃತ್ಯಗಳಲ್ಲಿ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಭಾಗಿಯಾಗುವುದು ಕಡಿಮೆ ಎಂದು ಕೇಳಲು ಸಂತೋಷವಾಗುತ್ತದೆ. ಇಂಥ ಟ್ರೆಂಡ್ ಆರಂಭವಾದರೆ ಅದನ್ನು ಎಳೆಯುದರಲ್ಲಿ ಮೊಟಕಿ ಹಾಕಬೇಕಿದೆ.

ಕಿರುಸುದ್ದಿ

ಹಣಕಾಸಿನ ವಿಚಾರಕ್ಕೆ ಹತ್ಯೆ

ಹುಬ್ಬಳ್ಳಿ: ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಕಲ್ಲಿನಿಂದ ಹಲ್ಲೆ ನಡೆಸಿ ವ್ಯಕ್ತಿಯೋರ್ವನನ್ನು ಹತ್ಯೆ ಮಾಡಿದ ಘಟನೆ ಕಡಪಟ್ಟಿ-ಹಳ್ಯಾಳ ರಸ್ತೆಯ ಮಧ್ಯದ ರಸ್ತೆವೊಂದರಲ್ಲಿ ನಡೆದಿದೆ. ಸೆಟ್ಲಮೆಂಟ್ ನಿವಾಸಿ ಈರಣ್ಣ ಹುರಕಡ್ಲಿ(45) ಹತ್ಯೆಯಾದ ವ್ಯಕ್ತಿ. ಶಶಿಧರ ಚಿನ್ನೋಜಿ(35) ಹತ್ಯೆ ಮಾಡಿದ್ದಾನೆ. ಈರಣ್ಣ ಆಟೋ ಚಾಲಕನಾಗಿದ್ದು, ಇವನೊಂದಿಗೆ ಆರೋಪಿ ಶಶಿಧರ ಹಣಕಾಸಿನ ವ್ಯವಹಾರ ಮಾಡಿದ್ದಾನೆ. ಇದೇ ವಿಚಾರಕ್ಕೆ ಮಾತನಾಡುವುದಾಗಿ ಹೊಲಕ್ಕೆ ಕರೆದುಕೊಂಡು ಹೋಗಿದ್ದ. ಕುಡಿದ ಮತ್ತಿನಲ್ಲಿ ಜಗಳ ತೆಗೆದು, ಕಲ್ಲಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದ. ಗಂಭೀರವಾಗಿ ಗಾಯಗೊಂಡ ಈರಣ್ಣನನ್ನು ನಗರದ ಕಿಮ್ಸ್ ಆಸ್ಪತ್ರೆಗೆ ಚಿಕಿತ್ಸೆ ರವಾನಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಆತನ ಸೋಮವಾರ ಮೃತಪಟ್ಟಿದ್ದಾನೆ. ಈ ಕುರಿತು ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬೈಕ್ ಸವಾರ ಸಾವು

ಬೀಳಗಿ: ತಾಲೂಕಿನ ಗಲಗಲಿ ಮತ್ತು ಯಡಹಳ್ಳಿ ಮಾರ್ಗದ ಮಧ್ಯದಲ್ಲಿ ಶನಿವಾರ ನಡೆದ ಬೈಕ್ ಅಪಘಾತದಲ್ಲಿ ತಾಲೂಕಿನ ಬಾಡಗಿ ಗ್ರಾಮದ ರವಿ ಬಸಪ್ಪ ಧೂಪದ (25) ಮೃತಪಟ್ಟಿದ್ದಾರೆ. ಇನ್ನೊಬ್ಬ ಸವಾರ ಬಾಳಪ್ಪ ಮಲ್ಲಪ್ಪ ಕುಸ್ತಿ (24) ಗಾಯಗೊಂಡಿದ್ದಾರೆ. ಬೀಳಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಘಟನಾ ಸ್ಥಳಕ್ಕೆ ಸಿಪಿಐ ಹನಮಂತ ಸಣಮನಿ ಭೇಟಿ ನೀಡಿ, ವಿಚಾರಣೆ ಮುಂದುವರಿಸಿದ್ದಾರೆ.

ಹಾವು ಕಚ್ಚಿ ಕೂಲಿ ಕಾರ್ಮಿಕ ಸಾವು

ಭಟ್ಕಳ: ಹೂವಿನ ತೋಟದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ವಿಷಪೂರಿತ ಹಾವು ಕಚ್ಚಿದ ಪರಿಣಾಮ ಕೂಲಿ ಕಾರ್ಮಿಕರೊಬ್ಬರು ಮೃತಪಟ್ಟ ದುರ್ಘಟನೆ ತಾಲೂಕಿನ ಮೂಡಶಿರಾಲಿ-ಬೆಂಗ್ರೆ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.

ಮೃತರನ್ನು ಮೂಡಶಿರಾಲಿ-ಬೆಂಗ್ರೆ ನಿವಾಸಿ ರಾಮಚಂದ್ರ ಬಡಿಯಾ ನಾಯ್ಕ (50) ಎಂದು ಗುರುತಿಸಲಾಗಿದೆ. ಬೆಳಗ್ಗೆ ಸುಮಾರು 6 ಗಂಟೆಗೆ ತಮ್ಮ ಹೂವಿನ ತೋಟಕ್ಕೆ ಹೂ ಕೊಯ್ಯಲು ತೆರಳಿದ್ದ ವೇಳೆ ವಿಷಪೂರಿತ ಹಾವು ಕಚ್ಚಿದೆ ಎನ್ನಲಾಗಿದೆ. ಹಾವು ಕಚ್ಚಿದ ಕೆಲವೇ ಕ್ಷಣಗಳಲ್ಲಿ ಅವರು ಅಸ್ವಸ್ಥಗೊಂಡಿದ್ದು, ವಿಷಯ ತಿಳಿದ ಕುಟುಂಬಸ್ಥರು ತಕ್ಷಣ ಸ್ಥಳಕ್ಕೆ ಧಾವಿಸಿ ಅವರನ್ನು ಮನೆಗೆ ಕರೆತಂದಿದ್ದಾರೆ ಚಿಕಿತ್ಸೆಗೆ ಭಟ್ಕಳ ತಾಲೂಕು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಲ್ಲಿಯೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ಘೋಷಿಸಿದ್ದಾರೆ.

ಪುತ್ರ ಧನರಾಜ ನಾಯ್ಕ ಅವರು ನೀಡಿದ ದೂರಿನ ಮೇರೆಗೆ ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಾಗಿದ್ದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ದೇವಸ್ಥಾನದಲ್ಲಿ ಕಳುವು ಪ್ರಯತ್ನ ವಿಫಲ

ಭಟ್ಕಳ: ದೇವಸ್ಥಾನದಲ್ಲಿ ಕಳುವು ಮಾಡಲು ಯತ್ನಿಸಿದ ಕಳ್ಳರ ಕೈಚಳಕ ಸಣ್ಣ ಸದ್ದಿನಿಂದಾಗಿ ವಿಫಲವಾದ ಘಟನೆ ಶಿರಾಲಿಯ ಪ್ರಸಿದ್ಧ ಎಂ.ಜಿ.ಎಂ ದೇವಸ್ಥಾನದಲ್ಲಿ ಸಂಭವಿಸಿದೆ.

ಸೋಮವಾರ ಬೆಳಗಿನಜಾವ ಯಾರೋ ಕಳ್ಳರು ದೇವಸ್ಥಾನದ ಹಿಂಬದಿಯ ಕಬ್ಬಿಣದ ಬಾಗಿಲನ್ನು ಗ್ಯಾಸ್ ಕಟ್ಟರ್‌ನಿಂದ ಕಟ್ ಮಾಡುತ್ತಿರುವಾಗ ಚಿಕ್ಕ ಶಬ್ದ ಕೇಳಿದ ದೇವಸ್ಥಾನದ ಒಳಗಿದ್ದವರು ಕೂಗಿಕೊಂಡಿದ್ದು ಕಳ್ಳರ ಕೈಚಳಕಕ್ಕೆ ಬ್ರೇಕ್ ಬಿದ್ದಿದೆ. ದೇವಸ್ಥಾನದಲ್ಲಿರುವವರು ಕೂಗಿದ್ದನ್ನು ಕೇಳಿಸಿಕೊಂಡ ಕಳ್ಳರು ತಮ್ಮ ಕೃತ್ಯವನ್ನು ಅಲ್ಲಿಗೇ ಬಿಟ್ಟು ಪರಾರಿಯಾಗಿದ್ದಾರೆ.

ಕಳ್ಳರು ದೇವಸ್ಥಾನದಲ್ಲಿರುವ ಚಿನ್ನಾಭರಣ, ಬೆಳ್ಳಿ ಇತ್ಯಾದಿ ಸಾಮಗ್ರಿಗಳನ್ನು ಕಳ್ಳತನ ಮಾಡುವ ಉದ್ದೇಶದಿಂದಲೇ ಬಂದಿದ್ದು ಪ್ರಯತ್ನ ವಿಫಲವಾಗಿದೆ. ಈ ಬಗ್ಗೆ ದೇವಸ್ಥಾನದ ವ್ಯವಸ್ಥಾಪಕ ಅಜಯ ಜಯಕರ ಪ್ರಭು ಅವರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ತನಿಖೆ ನಡೆದಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	5389	5870
ಉದ್ದಿನಕಾಳು	1530	5019
ಒಣ ಮೆಣಸಿನಕಾಯಿ	21500	56500
ಹೆಸರುಕಾಳು	4570	8585
ಜೋಳ	2125	4316
ಮಡಿಕೆ (ಮಟಕಿ)	7001	7001
ಈರುಳ್ಳಿ	500	2200
ಆಲೂಗಡ್ಡೆ	1200	1800
ಕುಸುಬೆ	4811	4811
ಸೋಯಾಬಿನ್	6696	6925
ಗೋಧಿ	2319	2376

1.6 ಕೋಟಿ ವೆಚ್ಚದಲ್ಲಿ ನಿರ್ಮಾಣ | ಪ್ರಾಣಿ ಪ್ರೇಮಿಗಳ ಅಸಮಾಧಾನ

8 ತಿಂಗಳಾದರೂ ಆರಂಭವಾಗದ ಚಿತಾಗಾರ

▸ ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ

ಹುಬ್ಬಳ್ಳಿ: ಎಲ್‌ಪಿಜಿ ಗ್ಯಾಸ್ ಅಭಾವದ ನೆಪವೊಡ್ಡಿ ಹು-ಧಾ ಮಹಾನಗರ ಪಾಲಿಕೆಯ ಸಾಕು ಪ್ರಾಣಿಗಳ ಸೇರಿ ಇನ್ನಿತರ ಪ್ರಾಣಿಗಳು ಮೃತಪಟ್ಟಾಗ ಅವುಗಳ ಕಳೇಬರಗಳನ್ನು ಗೌರಯುತವಾಗಿ ಅಂತ್ಯಕ್ರಿಯೆ ಮಾಡಲು ನಿರ್ಮಿಸಲಾದ ಎರಡು ಚಿತಾಗಾರಗಳನ್ನು ಎಂಟು ತಿಂಗಳು ಕಳೆದರು ಇನ್ನೂ ಆರಂಭಿಸಿಲ್ಲ. ಇದು ಪ್ರಾಣಿ ಪ್ರೇಮಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಹುಬ್ಬಳ್ಳಿ ಕಾರವಾರ ರಸ್ತೆ ಹಾಗೂ ಧಾರವಾಡ ಹೊಸ ಯಲ್ಲಾಪುರದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸುಮಾರು 1.6 ಕೋಟಿ ವೆಚ್ಚದಲ್ಲಿ ಚಿತಾಗಾರಗಳನ್ನು ನಿರ್ಮಿಸಲಾಗಿದೆ. ಚಿಮಣಿ ಸೇರಿದಂತೆ ಇನ್ನಿತರ ಯಂತ್ರೋಪಕರಣಗಳನ್ನೂ ಸಹ ಅಳವಡಿಸಲಾಗಿದೆ.

ಚಿತಾಗಾರ ಒಂದು ಗಂಟೆಗೆ 70ರಿಂದ 80 ಕೆಜಿ ತೂಕದ ಕಳೇಬರ ದಹಿಸುವ ಸಾಮರ್ಥ್ಯ ಹೊಂದಿದೆ. ಎಲ್ಪಿಜಿ ಗ್ಯಾಸ್‌ನಿಂದ ಇದು ಕಾರ್ಯನಿರ್ವಹಿಸಲಿದ್ದು, ಕೆಲ ಉಪಕರಣಗಳನ್ನು ಪುಣೆಯಿಂದ ತರಿಸಿ ಅಳವಡಿಸಲಾಗಿದೆ. ಸದ್ಯ ಎರಡು ಚಿತಾಗಾರ ಘಟಕಗಳಿಗೆ ಬೀಗ ಹಾಕಲಾಗಿದ್ದು, ಯಂತ್ರೋಪಕರಣಗಳು ಧೂಳು ಹಿಡಿಯುತ್ತಿವೆ. ಇನ್ನೂ ಸ್ವಲ್ಪ ದಿನ ಹಾಗೇ ಬಿಟ್ಟರೆ ಹಾಳಾಗುವ ಸ್ಥಿತಿಯಲ್ಲಿ ಇವೆ.

ಎಲ್‌ಪಿಜಿಗ್ಯಾಸ್ ಸಿಗದಕಾರಣಮಹಾನಗರಪಾಲಿಕೆ ಇನ್ನೂ ಚಿತಾಗಾರ ಘಟಕಗಳನ್ನು ಆರಂಭ ಮಾಡಿಲ್ಲ. ಯುದ್ಧದ ಪರಿಣಾಮ ಎಲ್‌ಪಿಜಿ ಗ್ಯಾಸ್ ಅಭಾವ ಆಗಿದ್ದು, ಈಗ ಸಮಸ್ಯೆ ಬಗೆಹರಿದಿದೆ. ಇಷ್ಟಾದರೂ ಪಾಲಿಕೆ ಗ್ಯಾಸ್ ಅಭಾವದ ಕುಂಟು ನೆಪವೊಡ್ಡಿ ಇನ್ನೂ ಚಿತಾಗಾರಗಳ ಪ್ರಾರಂಭಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿವೆ.

ಹಿಂದೆ ಕೆಲವರು ಎಲ್ಲೆಂದರಲ್ಲಿ ಕಳೇಬರಗಳನ್ನು ಎಸೆದು ಹೋಗುತ್ತಿದ್ದರು. ಇದರಿಂದ ದುರ್ವಾಸನೆ ಹರಡುತ್ತಿತ್ತು. ರೋಗ ಹರಡುವ ಆತಂಕವೂ ಇತ್ತು. ಅದನ್ನು ತಪ್ಪಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ನಿಯಮಾವಳಿ ಅನ್ವಯ ಈ ಚಿತಾಗಾರಗಳನ್ನು ನಿರ್ಮಿಸಲಾಗಿದೆ. ಆದರೆ, ನಿರ್ಮಾಣವಾಗಿ ತಿಂಗಳು ಕಳೆದರೂ ಆರಂಭವಾಗದಿರುವುದು ಪ್ರಾಣಿ ಪ್ರೇಮಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಮನುಷ್ಯರಂತೆ ಪ್ರಾಣಿಗಳು ಮೃತಪಟ್ಟದಾಗ ಅವುಗಳಿಗೆ ಗೌತಯುತವಾಗಿ ಅಂತ್ಯಕ್ರಿಯೆ ಮಾಡಬೇಕು. ಮಹಾನಗರ ಪಾಲಿಕೆ ಚಿತಾಗಾರ ನಿರ್ಮಿಸಿದ್ದು, ಹಲವು ತಿಂಗಳು ಕಳೆದರೂ ಸಹ ಆರಂಭಿಸಿಲ್ಲ, ತಕ್ಷಣ ಆರಂಭಿಸಬೇಕು ಎಂದು ಪ್ರಾಣಿ ಪ್ರೇಮಿ ಸುನೀಲ ಜಂಗಾನಿ ಆಗ್ರಹಿಸಿದರು.

ಚಿತಾಗಾರ ನಿರ್ಮಿಸಲು ಒಂದು ಕೋಟಿಗೂ ಹೆಚ್ಚು ಖರ್ಚುಮಾಡಲಾಗಿದೆ. ಚಿತಾಗಾರ ಬಳಕೆಯಾಗದಿದ್ದರೆ ಅಲ್ಲಿ ಅಳವಡಿಸಲಾದ ಯಂತ್ರಗಳು ಸಂಪೂರ್ಣವಾಗಿ ಹಾಳಾಗುತ್ತವೆ. ಖರ್ಚು ಮಾಡಿದ ಹಣವೂ ವ್ಯರ್ಥವಾಗಲಿದೆ. ಪಾಲಿಕೆ ಅಧಿಕಾರಿಗಳು ಇದಕ್ಕೆ ಆಸ್ಪದ ಕೊಡಬಾರದು ಎಂದು ತಿಳಿಸಿದರು.



ಯಾವುದೇ ಶುಲ್ಕ ಇಲ್ಲ

ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ಕಳೇಬರಗಳ ವಿಲೇವಾರಿಗೆ 250-300 ಕೋರಿಕೆಗಳು ಬರುತ್ತಿದ್ದವು. ಪಾಲಿಕೆ ಸಿಬ್ಬಂದಿ ಪ್ರಾಣಿಗಳ ಕಳೇ ಬರಗಳನ್ನು ಸಂಗ್ರಹಿಸಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸುಡುತ್ತಿದ್ದರು. ಈಗ ಬೀದಿ ನಾಯಿ, ಸಾಕು ನಾಯಿ, ಹಸು, ಬೆಕ್ಕು, ಎಮ್ಮೆ ಸೇರಿ ಯಾವುದೇ ಸಣ್ಣ ಪ್ರಾಣಿ ಸತ್ತರೆ ಪಾಲಿಕೆಯ ಸಹಾಯವಾಣಿಗೆ ದೂರು ನೀಡಿದರೆ ಸಿಬ್ಬಂದಿ ಹೋಗಿ ಕಳೇಬರಗಳನ್ನು ತಂದು ಅಂತ್ಯಕ್ರಿಯೆ ಮಾಡುವ ವ್ಯವಸ್ಥೆ ಇದೆ. ಜನರು ಸಹ ನೇರವಾಗಿ ಕಳೇಬರಗಳನ್ನು ಚಿತಾಗಾರಗಳಿಗೆ ತಲುಪಿಸಬಹುದು. ಇದಕ್ಕೆ ಯಾವುದೇ ಶುಲ್ಕ ಇಲ್ಲ. ಮೃತಪಟ್ಟ ಪ್ರಾಣಿಗಳ ವಿಲೇವಾರಿಗೆ ಎರಡು ವಾಹನ ಹಾಗೂ ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಪಾಲಿಕೆ ಅಧಿಕಾರಿಯೊಬ್ಬರು ತಿಳಿಸಿದರು.

“ಹುಬ್ಬಳ್ಳಿ ಕಾರವಾರ ರಸ್ತೆ ಹಾಗೂ ಧಾರವಾಡ ಹೊಸ ಯಲ್ಲಾಪುರದಲ್ಲಿ ಚಿತಾಗಾರ ಕಾಮಗಾರಿ ಮುಗಿದಿದ್ದು, ಗ್ಯಾಸ್ ಅಭಾವದಿಂದ ಇವುಗಳ ಕಾರ್ಯಾರಂಭ ತಡವಾಗಿವೆ. ಆದಷ್ಟು ಬೇಗ ಆರಂಭಿಸಲಾಗುವುದು.

■ ವಿಜಯಕುಮಾರ, ಉಪ ಆಯುಕ್ತ(ಅಭಿವೃದ್ಧಿ)ಪಾಲಿಕೆ

ಸಂಭ್ರಮದ ತೊಟ್ಟಿಲ ಜಟಕನ ಹಬ್ಬ



ಅಂಕೋಲಾ: ತಾಲೂಕಿನ ಶಕ್ತಿದೇವತೆ ಭೂಮ್ತಾಯಿ ಶಾಂತಾದುರ್ಗಾ ದೇವಿಯನ್ನು ಶಿಶು ರೂಪದಲ್ಲಿ ತೊಟ್ಟಿಲಲ್ಲಿ ತೂಗುವ ತೊಟ್ಟಿಲ ಜಟಕನ ಹಬ್ಬ ಕುಂಬಾರಕೇರಿಯ ಕಳಸ ದೇವಾಲಯದ ಸಮೀಪದಲ್ಲಿರುವ ಜಟಕ ಸ್ಥಾನದಲ್ಲಿ ಸಾಂಪ್ರದಾಯಿಕ ವಿಧಿ ವಿಧಾನಗಳೊಂದಿಗೆ ನಡೆಯಿತು.

ತಾಲೂಕಿನ ಬಂಡಿ ಹಬ್ಬ ಮುಗಿದು ಕೆಲವು ದಿನಗಳ ನಂತರ ತೊಟ್ಟಿಲ ಜಟಕನ ಹಬ್ಬ ಆಚರಿಸುವ ಸಂಪ್ರದಾಯ ಹಿಂದಿನಿಂದಲೂ ನಡೆದುಬಂದಿದ್ದು ಬಾಳೆಹಂಬೆಯಿಂದ ತಯಾರಿಸಿದ ತೊಟ್ಟಿಲಲ್ಲಿ ಹಿಟ್ಟಿನಿಂದ ತಯಾರಿಸಲಾದ ಶಿಶು ರೂಪಿ ಭೂಮಿ ದೇವತೆಯನ್ನು ತೂಗಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಭೂಮ್ತಾಯಿಯ ಹಿರಿಯಜ್ಜ ಜಟಕದೇವರು ಪುಟ್ಟ ಶಿಶು ರೂಪದ ದೇವಿಯನ್ನು ತೊಟ್ಟಿಲಲ್ಲಿ ತೂಗುವ ಸಂಕೇತವಾಗಿ ತೊಟ್ಟಿಲ ಜಟಕನ ಹಬ್ಬ ಆಚರಿಸಲಾಗುತ್ತದೆ ಎಂಬ ಪ್ರತೀತಿ ಸ್ಥಳೀಯರಲ್ಲಿ ಇದೆ.

ಸಂತಾನ ಪ್ರಾಪ್ತಿಗಾಗಿ ತೊಟ್ಟಿಲ ಜಟಕನ ಸನ್ನಿಧಿಯಲ್ಲಿ ಹರಕೆ ಹೊತ್ತು ಹಬ್ಬದ ದಿನ ತೊಟ್ಟಿಲು ತೂಗಿದರೆ ಸಂತಾನ ಭಾಗ್ಯದ ಇಷ್ಟಾರ್ಥ ಈಡೇರುತ್ತದೆ ಎಂಬ ನಂಬಿಕೆಯಿದೆ. ತೊಟ್ಟಿಲ ಜಟಕನ ಹಬ್ಬದ ಪ್ರಯುಕ್ತ ಕಳಸ ದೇವಾಲಯದಲ್ಲಿ ಗಿಂಡಿ ಪೂಜೆ ನಡೆಸಿ ಜಟಕ ಸ್ಥಾನದಲ್ಲಿ ಜಟಕ ದೇವರಿಗೆ ವಿಶೇಷಪೂಜೆ ಸಲ್ಲಿಸಲಾಯಿತು. ಹಿಟ್ಟಿನಿಂದ ಮೂಡಿಬಂದ ಶ್ರೀದೇವಿಯನ್ನು ತೊಟ್ಟಿಲಲ್ಲಿ ತೂಗುವ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀದೇವರ ಗುನಗರು, ಬಿಡ ಗುನಗರು, ಜಟಕ ದೇವರ ಅರ್ಚಕರು,ಸುತ್ತ ಮುತ್ತಲಿನ ಗ್ರಾಮಸ್ಥರು,ಭಕ್ತರು ಪಾಲ್ಗೊಂಡಿದ್ದರು. ಬಂಡಿ ಹಬ್ಬದ ನಂತರ ದೇವರ ಕಳಸ ಸ್ಥಾನದ ಬಳಿ ಇರುವ ಜಟಕನ ಸನ್ನಿಧಿಯಲ್ಲಿ ಶಿಶು ರೂಪಿ ಭೂಮ್ತಾಯಿಯನ್ನು ತೊಟ್ಟಿಲಲ್ಲಿ ತೂಗುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿದ್ದು ಲೋಕ ಕಲ್ಯಾಣಕ್ಕಾಗಿ ಜನ್ಮ ತಾಳಿದ ದೇವಿಯನ್ನು ತೊಟ್ಟಿಲಲ್ಲಿ ತೂಗುವ ನಂಬಿಕೆ ಸ್ಥಳೀಯರಲ್ಲಿದೆ.

ತಾಯಿ ಋಣ ತೀರಿಸಲು ಸಾಧ್ಯವಿಲ್ಲ: ಹೊರಟ್ಟಿ



ಮುಂಡರಗಿ: ಮನುಷ್ಯ ಹುಟ್ಟಿದಊರು, ಹೆತ್ತ ತಂದೆ-ತಾಯಿ, ವಿದ್ಯೆ ಕಲಿಸಿದ ಸಂಸ್ಥೆ, ಕಷ್ಟಕಾಲದಲ್ಲಿ ಸಹಾಯ ಮಾಡಿದವರನ್ನು ಯಾವತ್ತಿಗೂ ಮರೆಯಬಾರದು. ಹೆಣ್ಣು ಮಕ್ಕಳು ಇಡೀ ಸಂಸಾರ ಮುನ್ನಡೆಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಕಲ್ಯಾಣ ಮಂಟಪದಲ್ಲಿ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ ಹಾಗೂ ಅವ್ವ ಸೇವಾ ಟ್ರಸ್ಟ್ ಆಶ್ರಯದಲ್ಲಿ ಸೋಮವಾರ ಜರುಗಿದ ಅವ್ವನ ಕುರಿತು ವಿಶೇಷ ಶಿವಾನುಭವ, ಜಗದ್ಗುರು ಅನ್ನದಾನೀಶ್ವರ ಅಕ್ಕನ ಬಳಗದ ಸುವರ್ಣ ಮಹೋತ್ಸವ, ದತ್ತಿನಿಧಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಹೆತ್ತ ತಾಯಿಯ ಋಣ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಹೀಗಾಗಿ ಶ್ರೇಷ್ಠ ವ್ಯಕ್ತಿ ಎಂದರೆ ತಾಯಿ. ಅವ್ವ ಸೇವಾಟ್ರಸ್ಟ್ ಮೂಲಕ ಜನ್ಮ ನೀಡಿದ ತಾಯಿ ಸ್ಮರಣೆಯಲ್ಲಿ ಸಾಮಾಜಿಕ ಕಾರ್ಯ ಮಾಡಲಾಗುತ್ತಿದೆ. ಹೆಣ್ಣು ಮಕ್ಕಳು ತಮ್ಮ ಮಕ್ಕಳಿಗೆ ಸಂಸ್ಕಾರವನ್ನು ಕಲಿಸಿಕೊಡಬೇಕು ಎಂದರು. ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಅನ್ನದಾನೀಶ್ವರ ಶಿವಯೋಗಿಗಳವರು ಆಶೀರ್ವಚನ ನೀಡಿ, ಶ್ರೀಮಠದಿಂದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಸಾಮಾಜಿಕ ಸೇವೆ ಮಾಡಿಕೊಂಡು ಬರುತ್ತಿದೆ. ಬಸವರಾಜ ಹೊರಟ್ಟಿ ಅವರು ಶೈಕ್ಷಣಿಕ ಸೇವೆಯನ್ನು ಮಾಡಿಕೊಂಡು ಬಂದಿದ್ದಾರೆ. ಪಾಲಕರು ಮಕ್ಕಳಿಗೆ ಸಂಸ್ಕಾರ ನೀಡಬೇಕು ಎಂದು ತಿಳಿಸಿದರು.

ಅವ್ವ ಸೇವಾ ಟ್ರಸ್ಟ್ ಕಾರ್ಯದರ್ಶಿ ಶಶಿ ಸಾಲಿ ಮಾತನಾಡಿ, ಅನೇಕ ವರ್ಷಗಳಿಂದ ಸಮಾಜದ ಒಳಿತಿಗಾಗಿ ಅವ್ವ ಸೇವಾ ಟ್ರಸ್ಟ್‌ನಿಂದಕೆಲಸಮಾಡುತ್ತಿದೆ. ಸಮಾಜ,ಸಂಸ್ಕೃತಿ ಕಟ್ಟಿ ಬೆಳೆಸುವಂತ ಕೆಲಸ ನಿರಂತರವಾಗಿ ಮಾಡಲಾಗುತ್ತಿದೆ ಎಂದರು.

ಅವ್ವ ಸೇವಾ ಟ್ರಸ್ಟ್ ಗದಗ ಸಂಚಾಲಕ ಡಾ.ಬಸವರಾಜ ಧಾರವಾಡ ಮಾತನಾಡಿ, ಅವ್ವನ ಶಕ್ತಿ ಬದುಕಿಗೆ ದಿವ್ಯ ಶಕ್ತಿ ನೀಡುತ್ತದೆ. ಟ್ರಸ್ಟ್ ಮೂಲಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕಾರ್ಯಗಳ ಮೂಲಕ ತನ್ನದೆ ಆದಸಮಾಜಮುಖಿಸೇವೆಸಲ್ಲಿಸಲಾಗುತ್ತಿದೆ ಎಂದರು.

ಚೇತನಾ ಹಿರೇಮಠ ಮಾತನಾಡಿದರು. ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಯಿತು. ಚನ್ನಬಸವ ದೇವರು, ಲಕ್ಷ್ಮೀದೇವಿ ಬೆಳವಟಗಿಮಠ, ಭಾಗ್ಯಶ್ರೀ ಹಳ್ಳಿಕೇರಿಮಠ, ಮಂಜುನಾಥ ಹೊಟ್ಟಿ ಗೌಡರ ಇದ್ದರು. ಜ.ಅ.ವಿದ್ಯಾ ಸಮಿತಿ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಮಾತನಾಡಿದರು. ನಾಗಭೂಷಣ ಹಿರೇಮಠ, ದೀಪುಶ್ರೀ ಕಣವಿ, ಲೀಲಾ ಅಕ್ಕೂರ ಕಾರ್ಯಕ್ರಮ ನಿರ್ವಹಿಸಿದರು.

ಜೇವರ್ಗಿ ಟೆಂಡರ್ ಪ್ರಕ್ರಿಯೆಯಲ್ಲಿ ಗೋಲ್‌ಮಾಲ್: ಆರೋಪ

ಕಲಬುರಗಿ: ಜೇವರ್ಗಿ ಮತಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾರೀ ಗೋಲ್‌ಮಾಲ್ ನಡೆದಿದ್ದು, ಪಿಡಬ್ಲ್ಯೂಡಿ ಅಧಿಕಾರಿಗಳು ಹಾಗೂ ಆಡಳಿತ ನಡೆಸುವ ಮುಖಂಡರ ನಡುವಿನ ಅನೈತಿಕ ಹೊಂದಾಣಿಕೆಯಿಂದ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಮಾಜಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಶಿವರಾಜ್ ಪಾಟೀಲ್ ರದ್ದೇವಾಡಗಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಟೆಂಡರ್ ಪ್ರಕ್ರಿಯೆ ಮುಗಿದು ಏಳು ತಿಂಗಳಾಗುತ್ತಾ ಬಂದರೂ ಇನ್ನು ಓಪನ್ ಮಾಡದೆ ಅಧಿಕಾರ ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ದೂರಿದರು.

ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಆಗಿಲ್ಲ, ರೈತರಿಗೆ ರಸಗೊಬ್ಬರ ಸಿಗುತ್ತಿಲ್ಲ, ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಇಲ್ಲದೆ ಪರದಾಡುವಂತಾಗಿದೆ. ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಕೆಕೆಆರ್‌ಡಿಬಿ ಅನುದಾನದಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳನ್ನು ಪಿಡಬ್ಲ್ಯೂಡಿ ಲ್ಯಾಂಡ್ ಆರ್ಮಿಗೆ ನೀಡಲಾಗಿದ್ದು, ಟೆಂಡರ್ ಕರೆದು ಆರು ತಿಂಗಳಾದರೂ ಇನ್ನೂ ಸಹಿ ಪ್ರಕ್ರಿಯೆ ಮುಗಿದಿಲ್ಲ. ಗೋಲ್‌ಮಾಲ್‌ನಲ್ಲಿ ನನ್ನನ್ನೂ ಪಾಲುದಾರನನ್ನಾಗಿ ಮಾಡಲು ಹಲವರಿಂದ ಯತ್ನಗಳು ನಡೆದಿವೆ ಎಂದು ಅವರು ಮಾಹಿತಿ ಬಿಚ್ಚಿಟ್ಟರು.

ಜೇವರ್ಗಿ ಕ್ಷೇತ್ರದಲ್ಲಿ ಹಾಲಿ ಶಾಸಕರ ಕಾರುಬಾರಿಗಿಂತ ಅವರ ಪಿಎಗಳ ಕಾರುಬಾರು ಹೆಚ್ಚಾಗಿದೆ. ಅಧಿಕಾರಿಗಳ ಮೇಲೆ ಶಾಸಕರಿಗೆ ಯಾವುದೇ ಹಿಡಿತವಿಲ್ಲದಂತಾಗಿದ್ದು, ಪಿಎಗಳು ಅಧಿಕಾರಿಗಳೊಂದಿಗೆ ಸೇರಿ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಲ್ಯಾಂಡ್ ಆರ್ಮಿಗೆ ಕೆಲಸ ಶುರು ಮಾಡಿ ಒಂದು ವರ್ಷವಾದರೂ ಕಾಮಗಾರಿ ಇನ್ನೂ ಮುಗಿದಿಲ್ಲ, ಆದ್ದರಿಂದ ಕೂಡಲೇ ಈ ಎಲ್ಲಾ ರಸ್ತೆ ನಿರ್ಮಾಣ ಕಾಮಗಾರಿಗಳ ತನಿಖೆಯಾಗಬೇಕು ಹಾಗೂ ಇದರಲ್ಲಿ ಶಾಮೀಲಾಗಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರದ್ದೇವಾಡಗಿ ಆಗ್ರಹಿಸಿದರು.ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜೇವರ್ಗಿ ಮಂಡಲದ ಅಧ್ಯಕ್ಷ ದೇವೇಂದ್ರ ಮುತ್ತುಕೋಡ್, ಮುಖಂಡರಾದ ಮಲ್ಲಿಕಾರ್ಜುನ್ ಕುಸ್ತಿ, ಧರ್ಮಣ್ಣ ಇಟಗಿ, ಬಸವರಾಜ್ ಕುಕುನೂರ್ ಹಾಗೂ ಗುರುರಾಜ್ ಶೀಲಹಳ್ಳಿ, ಸುರೇಶ್ ಪಾಟೀಲ್ ಇದ್ದರು.





ಹುಬ್ಬಳ್ಳಿ: ಬೆಂಗಳೂರಿನಲ್ಲಿ ನಡೆದ ಕಾಸಿಯಾ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಹುಬ್ಬಳ್ಳಿಯ ಉದ್ಯಮಿ ಹಾಗೂ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸದಸ್ಯ ನಿಂಗಣ್ಣ ಎಸ್.ಬಿರಾದಾರ ಅವರು ನೂತನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದರು. ಈ ಹಿನ್ನೆಲೆ ಕೆಸಿಸಿಐ ಪದಾಧಿಕಾರಿಗಳು ಅವರನ್ನು ಸನ್ಮಾನಿಸಿದರು. ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಉಪಾಧ್ಯಕ್ಷ ಸಿದ್ದೇಶ್ವರ ಕಮ್ಮಾರ, ಮಾಜಿ ಅಧ್ಯಕ್ಷ ವಿನಯ ಜವಳಿ, ಸದಸ್ಯರಾದ ಅಶೋಕ ಗಡಾದ, ಎಂ.ಎ.ಕರಮರಿ, ಜಯಪ್ರಕಾಶ ಟೆಂಗಿನಕಾಯಿ, ಎಂ.ಕೆ.ಪಾಟೀಲ ಹಾಗೂ ಲಕ್ಷ್ಮೀಕಾಂತ ಪಾಟೀಲ ಇದ್ದರು.

ಜಿಲ್ಲಾ ನ್ಯಾಯಾಲಯಕ್ಕೆ ಮತ್ತೆ ಬಾಂಬ್ ಬೆದರಿಕೆ

ಹಾವೇರಿ: ಇಲ್ಲಿನ ಜಿಲ್ಲಾ ನ್ಯಾಯಾಲಯ ಸಂಕೀರ್ಣಕ್ಕೆ ಮತ್ತೊಮ್ಮೆ ಹುಸಿ ಬಾಂಬ್ ಬೆದರಿಕೆ ಬಂದಿದೆ. ಸೋಮವಾರದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಕ್ಷಿದಾರರು ಸೇರಿದ್ದರು. ಆದರೆ, ಬೆಳಗ್ಗೆ 10.30ರ ಹೊತ್ತಿಗೆ ಬಾಂಬ್ ಬೆದರಿಕೆ ಮೇಲ್ ಬಂದ ಹಿನ್ನೆಲೆಯಲ್ಲಿ ಕಕ್ಷಿದಾರರು, ನ್ಯಾಯವಾದಿಗಳನ್ನು ನ್ಯಾಯಾಲಯದ ಸಿಬ್ಬಂದಿ ಹೊರ ಕಳಿಸಿ ಪೊಲೀಸರಿಗೆ ಮಾಹಿತಿ ನೀಡಿದರು. ತಕ್ಷಣ ಕೋರ್ಟ್ ಆವರಣಕ್ಕೆ ಬಂದ ಶ್ವಾನದಳ ಹಾಗೂ ಬಾಂಬ್ ಸ್ಕ್ವಾಡ್ ತಂಡ ವಾಹನ ಪಾರ್ಕಿಂಗ್, ಕೋರ್ಟ್ ಸಭಾಂಗಣ, ವಕೀಲರ ಸಂಘದ ಕಟ್ಟಡ ಹೀಗೆ ವಿವಿಧ ಕಟ್ಟಡಗಳನ್ನು ಸಮಗ್ರವಾಗಿ ತಪಾಸಣೆಗೆ ಒಳಪಡಿಸಿದರು. ಆದರೆ ಎಲ್ಲಿಯೂ ಸಂಶಯಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಮಧ್ಯಾಹ್ನ 12.45ರ ಹೊತ್ತಿಗೆ ಹುಸಿ ಕರೆ ಎಂದು ಘೋಷಿಸಿದರು. ಮಧ್ಯಾಹ್ನದ ನಂತರ ಮತ್ತೆ ಕೋರ್ಟ್ ಕಲಾಪಗಳು ಮುಂದುವರಿದವು. ಇದು ಒಂದೇ ವಾರದಲ್ಲಿ ಎರಡನೇ ಬೆದರಿಕೆ ಕರೆಯಾಗಿದ್ದು, ಒಟ್ಟಾರೆ ಮೂರನೇ ಬೆದರಿಕೆ ಕರೆಯಾಗಿದೆ.



ಸಂಪಾದಕೀಯ

ಅಪಕ್ವ ನೀತಿಯ ಪ್ರತಿಪಾದನೆ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿದೇಶಾಂಗ ನೀತಿಯಲ್ಲೂ ಅಲ್ಪಸಂಖ್ಯಾತ ತುಷ್ಟೀಕರಣ ನೀತಿಯನ್ನು ಅನುಸರಿಸಲು ಯತ್ನಿಸುತ್ತಿರುವಂತಿದೆ. ಕೆಲದಿನಗಳ ಹಿಂದೆ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ ಸೋನಿಯಾರವರು "ಗಾಝಾ ಕುರಿತಂತೆ ಭಾರತವು ಮೌನ ತಳೆದಿರುವುದು ನೈತಿಕವಾಗಿ ಮತ್ತು ವ್ಯೂಹಾತ್ಮಕವಾಗಿ ದೇಶಕ್ಕೆ ಪ್ರತಿಕೂಲವಾಗಿದೆ. ಇದರಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರವಿಡುವಂತಾಗಿದೆ" ಎಂಬುದಾಗಿ ಹೇಳಿರುವುದು ಅವರಿಗೆ ವಿದೇಶಾಂಗ ನೀತಿಯ ಕುರಿತಂತೆ ಇರುವ



ಅಪಕ್ವತೆಯನ್ನು ತೋರಿಸುವ ಜತೆಗೆ ಮುಸ್ಲಿಮರ ರಾಜಕೀಯ ಓಲೈಕೆಗಾಗಿ ಎಂತಹುದೇ ಗಿಮಿಕ್ ನಡೆಸಲು ಸಿದ್ಧ ಎಂಬುದನ್ನು ತೋರಿಸಿಕೊಟ್ಟಿದೆ. ಗಾಝಾ ಪರವಾಗಿ, ಪ್ಯಾಲೆಸ್ಟೀನ್ ಪರವಾಗಿ ಹೇಳಿಕೆ ನೀಡಿದರೆ ದೇಶದಲ್ಲಿರುವ ಮುಸ್ಲಿಮರ ಮೆಚ್ಚುಗೆ ಗಳಿಸಬಹುದು ಎಂಬಂತಹ ಭ್ರಮೆಯೊಂದು ನಮ್ಮಲ್ಲಿನ ತಥಾಕಥಿತ ಜಾತ್ಯತೀತ ಪಕ್ಷಗಳ ಮುಖಂಡರಲ್ಲಿ ಮನೆಮಾಡಿದೆ. ಅದರಂಗವಾಗಿಯೇ ಸೋನಿಯಾರವರು ಈ ಲೇಖನ ಬರೆದಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಭಾರತವು ಪ್ಯಾಲೆಸ್ಟೀನ್‌ನ ನ್ಯಾಯೋಚಿತ ಬೇಡಿಕೆಗೆ ಬೆಂಬಲವನ್ನೂ ನೀಡಿದೆ, ಮಾನವೀಯ ನೆಲೆಯಲ್ಲಿ ಗಾಝಾಕ್ಕೆ ಅವಶ್ಯ ನೆರವನ್ನೂ ನೀಡಿದೆ. ವಿಶ್ವಸಂಸ್ಥೆಯಲ್ಲಿ ಕದನವಿರಾಮ ನಿರ್ಣಯದ ಪರವಾಗಿ ಮತವನ್ನೂ ಚಲಾಯಿಸಿದೆ. ಭಾರತವು ತಮಗೆ ವಿರೋಧವಾಗಿದೆಯೆಂದು ಪ್ಯಾಲೆಸ್ಟೀನಿಯನ್ನರಂತೂ ತಿಳಿದುಕೊಂಡಿಲ್ಲ. ಇದಕ್ಕೆ ಪ್ಯಾಲೆಸ್ಟೀನ್‌ನ ಉನ್ನತ ನಾಗರಿಕ ಗೌರವವನ್ನು ಮೋದಿಯವರಿಗೆ ಪ್ರದಾನ ಮಾಡಿದ್ದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಭಾರತದ ನಿಲುವಿನಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರ ಮಾಡಿವೆ ಎಂಬ ಸೋನಿಯಾ ಹೇಳಿಕೆಯೂ ನಿರಾಧಾರಿತ. ಮೋದಿಯವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡಿರುವ ದೇಶಗಳಲ್ಲಿ ಮುಸ್ಲಿಂ ರಾಷ್ಟ್ರಗಳೂ ಬಹಳಷ್ಟಿವೆ ಎಂಬುದನ್ನು ಮರೆಯಬಾರದು.

ನಿಜವಾಗಿ ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚೆಚ್ಚು ಗೆಲುವನ್ನು ಸಂಪಾದಿಸಲು ಕಾರಣವಾಗಿದೆ. ಸಮರ ನಿರತ ರಾಷ್ಟ್ರಗಳೆರಡರ ಜತೆಗೂ ಸೌಹಾರ್ದ ಸಂಬಂಧ ಹೊಂದುವಂತಹ ಅತ್ಯಂತ ಸಮತೋಲಿತ ನಡೆಯನ್ನು ಭಾರತವೀಗ ಪ್ರದರ್ಶಿಸುತ್ತಿದೆ. ಉಕ್ರೇನ್ - ರಷ್ಯಾ, ಪ್ಯಾಲೆಸ್ಟೀನ್ - ಇಸ್ರೇಲ್, ಅಮೆರಿಕ - ಇರಾನ್ ಮೊದಲಾಗಿ ಎಲ್ಲ ದೇಶಗಳ ಜತೆಗೂ ಭಾರತವು ಉತ್ತಮ ಬಾಂಧವ್ಯ ಹೊಂದಿರುವುದು ಇದಕ್ಕೆ ಸಾಕ್ಷಿ.

ಕೆಲವರು ತಿಳಿದುಕೊಂಡಂತೆ ಭಾರತದ್ದು 'ಅಲಿಪ್ತ ನೀತಿ'ಯಲ್ಲ. ಎಲ್ಲರೊಡನೆ ಬೆರೆಯುವಂತಹ ನೀತಿ. ಈ ನೀತಿಯ ಕಾರಣದಿಂದಾಗಿಯೇ ಭಾರತವು ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲೂ ದೇಶದ ಹಿತ ಕಾಯುವಲ್ಲಿ ಸಫಲವಾಗಿದೆ. ಈ ನೀತಿಯನ್ನು ಶ್ಲಾಘಿಸಬೇಕೇ ಹೊರತು, ರಾಜಕೀಯ ಕಾರಣಕ್ಕಾಗಿ ವಿರೋಧಿಸುವುದು ವಿಹಿತವೆನಿಸದು.

ಹೆಂಡತಿ ತೀರಾ ಕೆಟ್ಟವಳಾದರೆ

ಅತಿಪ್ರಚಂಡಾಂ ಬಹುಪಾತಪಾಕಿನೀಂ ವಿವಾದಶೀಲಾಂ ಸ್ವಯಮೇವ ತಸ್ಕರೀಮ್ ।
ಆಕ್ರೋಶಬೀಜಾಂ ಪರವೇಶ್ಮ ಗಾಮಿನೀಂ ತ್ಯಜೇಚ್ಚ ಭಾರ್ಯಾಂ ಅಪಿ, ದಶಪುತ್ರಸೂರಪಿ ॥

ತುಂಬಾ ಚಂಡಿ ಸ್ವಭಾವದವಳೂ, ಮಿಗುವ ಹಾಗೆ ಭಾರೀ ಖರ್ಚಿನ ಅಡುಗೆ ಮಾಡುವವಳೂ, ಮಾತಿಗೆ ಮಾತು ಬೆಳೆಸುವವಳೂ, ಕಂಡವರ ಮನೆಗೆ ತಿರುಗುವವಳೂ ಆದ ಹೆಂಡತಿಯನ್ನು, ಹತ್ತು ಮಕ್ಕಳನ್ನು ಹಡೆದವಳಾಗಿದ್ದಾಗ್ಯೂ ಬಿಟ್ಟು ಬಿಡತಕ್ಕದ್ದು – ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ

ಡಾ. ಸೋಂದಾ ಭಾಸ್ಕರ ಭಟ್

ವಿವಾಹ ವಿಚ್ಛೇದನ ಎಂಬ ರೋಗ ಈಗ ದೇಶದ ಉದ್ದಗಲಕ್ಕೆ ವ್ಯಾಪಿಸಿದೆ. ಮೊದಲು ಪಾಶ್ಚಾತ್ಯ ದೇಶದಲ್ಲಿ ಇದು ಹೆಚ್ಚಾಗಿತ್ತು. ಆದರೆ ಇಂದು ನಮ್ಮ ದೇಶದಲ್ಲೂ ಸಾಮಾನ್ಯವೆನಿಸುವಷ್ಟರ ಮಟ್ಟಿಗೆ ಬಂದಿದೆ. ಗಂಡ ಹೆಂಡತಿಯನ್ನು ಬಿಡುವುದು, ಹೆಂಡತಿ ಗಂಡನನ್ನು ಬಿಡುವುದು ಎಂಬುದು ಹಿಂದೆ ಇರಲಿಲ್ಲವೆಂದಲ್ಲ. ಅದಕ್ಕೆ ಬಲವಾದ ಕಾರಣಗಳಿದ್ದವು. ಶಾಸ್ತ್ರಗಳೂ ಸಮ್ಮತಿಸಿದ್ದವು. ಹತ್ತು ಮಕ್ಕಳ ತಾಯಿಯಾಗಿದ್ದರೂ ಎಂಥವಳನ್ನು ಗಂಡ ಬಿಡಬೇಕು ಎಂಬುದನ್ನು ಈ ಶ್ಲೋಕ ಹೇಳುತ್ತದೆ. ಇದು ಕೇವಲ ಗಂಡಸರಿಗೆ ಹೇಳಿದ್ದೆನಿಸಿದರೂ ಹೆಂಗಸರಿಗೂ ನಾವು ಅನ್ವಯಿಸಿಕೊಳ್ಳಬೇಕು.

ಅತಿ ಪ್ರಚಂಡಾಮ್ – ಎಂದರೆ ಚಂಡೀ ಸ್ವಭಾವದವಳು, ಯಾರ ನಿಯಂತ್ರಣಕ್ಕೂ ಬಗ್ಗುವವಳಲ್ಲ. ಕಂಡ ಕಂಡ ವಿಚಾರಕ್ಕೆ ಹಠ ಹಿಡಿಯುವವಳು ಮನೆಯನ್ನೇ ರಣರಂಗವಾಗಿಸಿ ಎಲ್ಲರ ನೆಮ್ಮದಿಗೂ ಕೊಡಲಿ ಪ್ರಾಯವಾದವಳು. ಇವಳಿದ್ದರೆ ಸಂಸಾರವೇ ಸರ್ವನಾಶ ಎಂಬ ಹಂತ ತಲುಪಿದಾಗ ನಿರ್ದಾಕ್ಷಿಣ್ಯವಾಗಿ ತ್ಯಜಿಸಬೇಕು.

ಬಹುಪಾಕಪಾಕಿನೀಮ್– ಅಳತೆ ಮೀರಿ ಅಡುಗೆ ಮಾಡುವವಳು, ಮಾಡಿದ ಅಡುಗೆ ಮಿಕ್ಕುವುದು, ಒಮ್ಮೊಮ್ಮೆ ಕಡಿಮೆಯಾಗುವುದು ಇದು ಇರುವಂಥದ್ದೇ. ಅಳತೆ ಮೀರಿದರೆ ಹೀಗೆಲ್ಲ ಸಂಭವಿಸುತ್ತದೆ. ಆದರೆ ಯಾವುದೇ ಹಿತವಚನವನ್ನು ಕೇಳದೇ ತಾನೂ ತಿಳಿದುಕೊಳ್ಳದೇ ಹೆಚ್ಚು ಹೆಚ್ಚು ಅಡುಗೆ ಮಾಡಿ ತಿಪ್ಪೆಗೆಸೆಯುವ ಮಡದಿ ಕೇವಲ ಮನೆಗೆ ಮಾಡುವ ದ್ರೋಹವಲ್ಲ, ರಾಷ್ಟ್ರದ್ರೋಹದ ಕೆಲಸ. ಆಹಾರ ಉಳಿಸಬೇಕು. ಹಸಿದವರಿಗೆ ಹಂಚಬೇಕು. ಇದನ್ನು ಬಿಟ್ಟು, ಹೇಳಿದ್ದನ್ನೂ ಕೇಳಿಸಿಕೊಳ್ಳದೇ ಆಹಾರವನ್ನು ವ್ಯರ್ಥವಾಗಿ 'ಪೋಲು' ಮಾಡುವ ಮಡದಿಯನ್ನು ಬಿಟ್ಟುಬಿಡಬೇಕು.

ವಿವಾದಶೀಲಾಮ್– ಎಂದರೆ ಜಗಳ ಕಾಯುವವಳು. ಕುಳಿತರೂ ಸರಿಯಿಲ್ಲ, ನಿಂತರೂ ಸರಿಯಿಲ್ಲ, ಓಡಾಡಿದರೂ ಸರಿಯಲ್ಲ ಎಂದು ನಿತ್ಯ ನಿರಂತರ ಜಗಳ ಮಾಡುವವಳನ್ನು ಬಿಡುವುದೇ ಒಳ್ಳೆಯದು. ಸ್ವಯಮೇವತಸ್ಕರಮ್– ಕದಿಯುವ ಸ್ವಭಾವವುಳ್ಳವಳು. ಕಳ್ಳತನವೇ ಮಹಾಪಾಪ. ತಾನೇ ಯಜಮಾನಿಯಾದ, ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ, ಮನೆ ಮಂದಿಗೆ ಸನ್ನಡತೆಯನ್ನು ಬೋಧಿಸುವ ಅವಳೇ ಮಹಾಕಳ್ಳಿಯಾದರೆ, ಮನೆಯ ವಸ್ತುವನ್ನೇ ಮಾರಾಟ ಮಾಡುವ ಮಾನಸಿಕ ಸ್ಥಿತಿಯವಳಾದರೆ ಬಿಟ್ಟುಬಿಡಬೇಕು.

ಆಕ್ರೋಶಬೀಜಾಮ್ – ಆಕ್ರೋಶ ಸ್ವಭಾವದವಳು ಎಂದರ್ಥ. ಎಲ್ಲರ ಅಂತರಂಗದಲ್ಲೂ ಕೋಪದ ಬೀಜ ಬಿತ್ತುವ ಇವಳಿಂದ ಸಂಸಾರವೇ ಹಾಳಾಗುವಂತಿದ್ದರೆ ಬಿಟ್ಟುಬಿಡುವುದೇ ವಾಸಿ.

ಬೇರೆಯವರ ಮನೆ ಸುತ್ತುವವಳು ಬಹುಬೇಗನೆ ನಿಂದೆಗೆ ಕಾರಣಳಾಗುತ್ತಾಳೆ. ಕರಿಡಕಂಡವರ ಮನೆಯನ್ನು ಸುತ್ತುವುದೇ ಕೆಲಸ ಮಾಡಿಕೊಂಡರೆ ಲೋಕನಿಂದೆಗೆ ಪಾತ್ರಳಾಗಬೇಕು. ಇಂಥವಳಿಂದ ಮನೆತನಕ್ಕೆ ಕೆಟ್ಟ ಹೆಸರು. ಆದ್ದರಿಂದ ಈ ಹಿಂದೆ ಹೇಳಿದ ಗುಣಸ್ವಭಾವವುಳ್ಳವರನ್ನು ಇಟ್ಟುಕೊಳ್ಳುವುದಕ್ಕಿಂತಲೂ ಬಿಡುವುದೇ ಲೇಸು.

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!


ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

raghavaankana@gmail.com

ಜಾಗತೀಕರಣದ ಒಂದು ದೊಡ್ಡ ಅಡ್ಡಪರಿಣಾಮವೆಂದರೆ ಕೊಳ್ಳುಬಾಕ ಸಂಸ್ಕೃತಿಗೆ ಇಡೀ ಜಗತ್ತೇ ಸೇರಿಕೊಂಡದ್ದು. 1970ಕ್ಕೂ ಮೊದಲು ಜಾಗತಿಕ ಕಂಪನಿಗಳು ಎಂದರೆ ಕೆಲವು ಪೆಟ್ರೋಲಿಯಂ ಕಂಪನಿಗಳು, ಒಂದೆರಡು ಬ್ಯಾಂಕುಗಳು, ಕೆಲವಷ್ಟು ಗ್ರಾಹಕ ಬ್ರಾಂಡುಗಳು, ಅಲ್ಲೊಂದು ಇಲ್ಲೊಂದು ತಂತ್ರಜ್ಞಾನ ಕೇಂದ್ರಿತ ಕಂಪನಿಗಳಷ್ಟೇ ಇದ್ದವು. ಎಪ್ಪತ್ತರ ದಶಕಕ್ಕೂ ಮುನ್ನ ದಿನಕ್ಕೆ ಒಂದು ಅಥವಾ ಎರಡು ಬ್ರಾಂಡುಗಳ ಹೆಸರು ಕೇಳುತ್ತಿದ್ದ ಒಬ್ಬ ಸಾಮಾನ್ಯ ಗ್ರಾಹಕ ಇವತ್ತು ಒಬ್ಬ ಕೊಳ್ಳುಗನಾಗಿ ದಿನಕ್ಕೆ ಐನೂರಕ್ಕೂ ಬ್ರಾಂಡುಗಳ ಹೆಸರುಗಳನ್ನು ನೋಡುತ್ತಾನೆ, ನೂರಕ್ಕೂ ಹೆಚ್ಚು ಬ್ರಾಂಡುಗಳ ಬಳಕೆಯನ್ನೂ ಮಾಡುತ್ತಾನೆ.

ಆದರೆ ಈ ಪ್ರಸಿದ್ಧ ಬ್ರಾಂಡುಗಳ ಹೆಸರುಗಳು ಎಲ್ಲಿಂದ ಬಂದವು ಎಂದು ಯೋಚಿಸಿದ್ದೀರಾ? ಬ್ರಾಂಡುಗಳ ಹೆಸರನ್ನು ಜನಪ್ರಿಯಗೊಳಿಸಲಿಕ್ಕೆ ಕಂಪನಿಗಳು ಕೋಟ್ಯಂತರ ಡಾಲರ್ ಸುರಿಯುತ್ತವೆ. ಜನರಿಗೆ ಹತ್ತಿರವಾಗಿರಬೇಕು, ಅವರ ನೆನಪಿಗೆ ತಟ್ಟನೇ ಬರಬೇಕು, ಹೆಸರು ತೀರ ಉದ್ದವಾಗಿರಬಾರದು ಅಂತೆಲ್ಲಾ ನಿಯಮವಾಳಿಗಳನ್ನು ಪಾಲಿಸಿ ಹೆಸರನ್ನು ಆರಿಸುತ್ತವೆ. ಆದರೆ ಎಷ್ಟೋ ಸಲ ಈ ಹೆಸರುಗಳು ನಾವು ಊಹಿಸಿಯೇ ಇರದ ಹಿನ್ನೆಲೆಯಿಂದ ಬಂದಿರುತ್ತವೆ. ಇವುಗಳಲ್ಲಿ ಹಲವು ಹೆಸರುಗಳು ಸರಳವಾಗಿ ಕಂಡುಬಂದರೂ, ಅವುಗಳ ಮೂಲ ಯಾವುದೋ ಪುರಾಣದ ಕಥೆಗಳು, ಆಕಸ್ಮಿಕ ಆವಿಷ್ಕಾರಗಳು, ಕುಟುಂಬದ ಹೆಸರುಗಳು, ಸ್ಥಾಪಕರ ಹೆಸರುಗಳು ಅಥವಾ ಅಸ್ತಿತ್ವದಲ್ಲೇ ಇರದ ಯಾವುದೋ ಕಲ್ಪಿತ ಪದಗಳಿಂದ ಬಂದಿವೆ. ಕೆಲ ಜನಪ್ರಿಯ ಕಂಪನಿಗಳ ಹೆಸರುಗಳ ಹಿಂದಿನ ಆಕರ್ಷಕ ಕಥೆಗಳು ಹಾಗೂ ಆಶ್ಚರ್ಯಕರ ವಿವರಗಳು ನಿಮಗಾಗಿ ಇಲ್ಲಿವೆ.



ಆಪಲ್‌ಗೆ ಆ ಹೆಸರು ಬರಲು ಹಲವು ಕಥೆಗಳಿದ್ದರೂ, ಕಂಪನಿಯನ್ನು ಸ್ಥಾಪಿಸುವ ಕೆಲವೇ ದಿನಗಳ ಮುನ್ನ ಸ್ಟೀವ್ ಜಾಬ್ಸ್ ಸೇಬಿನ ತೋಟವೊಂದಕ್ಕೆ ಭೇಟಿ ನೀಡಿದ್ದೇ ಮುಖ್ಯ ಕಾರಣ ಎಂದು ಸ್ವತಃ ಜಾಬ್ಸ್ ಹೇಳಿಕೊಂಡಿದ್ದಾನೆ. ಕಂಪ್ಯೂಟರ್ ಉದ್ಯಮದಲ್ಲಿ ಸಾಮಾನ್ಯವಾಗಿ ಕಂಡುಬರುವ ತಾಂತ್ರಿಕ ಹೆಸರುಗಳಿಗಿಂತ ಬದಲಾಗಿ ಆಪಲ್ ಎಂಬ ಸ್ನೇಹಪರ, ಸುಲಭವಾಗಿ ಸಂಪರ್ಕಿಸಬಹುದಾದ ಮತ್ತು ಕಡಿಮೆ ಗಂಭೀರವಾದ ಹೆಸರನ್ನೇ ನೋಂದಾಯಿಸಿಕೊಂಡ. ಮಾತ್ರವಲ್ಲ, ಈ ಹೆಸರಿನಿಂದಾಗಿ ಟೆಲಿಫೋನ್ ಡೈರೆಕ್ಟರಿಯಲ್ಲಿ, ಅಂದಿನ ಜನಪ್ರಿಯ ಕಂಪನಿಯಾಗಿದ್ದ 'ಅಟಾರಿ'ಗಿಂತಾ 'ಆಪಲ್' ಮೊದಲು ಮುಂದೆ ಕಂಡುಬಂತು. ಇದು ಸ್ಟೀವ್ ಜಾಬ್ ಹೊಡೆದ ಒಂದು ಸಣ್ಣ ಸ್ಪರ್ಧಾತ್ಮಕ ಬೋನಸ್ ಕೂಡಾ ಹೌದು.

ಮೂಲತಃ ತಮ್ಮ ಸಂಶೋಧನಾ ಪ್ರಬಂಧದ ಹೆಸರಾಗಿದ್ದ ಬ್ಯಾಕ್‌ರಬ್ ಎಂಬ ಹೆಸರನ್ನೇ ಸ್ಥಾಪಕರಾದ ಲ್ಯಾರಿ ಪೇಜ್ ಮತ್ತು ಸೆರ್ಗಿ ಬ್ರಿನ್ ತಮ್ಮ ಕಂಪನಿಯ ಹೆಸರಾಗಿ ಅಂತಿಮಗೊಳಿಸಿದ್ದರೂ, ಅಷ್ಟೇನೂ ಗಾಹಕಸ್ನೇಹಿಯಲ್ಲವೆಂಬ ಕಾರಣಕ್ಕೆ ಒಂದರ ನಂತರ ನೂರು ಸೊನ್ನೆಗಳನ್ನು ಬರೆದರೆ ಸಿಗುವ ಸಂಖ್ಯೆಯಾದ 'ಗೂಗೋಲ್' (Googol) ಎಂದು ಮರುನಾಮಕರಣ ಮಾಡಿದರು. ಬಳಕೆದಾರರು ಕೇಳಿದ ಪ್ರಶ್ನೆಗೆ ತಮ್ಮ ಸರ್ಚ್ ಎಂಜಿನ್ ಅಷ್ಟೊಂದು ಉತ್ತರಗಳನ್ನು ಕೊಡಬಹುದಾದ ಕಾರಣಕ್ಕೆ ಗೂಗೋಲ್ ಎಂಬುದೇ ಸರಿಯಾದ ಹೆಸರು ಎಂದು ಅವರ ಆಲೋಚನೆಯಾಗಿತ್ತು. ತಮಾಷೆಯೆಂದರೆ, ಕಂಪನಿಯ ಎಕ್ಸಿಕ್ಯೂಟಿವ್‌ಗಳೆಲ್ಲಾ ಚರ್ಚಿಸಿ ಹೆಸರನ್ನು ಅಂತಿಮಗೊಳಿಸುವ ಸಮಯದಲ್ಲಿ, ನೋಟ್ಸ್ ಬರೆದುಕೊಂಡವರಿಗೆ ಗೂಗೋಲ್ ಎಂಬ ಪದವೇ ಗೊತ್ತಿಲ್ಲದ ಕಾರಣಕ್ಕೋ ಅಥವಾ ಮೀಟಿಂಗಿನ ಮಂಕುಕವಿದಿತ್ತೋ ಗೊತ್ತಿಲ್ಲ, ಬರೆದ ಕಾಗುಣಿತ ತಪ್ಪಾಗಿ ಗೂಗಲ್ ಎಂದಾಯ್ತು. ಇದೇ ಚೆನ್ನಾಗಿದೆ ಎಂದುಕೊಂಡು ಗೂಗಲ್ ಅನ್ನೇ ಉಳಿಸಿಕೊಂಡರು.

ಮೈಕ್ರೋಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಎಂಬೆರಡು ಪದಗಳ ಸಂಕ್ಷಿಪ್ತರೂಪವಾಗಿ ಬಿಲ್ ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋಸಾಫ್ಟ್ ಎಂದು ಕರೆದ. ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋ-ಸಾಫ್ಟ್ ಎಂದು ರಿಜಿಸ್ಟರ್ ಮಾಡಿಕೊಳ್ಳಲು ಮುಂದಾಗಿದ್ದರೂ, ಹೈಫನ್ ಚಿಹ್ನೆಯನ್ನು ವೆಬ್ ವಿಳಾಸದಲ್ಲಿ ಸೇರಿಸಲು ಇಂಟರ್ನೆಟ್ ಆಗಿನ್ನೂ ತಯಾರಿರಲಿಲ್ಲವಾದ್ದರಿಂದ, ಹೈಫನ್ ಅನ್ನು ಕೈಬಿಟ್ಟು ಮೈಕ್ರೋಸಾಫ್ಟ್ ಎಂಬ ಹೆಸರೇ ಅಂತಿಮಗೊಳಿಸಲಾಯ್ತು. ಇಂಟೆಲ್ ಎಂಬುದು 'ಇಂಟಿಗ್ರೇಟೆಡ್ ಎಲೆಕ್ಟ್ರಾನಿಕ್ಸ್‌ನ ಹ್ರಸ್ವರೂಪ. ಸಂಸ್ಥಾಪಕರಾದ ಗೋರ್ಡನ್ ಮೂರ್ ಮತ್ತು ರಾಬರ್ಟ್ ನಾಯ್ಸ್ ತಮ್ಮ ಕಂಪನಿಯನ್ನು 'ಮೂರ್ ನಾಯ್ಸ್' ಎಂದೇ ಕರೆಯಲು ಬಯಸಿದ್ದರು. ಆದರೆ ಆ ಹೆಸರನ್ನು ಅದಾಗಲೇ ಮತ್ತೊಂದು ಹೋಟೆಲ್ ಕಂಪನಿಯವರು ರಿಜಿಸ್ಟರ್ ಮಾಡಿಕೊಂಡಿದ್ದರಿಂದ ಇಂಟೆಲ್ ಎಂಬ ಹೆಸರೇ ಅಂತಿಮವಾಯ್ತು. ಅಡೋಬಿಯ ಸಹಸಂಸ್ಥಾಪಕ ಜಾನ್ ವಾರ್ನಾಕ್, ಕ್ಯಾಲಿಫೋರ್ನಿಯಾದ ಸಾಂಟಾಕ್ಲಾರಾ ನಗರದಲ್ಲಿದ್ದ ತನ್ನ ಮನೆಯ ಹಿಂದೆ ಹರಿಯುವ ಅಡೋಬಿ ಕ್ರೀಕ್‌ನ ಹೆಸರನ್ನೇ ತನ್ನ ಕಂಪನಿಗಿಟ್ಟ.

ಟೊಯೋಡಾ ಕುಟುಂಬ ಪ್ರಾರಂಭಿಸಿದ ತಮ್ಮ ವಾಹನ ತಯಾರಿಕಾ ಕಂಪನಿಗೆ ತಮ್ಮದೇ ಹೆಸರಿಟ್ಟುಕೊಳ್ಳೋಣ ಎಂಬ ಮನಸ್ಸಿತ್ತು. ಆದರೆ ಜಪಾನೀಸ್ ಭಾಷೆಯಲ್ಲಿ ಬರೆಯುವಾಗ ಟೊಯೋಡಾ ಎಂದು ಬರೆಯಲು ಹತ್ತು ಗೆರೆಗಳೂ, ಟೊಯೋಟಾ ಎಂದು ಬರೆಯಲು ಎಂಟು ಗೆರೆಗಳೂ ಬೇಕಾಗುತ್ತವೆ. ಜಪಾನೀಸ್ ಸಂಸ್ಕೃತಿಯಲ್ಲಿ ಎಂಟು ಸಮೃದ್ಧಿ ಮತ್ತು ಅದೃಷ್ಟದೊಂದಿಗೆ ಸಂಬಂಧಿಸಿದ ಸಂಖ್ಯೆಯಾದ್ದರಿಂದ ಟೊಯೋಟಾ ಹೆಸರಿಗೆ ಪ್ರಾಶಸ್ತ್ಯ ಸಿಕ್ಕಿತು! ಜರ್ಮನ್ ಕಾರು ಕಂಪನಿ 'ಆಡಿ'ಯ ನಿರ್ಮಾತೃ ಆಗಸ್ಟ್ ಹಾರ್ಚ್ ತನ್ನ ಮೊದಲ ಕಂಪನಿಗೆ ತನ್ನ ಹಾರ್ಚ್ ಉಪನಾಮವನ್ನು ಬಳಸಿಯಾಗಿತ್ತು. 'ಹಾರ್ಚ್' ಎಂದರೆ ಜರ್ಮನ್ ಭಾಷೆಯಲ್ಲಿ 'ಕೇಳಿರಿ' ಎಂದಾಗಿರುವುದರಿಂದ, ಸ್ನೇಹಿತರೊಬ್ಬರು ಅದೇ ಪದದ ಲ್ಯಾಟಿನ್ ಅನುವಾದವನ್ನು ಬಳಸಲು ಸೂಚಿಸಿದರು. 'ಆಡಿ' ಎಂದರೆ ಲ್ಯಾಟಿನ್ನಿನಲ್ಲಿ 'ಕೇಳಿರಿ' ಎಂದಾದ್ದರಿಂದ, ಸಂಸ್ಥಾಪಕ ತನ್ನದೇ ಹೆಸರನ್ನು ಬೇರೆ ಬೇರೆ ರೀತಿಯಲ್ಲಿ ಎರಡೂ ಕಂಪನಿಗಳಿಗಿಟ್ಟ.

ಇದೇ ಲ್ಯಾಟಿನ್ ಭಾಷೆಯ ಸಂಬಂಧಿತ ಇನ್ನೊಂದು ಕಥೆ ವೋಲ್ವೋ ಕಂಪನಿಯದ್ದು ಕೂಡ. ಲ್ಯಾಟಿನ್ನಿನಲ್ಲಿ ವೋಲ್ವೋ ಎಂದರೆ ನಾನು ಉರುಳುತ್ತೇನೆ. ಸ್ವೀಡನ್ನಿನ ಬಾಲ್-ಬೇರಿಂಗ್ ತಯಾರಕ ಕಂಪನಿಯಾಗಿದ್ದ ಎಸ್.ಕೆ.ಎಫ್, ವೋಲ್ವೋ ಎಂಬ ಹೆಸರನ್ನು ಅದಾಗಲೇ ನೋಂದಾಯಿಸಿಕೊಂಡಿತ್ತು. ಇಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾರ್ ಗೇಬ್ರಿಯಲ್ಸನ್ ಮತ್ತು ಗುಸ್ತಾಫ್ ಲಾರ್ಸನ್, ತಮ್ಮ ಹೊಸ ಕಂಪನಿಯ ಹೆಸರಾಗಿ ವೋಲ್ವೋ ಎಂಬ ಬ್ರಾಂಡ್ ಅನ್ನು ಬಳಸಲಿಕ್ಕೆ ಎಸ್.ಕೆ.ಎಫ್‌ನ ಆಡಳಿತ ಮಂಡಳಿಯನ್ನು ಒಪ್ಪಿಸಿದ್ದೂ ಅಲ್ಲದೇ, ತಮ್ಮ ಕಂಪನಿಯಲ್ಲಿ ಹಣ ಹೂಡುವಂತೆಯೂ ಒಪ್ಪಿಸುವಲ್ಲಿ ಯಶಸ್ವಿಯಾದರು. 1927ರಲ್ಲಿ ಸ್ಥಾಪನೆಯಾದ ವರ್ಷದಿಂದ, 1935ರಲ್ಲಿ ಸ್ವತಂತ್ರವಾಗುವವರೆಗೆ ವೋಲ್ವೋ ಆರ್ಥಿಕವಾಗಿ ಎಸ್.ಕೆ.ಎಫನ ಹಿಡಿತದಲ್ಲೇ ಇತ್ತು.

'ನಿಪ್ಪಾನ್ ಸಾಂಗ್ಯೋ' ಅಂದರೆ 'ಜಪಾನ್ ಇಂಡಸ್ಟ್ರೀಸ್' ಎಂಬ ಪದದ ಸಂಕ್ಷಿಪ್ತ ರೂಪವಾಗಿ ಹುಟ್ಟಿಕೊಂಡಿದ್ದು ನಿಸ್ಸಾನ್. ಜರ್ಮನಿಯ ಪ್ರಭಾವಿ ಆಟೋಮೊಬೈಲ್ ಡೀಲರ್ ಎಮಿಲ್ ಜೆಲ್ಲಿನೆಕ್‌ನ ಮಗಳ ಹೆಸರು ಮರ್ಸಿಡಿಸ್ ಜೆಲ್ಲಿನೆಕ್. ಗೊಟ್ಲಿಯೇಬ್ ಡೈಮ್ಲರನ ಕಂಪನಿಯ ಪಾಲುದಾರರಲ್ಲೊಬ್ಬನಾದ ಎಮಿಲ್, ಡೈಮ್ಲರನ ಪ್ರತಿಭಾವಂತ ಎಂಜಿನಿಯರ್ ವಿಲ್ಹೆಲ್ಮ್ ಮೇಬಾಕ್ ನೇತೃತ್ವದಲ್ಲಿ ಹೊಸದೊಂದು ಕಾರು ವಿನ್ಯಾಸವಾಗಬೇಕೆಂದು ಹಣ ಹೂಡಿದವ. ಮಾತ್ರವಲ್ಲ, ತನ್ನ ಮಗಳ ಹೆಸರನ್ನೇ ಆ ಕಾರಿಗೆ ಇಡಬೇಕೆಂದು ಹಠ ಹಿಡಿದವ. ಇಲ್ಲಿ ಎರಡು ತಮಾಷೆಯ ವಿಷಯಗಳನ್ನು ಕೇಳಿ. ಮೊದಲನೆಯದು, ಮುಂದೆ ಮರ್ಸಿಡಿಸ್ ಕಾರುಗಳ ಜನಪ್ರಿಯವಾದಾಗ ಎಮಿಲ್ ತನ್ನ ಹೆಸರನ್ನೇ ಎಮಿಲ್ ಜೆಲ್ಲಿನೆಕ್-ಮರ್ಸಿಡೆಸ್ ಎಂದು ವಿಧ್ಯುಕ್ತವಾಗಿ ಬದಲಾಯಿಸಿಕೊಂಡ. ಅಪ್ಪನೇ ಮಗಳ ಹೆಸರನ್ನು ಎರವಲು ಪಡೆದದ್ದು ಇಡೀ ಜಗತ್ತಿನಲ್ಲೇ ಮೊದಲ ಬಾರಿಯಿರಬೇಕು ಎಂದು ಹೇಳಿದ್ದನಂತೆ. ಎರಡು, ತನ್ನ ಹೆಸರು ಇಷ್ಟೆಲ್ಲಾ ಪ್ರಸಿದ್ಧ ಬ್ರಾಂಡ್ ಆದರೂ ಮರ್ಸಿಡಿಸ್ ಜೆಲ್ಲಿನೆಕ್‌ಗೆ ಕಾರುಗಳ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಮಾತ್ರವಲ್ಲ, ತನ್ನಿಡೀ ಜೀವನದಲ್ಲಿ ಆಕೆ ಒಂದೇ ಒಂದು ಕಾರನ್ನೂ ಕೊಳ್ಳಲಿಲ್ಲ.

ಕೋಕಾ ಎಲೆಗಳು ಮತ್ತು ಕೋಲಾ ಬೀಜಗಳನ್ನು ಮೂಲ ಫಾರ್ಮ್ಯುಲಾದಲ್ಲಿ ಬಳಸಿದ್ದರಿಂದ, ಆ ಪಾನಿಯಕ್ಕೆ ಕೋಕಾ-ಕೋಲಾ ಎಂಬ ಹೆಸರು ಬಂದಿದ್ದು. ಇವತ್ತು ನಾವು ಕುಡಿಯುವ ಕೊಕಾಕೋಲಾದಲ್ಲಿ ಕೊಕೈನ್‌ನ ಮೂಲ ಪದಾರ್ಥವಾದ ಕೋಕಾವೂ ಇಲ್ಲ, ಕೋಲಾ ಬೀಜಗಳೂ ಇಲ್ಲ. ಆದರೆ ಒಂದು ಶತಮಾನಕ್ಕೂ ಹೆಚ್ಚು ಕಾಲ ಬದಲಾಗದೆ ಉಳಿದ ಈ ಕಂಪನಿಯ ವಿಶಿಷ್ಟ ಲೋಗೋ, ಜಗತ್ತಿನ ಅತ್ಯಂತ ಬೆಲೆಬಾಳುವ ಬ್ರಾಂಡುಗಳಲ್ಲೊಂದು ಹಾಗೂ ಅತ್ಯಂತ ಹೆಚ್ಚು ಹಾಗೂ ಸುಲಭವಾಗಿ ಗುರುತಿಸಲ್ಪಡುವ ಲೋಗೋ. 1893ರಲ್ಲಿ ಅಜೀರ್ಣವನ್ನು ಹೋಗಲಾಡಿಸಲು ಹೆಚ್ಚು ಸಹಾಯ ಮಾಡುತ್ತಿದ್ದ Brad's Drink ಎಂದು ಕರೆಯಲ್ಪಡುತ್ತಿದ್ದ ಪಾನೀಯವೊಂದು ಅಮೇರಿಕಾದ ಫಾರ್ಮಸಿಗಳಲ್ಲಿ ಮಾರಾಟವಾಗುತ್ತಿತ್ತು. ಅಜೀರ್ಣಕ್ಕೆ ಹಳೆಯ ಶೈಲಿಯ ವೈದ್ಯಕೀಯ ಪದವೆಂದರೆ 'ಡಿಸ್ಪೆಪ್ಸಿಯಾ'. ಡಿಸ್ಪೆಪ್ಸಿಯಾಕ್ಕೆ ಸಹಾಯ ಮಾಡುತ್ತಿದ್ದ ಈ ಪಾನೀಯವನ್ನು ಮುಂದೆ ಜನಪ್ರಿಯವಾದ ಬಳಿಕ 'ಪೆಪ್ಸಿ' ಎಂದು ಬದಲಾಯಿಸಿದ್ದು ಕಂಪನಿಯ ಮಾಲೀಕ ಕೇಲಬ್ ಬ್ರಾಡ್-ಹಾಮ್.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಸ್ಟಾರ್‌ಬಕ್ಸ್‌ನ ಹೆಸರು ಮೊಬಿ-ಡಿಕ್ ಕಾದಂಬರಿಯಲ್ಲಿ ಬರುವ ಹಡಗೊಂದರ ಹೆಸರಾದ 'ಪೆಕ್ವಾಡ್' ಎಂದಾಗಬೇಕಿತ್ತು. ಆದರೆ ಸಂಸ್ಥಾಪಕರು ಕೊನೆಗಳಿಗೆಯಲ್ಲಿ ಕಂಪನಿಯ ಹೆಸರನ್ನು ಮೋಬಿಯ ಸ್ನೇಹಿತನಾದ ಸ್ಟಾರ್‌ಬಕ್‌ನ ಹೆಸರಿಗೆ ಬದಲಾಯಿಸಿದರು. ಕಾಫಿಗೆ ಯಾವುದೇ ರೀತಿಯ ಸಂಬಂಧವಿಲ್ಲದ ಸ್ಟಾರ್‌ಬಕ್ ಸ್ಥಾಪಕರ ಓದಿನ ಹುಚ್ಚಿನಿಂದಾಗಿ ಕೆಫೆಯೊಂದರ ಹೆಸರಾಗಿ ಉಳಿದ. ಡ್ಯಾನಿಶ್ ಭಾಷೆಯ ಹೆಸರಿನಂತೆ ಕಂಡರೂ ಹಾಗನ್-ಡಾಜ್ಸ್ ಎಂಬುದಕ್ಕೆ ಯಾವ ಅರ್ಥವೂ ಇಲ್ಲ. ಇದೊಂದು ಸಂಪೂರ್ಣ ಅಮೇರಿಕನ್ ಕಂಪನಿ. ಇದರ ಮೂಲಮಾಲೀಕರು ಯುರೋಪಿಯನ್ ಕರಕುಶಲತೆ ಮತ್ತು ಗುಣಮಟ್ಟವನ್ನು ಗ್ರಾಹಕರ ಮನಸ್ಸಿನಲ್ಲಿ ಮೂಡಿಸಲು ಕಾಲ್ಪನಿಕವಾದ ಪದವೊಂದನ್ನು ಕಂಡುಹಿಡಿದದ್ದಷ್ಟೇ.

ಇನ್ನೂ ಕೆಲವು ಕುತೂಹಲಕಾರಿ ಕಂಪನಿಗಳ ಮಾಹಿತಿಗಳು ಮುಂದಿನವಾರಕ್ಕೆ. ಬೇರೆ ಯಾವುದಾದರೂ ಕಂಪನಿಗಳ ಹೆಸರಿನ ಮೂಲ ಬೇಕಿದ್ದಲ್ಲಿ ಮಿಂಚಂಚೆಯ ಮೂಲಕ ಸೂಚಿಸಿ.

ಟ್ರಂಪ್ ಮತ್ತು ಔರಂಗಜೇಬ್ ನಡುವಿನ ಸಾಮ್ಯತೆಗಳು

▸ **ಉತ್ಪಲ್ ಕುಮಾರ್**

ಔರಂಗಜೇಬ್, ಡೊನಾಲ್ಡ್ ಟ್ರಂಪ್ ಮಧ್ಯೆ ಸಾಕಷ್ಟು ಸಾಮ್ಯತೆಗಳಿವೆ. ಔರಂಗಜೇಬ್ ತನ್ನ ಆಡಳಿತದಲ್ಲಿ ಯಾವೆಲ್ಲ ತಪ್ಪುಗಳನ್ನು ಎಸಗಿದ್ದನೋ ಅದನ್ನೇ ಟ್ರಂಪ್ ಕೂಡಾ ಎಸಗುತ್ತಿದ್ದಾರೆ.

ಡೊನಾಲ್ಡ್ ಟ್ರಂಪ್ ಮತ್ತು ಮೊಘಲ್ ಅರಸ ಔರಂಗಜೇಬ್ ಮಧ್ಯೆ ಹಲವು ವೈರುಧ್ಯಗಳಿವೆ. ಟ್ರಂಪ್ ಧಾರ್ಮಿಕ ವ್ಯಕ್ತಿಯೇನಲ್ಲ. ಔರಂಗಜೇಬ್ ಧರ್ಮಕ್ಕಾಗಿ ಕೊಲ್ಲಲೂ, ಸಾಯಲೂ ತಯಾರಿದ್ದ ವ್ಯಕ್ತಿ. ದೇಶದ ಸಿರಿವಂತ ಸಾಮ್ರಾಜ್ಯದ ಅರಸನಾಗಿದ್ದರೂ ತನ್ನ ವಿರಾಮ ಕಾಲದಲ್ಲಿ ಔರಂಗಜೇಬ್ ಪ್ರಾರ್ಥನೆಯ ಟೋಪಿ ಹೊಲಿಯುವ ಮತ್ತು ಕುರಾನಿನ ಪ್ರತಿ ತಯಾರಿಸುವ ಕೆಲಸದಲ್ಲಿ ತೊಡಗಿರುತ್ತಿದ್ದ. ಆದರೆ ಟ್ರಂಪ್ ಐಷಾರಾಮಿ ಜೀವನ ನಡೆಸುತ್ತಿರುವವರು.



ಹಾಗಿದ್ದರೂ ಇವರಿಬ್ಬರ ಮಧ್ಯೆ ಕೆಲವು ಸಾಮ್ಯತೆಗಳೂ ಇವೆ. ಅದು ರಾಜಕೀಯ ವ್ಯವಹಾರ ನಡೆಸುತ್ತಿರುವುದರಲ್ಲಿ ಕಂಡು ಬರುವ ಸಾಮ್ಯತೆ. ಔರಂಗಜೇಬ್ ತನ್ನ ಕಾಲದ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯ ಆಳುತ್ತಿದ್ದ. ಟ್ರಂಪ್ ಶಕ್ತಿಶಾಲಿ ರಾಷ್ಟ್ರದ ಆಡಳಿತಗಾರರಾಗಿ ಚುನಾಯಿತರಾಗಿದ್ದಾರೆ. ಇವರಿಬ್ಬರೂ ತಮ್ಮ ಹಿಂದಿನ ಆಡಳಿತಗಾರರು ಮೃದು ಸ್ವಭಾವದವರು ಎಂದು ಭಾವಿಸುವವರು ಹಾಗೂ ತಮ್ಮ ಸಾಮ್ರಾಜ್ಯವನ್ನು ಮತ್ತಷ್ಟು ಬಲಿಷ್ಠಗೊಳಿಸುವ ಇರಾದೆ ಹೊಂದಿದವರು.

ತಮ್ಮ ಗುರಿಯನ್ನು ಸಾಧಿಸಲು ಇಬ್ಬರೂ ತಮ್ಮ ಗೆಳೆಯರು, ಮಿತ್ರಕೂಟ ಸದಸ್ಯರು ಮತ್ತು ವಿರೋಧಿಗಳೊಂದಿಗೆ ವರ್ತಿಸಿದ ರೀತಿಯಲ್ಲೂ ಬಹಳಷ್ಟು ಸಾಮ್ಯತೆಯಿದೆ. ಔರಂಗಜೇಬ್ ತನ್ನ ಮಿತ್ರರನ್ನು ತನಗೆ ಬೇಕಾದಂತೆ ಬಳಸಿಕೊಂಡವನಾದರೂ ಅವರ ಮೇಲೆ ವಿಶ್ವಾಸವಿಟ್ಟವನಲ್ಲ. ಆತ ಬಲಿಷ್ಠ ಹಿಂದು ರಾಜರ ವಿರುದ್ಧ ಹೋರಾಡಲು ತನ್ನ ಹಿಂದು ದಂಡನಾಯಕರನ್ನೇ ಕಳಿಸುತ್ತಿದ್ದ. ರಾಜಾ ಜೈಸಿಂಗ್‌ನನ್ನು ಶಿವಾಜಿ ವಿರುದ್ಧ ಹೋರಾಡಲು ಕಳಿಸಿದ. ರಾಜಾರಾಮ ಸಿಂಗ್‌ನನ್ನು ಅಸ್ಸಾಂನ ರಾಜರ ವಿರುದ್ಧ ಹೋರಾಡಲು ಕಳಿಸಿದ. ರಾಜಾ ಜಸ್ವಂತ್‌ಸಿಂಗ್‌ನನ್ನು ಅಫಘಾನಿಸ್ತಾನದ ದುರ್ಗಮ ಪ್ರದೇಶದಲ್ಲಿ ಹೋರಾಡಲು ಕಳಿಸಿದ. ಅಗತ್ಯ ಬಿದ್ದಾಗ ಅವರ ಲಾಭ ಪಡೆದುಕೊಂಡು ಬೇಡವೆಂದಾದಾಗ ಅವರನ್ನು ತ್ಯಜಿಸಿದ.

ಟ್ರಂಪ್ ಕೂಡಾ ಇದೇ ರೀತಿ ವ್ಯವಹರಿಸುತ್ತಿದ್ದಾರೆ. ತಮ್ಮ ನ್ಯಾಟೋ ಮಿತ್ರರನ್ನೇ ಹಳಿಯುತ್ತಿದ್ದಾರೆ. ಹಾಗೂ ಯುರೋಪಿನ ಮಿತ್ರ ರಾಷ್ಟ್ರಗಳ ಮುಖಂಡರನ್ನು ಅವಮಾನ ಮಾಡುತ್ತಿದ್ದಾರೆ. ದೀರ್ಘಾವಧಿ ಸ್ನೇಹಿತರ ವಿರುದ್ಧ ತೆರಿಗೆ, ನಿರ್ಬಂಧದಂತಹ ದಂಡನಾ ಕ್ರಮ ವಿಧಿಸಿ ಬೆದರಿಸುತ್ತಿದ್ದಾರೆ. ಕಳೆದೆರಡು ದಶಕಗಳಲ್ಲಿ ಅಮೆರಿಕದ ಸರಕಾರಗಳೆಲ್ಲವೂ ಭಾರತದೊಂದಿಗೆ ವಿಶ್ವಾಸ ವೃದ್ಧಿಗೆ ಸಾಕಷ್ಟು ಪ್ರಯತ್ನ ನಡೆಸಿ ಸಫಲವಾಗಿದ್ದರೆ, ಟ್ರಂಪ್ ಅದನ್ನು ಕೆಲವೇ ತಿಂಗಳಲ್ಲಿ ನಾಶಪಡಿಸಿದ್ದಾರೆ. ಅಮೆರಿಕವನ್ನು ನಂಬುವಂತಿಲ್ಲ ಎಂಬಂತಹ ಭಾರತದ ಹಳೆಯ ನಂಬಿಕೆಯು ಮತ್ತೆ ಸತ್ಯವೆಂಬಂತೆ ಮಾಡಿದ್ದಾರೆ.

ಸಾಮ್ರಾಜ್ಯಗಳು ಬೆದರಿಕೆ ಮತ್ತು ವಿಶ್ವಾಸವನ್ನು ಸಮಾನವಾಗಿ ಬಿಂಬಿಸಿದಾಗಲಷ್ಟೇ ಅವು ಬದುಕುಳಿಯುತ್ತವೆ. ಔರಂಗಜೇಬ್ 1707ರಲ್ಲಿ ಸಾಯುವಾಗ ಮೊಘಲ್ ಸಾಮ್ರಾಜ್ಯವು ಅತ್ಯಂತ ವಿಸ್ತಾರವಾಗಿತ್ತು. ಆದರೆ ಆ ವೇಳೆಗೆ ಅದಕ್ಕೆ ಅತೀ ಕಡಿಮೆ ಸ್ನೇಹಿತರಿದ್ದರು ಹಾಗೂ ಅತ್ಯಂತ ಹೆಚ್ಚು ವೈರಿಗಳಿದ್ದರು. ಹೇಳಲೇನೋ ಅದು ಅಪರಾಜಿತ ಎಂಬಂತಿತ್ತು. ವಾಸ್ತವದಲ್ಲಿ ಅದು ಶಿಥಿಲವಾಗಿತ್ತು. ಎಲ್ಲರ ವಿರೋಧ ಕಟ್ಟಿಕೊಂಡಿತ್ತು.

ಟ್ರಂಪ್‌ರ ಅಮೆರಿಕ ಕೂಡಾ ಈಗ ಅದೇ ಪರಿಸ್ಥಿತಿಯಲ್ಲಿದೆ. ಅಮೆರಿಕ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿ ಹೊಂದಿದೆ ನಿಜ. ಅದರ ಆರ್ಥಿಕ ಶಕ್ತಿಯೂ ಬಲಿಷ್ಠವಾಗಿದೆ. ತಂತ್ರಜ್ಞಾನದಲ್ಲೂ ಮುಂದಿದೆ. ಆದರೆ ಅದರ ಮಿತ್ರರಾಷ್ಟ್ರಗಳೇ ಈಗ ಅಮೆರಿಕವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಅಮೆರಿಕದ ಪ್ರತೀ ನಡೆಯನ್ನೂ ಶಂಕಿಸುತ್ತಿವೆ. ಅಮೆರಿಕದ ಪ್ರಭುತ್ವ ಕೂಡಾ ಕಳೆಗುಂದುತ್ತಿರುವುದು ಇತ್ತೀಚಿನ ಅಮೆರಿಕ – ಇರಾನ್ ಒಪ್ಪಂದದಿಂದಲೂ ಸಾಬೀತಾಗಿದೆ. ಸಾಮ್ರಾಜ್ಯವೊಂದರ ಅಳಿವು ಮಹಾಪತನದಿಂದಲೇ ಆಗಬೇಕೆಂದಿಲ್ಲ. ವಿಶ್ವಾಸದ ಕೊರತೆಯೇ ಪತನದ ಆರಂಭ.

ಔರಂಗಜೇಬ್ ಮತ್ತು ಟ್ರಂಪ್ ಮಧ್ಯೆ ಮತ್ತೊಂದು ಸಾಮ್ಯತೆಯಿದೆ. ತನ್ನ ಹಿಂದಿನ ಅರಸರ ಕಾಲದಲ್ಲಿ ಮೊಘಲ್ ಸಾಮ್ರಾಜ್ಯ ತುಂಬಾ ಮೃದುವಾಗಿ ವರ್ತಿಸಿತ್ತು ಎಂದು ಭಾವಿಸಿದ್ದ ಔರಂಗಜೇಬ್ ಎಲ್ಲಾ ದಿಕ್ಕಿನಲ್ಲೂ ಯುದ್ಧ ಆರಂಭಿಸಿದ. ಪ್ರತಿಯೊಬ್ಬ ವಿರೋಧಿಯನ್ನೂ ಮಣಿಸಲು ಯತ್ನಿಸಿದ. ಇದರಿಂದಾಗಿ ಮೊಘಲ್ ಸಾಮ್ರಾಜ್ಯವು ನಿರಂತರವಾಗಿ ಯುದ್ಧದಲ್ಲೇ ತೊಡಗಿರುವಂತಾಯಿತು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ಔರಂಗಜೇಬ್ ವಿವಿಧ ರಾಜ್ಯಗಳ ವಿರುದ್ಧ ನಿರಂತರ ಹೋರಾಟ ನಡೆಸಿದ. ದಕ್ಷಿಣದಲ್ಲಿ ಮರಾಠರ ಹೊಡೆತ ತಾಳಲಾರದೆ ಔರಂಗಜೇಬ್ ದಖ್ಖನ್‌ನಿಂದ ದೂರ ಸರಿದ. 25 ವರ್ಷಗಳ ಕಾಲ ಗೆಲುವಿನ ಹಂಬಲದಿಂದ ಯುದ್ಧಗಳನ್ನು ನಡೆಸಿದ ಔರಂಗಜೇಬ್ ತಾನು ಸಾಯುವ ವೇಳೆಗೆ ತನ್ನ ಸಾಮ್ರಾಜ್ಯಕ್ಕೆ ಸ್ಥಿರತೆಯನ್ನು ನೀಡಲು ವಿಫಲನಾದ.

ಟ್ರಂಪ್ ಎಲ್ಲಾ ಯುದ್ಧಗಳನ್ನು ಕೊನೆಗೊಳಿಸುವ ಮತ್ತು ಅಮೆರಿಕವು ಯುದ್ಧ ಮಾಡದಿರುವ ವಾಗ್ದಾನದೊಂದಿಗೆ ಅಧಿಕಾರಕ್ಕೆ ಬಂದಿದ್ದರು. ಆದರೆ ಅವರ ಅಧ್ಯಕ್ಷತೆಯಲ್ಲಿ ಅಮೆರಿಕವು ಕೆಲವಾರು ಸಂಘರ್ಷಗಳಲ್ಲಿ ಕಾಣುವಂತಾಯಿತು. ಅಸ್ಥಿರತೆಯೂ ಹೆಚ್ಚಿದೆ. ಔರಂಗಜೇಬ್‌ನಂತೆ ಟ್ರಂಪ್ ಕೂಡಾ ತಾನು ಗೆಲ್ಲಬಲ್ಲ ಯುದ್ಧವನ್ನು ಆರಿಸುವ ಬದಲಾಗಿ ಸುದೀರ್ಘ ಎಳೆಯುವ ಯುದ್ಧಗಳಲ್ಲಿ ತೊಡಗುವ ಮೂಲಕ ತಮಗೆ ತಾವೇ ಹಾನಿ ಮಾಡಿಕೊಂಡಿದ್ದಾರೆ.

ಇರಾನ್ –ಅಮೆರಿಕ ಯುದ್ಧವು ಒಂದು ಅಧ್ಯಯನಶೀಲ ವಿಷಯವಾಗಿದೆ. ಇದೀಗ ಸಮರ ಕೊನೆಗೊಳಿಸಿರುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಈ ಅನವಶ್ಯ ಯುದ್ಧ ಕೊನೆಗೊಂಡುದು ಸ್ವಾಗತಾರ್ಹವೇ ಆದರೂ ಅಮೆರಿಕದ ಉದ್ದೇಶ ಮತ್ತು ಶಕ್ತಿಯ ಕುರಿತಂತೆ ಹಲವಾರು ಅಹಿತಕರ ಪ್ರಶ್ನೆಗಳು ಎತ್ತಲ್ಪಡುತ್ತಿವೆ. ಒಪ್ಪಂದದ ಅಂಶಗಳನ್ನು ಗಮನಿಸಿದರೆ ಅಮೆರಿಕದ ಮೇಲೆ ಇರಾನೇ ಮೇಲುಗೈ ಸಾಧಿಸಿರುವಂತೆ ತೋರಿ ಬರುತ್ತಿದೆ.

ಯುದ್ಧ ನಿಲ್ಲಿಸುವ ಮೂಲಕ ಟ್ರಂಪ್ ಅವರು ತಮ್ಮ ದೇಶದಲ್ಲಿ ಉದ್ಭವಿಸಬಹುದಾದ ರಾಜಕೀಯ ಸಮಸ್ಯೆಯನ್ನು ಪರಿಹರಿಸಿರಬಹುದು. ಆದರೆ ಅಂತಾರಾಷ್ಟ್ರೀಯವಾಗಿ ದುಬಾರಿ ಬೆಲೆ ತೆತ್ತಿದ್ದಾರೆ. ಅಮೆರಿಕದ ದೌರ್ಬಲ್ಯ ಜಗತ್ತಿಗೆ ತಿಳಿಯುವಂತಾಗಿದೆ. ಅಮೆರಿಕದ ಮಿತ್ರರಾಷ್ಟ್ರಗಳಿಗೂ ಅಮೆರಿಕದ ಸಖ್ಯ ಪ್ರತಿಕೂಲ ಪರಿಣಾಮ ಉಂಟುಮಾಡಿದೆ. ಇಸ್ರೇಲ್‌ನ ಗುರಿ ಇರಾನ್‌ನ್ನು ದುರ್ಬಲಗೊಳಿಸುವುದಾಗಿತ್ತು. ಆದರೆ ಅಮೆರಿಕದೊಂದಿಗಿನ ಒಪ್ಪಂದದ ಮೂಲಕ ಇರಾನ್ ಹಾಗೇ ಉಳಿದಿರುವುದು ಇಸ್ರೇಲ್‌ಗೆ ಸಹ್ಯವಾಗಿಲ್ಲ. ಅದು ಒಪ್ಪಂದವನ್ನು ಮಾನ್ಯ ಮಾಡುವುದಿಲ್ಲವೆಂದು ಹೇಳುತ್ತಿದೆ. ಕೊಲ್ಲಿಯಲ್ಲಿರುವ ಅಮೆರಿಕದ ಮಿತ್ರರಾಗಿರುವ ಸುನ್ನಿ ರಾಷ್ಟ್ರಗಳಿಗೂ ಇದೀಗ ಅಮೆರಿಕದ ಸ್ನೇಹವು ವರದಾನಕ್ಕಿಂತಲೂ ಹೆಚ್ಚಾಗಿ ಶಾಪವೇ ಆಗಿರುವುದು ಮನದಟ್ಟಾಗಿದೆ.

ಹಾಗಿದ್ದರೆ ಟ್ರಂಪ್ ಸಾಧಿಸಿದ್ದಾದರೂ ಏನು? ಅಮೆರಿಕದ ದೌರ್ಬಲ್ಯವನ್ನು ಎತ್ತಿ ತೋರಿದ್ದಾರೆ. ಇಸ್ರೇಲ್‌ನ ನಿಷ್ಠುರ ಕಟ್ಟಿಕೊಂಡಿದ್ದಾರೆ. ಸುನ್ನಿ ಅರಬ್ ರಾಷ್ಟ್ರಗಳ ಅವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಹಾಗೂ ಇರಾನ್ ಬಲಿಷ್ಠವಾಗಿಯೇ ಉಳಿಯಲು ಬಿಟ್ಟಿದ್ದಾರೆ.

ಇಲ್ಲಿರುವ ಪಾಠ ಅತ್ಯಂತ ಸರಳವಾಗಿದೆ. ಅತ್ಯಂತ ಬಲಿಷ್ಠ ಮತ್ತು ಯಶಸ್ವಿ ಆಡಳಿತಗಾರರು ಯಾರೆಂದರೆ ಹೆಚ್ಚು ಸ್ನೇಹಿತರನ್ನು ಸಂಪಾದಿಸಿ ಕಡಿಮೆ ವಿರೋಧಿಗಳನ್ನು ಹೊಂದಿರುವವರು. ಹಾಗೂ ತನ್ನ ಮಿತ್ರರನ್ನೆಲ್ಲಾ ತನ್ನ ಜತೆಯಲ್ಲಿಯೇ ಇಟ್ಟುಕೊಳ್ಳುವವರು. ಅಕ್ಬರ್ ಇದನ್ನು ಅರಿತುಕೊಂಡು ತನ್ನ ಸಾಮ್ರಾಜ್ಯ ಕಟ್ಟಿಕೊಂಡಿದ್ದ. ಔರಂಗಜೇಬ್ ಇದನ್ನು ಅರಿಯದೆ ಕೆಟ್ಟುಹೋದ. ರೂಸ್‌ವೆಲ್ಟ್ ಇದನ್ನು ಅರಿತುದರಿಂದ ಅಮೆರಿಕನ್ ಸಾಮ್ರಾಜ್ಯ ಬೆಳೆಯಿತು. ಟ್ರಂಪ್‌ಗೆ ಇದು ಅರಿಯದಿರುವುದರಿಂದ ಅಮೆರಿಕದ ಪತನ ಆರಂಭವಾಗಿದೆ.

ಪತ್ರ ಮಿತ್ರ

ಆರೆಸ್ಸೆಸ್ ಟೀಕಾಕಾರರ 'ಭ್ರಮರ ಕೀಟ ನ್ಯಾಯ'

'ಭ್ರಮರಕೀಟನ್ಯಾಯ' ಎಂಬುದು ಸಂಸ್ಕೃತದ ಒಂದು ಉಕ್ತಿ. 'ಭ್ರಮರವು ಕೀಟವೊಂದನ್ನು ತಂದು ತನ್ನ ಗೂಡಿನ ಒಳಗೆ ಇಟ್ಟುಕೊಳ್ಳುತ್ತದೆ. ಭ್ರಮರದ ಭಯದಿಂದ ಆ ಕೀಟವು ಸಹ ಸದಾ ಭ್ರಮರದ ಯೋಚನೆಯನ್ನೇ ಮಾಡಿ ಮಾಡಿ ಕೊನೆಗೆ ಅದು ಭ್ರಮರವೇ ಆಗಿಬಿಡುತ್ತದೆ' ಎಂಬುದು 'ಭ್ರಮರ ಕೀಟ ನ್ಯಾಯ'ದ ವಿವರಣೆ. ನಮ್ಮ ರಾಜ್ಯದ ಗೃಹ ಸಚಿವ ಖರ್ಗೆಯವರು ಪ್ರತಿದಿನ, ಪ್ರತಿಕ್ಷಣ ಕುಳಿತಲ್ಲಿ, ನಿಂತಲ್ಲಿ ಆರೆಸ್ಸೆಸ್ಸನ್ನೇ ಧ್ಯಾನಿಸುತ್ತಾರೆ. ಕೊನೆಗೊಂದು ದಿನ ಅವರೂ 'ಭ್ರಮರ ಕೀಟ ನ್ಯಾಯ'ದಂತೆ ಆರೆಸ್ಸೆಸ್ ಕಾರ್ಯಕರ್ತರಾಗಿ ಬದಲಾಗಬಹುದೇನೋ ಎಂಬ ಅನುಮಾನ ಬಹು ಮಂದಿಯನ್ನು ಕಾಡುತ್ತಿದೆ!

ಆರೆಸ್ಸೆಸ್ ಖರ್ಗೆಯವರಿಗೆ ಏನು ಮಾಡಿದೆ? ಅವರ ಸಂಪತ್ತನ್ನು ದೋಚಿದೆಯೇ? ಅವರ ಕುಟುಂಬಕ್ಕೆ ತೊಂದರೆ ಕೊಟ್ಟಿದೆಯೇ? ಈ ದೇಶಕ್ಕೆ ಹಾನಿ ಎಸಗಿದೆಯೇ? ಶತ್ರು ದೇಶದೊಂದಿಗೆ ಶಾಮಿಲಾಗಿದೆಯೇ? ಯಾರಿಗಾದರೂ ಭಯವನ್ನುಂಟು ಮಾಡಿದೆಯೇ? ಭಯೋತ್ಪಾದನೆ, ಕಳ್ಳ ಸಾಗಾಣಿಕೆ, ಮಾದಕ ದ್ರವ್ಯ ಸರಬರಾಜುಗಳನ್ನು ಮಾಡಿದೆಯೇ? ಹಾಗಿದ್ದರೆ ಅದನ್ನು ಮಟ್ಟ ಹಾಕಲು ಗೃಹ ಸಚಿವರಿಗೆ ಸಾಮರ್ಥ್ಯವಿಲ್ಲವೇ? ಆರೆಸ್ಸೆಸ್‌ನ ಹೆಚ್ಚಿನ ಪೂರ್ಣಾವಧಿ ಕಾರ್ಯಕರ್ತರು ಯಾವುದೇ ಅಪೇಕ್ಷೆ ಇಲ್ಲದೆ ನಿಸ್ವಾರ್ಥ ಬುದ್ಧಿಯಿಂದ, ಸಮರ್ಪಣಾ ಭಾವದಿಂದ ದುಡಿಯುತ್ತಾರೆ. ಸಂಚಾರ ಸಮಯದಲ್ಲಿ ಅವರು ಹಿತೈಷಿಗಳ ಮನೆಗಳಲ್ಲಿ ಉಳಿದುಕೊಳ್ಳುತ್ತಾರೆ. ಅವರು ನೀಡಿದ ಸರಳ ಆಹಾರವನ್ನು ಸೇವಿಸುತ್ತಾರೆ. ಅವರಾರೂ ಪಂಚತಾರಾ (ರೆಸಾರ್ಟ್) ಆತಿಥ್ಯವನ್ನು ಬಯಸಿದವರಲ್ಲ. ಕೆಲವು ವರ್ಷಗಳ ಹಿಂದೆ ಸಂಘದ ಹಿರಿಯ ಕಾರ್ಯಕರ್ತ ಸೀತಾರಾಮ ಕೆದಿಲಾಯ ಎಂಬವರು ಭಾರತ ಪರಿಕ್ರಮಣ ನಡೆಸಿ ಬಂದರು. ಇಡೀ ಭಾರತದಾದ್ಯಂತ ಸಂಚರಿಸಲು ಅವರಿಗೆ ಯಾವುದೇ ತೊಂದರೆಯಾಗಲಿಲ್ಲ. ಭಾರತದಾದ್ಯಂತ ಹರಡಿಕೊಂಡ ಸ್ವಯಂಸೇವಕರು ಮತ್ತು ಹಿತೈಷಿಗಳು ಅವರಿಗೆ ಸಹಕಾರ ನೀಡಿದರು. ನಡಿಗೆಯಲ್ಲೇ ಸಂಚಾರ ಮುಗಿಸಿ ಬಂದ ಅವರಿಗೆ ವಾಹನದ ವೆಚ್ಚದ ಅಗತ್ಯವೇ ಬೀಳಲಿಲ್ಲ. ಇನ್ನು ಸಾಮಾನ್ಯ ಸ್ವಯಂಸೇವಕರು ಶಾಖೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಗುರುದಕ್ಷಿಣೆ ಸಮರ್ಪಿಸುತ್ತಾರೆ. ಆಪತ್ಕಾಲದಲ್ಲಿ ಸಮಾಜ ಸೇವೆಗೂ ಮುಂದಾಗುತ್ತಾರೆ. ಇವೆಲ್ಲ ಅಜ್ಞಾನಾಂಧಕಾರದಲ್ಲಿ ಮುಳುಗಿದ ಕುರುಡರಿಗೆ ಅರ್ಥವಾಗುವುದಿಲ್ಲ. 'ಭ್ರಮರ ಕೀಟ ನ್ಯಾಯ'ದ ಬಗ್ಗೆ ವೇದಾಂತ ಚಿಂತನೆಯೊಂದು ಹೀಗಿದೆ–

ಜೀವನ್ಮುಕ್ತಿಸ್ತು ತದ್ವಿದ್ವಾನ್ ಸರ್ವೋಪಾಧಿಗುಣಾನ್ ತ್ಯಜೇತ್।
ಸಚ್ಚಿದಾನಂದ ಧರ್ಮಸ್ವಾತ್ ಭಜೇತ್ ಭ್ರಮರಕೀಟವತ್॥

ಆತ್ಮ ಜ್ಞಾನದಿಂದ ಮಾಯಾ ಬಂಧನದ ಭಯವನ್ನು ತ್ಯಜಿಸಿದ ಜ್ಞಾನಿಯು ಕೀಟವು ಭ್ರಮರವನ್ನೇ ಧ್ಯಾನಿಸಿ ಭ್ರಮರವಾದಂತೆ ಸಚ್ಚಿದಾನಂದ ಸ್ವರೂಪನೇ ಆಗುತ್ತಾನೆ. ಹಾಗೆಯೇ ಖರ್ಗೆ ಅವರು ಆತ್ಮಜ್ಞಾನವನ್ನು ಹೊಂದಿ ಆರೆಸ್ಸೆಸ್‌ನ ಭಯವನ್ನು ತ್ಯಜಿಸಿ ಸಚ್ಚಿದಾನಂದ ಸ್ವರೂಪರೇ ಆಗಿ ಪ್ರಜಾಹಿತ ಚಿಂತನೆಯನ್ನೇ ಮಾಡುತ್ತಾ ಗೃಹ ಖಾತೆಯನ್ನು ನಿರ್ವಹಿಸಲಿ ಎಂಬುದೇ ನಮ್ಮೆಲ್ಲರ ಕಳಕಳಿಯಾಗಿದೆ.

–ಎನ್. ಸುಬ್ರಹ್ಮಣ್ಯ ಭಟ್, ಮುಡಿಪು

ಯಕ್ಷಪ್ರಶ್ನೆ!

ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಮೈಸೂರು ಮತ್ತು ಬೆಳಗಾವಿಯಲ್ಲಿ ಒಟ್ಟು 14 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿ ರಾಜ್ಯ ಅಬಕಾರಿ ಇಲಾಖೆಯಲ್ಲಿ ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಸರ್ಕಾರಿ ಅಧಿಕಾರಿಗಳು ಅಕ್ರಮವಾಗಿ ಆಸ್ತಿ ಸಂಪಾದಿಸಿರುವ ಆರೋಪಗಳ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದಾರೆ. ಕರ್ನಾಟಕ ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ದೂರಿನ ಆಧಾರದ ಮೇಲೆ ಇಡಿ ಅಧಿಕಾರಿಗಳು ಧಾಳಿ ನಡೆಸಿದ್ದಾರೆ. ವಿವಿಧ ಅಬಕಾರಿ ಪರವಾನಗಿಗಳನ್ನು (ಲೈಸೆನ್ಸ್) ಮಂಜೂರು ಮಾಡುವ ಹಾಗೂ ನವೀಕರಿಸುವ ಪ್ರಕ್ರಿಯೆಯಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಲಂಚ ಸ್ವೀಕರಿಸಿ ವೈಯಕ್ತಿಕ ಲಾಭ ಪಡೆದಿದ್ದಾರೆ ಎಂಬ ಆರೋಪ ಇದೆ.

ಈ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಮತ್ತು ಅವರ ಆಪ್ತರಿಗೆ ಸೇರಿದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ದಾಳಿಯ ವರದಿಯಾಗುತ್ತಿದ್ದಂತೆಯೇ ನಮ್ಮ ರಾಜ್ಯದ ಗೃಹ ಸಚಿವರು ಪ್ರತಿಕ್ರಿಯೆ ನೀಡುತ್ತಾ ಇದೊಂದು ರಾಜಕೀಯ ಪ್ರೇರಿತ ದಾಳಿ. ಇಂತಹ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಕೇಂದ್ರ ತನಿಖಾ ಸಂಸ್ಥೆಗಳಾದ ಇ.ಡಿ, ಐ.ಟಿ, ಹಾಗೂ ಸಿಬಿಐ ಕೇಂದ್ರ ಸರಕಾರದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವ ಮೂಲಕ ಭ್ರಷ್ಟ ಆರೋಪಿಗಳ ಪರವಾಗಿ ಬ್ಯಾಟ್ ಬೀಸಿದ್ದಾರೆ. ರಾಜ್ಯದ ಪರವಾಗಿ ಕೆಲಸ ಮಾಡಬೇಕಾಗಿರುವ ಗೃಹಮಂತ್ರಿಗಳು ಆರೋಪಿಗಳ ಪರವಾಗಿ ಬ್ಯಾಟಿಂಗ್ ಮಾಡಬಹುದೇ?

ಇದು ಯಕ್ಷಪ್ರಶ್ನೆ!

–ಪಿ.ಜೆ.ರಾಘವೇಂದ್ರ, ಮೈಸೂರು

ದಿವ್ಯೌಷಧವೆಂಬ ಮೋಸ

ಔಷಧೀಯ ಗುಣಗಳ ಹೆಸರಿನಲ್ಲಿ ವಿಟಮಿನ್, ಖನಿಜಾಂಶಗಳು, ಮೆಲಟೋನಿನ್, ಒಮೆಗಾ-3 ಫಿಶ್ ಆಯಿಲ್, ಹಾರ್ಮೋನ್ ಹಾಗೂ ಮೂಲಿಕೆ ಸಾರಗಳನ್ನು 'ಡಯಟರಿ ಸಪ್ಲಿಮೆಂಟ್ಸ್' ಎಂದು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ನಿಯಮಾವಳಿಗಳ ಲೋಪ ಬಳಸಿಕೊಂಡು ಪ್ಯಾಕೆಟ್‌ಗಳ ಮೇಲೆ ಅತ್ಯಂತ ಸಣ್ಣ ಅಕ್ಷರಗಳಲ್ಲಿ 'ಇದು ಔಷಧೀಯ ಬಳಕೆಗೆ ಅಲ್ಲ' ಎಂದು ಬರೆದು ಜನರನ್ನು ಮೂರ್ಖರನ್ನಾಗಿಸಲಾಗುತ್ತಿದೆ. ಜನರು ಇವುಗಳನ್ನು ನಿಜವಾದ ದಿವ್ಯೌಷಧ ಎಂದು ನಂಬಿ ಮೋಸಹೋಗುತ್ತಿದ್ದಾರೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯವು ಈ ಮಾರುಕಟ್ಟೆಯ ಮಹಾ ಮೋಸವನ್ನು ಕೂಡಲೇ ನಿಯಂತ್ರಿಸಬೇಕು. ಇವು ಕೇವಲ ಪೂರಕ ಆಹಾರಗಳೇ ಹೊರತು ಕಾಯಿಲೆ ಗುಣಪಡಿಸುವ ಮದ್ದುಗಳಲ್ಲ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಭಿಯಾನವನ್ನು ತಕ್ಷಣವೇ ಹಮ್ಮಿಕೊಳ್ಳಬೇಕು.

–ಡಾ.ವಿಜಯಕುಮಾರ್, ರಾಯಚೂರು

ತಂಡ ಸಾಮರ್ಥ್ಯದ ಸತ್ಯದರ್ಶನ

ಟಿ20 ವಿಶ್ವಚಾಂಪ್ಯನ್ ಭಾರತವು ಐರ್ಲೆಂಡಿನೆದುರು ಎರಡೂ ಪಂದ್ಯಗಳನ್ನು ಸೋತಿರುವುದು ತಂಡದ ಲೋಪಗಳನ್ನು ಎತ್ತಿ ತೋರಿದೆ. ಭಾರತದ ಪಿಚ್‌ಗಳಲ್ಲಿ ರನ್ ಸುರಿಮಳೆಗೈಯುವ ಬ್ಯಾಟ್ಸ್‌ಮನ್‌ಗಳು ಬೌಲಿಂಗಿಗೆ ನೆರವೀಯುವ ಪಿಚ್‌ನಲ್ಲಿ ಸಾಮಾನ್ಯ ಬೌಲಿಂಗಿನೆದುರೂ ಹೇಗೆ ಪರದಾಡಿದರು ಎನ್ನುವುದರ ಸತ್ಯದರ್ಶನವಾಗಿದೆ. ಇನ್ನೀಗ ಇಂಗ್ಲೆಂಡಿನ ನೆಲದಲ್ಲಿ ಭಾರತೀಯ ತಂಡದ ನಿರ್ವಹಣೆಯನ್ನು ನೋಡಬೇಕಾಗಿದೆ.

–ಸತೀಶ್ ಅಡಿಗ, ಪುತ್ತೂರು

ಜು.2ಕ್ಕೆ ಸಚಿವ ಸಂಪುಟದಲ್ಲಿ ಮಸೂದೆ ಬಗ್ಗೆ ಚರ್ಚೆ

ಬಂಗಾಳದಲ್ಲಿ ಏನಾಸಂ ಅನುಷ್ಠಾನಕ್ಕೆ ಚಾಲನೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿ ಪ್ರಕ್ರಿಯೆಗೆ ಸೋಮವಾರ ಅಧಿಕೃತ ಚಾಲನೆ ನೀಡಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿರುವುದಾಗಿ ವಿಧಾನಸಭೆಯಲ್ಲಿ ಘೋಷಿಸಿದರು.

ಪ್ರಸ್ತಾವಿತ ಏನಾಸಂ ಮಸೂದೆಗೆ ಅಗತ್ಯವಾದ ಕಾನೂನು ಚೌಕಟ್ಟು ಸಿದ್ಧಪಡಿಸುವ ಜವಾಬ್ದಾರಿಯನ್ನು ಈ ಸಮಿತಿಗೆ ನೀಡಲಾಗಿದೆ. ನಾಲ್ಕು ವಾರಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದ್ದು, ಆಗಸ್ಟ್‌ನಲ್ಲಿ ನಡೆಯಲಿರುವ ವಿಸ್ತೃತ ಬಜೆಟ್ ಅಧಿವೇಶನದಲ್ಲಿ ಏನಾಸಂ ಮಸೂದೆ ಮಂಡಿಸುವ ಸಾಧ್ಯತೆ ಇದೆ.

ಪ್ರಸ್ತುತ ಅಧಿವೇಶನದ ಕೊನೆಯ ದಿನ ಮಾತನಾಡಿದ ಮುಖ್ಯಮಂತ್ರಿ, ಜು.2ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಸೂದೆ ಕರಡಿನ ಕುರಿತು ಚರ್ಚೆ ನಡೆಸಿ ಅಂತಿಮ ರೂಪ ನೀಡಲಾಗುವುದು. ಇದು ಬಿಜೆಪಿ ಸರ್ಕಾರದ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಒಂದಾಗಿದ್ದು, ಅದನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಪ್ರತಿಯೊಂದು ಭರವಸೆಯನ್ನೂ ಜಾರಿಗೊಳಿಸುತ್ತೇವೆ. ಏನಾಸಂ ಪಶ್ಚಿಮ ಬಂಗಾಳದಲ್ಲಿ ಖಂಡಿತವಾಗಿ ಜಾರಿಗೆ ಬರಲಿದೆ ಎಂದು ಅಧಿಕಾರಿ ಹೇಳಿದರು.

9 ಪ್ರಮುಖ ಕ್ಷೇತ್ರಗಳಿಗೆ ಸಾಮಾನ್ಯ ಕಾನೂನು: ಗುಜರಾತ್ ಏನಾಸಂ ಮಸೂದೆ-2026, ಅಸ್ಸಾಂ ಏನಾಸಂ ಕಾನೂನು ಹಾಗೂ ಉತ್ತರಾಖಂಡದ ಏನಾಸಂ ಕಾಯ್ದೆಯನ್ನು ಮಾದರಿಯಾಗಿ ತೆಗೆದುಕೊಂಡು ಈ ಮಸೂದೆ ರೂಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ವಿವಾಹ, ವಿಚ್ಛೇದನ, ಜೀವನಾಂಶ, ಆಸ್ತಿ ಹಂಚಿಕೆ, ಉತ್ತರಾಧಿಕಾರ, ದತ್ತು ಸ್ವೀಕಾರ, ಲಿವ್-ಇನ್ ಸಂಬಂಧಗಳು ಸೇರಿದಂತೆ ಕುಟುಂಬ ಕಾನೂನಿನ ಒಂಬತ್ತು ಪ್ರಮುಖ ಕ್ಷೇತ್ರಗಳನ್ನು ಒಂದೇ ಕಾನೂನು ಚೌಕಟ್ಟಿನಲ್ಲಿ ತರಲು ಸರ್ಕಾರ ಉದ್ದೇಶಿಸಿದೆ.

» ಸುಪ್ರೀಂ ಕೋರ್ಟ್ ನಿವೃತ್ತ ನ್ಯಾ. ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ; ನಾಲ್ಕು ವಾರಗಳಲ್ಲಿ ವರದಿ ಸಲ್ಲಿಕೆ

» ವಿವಾಹ, ವಿಚ್ಛೇದನ, ಆಸ್ತಿ ಹಕ್ಕು, ದತ್ತು ಸೇರಿದಂತೆ ಕುಟುಂಬ ಕಾನೂನುಗಳಿಗೆ ಏಕರೂಪ ಚೌಕಟ್ಟು

ಆದಿವಾಸಿ ಸಮುದಾಯಗಳಿಗೆ ವಿನಾಯಿತಿ: ರಾಜ್ಯದ ಆದಿವಾಸಿ, ಮೂಲನಿವಾಸಿ, ಕುಡ್ಮಿ ಹಾಗೂ ಸರ್ಕಾರ ಮಾನ್ಯತೆ ನೀಡಿರುವ ಕೆಲವು ಪ್ರಾಚೀನ ಸಮುದಾಯಗಳಿಗೆ ಏನಾಸಂನಿಂದ ವಿನಾಯಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು. ಇದು ಉತ್ತರಾಖಂಡ ಮತ್ತು ಗುಜರಾತ್ ಮಾದರಿಯಲ್ಲಿರುವ ವಿನಾಯಿತಿಗಳಿಗೆ ಅನುಗುಣವಾಗಿರಲಿದೆ ಎಂದು ಹೇಳಿದರು.

ವಿಧಾನಸಭೆಯಲ್ಲಿ ಗದ್ದಲ: ಘೋಷಣೆಯ ನಂತರ ವಿರೋಧ ಪಕ್ಷವಾದ ತೃಣಮೂಲ ಕಾಂಗ್ರೆಸ್ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಪ್ರತಿಪಕ್ಷ ನಾಯಕ ರಿತಬ್ರತ ಬಂಡೋಪಾಧ್ಯಾಯ ನೇತೃತ್ವದಲ್ಲಿ ಸದಸ್ಯರು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಏನಾಸಂ ಕುರಿತು ಯಾರಿಗಾದರೂ ಆಕ್ಷೇಪಣೆ ಅಥವಾ ಸಲಹೆಗಳಿದ್ದರೆ ಸಮಿತಿಗೆ ಸಲ್ಲಿಸಬಹುದು ಎಂದು ತಿಳಿಸಿದರು. ಎಲ್ಲ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕವೇ ಸಮಿತಿ ತನ್ನ ಅಂತಿಮ ಶಿಫಾರಸುಗಳನ್ನು ಸಲ್ಲಿಸಲಿದೆ ಎಂದು ಭರವಸೆ ನೀಡಿದರು.

ಅತ್ಯಾಚಾರ-ಹತ್ಯೆ ಪ್ರಕರಣ: ಕೋರ್ಟ್ ತೀರ್ಪು

ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

• **ಪುಣೆ:** ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ. ಇದು ಅಪರೂಪದಲ್ಲೇ ಅಪರೂಪದ ಪ್ರಕರಣ ಎಂದು ಬಣ್ಣಿಸಿರುವ ನ್ಯಾಯಾಲಯ, ಆರೋಪಿಯ ಕ್ರೂರ ಕೃತ್ಯ ಸಮಾಜದ ಆತ್ಮಸಾಕ್ಷಿಯನ್ನೇ ಬೆಚ್ಚಿಬೀಳಿಸಿದೆ ಎಂದು ಹೇಳಿದೆ.

ಅಪರಾಧದ ಹಿನ್ನೆಲೆ: ಮೇ 1ರಂದು ನಡೆದಿದ್ದ ಈ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಲಯ ಜೂ.25ರಂದು ಆರೋಪಿ ಭೀಮರಾವ್ ಕಾಂಬ್ಳೆಯನ್ನು ಅಪರಾಧಿ ಎಂದು ಘೋಷಿಸಿತ್ತು. ಆರೋಪಿ, ಮಗುವಿಗೆ ತಿಂಡಿ ಕೊಡುವುದಾಗಿ ಮತ್ತು ಹಸುವಿನ ಕರುವನ್ನು ತೋರಿಸುವುದಾಗಿ ನಂಬಿಸಿ ಕೊಟ್ಟಿಗೆಯ ಶೆಡ್‌ಗೆ ಕರೆದೊಯ್ದಿದ್ದನು. ಅಲ್ಲಿ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಬಾಯಿ ಮುಚ್ಚಿ ಮತ್ತು ಎದೆಗೆ ತೀವ್ರ ಗಾಯಮಾಡಿ ಅಮಾನುಷವಾಗಿ ಕೊಲೆ ಮಾಡಿದ್ದ.

ಅಪರಾಧದ ಇತಿಹಾಸ: ಆರೋಪಿಯ ವಯಸ್ಸನ್ನು ಪರಿಗಣಿಸಿ ಕರುಣೆ ತೋರಲು ನಿರಾಕರಿಸಿದ ನ್ಯಾಯಾಧೀಶ ಸಾಳುಂಕೆ, ಕಾಂಬ್ಳೆಯ ಕ್ರಿಮಿನಲ್ ಹಿನ್ನೆಲೆಯನ್ನು ಎತ್ತಿ ತೋರಿಸಿದ್ದಾರೆ. ಈ ಹಿಂದೆ 62 ವರ್ಷದ ವೃದ್ಧೆ, 17 ವರ್ಷದ ಯುವತಿ ಹಾಗೂ ಪ್ರಾಣಿಯ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿ ಸುಧಾರಣೆಗೆ ಅರ್ಹನಲ್ಲ ಎಂದು ಪ್ರಾಸಿಕ್ಯೂಷನ್ ವಾದಿಸಿತ್ತು. ಆರೋಪಿಯ ಇತಿಹಾಸದ ಹಿನ್ನೆಲೆಯಲ್ಲಿ ಕೋರ್ಟ್ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿದೆ.



ನಕಲಿ ಔಷಧಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಔಷಧ ನಿಯಮಗಳು, 1945ಕ್ಕೆ ಪ್ರಮುಖ ತಿದ್ದುಪಡಿ ತಂದಿದೆ. ನಿರ್ಣಾಯಕ ಹಾಗೂ ಜೀವ ರಕ್ಷಕ ಔಷಧಗಳ ವಿಭಾಗಗಳಿಗೆ ಟ್ರ್ಯಾಕ್ ಮತ್ತು ಟ್ರೇಸ್(ಪತ್ತೆ ಹಚ್ಚುವ) ತಂತ್ರಜ್ಞಾನವನ್ನು ಕಡ್ಡಾಯಗೊಳಿಸುವ ಮೂಲಕ, ಔಷಧ ಪೂರೈಕೆ ಸರಪಳಿಯನ್ನು ಸುರಕ್ಷಿತಗೊಳಿಸಲು ಸರ್ಕಾರ ಮುಂದಾಗಿದೆ. ಈ ಹೊಸ ನಿಯಮ ಸಾಮಾನ್ಯ ಗ್ರಾಹಕರು ಮತ್ತು ನಿಯಂತ್ರಕರು ಔಷಧಗಳನ್ನು ಬಳಸುವ ಮುನ್ನವೇ ಅವುಗಳ ನೈಜತೆಯನ್ನು ಸುಲಭವಾಗಿ ಪರಿಶೀಲಿಸಲು ಅನುವು ಮಾಡಿಕೊಡುತ್ತದೆ. ಆ ಕುರಿತ ವಿವರ ಇಲ್ಲಿದೆ.

ಬೆರಳ ತುದಿಯಲ್ಲಿ ಮಾಹಿತಿ

ಗ್ರಾಹಕರು ಅಥವಾ ವಿತರಕರು ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಬಳಸಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದಾಗ, ಅದು ವ್ಯವಸ್ಥೆಯಲ್ಲಿ ದಾಖಲಾಗಿರುವ ಪ್ರಮುಖ ಮಾಹಿತಿಯನ್ನು ತೋರಿಸುತ್ತದೆ. ಈ ಕೋಡ್ ಒಟ್ಟು ಒಂಬತ್ತು ನಿರ್ದಿಷ್ಟ ಅಂಶಗಳನ್ನು ಒಳಗೊಂಡಿರಬೇಕು ಎಂದು ಸರ್ಕಾರ ಕಡ್ಡಾಯಗೊಳಿಸಿದೆ. ಇವುಗಳಲ್ಲಿ ಉತ್ಪನ್ನದ ವಿಶಿಷ್ಟ ಗುರುತಿನ ಕೋಡ್, ಔಷಧದ ನಿಖರ ಮತ್ತು ಜೆನೆರಿಕ್ ಹೆಸರು, ಬ್ರ್ಯಾಂಡ್ ಹೆಸರು ಹಾಗೂ ತಯಾರಕರ ಹೆಸರು ಮತ್ತು ವಿಳಾಸ ಸೇರಿವೆ. ಜತೆಗೆ, ಬ್ಯಾಚ್ ಸಂಖ್ಯೆ, ತಯಾರಿಸಿದ ದಿನಾಂಕ, ಅವಧಿ ಮುಗಿಯುವ ದಿನಾಂಕ, ಉತ್ಪಾದನಾ ಪರವಾನಗಿ ಸಂಖ್ಯೆ ಮತ್ತು ಬಳಸಲಾದ ಔಷಧ ಸಾಮಾಗ್ರಿಗಳ ವಿವರವಾದ ಮಾಹಿತಿ ಇರಬೇಕು.

ಗ್ರಾಹಕರ ಸಬಲೀಕರಣ

ಗ್ರಾಹಕರು ಮುದ್ರಿತ ಕ್ಯೂಆರ್ ಕೋಡ್ ಅನ್ನು ಡಿಜಿಟಲ್ ದೃಢೀಕರಣ ಪರಿಕರಗಳ ಮೂಲಕ ಸ್ಕ್ಯಾನ್ ಮಾಡುವ ಮೂಲಕ ಔಷಧದ ನೈಜತೆಯನ್ನು ಪರಿಶೀಲಿಸಬಹುದು. ಈ ಒಂಬತ್ತು ಪ್ರಮುಖ ದತ್ತಾಂಶಗಳನ್ನು ಪ್ರವೇಶಿಸುವುದರಿಂದ, ಬಳಕೆದಾರರು ಬಾಕ್ಸ್ ಮೇಲಿರುವ ಭೌತಿಕ ವಿವರಗಳನ್ನು ಡಿಜಿಟಲ್ ದಾಖಲೆಗಳೊಂದಿಗೆ ತಕ್ಷಣವೇ ಹೋಲಿಸಿ ನೋಡಬಹುದು. ಈ ಡಿಜಿಟಲ್ ದೃಢೀಕರಣ ಸಾಧನ, ತಡೆರಹಿತ ಪರಿಶೀಲನೆಯನ್ನು ಸಾಧ್ಯವಾಗಿಸುತ್ತದೆ. ಇದರಿಂದ ಯಾರು ಬೇಕಾದರೂ ಔಷಧದ ಪ್ರಯಾಣವನ್ನು ಪತ್ತೆಹಚ್ಚಬಹುದು ಮತ್ತು ಅದರ ಮೂಲವನ್ನು ಖಚಿತಪಡಿಸಿಕೊಳ್ಳಬಹುದು.

ಒಳಪಡುವ ಔಷಧಗಳ ವ್ಯಾಪ್ತಿ

ಈ ನಿಯಮ ಆರಂಭದಲ್ಲಿ ದೇಶದ ಕೇವಲ ಅಗ್ರ 300 ಫಾರ್ಮಾಸ್ಯುಟಿಕಲ್ ಬ್ರ್ಯಾಂಡ್‌ಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಹೊಸ ತಿದ್ದುಪಡಿಯಲ್ಲಿ, ತೀವ್ರ ನಿಯಂತ್ರಣಕ್ಕೆ ಒಳಪಡುವ ನಾಲ್ಕು ನಿರ್ಣಾಯಕ ವಿಭಾಗಗಳ ಔಷಧಗಳನ್ನೂ ಒಳಗೊಳ್ಳುವಂತೆ ಶೆಡ್ಯೂಲ್ ಎಚ್2ನ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಈ ಟ್ರ್ಯಾಕ್ ಮತ್ತು ಟ್ರೇಸ್ ಚೌಕಟ್ಟು ಇನ್ನು ಮುಂದೆ ಎಲ್ಲಾ ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಆಂಟಿಮೈಕ್ರೋಬಿಯಲ್‌ಗಳನ್ನು ಒಳಗೊಳ್ಳಲಿದೆ. ಇದರೊಂದಿಗೆ, ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ (ಎನ್‌ಡಿಪಿಎಸ್) ಕಾಯ್ದೆ, 1985ರ ಅನ್ವಯ ಬರುವ ಎಲ್ಲಾ ಮಾದಕ ದ್ರವ್ಯಗಳು ಮತ್ತು ಸೈಕೋಟ್ರೋಪಿಕ್ ಔಷಧಗಳನ್ನು ಈ ಕಡ್ಡಾಯ ಕ್ಯೂಆರ್ ಕೋಡ್ ವ್ಯಾಪ್ತಿಗೆ ತರಲಾಗಿದೆ.

ಪ್ಯಾಕೇಜಿಂಗ್‌ನ ಹೊಸ ನಿಯಮ

ಹೊಸದಾಗಿ ತಿದ್ದುಪಡಿ ಮಾಡಲಾದ ನಿಬಂಧನೆಗಳಲ್ಲಿ, ಔಷಧ ತಯಾರಕರು ತಮ್ಮ ಉತ್ಪನ್ನಗಳ ಮೇಲೆ ಬಾರ್ ಕೋಡ್ ಅಥವಾ ಕ್ವಿಕ್ ರೆಸ್ಪಾನ್ಸ್(ಕ್ಯೂಆರ್) ಕೋಡ್ ಅನ್ನು ಮುದ್ರಿಸುವುದು ಅಥವಾ ಅಂಟಿಸುವುದು ಇನ್ನು ಮುಂದೆ ಕಾನೂನುಬದ್ಧವಾಗಿ ಕಡ್ಡಾಯ. ಈ ಡಿಜಿಟಲ್ ಟ್ಯಾಗ್ ಅನ್ನು ಔಷಧದ ಪ್ರಾಥಮಿಕ ಪ್ಯಾಕೇಜಿಂಗ್ ಲೇಬಲ್ ಮೇಲೆ ನೇರವಾಗಿ ಅಳವಡಿಸಬೇಕು. ಒಂದು ವೇಳೆ ಮೊದಲ ಪ್ಯಾಕೇಜಿಂಗ್ ತುಂಬಾ ಚಿಕ್ಕದಾಗಿದ್ದರೆ ಅಥವಾ ಸ್ಥಳಾವಕಾಶದ ಕೊರತೆ ಇದ್ದರೆ, ತಯಾರಕರು ದ್ವಿತೀಯ ಪ್ಯಾಕೇಜಿಂಗ್ ಲೇಬಲ್ ಮೇಲೆ ಕ್ಯೂಆರ್ ಕೋಡ್ ಮುದ್ರಿಸಲು ಅವಕಾಶವಿದೆ. ಈ ವ್ಯವಸ್ಥೆ, ಪೂರೈಕೆ ಸರಪಳಿಯ ಪ್ರತಿಯೊಂದು ಹಂತದಲ್ಲೂ ಔಷಧವನ್ನು ಪತ್ತೆಹಚ್ಚಲು ಮತ್ತು ದೃಢೀಕರಿಸಲು ಸಹಾಯ ಮಾಡುತ್ತದೆ.

» ಹೊಸ ಕ್ಯೂಆರ್ ನಿಯಮ 9 ನಿರ್ದಿಷ್ಟ ದತ್ತಾಂಶ ಅಂಶಗಳನ್ನು ಒಳಗೊಂಡಿದೆ.

» ಈ ವ್ಯವಸ್ಥೆ ಮೊದಲು ಕೇವಲ ಅಗ್ರ 300 ಫಾರ್ಮಾ ಬ್ರ್ಯಾಂಡ್‌ಗಳನ್ನು ಒಳಗೊಂಡಿತ್ತು.

» ಪ್ರಸ್ತುತ ನಿಯಂತ್ರಣ ಚೌಕಟ್ಟನ್ನು 4 ನಿರ್ಣಾಯಕ ಔಷಧ ವಿಭಾಗಗಳಿಗೆ ವಿಸ್ತರಿಸಲಾಗಿದೆ.

» ಲಸಿಕೆಗಳು, ಕ್ಯಾನ್ಸರ್ ವಿರೋಧಿ ಮತ್ತು ಎನ್‌ಡಿಪಿಎಸ್ ಔಷಧಗಳ ಅನುಷ್ಠಾನ 1 ಜುಲೈ 2027.

» ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮ 1 ಜುಲೈ 2028ರಿಂದ ಕಡ್ಡಾಯ

ನಕಲಿ, ಮಾದಕವಸ್ತುಗಳ ವಿರುದ್ಧ ಹೋರಾಟ





ಯಾವುದೇ ಒಂದೇ ಕ್ರಮ ಅಕ್ರಮ ವ್ಯಾಪಾರವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲದಿದ್ದರೂ, ಈ ಸುಧಾರಿತ ಪತ್ತೆಹಚ್ಚುವಿಕೆ ಕಾರ್ಯವಿಧಾನ ಪ್ರಬಲ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ. ಅಧಿಕೃತ ಪಿಐಬಿ ವರದಿ ಪ್ರಕಾರ, ಈ ವ್ಯವಸ್ಥೆ, ನಿಯಂತ್ರಕ ಮೇಲ್ವಿಚಾರಣೆಯನ್ನು ಬಲಪಡಿಸುತ್ತದೆ. ಅಷ್ಟೇ ಅಲ್ಲದೆ, ಕಳಪೆ ಗುಣಮಟ್ಟದ ಅಥವಾ ನಕಲಿ ಆಂಟಿಮೈಕ್ರೋಬಿಯಲ್‌ಗಳನ್ನು ಸುಲಭವಾಗಿ ಗುರುತಿಸುವ ಮೂಲಕ ಆಂಟಿ-ಮೈಕ್ರೋಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ವಿರುದ್ಧದ ರಾಷ್ಟ್ರ ಮಟ್ಟದ ಹೋರಾಟಕ್ಕೆ ಉತ್ತೇಜನ ನೀಡುತ್ತದೆ. ಇನ್ನು, ಮಾದಕ ಮತ್ತು ಸೈಕೋಟ್ರೋಪಿಕ್ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ಬಿಗಿಗೊಳಿಸುವ ಮೂಲಕ ಸರ್ಕಾರದ ವ್ಯಾಪಕ ನಶಾ ಮುಕ್ತ ಭಾರತ ಅಭಿಯಾನಕ್ಕೂ ಈ ಯೋಜನೆ ನೆರವಾಗುತ್ತದೆ. ಔಷಧ ಉದ್ಯಮ ಈ ಬದಲಾವಣೆಗೆ ಹೊಂದಿಕೊಳ್ಳಲು ಸಚಿವಾಲಯ ಹಂತ-ಹಂತದ ಕಾಲಾವಕಾಶವನ್ನು ಪರಿಚಯಿಸಿದೆ. ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಎನ್‌ಡಿಪಿಎಸ್ ಔಷಧಗಳ ನಿಯಮಗಳು 1 ಜುಲೈ 2027ರಿಂದ ಜಾರಿಗೆ ಬರಲಿದ್ದು, ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮಗಳು 1 ಜುಲೈ 2028ರಿಂದ ಜಾರಿಗೆ ಬರಲಿವೆ. ಈ ದಿನಾಂಕಗಳ ನಂತರ ಯಾವುದೇ ಔಷಧದ ಮೇಲೆ ಪರಿಶೀಲಿಸಬಹುದಾದ ಕ್ಯೂಆರ್ ಕೋಡ್ ಇಲ್ಲದಿದ್ದರೆ ಅಥವಾ ಸ್ಕ್ಯಾನ್ ಮಾಡಿದ ದತ್ತಾಂಶ ಭೌತಿಕ ಪ್ಯಾಕೇಜಿಂಗ್‌ಗೆ ಹೊಂದಿಕೆಯಾಗದಿದ್ದರೆ ತಕ್ಷಣವೇ ನಿಯಂತ್ರಕ ಅಧಿಕಾರಿಗಳಿಗೆ ದೂರು ನೀಡಬೇಕು. ಸರ್ಕಾರದ ಈ ಕ್ರಮ ಹೆಚ್ಚಿನ ಪಾರದರ್ಶಕತೆಗೆ ಅವಕಾಶ ಮಾಡಿಕೊಡಲಿದೆ.

ಕಿರುಸುದ್ದಿ

ಅಮೆರಿಕ-ಇರಾನ್ ಶಾಂತಿ ಮಾತುಕತೆ ಬಗ್ಗೆ ಗೊಂದಲ

• **ದುಬೈ:** ಅಮೆರಿಕ ಮತ್ತು ಇರಾನ್ ನಡುವಿನ ದಾಳಿಗಳು ತಾತ್ಕಾಲಿಕವಾಗಿ ನಿಂತಿದ್ದರೂ, ಮುಂದಿನ ಹಂತದ ಮಾತುಕತೆಗಳ ಕುರಿತು ಎರಡೂ ದೇಶಗಳ ನಡುವೆ ಭಿನ್ನಾಭಿಪ್ರಾಯ ಮುಂದುವರಿದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಕತಾರ್‌ನ ದೋಹಾದಲ್ಲಿ ಉಭಯ ದೇಶಗಳ ಪ್ರತಿನಿಧಿಗಳ ಸಭೆ ನಡೆಯಲಿದೆ ಎಂದು ಘೋಷಿಸಿದ್ದಾರೆ. ಆದರೆ, ಇರಾನ್‌ನ ಹಿರಿಯ ಅಧಿಕಾರಿ ಕಾಜೆಂ ಘರೀಬಾಬಾದಿ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ತಿಳಿಸಿದ್ದಾರೆ. ಈ ನಡುವೆ, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹಾರ್ಮುಜ್ ಜಲಸಂಧಿ ಪ್ರದೇಶದಲ್ಲಿ ಉದ್ವಿಗ್ನತೆ ಮುಂದುವರಿದಿದೆ. ಇತ್ತೀಚಿನ ದಾಳಿಗಳಿಂದ ತೈಲ ಮಾರುಕಟ್ಟೆಯಲ್ಲಿ ಆತಂಕ ಉಂಟಾಗಿದ್ದರೂ, ಮಧ್ಯಂತರ ಒಪ್ಪಂದದ ನಂತರ ತೈಲ ಬೆಲೆಗಳಲ್ಲಿ ಇಳಿಕೆ ಕಂಡುಬಂದಿದೆ. ಇರಾನ್ ಅಧ್ಯಕ್ಷ, ಕತಾರ್‌ನಲ್ಲಿ ಸ್ಥಗಿತಗೊಂಡಿರುವ 6 ಬಿಲಿಯನ್ ಡಾಲರ್ ಮೊತ್ತದ ಇರಾನ್ ಆಸ್ತಿಗಳು ಬಿಡುಗಡೆ ಆಗಲಿವೆ ಎಂದಿದ್ದಾರೆ. ಆದರೆ ಅಮೆರಿಕ ಮತ್ತು ಕತಾರ್ ಇದನ್ನು ಇನ್ನೂ ಅಧಿಕೃತವಾಗಿ ದೃಢಪಡಿಸಿಲ್ಲ.

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

• **ಹೊಸದಿಲ್ಲಿ:** ಬಿಹಾರದ ಗವರ್ನರ್ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಮತ್ತು ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರ ಮಾರ್ಗರಿಟಾ ಅವರು ಭಾರತ ಸರ್ಕಾರದ ಪರವಾಗಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಸೈಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಖಮೇನಿ ಅವರ ಅಂತ್ಯಕ್ರಿಯೆಗೆ ಹಾಜರಾಗಲು ಇರಾನ್ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿತ್ತು. ಅನೇಕ ಇರಾನಿನ ನಗರಗಳಲ್ಲಿ ಜು.4-9ರವರೆಗೆ ನಿಗದಿಯಾಗಿರುವ ಅಂತ್ಯಕ್ರಿಯೆಯ ಕಾರ್ಯಕ್ರಮದಲ್ಲಿ ಲಕ್ಷಾಂತರ ಶೋಕತಪ್ತರು ಮತ್ತು ಹಲವಾರು ವಿದೇಶಿ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ.

ಶಬರಿಮಲೆ ಚಿನ್ನ ಕಳವು: ಹೊಸ ಪ್ರಕರಣಕ್ಕೆ ಸಮ್ಮತಿ

• **ಕೊಚ್ಚಿ:** ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಗಳ ಚಿನ್ನ ನಾಪತ್ತೆ ಪ್ರಕರಣದಲ್ಲಿ ಮಾಜಿ ಟಿಡಿಬಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ವಿರುದ್ಧ ಸಾಕ್ಷ್ಯ ಲಭ್ಯವಾಗಿರುವ ಹಿನ್ನೆಲೆಯಲ್ಲಿ ಹೊಸ ಕ್ರಿಮಿನಲ್ ಪ್ರಕರಣ ದಾಖಲಿಸಲು ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ಕೇರಳ ಹೈಕೋರ್ಟ್ ಅನುಮತಿ ನೀಡಿದೆ.

ಪ್ರತಿಪಕ್ಷ ನಾಯಕರಾಗಿ ಖರ್ಗೆ ಪುನರ್ ನೇಮಕ

• **ಹೊಸದಿಲ್ಲಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಪಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.

ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದು ಖರ್ಗೆ ಅವರು ಸಭಾಪತಿಯವರ ಕಚೇರಿಯಲ್ಲಿ ಪ್ರತ್ಯೇಕವಾಗಿ ಪ್ರಮಾಣವಚನ ಸ್ವೀಕರಿಸಿದರು. ಬಳಿಕ ಪ್ರತಿಕ್ರಿಯಿಸಿದ ಅವರು, ಜನರ ಆಶಯಗಳು, ಸಮಸ್ಯೆಗಳು ಮತ್ತು ಧ್ವನಿಯನ್ನು ಸದನದಲ್ಲಿ ಪ್ರಾಮಾಣಿಕವಾಗಿ ಪ್ರತಿನಿಧಿಸುವುದರ ಜತೆಗೆ ಸರ್ಕಾರವನ್ನು ಉತ್ತರದಾಯಿತ್ವಕ್ಕೆ ಒಳಪಡಿಸುವ ಕಾರ್ಯವನ್ನು ಮುಂದುವರಿಸುವುದಾಗಿ ಹೇಳಿದರು.

ಖರ್ಗೆ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಜೂ.25ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಅವರು ಜೂ,26ರಿಂದ ಪ್ರತಿಪಕ್ಷ ನಾಯಕ ಸ್ಥಾನದಿಂದ ಹೊರಗುಳಿದಿದ್ದರು. ಆದರೆ, ಮರು ಆಯ್ಕೆಯಾದ ನಂತರ ರಾಜ್ಯಸಭೆ ಸಭಾಪತಿ ಜೂ.26ರಿಂದಲೇ ಅವರಿಗೆ ಮತ್ತೆ ರಾಜ್ಯಸಭೆ ಪ್ರತಿಪಕ್ಷ ನಾಯಕ ಸ್ಥಾನದ ಮಾನ್ಯತೆ ನೀಡಿದ್ದಾರೆ.

ಇದೇ ವೇಳೆ ಇತರ 7 ಸದಸ್ಯರಾದ ಮಾನ್‌ಸಿಂಗ್ ಮೆರಾಮನ್ ಪರ್ಮಾರ್, ತರುಣ್ ಚುಗ್, ಅಲ್ಕಾ ಸಿಂಗ್, ಜಿತೇಂದ್ರ ಕಾಂಜರಿಯಾ, ರಾಜೇಂದ್ರ ಜೈನ್, ಎಂ. ನಾಗರಾಜ ಹಾಗೂ ಅಧಿಕರಿಮಯುಂ ಶಾರದಾ ದೇವಿ ಅವರು ಪ್ರಮಾಣವಚನ ಸ್ವೀಕರಿಸಿದರು. ನಾಲ್ವರು ಹಿಂದಿಯಲ್ಲಿ, ಒಬ್ಬರು ಕನ್ನಡದಲ್ಲಿ, ಒಬ್ಬರು ಪಂಜಾಬಿಯಲ್ಲಿ ಹಾಗೂ ಒಬ್ಬರು ಮಣಿಪುರಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಭಾರತದ ಸೇನಾ ಬಲಕ್ಕೆ ಸಿಂದೂರ ಸಾಕ್ಷಿ: ದ್ವಿವೇದಿ

• **ಹೊಸದಿಲ್ಲಿ:** ಆಪರೇಷನ್ ಸಿಂದೂರ್ ಸಶಸ್ತ್ರ ಸಂಘರ್ಷಗಳು ಅಲ್ಪಾವಧಿಯವಾಗಿದ್ದು, ತಂತ್ರಾತ್ಮಕವಾಗಿ ನಡೆಸಬಹುದೆಂಬುದನ್ನು ಸ್ಪಷ್ಟಪಡಿಸಿದೆ. ಅಲ್ಲದೆ, ಭಯೋತ್ಪಾದನೆಗೆ ಭಾರತದ ಪ್ರತಿಕ್ರಿಯೆಯಲ್ಲಿ ಹೊಸ ಕ್ರಮಕ್ಕೆ ಇದು ನಿದರ್ಶನವಾಗಿದೆ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ.



ಭಾರತವು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಲಷ್ಕರ್-ಎ-ತೈಬಾ ಮತ್ತು ಜೈಶ್-ಎ-ಮೊಹಮ್ಮದ್ ನಡೆಸುತ್ತಿರುವ ಭಯೋತ್ಪಾದಕ ಉಡಾವಣಾ ಕೇಂದ್ರಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿತು. ಈ ದಾಳಿಗಳು ನಾಗರಿಕ ಮತ್ತು ಮಿಲಿಟರಿ ಕೇಂದ್ರಗಳನ್ನು ದಾಟಿ ಬಹ್ವಾಲ್ಪುರ್ ಸೇರಿದಂತೆ ಒಂಬತ್ತು ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದ್ದವು.

ಪ್ರಸ್ತುತ ನಡೆಯುತ್ತಿರುವ ಸಂಘರ್ಷಗಳು ದೀರ್ಘಕಾಲದಿಂದ ನಡೆಯುತ್ತಿರುವ ಜಗತ್ತಿನಲ್ಲಿ, ಆಪರೇಷನ್ ಸಿಂದೂರ್ ಸಂಘರ್ಷಗಳು ಸಣ್ಣ, ತೀವ್ರವಾದ, ತಂತ್ರಜ್ಞಾನ-ಚಾಲಿತ ಮತ್ತು ನಿರಂತರ ಮಾಹಿತಿ ಪರಿಶೀಲನೆಯಲ್ಲಿ ಹೋರಾಡುವ ಹೆಚ್ಚಿನ ಸಾಧ್ಯತೆಯೂ ಇದೆ ಎಂದು ತೋರಿಸಿಕೊಟ್ಟಿದೆ ಎಂದರು.

ಭಯೋತ್ಪಾದಕರು ಮತ್ತು ಭಯೋತ್ಪಾದಕರನ್ನು ಪ್ರಾಯೋಜಿಸುವ ಅಥವಾ ಸಕ್ರಿಯಗೊಳಿಸುವವರ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂಬುದು ನಿಸ್ಸಂದಿಗ್ಧವಾದ ಸಂದೇಶವಾಗಿದೆ ಎಂದು ಹೇಳಿದರು.

ಜರ್ಮನಿಯಲ್ಲಿ ಗುಂಡಿನ ದಾಳಿಗೆ 6 ಮಂದಿ ಸಾವು

• **ಬರ್ಲಿನ್:** ಜರ್ಮನಿಯ ಉತ್ತರ ಭಾಗದಲ್ಲಿರುವ ಸ್ಟಾಡೆ ನಗರದ ಯೂತ್ ವೆಲ್‌ಫೇರ್ ಸೆಂಟರ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಈ ಪೈಕಿ ಓರ್ವ ಪ್ರಮುಖ ಶಂಕಿತರಾಗಿದ್ದಾನೆ ಎಂದು ಪೊಲೀಸ್ ತಿಳಿಸಿದ್ದಾರೆ. ದಾಳಿಕೋರನ ಕೃತ್ಯದ ಹಿಂದಿನ ಉದ್ದೇಶ ಏನು ಎಂಬುದರ ಬಗ್ಗೆ ಪೊಲೀಸರು ಇನ್ನೂ ಯಾವುದೇ ಮಾಹಿತಿ ನೀಡಿಲ್ಲ. ಮುಖ್ಯ ಶಂಕಿತನನ್ನು ಬಂಧಿಸಲಾಗಿದೆ. ಮತ್ತಿಬ್ಬರನ್ನು ಭಾಗಿಯಾಗಿರುವ ಶಂಕೆಯ ಮೇಲೆ ಪೊಲೀಸ್ ಕ್ರಮಗಳಿಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಘಟನೆಯು ಹ್ಯಾಂಬರ್ಗ್ ಪಶ್ಚಿಮಕ್ಕೆ ಸುಮಾರು 50,000 ಜನರು ಇದ್ದ ಪ್ರದೇಶದಲ್ಲಿ ಘಟನೆ ಸಂಭವಿಸಿದೆ. ಈ ಸೆಂಟರ್‌ನಲ್ಲಿ ಗರ್ಭಿಣಿಯರಿಗೆ ಅಥವಾ ನವಜಾತ ಶಿಶುಗಳಿಗೆ ಮತ್ತು ತಾಯಂದಿರಿಗೆ ತಾತ್ಕಾಲಿಕ ವಸತಿ ಸೌಕರ್ಯವನ್ನು ಒಳಗೊಂಡಿದೆ. 6 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಈ ಪೈಕಿ ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಜರ್ಮನ್ ಸುದ್ದಿ ಸಂಸ್ಥೆ ಡಿಪಿಎ ವರದಿ ಮಾಡಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಮಾರಣಾಂತಿಕ ಗುಂಡಿನ ದಾಳಿಯ ನಂತರ ಸಾರ್ವಜನಿಕರಿಗೆ ಯಾವುದೇ ಅಪಾಯವಿಲ್ಲ ಆತಂಕಪಡುವುದು ಬೇಡ ಎಂದು ಪೊಲೀಸರು ಹೇಳಿದ್ದಾರೆ.

ಜರ್ಮನಿಯ ಬಂದೂಕು ಕಾನೂನುಗಳು ಅಮೆರಿಕದಲ್ಲಿರುವುದಕ್ಕಿಂತ ಹೆಚ್ಚು ನಿರ್ಬಂಧಿತವಾಗಿವೆ, ಮತ್ತು ಸಾಮೂಹಿಕ ಗುಂಡಿನ ದಾಳಿಗಳು ಅಪರೂಪದ್ದಾಗಿವೆ.

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

• **ಶ್ರೀನಗರ:** 36 ವರ್ಷಗಳ ನಂತರ ಜಮ್ಮು-ಕಾಶ್ಮೀರ ಪೊಲೀಸ್ ರಾಜ್ಯ ತನಿಖಾ ಸಂಸ್ಥೆ(ಎಸ್‌ಐಎ) ಕಾಶ್ಮೀರಿ ಪಂಡಿತ್ ನರ್ಸ್(ಶುಶ್ರೂಶಕಿ) ಸರಳಾ ಭಟ್ ಅವರ ಹತ್ಯೆ ಮತ್ತು ಅಪಹರಣ ಪ್ರಕರಣ ಸಂಬಂಧ ಚಾರ್ಜ್‌ಶೀಟ್ ಸಲ್ಲಿಸಿದೆ. ಈ ಪ್ರಕರಣದಲ್ಲಿ ಜಮ್ಮು-ಕಾಶ್ಮೀರ ಲಿಬರೇಶನ್ ಫ್ರಂಟ್ ಮುಖ್ಯಸ್ಥ ಯಾಸಿನ್ ಮಲಿಕ್ ಮತ್ತು ಅವನ ನಾಲ್ವರು ಸಹಚರರನ್ನು ಹೆಸರಿಸಿದೆ.

ಭಯೋತ್ಪಾದನಾ ದಾಳಿ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪ್ರಯತ್ನದಲ್ಲಿ ಇದು ಐತಿಹಾಸಿಕ ಮೈಲಿಗಲ್ಲು ಎಂದು ಕರೆದ ಎಸ್‌ಐಎ, 2024ರಲ್ಲಿ ಪ್ರಕರಣವನ್ನು ಪುನಃ ತೆರೆದ ನಂತರ ಜಮ್ಮುವಿನ ವಿಶೇಷ ನ್ಯಾಯಾಲಯದ ಮುಂದೆ 737 ಪುಟಗಳ ಚಾರ್ಜ್ ಶೀಟ್ ಅನ್ನು ಸಲ್ಲಿಸಿದೆ. ಎಸ್‌ಐಎ ಪ್ರಕಾರ, ಆರೋಪಿಗಳು ಅಪಹರಣ ಮತ್ತು ಕ್ರೂರ ಹತ್ಯೆಯನ್ನು ಯೋಜಿಸಿ ಕಾರ್ಯಗತಗೊಳಿಸಿದ್ದಾರೆ.

ಮುಂಗಾರು ಮಳೆ ಅಬ್ಬರ: ಅರುಣಾಚಲ, ಸಿಕ್ಕಿಂನಲ್ಲಿ ಜನಜೀವನ ಅಸ್ತವ್ಯಸ್ತ

ಮುಂಬೈನ ಉಪನಗರಗಳು ಜಲಾವೃತ

• **ಮುಂಬೈ:** ದೇಶದಲ್ಲಿ ಕೆಲವೆಡೆ ಮುಂಗಾರು ಬಿರುಸು ಪಡೆದಿದ್ದು, ಈಶಾನ್ಯ ರಾಜ್ಯಗಳು ಮಳೆಯ ಆರ್ಭಟಕ್ಕೆ ಕಂಗಾಲಾಗಿವೆ. ಅರುಣಾಚಲ ಪ್ರದೇಶ, ಅಸ್ಸಾಂ ಮತ್ತು ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಬಿಡದೆ ಸುರಿದ ಭಾರೀ ಮಳೆಯಿಂದಾಗಿ ದಿಢೀರ್ ಪ್ರವಾಹ, ಭೂಕುಸಿತ ಹಾಗೂ ಭಾರಿ ಜಲಾವೃತಕ್ಕೆ ಕಾರಣವಾಗಿದ್ದು, ರಕ್ಷಣಾ ಕಾರ್ಯಾಚರಣೆಗಳನ್ನು ಚುರುಕುಗೊಳಿಸಲಾಗಿದೆ.

ಭಾನುವಾರ ತಡರಾತ್ರಿಯಿಂದ ಸೋಮವಾರ ಮುಂಜಾನೆ 4:00 ಗಂಟೆಯ ಅವಧಿಯಲ್ಲಿ ಮುಂಬೈನ ಉಪನಗರಗಳಲ್ಲಿ ಭಾರಿ ಮಳೆಯಾಗಿದ್ದು, ಮುಲುಂಡ್‌ನ ವೀಣಾ ನಗರದಲ್ಲಿ 160.4 ಮಿಮೀ ಹಾಗೂ ವರ್ಸೋವಾದಲ್ಲಿ 156.8 ಮಿಮೀ ಮಳೆ ದಾಖಲಾಗಿದೆ. ಈ ಭಾರಿ ಮಳೆಯಿಂದಾಗಿ ಎಲ್‌ಬಿಎಸ್ ರಸ್ತೆ ಜಲಾವೃತಗೊಂಡಿದ್ದು, ಅಂಧೇರಿ ಸಬ್‌ವೇ ಸಂಪೂರ್ಣವಾಗಿ ಮುಳುಗಡೆಯಾಗಿ ವಾಹನ ಸವಾರರು ತೀವ್ರ ಸಂಕಷ್ಟ ಎದುರಿಸಿದರು.

ಈಶಾನ್ಯ ರಾಜ್ಯಗಳಲ್ಲಿ ಭೂಕುಸಿತ: ಅರುಣಾಚಲ ಪ್ರದೇಶದ 12 ಜಿಲ್ಲೆಗಳಲ್ಲಿ ಸುರಿದ ಧಾರಾಕಾರ ಮಳೆ, ರಸ್ತೆ ಮತ್ತು ಸೇತುವೆಗಳನ್ನು ಹಾನಿಗೊಳಿಸಿದ್ದು, ಮೂವರು ಪ್ರಾಣ ಕಳೆದುಕೊಂಡಿದ್ದಾರೆ. ದಂಬುಕ್‌ನ ಸಿಸಿರಿ ನದಿಯ ದ್ವೀಪದಲ್ಲಿ ಸಿಲುಕಿದ್ದ ನಾಲ್ವರನ್ನು ಭಾರತೀಯ ವಾಯುಪಡೆ ಹೆಲಿಕಾಪ್ಟರ್ ಬಳಸಿ ಯಶಸ್ವಿಯಾಗಿ ರಕ್ಷಿಸಿದೆ. ಇದರೊಂದಿಗೆ, ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ವಿವಿಧೆಡೆ ಭೂಕುಸಿತವನ್ನು ಉಂಟುಮಾಡಿದ್ದು, ಗ್ರಾಮೀಣ ಭಾಗಗಳು ರಸ್ತೆ ಸಂಪರ್ಕ ಕಳೆದುಕೊಂಡಿವೆ.



ಅಸ್ಸಾಂನ ಧೇಮಾಜಿ ಜಿಲ್ಲೆಯ ಅರ್ಚಿಪಥರ್ ಮತ್ತು ಸಿಮೆನ್ ಚಾಪರಿ ನಿಲ್ದಾಣಗಳ ನಡುವೆ ಭಾರೀ ಮಳೆಯಿಂದ ಮುರಿದು ಬಿದ್ದ ರೈಲ್ವೆ ಸೇತುವೆ.

ಐಎಂಡಿ ಎಚ್ಚರಿಕೆ: ಭಾರತೀಯ ಹವಾಮಾನ ಇಲಾಖೆ (ಐಎಂಡಿ), ಸಿಕ್ಕಿಂನ ಮಂಗನ್, ನಾಮ್ಚಿ, ಪಾಕ್ಯಾಂಗ್ ಮತ್ತು ಸೊರೆಂಗ್ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ. ಮುಂದಿನ 24 ರಿಂದ 48 ಗಂಟೆಗಳ ಕಾಲ (ಸೋಮವಾರದಿಂದ) ಮುಂಬೈ ಹಾಗೂ ಈಶಾನ್ಯ ಭಾರತದಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ಸೀಶೆಲ್ಸ್‌ನಲ್ಲಿ ಮಹಾತ್ಮರ ಪ್ರತಿಮೆಗೆ ಪ್ರಧಾನಿ ಮೋದಿ ಗೌರವ


ಗಾಂಧೀಜಿ ಚಿಂತನೆ ಪ್ರೇರಣಾದಾಯಿ

• **ವಿಕ್ಟೋರಿಯಾ(ಸೀಶೆಲ್ಸ್):** ಮಹಾತ್ಮ ಗಾಂಧೀಜಿ ದಂತಕಥೆ ಸೀಶೆಲ್ಸ್‌ನಲ್ಲಿ ತುಂಬು ಗೌರವಿಸಲ್ಪಟ್ಟಿತ್ತು ಮತ್ತು ಇದರ ಪ್ರತೀಕವೆಂಬಂತೆ ಇಲ್ಲಿನ ಪೀಸ್ ಪಾರ್ಕ್‌ನಲ್ಲಿ ಅಳವಡಿಸಲಾಗಿರುವ ಗಾಂಧೀಜಿ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ನಮನಗಳನ್ನು ಸಲ್ಲಿಸಿದರು. ಅಲ್ಲಿ ನೆರೆದಿದ್ದ ಭಾರತೀಯ ಸಂಜಾತರನ್ನು ಭೇಟಿಯಾದರು ಮತ್ತು ಪುಟ್ಟ ಮಕ್ಕಳೊಂದಿಗೆ ಖುಷಿಖುಷಿಯಾಗಿ ಸಂವಾದ ನಡೆಸಿದರು.

ಶಾಂತಿಸ್ಥಾಪನೆ, ನ್ಯಾಯದಾನ ಮತ್ತು ಘನತೆಗಳ ಸಾಕಾರಕ್ಕಾಗಿ ಜನರನ್ನು ಒಗ್ಗಟ್ಟಾಗಿಸಿದ್ದ ಗಾಂಧೀಜಿಯವರ ಆದರ್ಶಗಳು ತಲೆಮಾರುಗಳಿಂದ ಜನರಿಗೆ ಮಾದರಿಯಾಗಿವೆ. ಶ್ರೇಷ್ಠ ಜಗತ್ತಿನ ಸಾಕಾರ ನಿಟ್ಟಿನಲ್ಲಿ ನಮ್ಮ ಸಾಮೂಹಿಕ ಪ್ರಯತ್ನಗಳಿಗೆ ಅವರ ಚಿಂತನೆಗಳು ನಿರಂತರ ಪ್ರೇರಣಾದಾಯಿಯಾಗಿವೆ ಎಂದು ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮಗಳಿಗೆ ಪೋಸ್ಟ್ ಹಾಕಿದ್ದಾರೆ.

ಪೀಸ್ ಪಾರ್ಕ್‌ಗೆ ಭೇಟಿ ನೀಡುವ ಮುನ್ನ ಪ್ರಧಾನಿ ಮೋದಿ ಅವರು ಅರುಳ್‌ಮಿಗು ನವಶಕ್ತಿ ವಿನಯಾಗರ್ ಕ್ಷೇತ್ರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ಇದಕ್ಕೂ ಮುನ್ನ ವಿಕ್ಟೋರಿಯಾದಲ್ಲಿ ಭಾರತೀಯ ಸಮುದಾಯದ ತಂಡದೊಂದಿಗೆ ಚರ್ಚಿಸಿದ ಪ್ರಧಾನಿ ಮೋದಿ ಅವರೊಂದಿಗೆ ಫೋಟೋ ತೆಗೆಸಿಕೊಂಡರು. ಸೀಶೆಲ್ಸ್‌ನ ಭಾರತೀಯ ಸಂಜಾತರೊಂದಿಗೆ ಅದ್ಭುತ ಸಂವಾದ ನಡೆಯಿತು.





ಮಂಗಳವಾರದ ಪಂದ್ಯ (ನಾಕೌಟ್)

ನೆದರ್‌ಲೆಂಡ್-ಮೊರಾಕ್ಕೊ, ಬೆಳಗ್ಗೆ 6.30

ಐವರಿಕೋಸ್ಟ್-ನಾರ್ವೆ, ರಾತ್ರಿ 10.30

ಫ್ರಾನ್ಸ್-ಸ್ವೀಡನ್, ಮಧ್ಯರಾತ್ರಿ 2.30

ಮೆಕ್ಸಿಕೋ-ಈಕ್ವಡೋರ್, ಬುಧವಾರ ಬೆಳಗ್ಗೆ 6.30

ಕಿರುಸುದ್ದಿ

ಟೆಸ್ಟ್ ಚಾಂಪಿಯನ್‌ಶಿಪ್: 5ನೇ ಸ್ಥಾನಕ್ಕೇರಿದ ಭಾರತ

ದುಬೈ: ವೆಸ್ಟ್ ಇಂಡೀಸ್ ವಿರುದ್ಧ ಇನ್ನಿಂಗ್ಸ್ ಮತ್ತು 217 ರನ್‌ಗಳ ಹೀನಾಯ ಸೋಲುಂಡ ಶ್ರೀಲಂಕಾ, 2025–27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ 3ನೇ ಸ್ಥಾನದಿಂದ 6ನೇ ಸ್ಥಾನಕ್ಕೆ ಕುಸಿದಿದೆ. ಇದರಿಂದ ಶುಬ್ಮನ್ ಗಿಲ್ ನೇತೃತ್ವದ ಭಾರತ ತಂಡವು ಒಂದು ಸ್ಥಾನದ ಬಡ್ತಿ ಪಡೆದು ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ. 17 ತಿಂಗಳ ಬಳಿಕ ಟೆಸ್ಟ್ ಪಂದ್ಯವೊಂದನ್ನು ಗೆದ್ದ ವೆಸ್ಟ್ ಇಂಡೀಸ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಿಂದ 8ನೇ ಸ್ಥಾನಕ್ಕೇರಿದೆ. ಇದರಿಂದ ಪಾಕಿಸ್ತಾನ 9ನೇ (ಕೊನೆಯ) ಸ್ಥಾನಕ್ಕೆ ಕುಸಿದಿದೆ. ತಮ್ಮ ಮುಂದಿನ ವೆಸ್ಟ್ ಇಂಡೀಸ್ ಸರಣಿಯಲ್ಲಿ ಟೆಸ್ಟ್ ಗೆಲ್ಲುವವರೆಗೆ ಪಾಕ್ ಕೊನೆಯ ಸ್ಥಾನದಲ್ಲೇ ಇರಲಿದೆ.

87 ಮೀ+ ಜ್ಯಾವೆಲಿನ್ ಎಸೆದ 3ನೇ ಭಾರತೀಯ ರೋಹಿತ್



ಭುವನೇಶ್ವರ್: ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿಯೇ 87 ಮೀ.ಗಿಂತ ಹೆಚ್ಚು ದೂರ ಜ್ಯಾವೆಲಿನ್ ಎಸೆದ ಮೂರನೇ ಅಥ್ಲೀಟ್ ಎಂಬ ದಾಖಲೆಯನ್ನು ರೋಹಿತ್ ಯಾದವ್ ಬರೆದಿದ್ದಾರೆ. ಭುವನೇಶ್ವರದಲ್ಲಿ ನಡೆದ ಅಂತರರಾಜ್ಯ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 87.05 ಮೀ. ದೂರ ಜ್ಯಾವೆಲಿನ್ ಎಸೆದಿದ್ದರು. ಈ ಹಿಂದೆ ನೀರಜ್ ಚೋಪ್ರಾ ಮತ್ತು ಕಿಶೋರ್ ಜೆನಾ ಈ ದಾಖಲೆ ಬರೆದಿದ್ದಾರೆ.

ವೈಭವ್ ಸಿದ್ಧ, ಆದರೆ ಸಂಜು ವಿಶ್ವಕಪ್ ರೂವಾರಿ: ರಯಾನ್

ಬೆಲ್‌ಫಾಸ್ಟ್: ಐರ್ಲೆಂಡ್ ವಿರುದ್ಧ ಭಾರತೀಯರು ಟಿ20 ಸರಣಿ ಸೋಲುಂಡಿದ್ದು, 15ರ ಹರೆಯದ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು ಆಡಿಸದಿರುವ ಬಗ್ಗೆ ಭಾರೀ ಟೀಕೆ ವ್ಯಕ್ತವಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೊಶೆಟ್, ಹೌದು. ವೈಭವ್ ಸೂರ್ಯವಂಶಿ ಅವರು ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಲು ಎಲ್ಲಾ ರೀತಿಯಲ್ಲೂ ಸಿದ್ಧರಿದ್ದಾರೆ. ಅದರಲ್ಲಿ ಯಾವುದೇ ಸಂಶಯಗಳಿಲ್ಲ. ಆದರೆ ಮೂರು ತಿಂಗಳ ಹಿಂದೆ ಭಾರತದ ಟಿ20 ವಿಶ್ವಕಪ್ ಗೆಲುವಿನಲ್ಲಿ ಸಂಜು ಸ್ಯಾಮ್ಸನ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದ್ದಾರೆ. ಖಂಡಿತವಾಗಿ ವೈಭವ್ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆಟಗಾರರಿಗೆ ಆತ್ಮವಿಶ್ವಾಸ ತುಂಬುವುದು ಮುಖ್ಯ. ದೀರ್ಘಾವಧಿ ಗುರಿಯೊಂದಿಗೆ ನಾವು ತಂಡ ಕಟ್ಟುತ್ತಿದ್ದೇವೆ. ವೈಭವ್ ಆಡುವುದನ್ನು ನೋಡಲು ನಾವೂ ನಿಮ್ಮಷ್ಟೇ ಉತ್ಸುಕರಾಗಿದ್ದೇವೆ. ಆದರೆ ಆಡಿಸುವುದಕ್ಕೆ ಪ್ರಕ್ರಿಯೆ ಅನುಸರಿಸಬೇಕು ಎಂದು ಟೆನ್ ಡೊಶೆಟ್ ಹೇಳಿದ್ದಾರೆ.

ಶೂಟೌಟ್‌ನಲ್ಲಿ ಗೆದ್ದ ಭಾರತ

ಹೊಸದಿಲ್ಲಿ: ಎಫ್‌ಐಎಚ್ ಪ್ರೊ ಲೀಗ್ 2025–26 ಹಾಕಿಯಲ್ಲಿ ಭಾರತ ಹಾಗೂ ಇಂಗ್ಲೆಂಡ್ ನಡುವಿನ ರೋಚಕ ಪಂದ್ಯವು ಫುಲ್‌ಟೈಮ್ ವೇಳೆಗೆ ಗೋಲ್ ಕಾಣದೆ ಟೈ ಆಗಿದ್ದು, ಶೂಟೌಟ್‌ನಲ್ಲಿ ಭಾರತ 3–2 ಗೋಲ್‌ಗಳ ಅಂತರದಿಂದ ಗೆಲುವು ಸಾಧಿಸಿದೆ. ಗೆಲುವಿನೊಂದಿಗೆ ಭಾರತ ತನ್ನ ಎಫ್‌ಐಎಚ್ ಪ್ರೊ ಲೀಗ್ ಋತು ಮುಕ್ತಾಯಗೊಳಿಸಿದೆ. ಭಾರತದ ಪರ ಗೋಲ್ ಕೀಪರ್ ಮೋಹಿತ್, ಸೂರಜ್ ಕರ್ಕೇರಾ ಎದುರಾಳಿ ಆಟಗಾರರು ಗೋಲ್ ಹೊಡೆಯದಂತೆ ನೋಡಿಕೊಂಡರು. ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸಿದ ಭಾರತೀಯ ಪುರುಷರ ತಂಡ ಬೋನಸ್ ಅಂಕವನ್ನು ಸಂಪಾದಿಸಿದೆ. ಇದರಿಂದ 16 ಪಂದ್ಯಗಳಿಂದ 19 ಅಂಕಗಳೊಂದಿಗೆ ಭಾರತ 8ನೇ ಸ್ಥಾನ ಸಂಪಾದಿಸಿದೆ. 19 ಅಂಕಗಳನ್ನು ಹೊಂದಿರುವ ಸ್ಪೇನ್ ಭಾರತಕ್ಕಿಂತ(4) ಹೆಚ್ಚು 5 ಗೆಲುವು ಸಾಧಿಸಿದ್ದು, 7ನೇ ಸ್ಥಾನ ಸಂಪಾದಿಸಿದೆ. ಶೂಟೌಟ್‌ನಲ್ಲಿ ಭಾರತ ಪರ ಅಭಿಷೇಕ್, ಶಿಲಾನಂದ್ ಲಾಕ್ರಾ, ಹಾರ್ದಿಕ್ ಸಿಂಗ್ ಸ್ಕೋರ್ ಮಾಡಿದರು. ಸುಖ್‌ಜೀತ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್ ಗೋಲ್ ಹೊಡೆಯಲಿಲ್ಲ. ಇಂಗ್ಲೆಂಡ್ ಪರ ಕೇವಲ ಜಾಕ್ ವ್ಯಾಲೆನ್ಸ್ ಮತ್ತು ಡೇವಿಡ್ ಗುಡ್‌ಫೀಲ್ಡ್ ಗೋಲ್ ದಾಖಲಿಸಿದ್ದರು.

ಕೆನಡಾ ಪಾಲಿಗೆ ಯುಸ್ಟಾಕಿಯೊ ಹೀರೋ | ಕಮರಿದ ದಕ್ಷಿಣ ಆಫ್ರಿಕಾ ವಿಶ್ವಕಪ್ ಕನಸು

ನನಸಾದ ಕೆನಡಾ ಪ್ರಿಕ್ವಾರ್ಟರ್ ಕನಸು



ಕ್ಯಾಲಿಫೋರ್ನಿಯಾ: ಕೆನಡಾ ಇದೇ ಮೊದಲ ಬಾರಿಗೆ ವಿಶ್ವಕಪ್ ಇತಿಹಾಸದಲ್ಲಿ ಪ್ರಿಕ್ವಾರ್ಟರ್ ಫೈನಲ್ (16ರ ಸುತ್ತನ್ನು) ಪ್ರವೇಶಿಸಿದೆ. ಈ ಬಾರಿಯ ವಿಶ್ವಕಪ್‌ನ ಮೊದಲ ನಾಕೌಟ್ (32ರ ಸುತ್ತಿನ) ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಕೈಕ ಗೋಲಿನ ಗೆಲುವು ಸಾಧಿಸಿದೆ. ಎಕ್ಸ್‌ಟ್ರಾ ಟೈಮ್‌ನಲ್ಲಿ ಸ್ಟೀಫನ್ ಯುಸ್ಟಾಕಿಯೊ ಗೋಲ್ ಹೊಡೆಯುತ್ತಲೇ ಕೆನಡಾ ಕೋಚ್, ಆಟಗಾರರು ಮೈದಾನಕ್ಕಿಳಿದು ಸಂಭ್ರಮಿಸಿದರು. ಕೆಂಪು ಬಣ್ಣದ ಧಿರಿಸಲಿದ್ದ ಕೆನಡಾ ಅಭಿಮಾನಿಗಳ ಮಹಾಪೂರ ಸಂಭ್ರಮಪಟ್ಟಿತು.

ಇದೇ ಮೊದಲ ಬಾರಿ ವಿಶ್ವಕಪ್ ನಾಕೌಟ್ ಗೆದ್ದ ಕೆನಡಾ

ಮೊದಲಾರ್ಧ ಯಾವುದೇ ಗೋಲ್ ದಾಖಲಾಗಲಿಲ್ಲ. 90 ನಿಮಿಷಗಳವರೆಗೂ ಎರಡೂ ತಂಡಗಳು ಯಾವುದೇ ಗೋಲ್ ಹೊಡೆಯದೆ ಮತ್ತು ಹೊಡೆಯಲೂ ಬಿಡದೆ ಒತ್ತಡ ಹೇರಿದ್ದರು. ಆದರೆ ಕೊನೆಯ ಕ್ಷಣಗಳಲ್ಲಿ ಸಿಕ್ಕ ಸಣ್ಣದೊಂದು ಅವಕಾಶವನ್ನು ಸ್ಟೀಫನ್ ಯುಸ್ಟಾಕಿಯೊ ಬಳಸಿಕೊಂಡರು. ಕೆನಡಾ ನಾಕೌಟ್ ಗೆಲುವಿನ ಸಂಪೂರ್ಣ ಶ್ರೇಯಸ್ಸು ಸ್ಟೀಫನ್ ಯುಸ್ಟಾಕಿಯೊ ಅವರಿಗೆ ಸಲ್ಲುತ್ತದೆ. 90+2 ನಿಮಿಷದಲ್ಲಿ ಗೋಲ್ ಹೊಡೆದು ಯುಸ್ಟಾಕಿಯೊ, ಕೆನಡಾದ ಮೈಲಿಗಲ್ಲು ಗೆಲುವಿನ ರೂವಾರಿಯಾದರು. ಎಕ್ಸ್‌ಟ್ರಾ ಟೈಮ್‌ನ ಎರಡನೇ ನಿಮಿಷದಲ್ಲೇ ಯುಸ್ಟಾಕಿಯೋ ಗೋಲ್ ದಾಖಲಿಸಿದರು.

ಜು.4ರಂದು ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್‌ನಲ್ಲಿ ನೆದರ್‌ಲೆಂಡ್ ಅಥವಾ ಮೊರಾಕ್ಕೊ ತಂಡವನ್ನು ಕೆನಡಾ ಎದುರಿಸಬೇಕಿದೆ.

ಟೋಕಿಯೋದಲ್ಲಿ ಸ್ವರ್ಣ: ಕೆನಡಾದಲ್ಲಿ ಚಳಿಗಾಲ ಹಾಕಿ ಹಾಗೂ ಬೇಸಿಗೆಗಾಲದಲ್ಲಿ ಪುರುಷರ ಫುಟ್ಬಾಲ್ ರಾಷ್ಟ್ರೀಯ ತಂಡ ಪ್ರಾಬಲ್ಯ ಮೆರೆಯುತ್ತವೆ. ಅದೇ ರೀತಿ ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಅದ್ಭುತ ಪ್ರದರ್ಶನ ನೀಡಿ ಕ್ವಾರ್ಟರ್‌ಗೇರಿದೆ. 1985 ಮತ್ತು 2000ದಲ್ಲಿ ಕೊಂಕಾಕಾಫ್ ಗೋಲ್ಡ್ ಕಪ್ ಚಾಂಪಿಯನ್‌ಶಿಪ್ ಗೆದ್ದಿರುವುದು ಬಿಟ್ಟರೆ 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕೆನಡಾ ಸ್ವರ್ಣ ಪದಕ ಗೆದ್ದಿತ್ತು. ಆದರೆ ವಿಶ್ವಕಪ್‌ನಲ್ಲಿ ಇದೇ ಮೊದಲ ಬಾರಿ ಪ್ರಿಕ್ವಾರ್ಟರ್ ಪ್ರವೇಶಿಸಿದೆ.

ಹೊರಬಿದ್ದ ದ.ಆಫ್ರಿಕಾ

ದಕ್ಷಿಣ ಆಫ್ರಿಕಾ ಪೆನಾಲ್ಟಿ ಏರಿಯಾದಿಂದ ಸಿಕ್ಕ ಚೆಂಡನ್ನು ಯುಸ್ಟಾಕಿಯೊ ಬಲವಾಗಿ ಹೊಡೆದಿದ್ದು, ಗೋಲಿ ರಾನ್‌ವೆನ್ ವಿಲಿಯಮ್ಸ್ ಬಲಬದಿಗೆ ಡೈವ್ ಹೊಡೆದರೂ ಚೆಂಡನ್ನು ತಡೆಯಲು ಸಾಧ್ಯವಾಗಲಿಲ್ಲ. ಎಕ್ಸ್‌ಟ್ರಾ ಟೈಮ್‌ನಲ್ಲೂ ಸಮಬಲದ ಹೋರಾಟ ನೀಡಿದ ದಕ್ಷಿಣ ಆಫ್ರಿಕಾ ನಾಕೌಟ್ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ನತ್ತ ಕೊಂಡೊಯ್ಯುವ ಸಾಧ್ಯತೆಯಿತ್ತು. ಸ್ಟೀಫನ್ ಗೋಲ್ ಹೊಡೆದ ಬಳಿಕವೂ ಸಮಬಲ ಸಾಧಿಸಲು ದಕ್ಷಿಣ ಆಫ್ರಿಕಾ ತನ್ನ ಶಕ್ತಿಮೀರಿ ಪ್ರಯತ್ನ ನಡೆಸಿದರೂ ಗೋಲ್ ದಾಖಲಿಸುವಲ್ಲಿ ಯಶಸ್ವಿಯಾಗಲಿಲ್ಲ.

> ನನ್ನಲ್ಲಿದ್ದ ಎಲ್ಲಾ ಸಾಮರ್ಥ್ಯ ಒಟ್ಟುಗೂಡಿಸಿ ಗೋಲ್ ಹೊಡೆದುಬಿಟ್ಟೆ.
> ■ ಸ್ಟೀಫನ್ ಯುಸ್ಟಾಕಿಯೊ, ಕೆನಡಾ ಆಟಗಾರ

▸▸ ಕೆನಡಾ 1-0 ದಕ್ಷಿಣ ಆಫ್ರಿಕಾ

▸▸ 90+2 ಸ್ಟೀಫನ್ ಯುಸ್ಟಾಕಿಯೊ (ಕೆನಡಾ)

ಫೇವರಿಟ್ಸ್‌ಗೆ ಸುಲಭ ಹಾದಿ

ಬಹುನಿರೀಕ್ಷೆಯ ಫಿಫಾ ವಿಶ್ವಕಪ್ 2026ರ ನಾಕೌಟ್ ಹಂತ ಈಗಾಗಲೇ ಆರಂಭವಾಗಿದ್ದು, ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಮೊದಲ ತಂಡ. ಫುಟ್ಬಾಲ್ ಪಂಡಿತರ ಪ್ರಕಾರ, ಇವ್ಯಾವೂ ಫೇವರಿಟ್‌ಗಳಲ್ಲ, ಕಪ್ ಗೆಲ್ಲುವ ಫೇವರಿಟ್‌ಗಳಾದ ಅರ್ಜೆಂಟೀನಾ, ಫ್ರಾನ್ಸ್ ನಂತಹ ತಂಡಗಳು ಸುಲಭ ಹಾದಿಯನ್ನು ಹೊಂದಿವೆ.

ಅರ್ಜೆಂಟೀನಾ: ಲಿಯೊನೆಲ್ ಮೆಸ್ಸಿ ನೇತೃತ್ವದ ಹಾಲಿ ಚಾಂಪಿಯನ್ನರು ಶನಿವಾರ ಪದಾರ್ಪಣಾ ವಿಶ್ವಕಪ್‌ನಲ್ಲಿ ನಾಕೌಟ್‌ಗೇರಿದ ಕೇಪ್ ವರ್ಡೆಯನ್ನು ಎದುರಿಸಲಿದ್ದಾರೆ. ಕೇಪ್ ವರ್ಡೆ ಚಮತ್ಕಾರ ಮಾಡದಿದ್ದರೆ ಅರ್ಜೆಂಟೀನಾ ಗೆಲ್ಲುವು ಶತಸಿದ್ಧ. ಪ್ರಿಕ್ವಾರ್ಟರ್‌ನಲ್ಲಿ ಮೆಸ್ಸಿ ಬಳಗವು ಸುಲಭ ಭೇಟಿಗಳಾದ ಆಸ್ಟ್ರೇಲಿಯಾ ಅಥವಾ ಈಜಿಪ್ಟನ್ನು ಎದುರಿಸಲಿದೆ. ಕ್ವಾರ್ಟರ್ ಫೈನಲ್‌ನಲ್ಲಿ 11ನೇ ರ್‍ಯಾಂಕ್‌ನ ಕೊಲಂಬಿಯಾ ಹಾಗೂ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಅಥವಾ ಬ್ರೆಜಿಲ್ ಎದುರಿಸುವ ಸಾಧ್ಯತೆಯಿದೆ. ಮತ್ತೊಮ್ಮೆ ಅರ್ಜೆಂಟೀನಾ ಮತ್ತು ಫ್ರಾನ್ಸ್ ಫೈನಲ್ ನಿರೀಕ್ಷೆಯಿದೆ.

ಫ್ರಾನ್ಸ್: ಕಿಲಿಯನ್ ಎಂಬಾಪ್ಪೆ ಅವರ ಫ್ರಾನ್ಸ್ ಬುಧವಾರ ಸ್ವೀಡನ್ ಸವಾಲನ್ನು ಎದುರಿಸಲಿದೆ. 2018ರ ಚಾಂಪಿಯನ್ನರು ಲಯದಲ್ಲಿರುವ ಎಂಬಾಪ್ಪೆ ಹೊಂದಿದ್ದು, ಸ್ವೀಡನ್ ವಿರುದ್ಧ ಗೆಲ್ಲಬಹುದು. 16ರ ಸುತ್ತಿನಲ್ಲಿ ಜರ್ಮನಿ ಅಥವಾ ಪರಗ್ವೆ ಸಿಗಲಿವೆ. ಕ್ವಾರ್ಟರ್‌ನಲ್ಲಿ ಮೊರಾಕ್ಕೊ ಸಿಗಲಿದೆ. ಒಂದು ವೇಳೆ ಸ್ಪೇನ್ ರೊನಾಲ್ಡೊರ ಪೋರ್ಚುಗಲ್ ಎದುರು ಸೋತರೆ, ಫ್ರಾನ್ಸ್ ಫೈನಲ್ ಹಾದಿ ಇನ್ನಷ್ಟು ಸುಲಭ.

ಇಂಗ್ಲೆಂಡ್: ಹ್ಯಾರಿ ಕೇನ್ ಅವರ ಇಂಗ್ಲೆಂಡ್ 32ರ ಸುತ್ತಿನಲ್ಲಿ ಬುಧವಾರ ಡಿಆರ್ ಕಾಂಗೊವನ್ನು ಎದುರಿಸಲಿದೆ. 1966ರ ಚಾಂಪಿಯನ್ನರು ಈ ಬಾರಿ ಕಪ್ ಗೆಲ್ಲುವ ಗುರಿ ಹೊಂದಿದೆ. 16ರ ಸುತ್ತಿನಲ್ಲಿ ಮೆಕ್ಸಿಕೊ ಅಥವಾ ಈಕ್ವಡೋರ್ ಎದುರಿಸಬೇಕಿದೆ. ಇಂಗ್ಲೆಂಡ್ ಗೆದ್ದರೆ, ಕ್ವಾರ್ಟರ್‌ನಲ್ಲಿ 5ನೇ ರ್‍ಯಾಂಕ್‌ನ ಬ್ರೆಜಿಲ್ ಸಿಗಲಿದೆ.

ಅತ್ತ ದರಿ, ಇತ್ತ ಹುಲಿ

ಇದು ಅಕ್ಷರಶಃ ಕ್ರಿಸ್ಟಿಯಾನೋ ರೊನಾಲ್ಡೊರ ಪೋರ್ಚುಗಲ್ ಪರಿಸ್ಥಿತಿ. ತನ್ನ ಗುಂಪಿನ ಕೊನೆಯ ಪಂದ್ಯದಲ್ಲಿ ಕೊಲಂಬಿಯಾ ವಿರುದ್ಧ ಡ್ರಾ ಸಾಧಿಸಿದ ಪೋರ್ಚುಗಲ್, 32ರ ಸುತ್ತಿನಲ್ಲಿ ಜು.3ರಂದು ಕ್ರೊವೇಶಿಯಾ ಎದುರಿಸಲಿದೆ. 16ರ ಸುತ್ತಿನಲ್ಲಿ ಸ್ಪೇನ್ ಅಥವಾ ಆಸ್ಟ್ರಿಯಾ ಸಿಗಲಿವೆ. ಇದೆಲ್ಲ ಮೀರಿ ಕ್ವಾರ್ಟರ್‌ಗೇರಿದರೆ ಬೆಲ್ಜಿಯಂ, ಅಮೆರಿಕ, ಸೆನೆಗಲ್ ಅಥವಾ ಬೊಸ್ನಿಯಾ ಸಿಗಲಿವೆ. ಸೆಮಿಫೈನಲ್‌ನಲ್ಲಿ ಫ್ರಾನ್ಸ್, ನೆದರ್‌ಲೆಂಡ್, ಜರ್ಮನಿ ಅಥವಾ ಮೊರಾಕ್ಕೊ ಸಿಗಲಿವೆ. ಒಂದು ವೇಳೆ ಕೊಲಂಬಿಯಾ ವಿರುದ್ಧ ಗೆದ್ದಿದ್ದರೂ ಪೋರ್ಚುಗಲ್ ಕಠಿಣ ಎದುರಾಳಿಗಳನ್ನೇ ಎದುರಿಸಬೇಕಿತ್ತು.

ಎವಿಸಿ ವಾಲಿಬಾಲ್: ಐತಿಹಾಸಿಕ ಸಾಧನೆಗೈದ ಭಾರತ

ಭಾರತಕ್ಕೆ ಚೊಚ್ಚಲ ಕಂಚು



ಅಹಮದಾಬಾದ್: ಎವಿಸಿ ಪುರುಷರ ವಾಲಿಬಾಲ್ ಕಪ್‌ನಲ್ಲಿ ಭಾರತ ತಂಡವು ಚೊಚ್ಚಲ ಕಂಚಿನ ಪದಕ ಗೆದ್ದು ಇತಿಹಾಸ ಸೃಷ್ಟಿಸಿದೆ. ತಮಗಿಂತ ಪ್ರಬಲವಾದ ಬಹ್ರೈನ್ ತಂಡವನ್ನು ಸೋಲಿಸಿ ಭಾರತೀಯರು ಕಂಚು ಗೆದ್ದುಕೊಂಡಿದ್ದಾರೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 40ನೇ ಸ್ಥಾನದಲ್ಲಿದ್ದ ಬಹ್ರೈನ್ ತಂಡವನ್ನು ಸೋಲಿಸಿದ ಭಾರತ 18 ಸ್ಥಾನಗಳ ಬಡ್ತಿ ಪಡೆದು 42ನೇ ಸ್ಥಾನಕ್ಕೇರಿದೆ. 25–23, 23–25, 25–21, 25–17 ಅಂತರದ ಗೆಲುವು ಸಾಧಿಸಿದ ಭಾರತ, ಅರ್ಹವಾಗಿ ಇದೇ ಮೊದಲ ಬಾರಿಗೆ ವಾಲಿಬಾಲ್ ಕಪ್‌ನಲ್ಲಿ ಪೋಡಿಯಂ ಫಿನಿಶ್ ಕಂಡಿದೆ.

ವಾಲಿಬಾಲ್ ಕಪ್‌ನಲ್ಲಿ ಐತಿಹಾಸಿಕ ಕಂಚು ಗೆದ್ದ ಭಾರತೀಯ ಪುರುಷರ ತಂಡವನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸನ್ಮಾನಿಸಿದ್ದಾರೆ.

> ಇದು ಐತಿಹಾಸಿಕ ಪದಕ, ಭಾರತೀಯ ವಾಲಿಬಾಲ್‌ಗೆ ಐತಿಹಾಸಿಕ ಕ್ಷಣ. ಇದಿನ್ನೂ ಆರಂಭವಷ್ಟೇ. ಪ್ರತಿ ಸಾಧನೆಯೂ ಇನ್ನಷ್ಟು ದೊಡ್ಡ ಜವಾಬ್ದಾರಿ ಮತ್ತು ಹೆಚ್ಚಿನ ನಿರೀಕ್ಷೆಗಳನ್ನು ಹುಟ್ಟುಹಾಕುತ್ತವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಅಥ್ಲೀಟ್‌ಗಳ ಸ್ಥಿರತೆ ಕಾಯ್ದುಕೊಳ್ಳಲು ಬೇಕಾದ ಅಗತ್ಯ ನೆರವುಗಳನ್ನು ಸರ್ಕಾರ ನೀಡಲಿದೆ.
> ■ ಮನ್ಸುಖ್ ಮಾಂಡವೀಯ, ಕ್ರೀಡಾ ಸಚಿವ

ಗಾಂಧಿನಗರದಲ್ಲಿ ತಂಡದ ನಾಯಕ ಜೆರೋಮ್ ವಿನೀತ್ ಚಾರ್ಲ್ಸ್ ಮತ್ತು ಕೋಚ್ ಸರ್ಬಿಯಾದ ಡ್ರೇಗನ್ ಮಿಹೈಲೊವಿಕ್ ಅವರನ್ನು ಭೇಟಿಯಾಗಿ ಸಚಿವ ಮಾಂಡವೀಯ ಅಭಿನಂದಿಸಿದ್ದಾರೆ.

ವಿಂಬಲ್ಡನ್: ಜಾರಿಬಿದ್ದ ಮಾಯಾ

ಲಂಡನ್: ಇತ್ತೀಚೆಗೆ ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡಿದ್ದ ಪೋಲೆಂಡ್ ತಾರೆ ಮಾಯಾ ಖಾವ್ಲಿನ್ಸ್ಕಾ ವಿಂಬಲ್ಡನ್ 2026ರ ಮೊದಲ ಸುತ್ತಿನಲ್ಲಿ ಗಾಯಾಳುವಾಗಿ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಥೈಲಾಂಡ್ ಅರ್ಹತಾ ಸುತ್ತಿನ ಆಟಗಾರ್ತಿ ಮನಂಚಯಾ ಸವಾಮಗ್‌ಕಾವ್ ಅವರ ಎದುರು ಸುಲಭದಲ್ಲಿ ಗೆಲುವು ಸಾಧಿಸುವವರಿದ್ದ ಮಾಯಾ ಹಸಿರು ಹುಲ್ಲಿನ ಅಂಗಣದಲ್ಲಿ ಕಾಲು ಜಾರಿ ಬಿದ್ದಿದ್ದು, ಗಾಯಗೊಂಡಿದ್ದಾರೆ. ಮೊದಲ ಸೆಟ್ ಗೆದ್ದಿದ್ದ ಮಾಯಾ, ದ್ವಿತೀಯ ಸೆಟ್‌ನಲ್ಲಿ ಇನ್ನೇನು ಒಂದು ಅಂಕ ಗೆಲ್ಲಬೇಕೆನ್ನುವಷ್ಟರಲ್ಲಿ ಜಾರಿ ಬಿದ್ದಿದ್ದು, ವಿಂಬಲ್ಡನ್ ಪ್ರಶಸ್ತಿಯೂ ಕೈಜಾರಿದೆ. ಮೊದಲ ಸೆಟ್‌ನಲ್ಲಿ ಅವರು 6–2 ಅಂತರದಿಂದ ಗೆಲುವು ಸಾಧಿಸಿದ್ದು, ದ್ವಿತೀಯ ಸೆಟ್‌ನಲ್ಲಿ 5–2 (40–30) ಅಂಕಗಳಿಂದ ಮುನ್ನಡೆಯನ್ನು ಸಾಧಿಸಿದ್ದರು. ಗಾಯಾಳು ಎಮ್ಮಾ ರಾಡುಕಾನು ಸಹ ಗಾಯದಿಂದಾಗಿ ಸ್ಪರ್ಧೆಯಿಂದ ಹೊರಗುಳಿದಿದ್ದಾರೆ.

ಆಘಾತದಿಂದ ಬಚಾವಾದ ಸಿನ್ನರ್: ಪುರುಷರ ಹಾಲಿ ಚಾಂಪಿಯನ್ ಮತ್ತು ವಿಶ್ವ ನಂ.1 ಯಾನಿಕ್ ಸಿನ್ನರ್ ದೊಡ್ಡ ಆಘಾತದಿಂದ ಸ್ವಲ್ಪದರಲ್ಲೇ ಪಾರಾಗಿದ್ದಾರೆ.

ಇಲ್ಲಿ ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಕೆಕ್ಮಾನೊವಿಕ್ ವಿರುದ್ಧ 1–2 ಸೆಟ್‌ಗಳ ಹಿನ್ನಡೆ ಅನುಭವಿಸಿದ್ದ ಸಿನ್ನರ್ ಹೋರಾಡಿ ಗೆದ್ದಿದ್ದಾರೆ. ಅವರು 4–6, 6–3, 6–7, 6–2, 6–3 ಸೆಟ್ ಅಂತರದಿಂದ ಜಯಿಸಿದ್ದಾರೆ.

ಯುಎಸ್ ಓಪನ್ ಫೈನಲ್‌ನಲ್ಲಿ ಸು ಲಿ ಯಾಂಗ್ ಎದುರು ಸೋಲು

ಬ್ಯಾಡ್ಮಿಂಟನ್: ಕಿದಂಬಿ ಶ್ರೀಕಾಂತ್ ರನ್ನರ್‌ಅಪ್



ಕ್ಯಾಲಿಫೋರ್ನಿಯಾ: ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ತಾರಾ ಶಟ್ಲರ್ ಕಿದಂಬಿ ಶ್ರೀಕಾಂತ್ ಅವರು ರನ್ನರ್‌ಅಪ್ ಆಗಿ ಹೊರಹೊಮ್ಮಿದ್ದಾರೆ. ಇಲ್ಲಿನ ಫುಲ್ಲರ್ಟನ್‌ನಲ್ಲಿ ಭಾನುವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಚೈನೀಸ್ ತೈಪೆ ಎದುರಾಳಿ ಸು ಲಿ ಯಾಂಗ್ ಎದುರು 15–21, 21–16, 9–21 ಅಂತರದಿಂದ ಶ್ರೀಕಾಂತ್ ಸೋತಿದ್ದಾರೆ. ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿದ ಶ್ರೀಕಾಂತ್ ಫೈನಲ್‌ನಲ್ಲಿ ವಿರೋಚಿತ ಸೋಲುಂಡಿದ್ದಾರೆ.

ತಮಗಿಂತ 9 ವರ್ಷ ಕಿರಿಯರಾದ ಚೈನೀಸ್ ತೈಪೆ ಎದುರಾಳಿಯ ಎದುರು ಸ್ಥಿರ ಪ್ರದರ್ಶನ ನೀಡುವಲ್ಲಿ 33ರ ಶ್ರೀಕಾಂತ್ ವಿಫಲರಾದರು. ಒಂದು ಗಂಟೆ ಮತ್ತು 9 ನಿಮಿಷಗಳ ಸೆಣಸಾಟದಲ್ಲಿ ಸು ಲಿ ಯಾಂಗ್ ಗೆಲುವು ಸಾಧಿಸಿದರು. ಆರಂಭಿಕ ಗೇಮ್‌ನಲ್ಲೇ 10–5ರ ಮುನ್ನಡೆಯೊಂದಿಗೆ ಸು ಒತ್ತಡ ಹೇರಿದ್ದರು. ಶ್ರೀಕಾಂತ್ ಕಂಬ್ಯಾಕ್ ಮಾಡಿ 10–10 ಸಮಬಲ ಸಾಧಿಸಿದರೂ ಸು ಸತತ 7 ಅಂಕಗಳನ್ನು ಸಂಪಾದಿಸಿದರು. ಎರಡನೇ ಗೇಮ್‌ನಲ್ಲಿ 15–13 ಮುನ್ನಡೆ ಪಡೆದುಕೊಂಡಿದ್ದ ಶ್ರೀಕಾಂತ್ 20–13ರವರೆಗೆ ಸು ಅಂಕ ಸಂಪಾದಿಸಲು ಬಿಡಲಿಲ್ಲ. ಅಂತಿಮವಾಗಿ ಶ್ರೀಕಾಂತ್ 21–16ರಿಂದ ಎರಡನೇ ಗೇಮ್ ತಮ್ಮದಾಗಿಸಿದ್ದರು. ಮೂರನೇ ಗೇಮ್‌ನಲ್ಲಿ 24ರ ಹರೆಯದ ಲಿ ಯಾಂಗ್ 9–7ರ ಮುನ್ನಡೆ ಸಾಧಿಸಿದ್ದರು. ಅಲ್ಲಿಂದ ಶ್ರೀಕಾಂತ್ ಅವರಿಗೆ ಒಂದೂ ಅಂಕ ಬಿಟ್ಟುಕೊಡಲಿಲ್ಲ. ಶ್ರೀಕಾಂತ್ ಮೂರನೇ ಗೇಮ್‌ನಲ್ಲಿ 9–21 ಅಂಕಗಳಿಂದ ಸೋಲುಂಡರು. ಶ್ರೀಕಾಂತ್ ಪ್ರಶಸ್ತಿ ಬರ ಎದುರಿಸುತ್ತಿದ್ದು, 2017ರ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಡೆಯದಾಗಿ ಪ್ರಶಸ್ತಿ ಮುಡಿಗೇರಿಸಿದ್ದರು.

ಸೆಮಿಯಲ್ಲಿ ಕ್ರೀಡಾ ಸ್ಫೂರ್ತಿ

ಸೆಮಿಫೈನಲ್‌ನಲ್ಲಿ ಜಪಾನ್ ಶಟ್ಲರ್ ಯುಡ್ಯೆ ಒಕೊಮೊಟೊರನ್ನು ಶ್ರೀಕಾಂತ್ 22–20, 15–21, 21–19 ಅಂತರದಿಂದ ಸೋಲಿಸಿದ್ದರು. ವೀಕ್ಷಕ ವಿವರಣೆಕಾರರ ಪ್ರಕಾರ ಇದು ಯುಎಸ್ ಓಪನ್‌ನ ಶ್ರೇಷ್ಠ ಪಂದ್ಯಗಳಲ್ಲೊಂದು. ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜಪಾನಿ ಶಟ್ಲರ್ ಅಭಿಮಾನಿಗಳು ಪಂದ್ಯದ ವೇಳೆ ಶ್ರೀಕಾಂತ್ ಎದೆಗುಂದಿಸುವ ಪ್ರಯತ್ನಗಳನ್ನು ಮಾಡಿದ್ದರು. ಡಿಸೈಡರ್ ಗೇಮ್‌ನಲ್ಲಿ ಶ್ರೀಕಾಂತ್ 10–8 ಮುನ್ನಡೆ ಸಾಧಿಸಿದ್ದರು. ಈ ವೇಳೆ ಶ್ರೀಕಾಂತ್ ಮತ್ತು ಯುಡ್ಯೆ ನಡುವೆ 17 ಹೊಡೆತಗಳ ರ್‍ಯಾಲಿ ನಡೆದಿತ್ತು. ಶ್ರೀಕಾಂತ್ ಅವರಿಗೆ ರೆಫರಿ ಅಂಕ ನೀಡಿದ್ದರು. ಜಪಾನ್ ಶಟ್ಲರ್ ರೆಫರಿಯೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಜಪಾನ್ ಅಭಿಮಾನಿಗಳು ಔಟ್, ಔಟ್ ಎಂದು ಬೊಬ್ಬೆ ಹಾಕಿದ್ದರು. ಮುನ್ನಡೆ 11–8 ಆಗಿತ್ತಾದರೂ ರೆಫರಿಯೊಂದಿಗೆ ಮಾತನಾಡಿದ ಶ್ರೀಕಾಂತ್ ಅಂಕವನ್ನು ಬಿಟ್ಟುಕೊಟ್ಟಿದ್ದರು. ಕೋಚ್ ಸಾಯಿ ಪ್ರಣೀತ್, ಪಾರುಪಲ್ಲಿ ಕಶ್ಯಪ್ ತಮ್ಮ ಆಟಗಾರನ ಕ್ರೀಡಾ ಸ್ಫೂರ್ತಿಯನ್ನು ಮೆಚ್ಚಿಕೊಂಡಿದ್ದಾರೆ.

ಪುರುಷರ ರ್‍ಯಾಂಕಿಂಗ್, ಮಹಿಳಾ ಟಿ20 ವಿಶ್ವಕಪ್ ನಿರ್ಣಾಯಕ

ಒಲಿಂಪಿಕ್ಸ್ ಅರ್ಹತಾ ಮಾನದಂಡ ಪ್ರಕಟ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ನಡೆಯಲಿರುವ ಕ್ರಿಕೆಟ್ ಸ್ಪರ್ಧೆಗೆ ಅರ್ಹತೆ ಪಡೆಯಲು ಪುರುಷರ ವಿಭಾಗದಲ್ಲಿ ಐಸಿಸಿ ಟಿ20 ತಂಡಗಳ ರ್‍ಯಾಂಕಿಂಗ್ ಹಾಗೂ ಮಹಿಳೆಯರ ವಿಭಾಗದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನವೇ ಪ್ರಮುಖ ಮಾನದಂಡವಾಗಲಿದೆ.

LA 2028

ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಐಸಿಸಿ) ಸೋಮವಾರ ಒಲಿಂಪಿಕ್ಸ್ ಕ್ರಿಕೆಟ್ ಅರ್ಹತಾ ಮಾನದಂಡವನ್ನು ಪ್ರಕಟಿಸಿದೆ. ಸುಮಾರು 100 ವರ್ಷಗಳ ಬಳಿಕ ಒಲಿಂಪಿಕ್‌ಗೆ ಮರಳುತ್ತಿರುವ ಕ್ರಿಕೆಟ್‌ನಲ್ಲಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಆರು ತಂಡಗಳು ಸ್ಪರ್ಧಿಸಲಿವೆ.

ಪುರುಷರ ರ್‍ಯಾಂಕಿಂಗ್‌ಗೆ ಆದ್ಯತೆ: ಅತ್ಯುನ್ನತ ರ್‍ಯಾಂಕಿಂಗ್ ಹೊಂದಿರುವ ನಾಲ್ಕು ರಾಷ್ಟ್ರಗಳ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳಿಗೆ ನೇರ ಅರ್ಹತೆ (ಎನ್‌ಒಸಿ) ದೊರೆಯಲಿದೆ. 2026ರ ಡಿ.31ರಂದು ಪ್ರಕಟವಾಗುವ ಐಸಿಸಿ ಪುರುಷರ ಟಿ20 ತಂಡಗಳ ರ್‍ಯಾಂಕಿಂಗ್ ಪರಿಗಣಿಸಲಾಗುತ್ತದೆ. ಆತಿಥೇಯ ಅಮೆರಿಕಕ್ಕೆ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಒಂದು ಸ್ಥಾನ ಖಾತರಿಯಾಗಿದೆ.

ಮಹಿಳಾ ವಿಶ್ವಕಪ್ ಫಲಿತಾಂಶ ಮಾನದಂಡ: ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನ ಆಧಾರಿಸಿ ಅಗ್ರ ನಾಲ್ಕು ತಂಡಗಳಿಗೆ ಎನ್‌ಒಸಿ ಕೋಟಾದಲ್ಲಿ ಸ್ಥಾನ ನೀಡಲಾಗುತ್ತದೆ.

ವಿಂಡೀಸ್‌ಗಿಲ್ಲ ನೇರ ಅವಕಾಶ: ವೆಸ್ಟ್ ಇಂಡೀಸ್ ಸೆಮಿಫೈನಲ್ ಪ್ರವೇಶಿಸಿದರೂ, ಅದು ಹಲವು ಕೆರಿಬಿಯನ್ ರಾಷ್ಟ್ರಗಳ ಸಂಯುಕ್ತ ತಂಡವಾಗಿದ್ದು, ಪ್ರತ್ಯೇಕ ಐಸಿಸಿ ರಾಷ್ಟ್ರೀಯ ಒಲಿಂಪಿಕ್ ಸಮಿತಿಯಾಗಿ ಮಾನ್ಯತೆ ಹೊಂದಿಲ್ಲ.

ಜಯ್ ಶಾ ಹೇಳಿದ್ದೇನು?: ಐಸಿಸಿ ಅಧ್ಯಕ್ಷ ಜಯ್ ಶಾ, 100 ವರ್ಷಗಳ ಬಳಿಕ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರಳುತ್ತಿರುವುದು ನಮ್ಮ ಕ್ರೀಡೆಗೆ ಐತಿಹಾಸಿಕ ಕ್ಷಣವಾಗಿದೆ. ಈ ಅರ್ಹತಾ ಮಾರ್ಗಸೂಚಿ ಪ್ರಕಟವಾಗಿರುವುದು ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಮಹತ್ವದ ಹೆಜ್ಜೆಯಾಗಿದ್ದು, ವಿಶ್ವದ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಒಲಿಂಪಿಕ್ ವೇದಿಕೆಯನ್ನು ತಲುಪಲು ಸ್ಪಷ್ಟ ಅವಕಾಶ ಕಲ್ಪಿಸಿದೆ ಎಂದು ಹೇಳಿದ್ದಾರೆ.

ಮಯಾಂಕ್, ತಾಹ ಅಬ್ಬರದ ಬ್ಯಾಟಿಂಗ್ | ಪ್ಲೇಆಫ್ ಆಸೆ ಜೀವಂತ

ತವರಿನಲ್ಲಿ ಹುಬ್ಬಳ್ಳಿಗೆ ಭರ್ಜರಿ ಜಯ

▸ ವಿಜಯಕುಮಾರ ಬೆಳ್ಳೇರಿಮಠ



ಚಿತ್ರ: ಮಂಜುನಾಥ ಜರತಾರಘರ

ಹುಬ್ಬಳ್ಳಿ: ಅನುಭವಿ ಮಯಾಂಕ್ ಅಗರವಾಲ್ ಹಾಗೂ ಮೊಹಮ್ಮದ್ ತಾಹ ಅವರ ಅಬ್ಬರದ ಬ್ಯಾಟಿಂಗ್‌ನಿಂದ ಮಹರಾಜ ಟ್ರೋಫಿಯ ಟಿ-20 ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತವರಿನ ಅಂಗಳದಲ್ಲಿ ಗೆದ್ದು ಬೀಗಿತು. ಎರಡನೇ ಗೆಲುವಿನೊಂದಿಗೆ 5 ಅಂಕಗಳಿಸಿ ಪ್ಲೇಆಫ್ ಆಸೆ ಜೀವಂತ ಉಳಿಸಿಕೊಂಡಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಮಳೆ ಸುರಿದಿದ್ದರಿಂದ ಪಂದ್ಯವನ್ನು 15 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಗುಲ್ಬರ್ಗಾ ಮಿಸ್ಟಿಕ್ಸ್ ನೀಡಿದ 140 ರನ್‌ಗಳ ಗುರಿಯನ್ನು ಹುಬ್ಬಳ್ಳಿ 17 ಎಸೆತಗಳು ಬಾಕಿ ಇರುವಂತೆಯೇ ಯಾವುದೇ ವಿಕೆಟ್ ಕಳೆದುಕೊಳ್ಳದೆ ಮುಟ್ಟಿತು. ಹಿಂದಿನ ಪಂದ್ಯದ ಸೋಲಿನ ಸೇಡು ತೀರಿಸಿಕೊಂಡಿತು. ಆರಂಭಿಕ ಆಟಗಾರ ಮಯಾಂಕ ಅಗರವಾಲ್(81) ಹಾಗೂ ಮೊಹಮ್ಮದ ತಾಹಾ(51) ಜೋಡಿ ಗುಲ್ಬರ್ಗಾ ಬೌಲರ್‌ಗಳ ಬೆವರಿಳಿಸಿದರು. ಮಳೆ ನಿಂತರೂ ಸಹ ಇವರಿಬ್ಬರ ಅಬ್ಬರದ ಬ್ಯಾಟಿಂಗ್ ತಡೆಯಲು ಗುಲ್ಬರ್ಗ ತಂಡದ ಬೌಲರ್‌ಗಳಿಗೆ ಆಗಲಿಲ್ಲ. ಇಬ್ಬರೂ ಜತೆಗೂಡಿ ಕೇವಲ 73 ಎಸೆತಕ್ಕೆ 143 ರನ್ ಕಲೆಹಾಕಿದರು.

ಮನೀಶ್-ರೆಡ್ಡಿ ಆಟ ವ್ಯರ್ಥ: ಟಾಸ್ ಸೋತು ಬ್ಯಾಟ್ ಮಾಡಿದ ಗುಲ್ಬರ್ಗಾ ಪರ ಆರಂಭಿಕರಾದ ಲೋಚನ್ ಗೌಡ, ನಾಯಕ ಶರತ್ ಬಿ.ಆರ್. ಹಾಗೂ ಪ್ರಕರ ಸಿ. ಬೇಗ ವಿಕೆಟ್ ಒಪ್ಪಿಸಿದರು. ವೈಭವ್ ಶರ್ಮಾ 17ಕ್ಕೆ 3 ವಿಕೆಟ್ ಕಬಳಿಸಿ ಗುಲ್ಬರ್ಗಾ ಮೊತ್ತ ಹೆಚ್ಚುವುದನ್ನು ನಿಯಂತ್ರಿಸಿದರು. ಕುಸಿದಿದ್ದ ಗುಲ್ಬರ್ಗಾಗೆ ತಿಪ್ಪಾ ರೆಡ್ಡಿ (51) ಅರ್ಧ ಶತಕದಾಟ, ರೆಡ್ಡಿ ಮತ್ತು ಮನೀಶ್ ಪಾಂಡೆ(35) 44 ರನ್ ಜತೆಯಾಟ ಆಸರೆಯಾಗಿತು.

ಸಂಕ್ಷಿಪ್ತ ಸ್ಕೋರ್


ಗುಲ್ಬರ್ಗಾ: ತಿಪ್ಪಾ ರೆಡ್ಡಿ 51(34), ಮನೀಶ್ ಪಾಂಡೆ 35(20), ವೈಭವ್ ಶರ್ಮಾ (17ಕ್ಕೆ 3).

ಹುಬ್ಬಳ್ಳಿ: ಮಯಾಂಕ್ 81(38), ಮೊಹಮ್ಮದ್ ತಾಹಾ 51(34).

ಪಂದ್ಯಶ್ರೇಷ್ಠ: ವೈಭವ್ ಶರ್ಮಾ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



6030

ಎಡದಿಂದ ಬಲಕ್ಕೆ

3.ನಾಲ್ಕು ವಿಧದ ಸೈನ್ಯಗಳುಳ್ಳ ಬುದ್ಧಿವಂತಿಕೆಯ ಆಟ (4)
5.ಕಹಿರುಚಿಯುಳ್ಳ ತರಕಾರಿ (3)
6.ಹಲ್ಲಿನ ಮೇಲ್ಮೈ ಹಾನಿಗೊಳಗಾಗುವುದು (4)
7.ಭೂಪಟ-ನೀಲಿನಕಾಶೆ (2)
8.ಗುಂಪಿನ ಒಡೆಯನಾದ ಶಿವಪುತ್ರ ತಿರುಗಿದ್ದಾನೆ (4)
10.ಪಕ್ಷದ ಹದಿಮೂರನೆಯ ದಿವಸ (4)
13.ಸಣ್ಣಕೋಟೆ-ದುರ್ಗವಿದು (2)
14.ಮತದ ನಡುವೆ ಅಂತರಂಗದ ಅಭಿಪ್ರಾಯವಿದೆ (4)
16.ಸೂಚ್ಯವಾಗಿ ಹೇಳು-ಶಬ್ದ ಮಾಡುವುದು (3)
17.ಕಮಲದಲ್ಲಿ ಹುಟ್ಟಿದವನು-ಬ್ರಹ್ಮ (4)

ಮೇಲಿನಿಂದ ಕೆಳಕ್ಕೆ

1.ಇದು ದಿಶೆಯ ತುದಿ (3)
2.ಇನ್ನೊಬ್ಬರ ಕೆಲಸ ಸುಲಭಗೊಳಿಸಲು ನೀಡುವ ಆಸರೆ (3)
3.ಬೆಳ್ಳಿ ತೆರೆಯ ಸಿನಿಮಾ ಇದು (5)
4. ''ನಾನು ಶರಣಾಗುತ್ತಿದ್ದೇನೆ'' ಎಂಬರ್ಥದ ಶಬ್ದ (3)
6. ಗಂಡಹೆಂಡಿರು ಕೂಡಿ ಕಾಣುತ್ತಿದ್ದಾರೆ (3)
9. ವಿಷ್ಣುವಿನ ವಾಹನದ ಚಿಹ್ನೆಯುಳ್ಳ ಪತಾಕೆ (5)
11.ವಿದ್ಯೆಯನ್ನು ಕಲಿತವನು (3)
12.ಕೊಂಚ ಕಡೆಯಲ್ಲಿರುವ ಕೃಶವಾದುದು (3)
14.ಅಸ್ಪಷ್ಟವಾದುದು-ಮಬ್ಬು (3)
15. ಗಾಢ,ವಿಶೇಷತೆಯಿಂದ ಕೂಡಿದ್ದು (3)

6029 ಉತ್ತರ

ಎಡದಿಂದ ಬಲಕ್ಕೆ:
1.ಸಂಚಾರ 3.ಲಲಾಮ
5.ಪಾನಕ 7.ಗಗನ
9.ಕನಕಾಚಲ
11.ಗಡಗಡಿಸು
14.ಗಂಗೆತ್ತು
15.ಬೀಜಾಣು
16.ತಿಜೋರಿ 17.ಸರಳು

ಮೇಲಿನಿಂದ ಕೆಳಕ್ಕೆ :
1.ಸಂಕಲನ 2.ರಸಪಾಕ
4.ಮನೋಬಲ 6.ಕಾಡು
8.ಗರುಡ 10.ಚರಿಗೆ
11.ಗತಭ್ರಾಂತಿ
12.ಗಣಿ 13.ಸುಮನಸ
14.ಗಂಟುಬೀಳು

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ,
email: eepredkpl@gmail.com, eepredkpl1@gmail.com

ಸಂ.ಪಂರಾಇಂ/ ವಿಕೊ/ಶಾ.ಶಾ/ಕಿ.ಇಂ/ಟೆಂಡರ/2026-27/654 ದಿನಾಂಕ: 29-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ- 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2023-24ನೇ ಸಾಲಿನ ಕೇಂದ್ರ ಸರಕಾರದ ಪಿ.ಎ.ಬಿ ಅನುಮೋದಿತ ಯೋಜನೆಯಡಿ ಕಾಮಗಾರಿಗೆ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಚೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539-220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ http://kppp.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 30-06-2026 ರ ನಂತರ ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

1) ಟೆಂಡರ್ ಪ್ರೋಸೆಸಿಂಗ್ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವಂತೆ. 2) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: 09 ತಿಂಗಳು. 3) ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: 30-06-2026 ಸಮಯ 10.00 ಗಂಟೆ ನಂತರ ದಿಂದ 28-07-2026 ಸಮಯ 16.00 ಗಂಟೆವರೆಗೆ. 4) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: 30-06-2026 ಸಮಯ 10.00 ಗಂಟೆ ನಂತರ ದಿಂದ 28-07-2026 ಸಮಯ 16.30 ಗಂಟೆವರೆಗೆ. 5) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-07-2026 ಕಚೇರಿ ಸಮಯದಲ್ಲಿ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ನಂತರ.

ಕಾಮಗಾರಿಯ ಹೆಸರು: 2023-24ನೇ ಸಾಲಿನ ಕೇಂದ್ರ ಸರಕಾರದ ಪಿ.ಎ.ಬಿ. ಅನುಮೋದಿತ ಕೆ.ಜಿ.ಬಿ.ವಿ ಟೈಪ್-3 ಕಟ್ಟಡ ವಸತಿ ಶಾಲೆ ಯೋಜನೆಯಡಿ ವಸತಿ ಶಾಲೆ 1) ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಕೆ.ಜಿ.ಬಿ.ವಿ ಉರ್ದು ಸಿದ್ದಾಪೂರ ವಸತಿ ಶಾಲೆ ನಿರ್ಮಾಣ ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷ): 198.30 ಇಎಂಡಿ ಮೊತ್ತ ಇ-ಪೋರ್ಟಲ್ ಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ಮೊತ್ತ: 297000/- ಗುತ್ತಿಗೆದಾರರ ದರ್ಜೆ: 1ನೇ ದರ್ಜೆ ಅವಧಿ: 09 ತಿಂಗಳು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/198/ಮಣಿಪಾಲ್/2026-27

CHANGE OF NAME

I, **NEHA DANDOTI** (Old Name) Resident of H No 06 M D Colony Yallapur oni Hubli, Dharwad Karnataka - 580020, have changed my name as **NEHA DARZI** (New Name) henceforth I will be called and recognized by new name for all future purposes, dated: 29/06/2026.

CHANGE OF NAME

I, **NUSRAT TASEWALE** (Old Name) Resident of Stand Road 53 Adi Bidi Belgaum Karnataka - 591106, have changed my name as **NUSRAT MUGATASAB TASHEWALE** (New Name) henceforth I will be called and recognized by new name for all future purposes, dated: 29/06/2026.

CHANGE OF NAME

I, **KIRAN SHISUNAL** (Old Name) Resident of 1173/1, Vinobhanagar, Davangere - 577006, have changed my name as **SANDHYA SANJEEV VERNEKAR** (New Name) henceforth I will be called and recognized by new name for all future purposes, dated: 29/06/2026.

CHANGE OF NAME

I, **SHABANA BANU** (Old Name) Resident of H No: 102, Housing Board, Chandra Gutti, Post: Chandragutti, Sorab, Dist: Shivamogga 577429, have changed my name as **SHABANA BANU IRFAN SATTARSAB** (New Name) henceforth I will be called and recognized by new name for all future purposes, dated: 29/06/2026.

CHANGE OF NAME

I, **HABIBA ILIYAS KHATLO** (Old Name) Resident of # 225/A Near Abubakar Siddique Masjid, Paduvani Kumta, Paduvani, Ultara Kannada Karnataka - 581333 have changed my name as **HABIBA MAHMMAD SHAREEF TANJI** (New Name) henceforth I will be called and recognized by new name for all future purposes, dated: 29/06/2026.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ. ಮೊತ್ತ
	ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಅ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560009.	
	ಐಎಫ್‌ಟಿ ಸಂಖ್ಯೆ: ಬೆಂಜಮಂ/ಮುಅ(ವಿನ್ಯಾಸ & ಗುಅ)/ಅಮುಅ/ತಾಂಸ/429/2026-27	ದಿನಾಂಕ: 29-06-2026
1	ಬೆಂಗಳೂರು ಜಲ ಮಂಡಳಿಯಲ್ಲಿ ವಿವಿಧ ಕೆಲಸಗಳು ಮತ್ತು ಸಾಮಗ್ರಿಗಳ ಪರಿಶೀಲನೆಗಾಗಿ 3ನೇ ವ್ಯಕ್ತಿಯ ತಪಾಸಣೆಗಾಗಿ ಏಜೆನ್ಸಿಗಳ ನಿಯೋಜನೆ.	- / ರೂ. 5,00,000/-
	ಐಎಫ್‌ಟಿ ಸಂಖ್ಯೆ: ಬೆಂಜಮಂ/ಮುಅ(ವಿನ್ಯಾಸ & ಗುಅ)/ಅಮುಅ/ತಾಂಸ/430/2026-27	ದಿನಾಂಕ: 29-06-2026
2	ಜಲಧಾರೆ 3.0 ವೆಬ್ ಮತ್ತು ಮೊಬೈಲ್ ಅಪ್ಲಿಕೇಶನ್ 3 ವರ್ಷಗಳ ಅವಧಿಗೆ ಹೋಸ್ಟಿಂಗ್ ಜೊತೆಗೆ ಎಎಂಸಿ ಯ ಕಾಮಗಾರಿ.	ರೂ. 466.22 ಲಕ್ಷಗಳು / ರೂ. 6,99,500/-

ಮೇಲಿನ ಕಾಮಗಾರಿಗಳಿಗಾಗಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14-07-2026 ರಂದು ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 15-07-2026 ರಂದು ಸಂಜೆ 4.00 ಗಂಟೆಗೆ.

ಸಹಿ/- ಮುಖ್ಯ ಅಭಿಯಂತರರು (ವಿನ್ಯಾಸ & ಗುಅ)

ಟೆಂಡರ್ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾ.ಪ್ರ/ಅಡ್ವರ್ಟೋರ್/1380/2026-27

ಮಾ॥ ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಬನಹಟ್ಟಿ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮಿಸ್ಲೆನಿಸ ನಂ.76 /2026

1.ಅಲ್ಲಮಾ ಗಂಡ ನಬಿಸಾಬ ಬಾಗವಾನ ವಯಾ :62ವರ್ಷ, ಉದ್ಯೋಗ:ಮನೆಗೆಲಸ, ಸಾ:ಬಾಂವಿ ಕಟ್ಟಿ ಗಲ್ಲಿ ಮಹಾಲಿಂಗಪೂರ, ತಾ:ರಬಕವಿ-ಬನಹಟ್ಟಿ 2.ಗುಲ್ಶನ್ ತಂದೆ ನಬಿಸಾಬ ಬಾಗವಾನ ವಯಾ :49ವರ್ಷ, ಉದ್ಯೋಗ:ವ್ಯಾಪಾರ, ಸಾ: ಬಾಂವಿ ಕಟ್ಟಿ ಗಲ್ಲಿ ಮಹಾಲಿಂಗಪೂರ, ತಾ: ರಬಕವಿ-ಬನಹಟ್ಟಿ, 3.ರಫೀಕ್ ತಂದೆ ನಬಿಸಾಬ ಬಾಗವಾನ, ವಯಾ:40ವರ್ಷ, ಉದ್ಯೋಗ: ವ್ಯಾಪಾರ, ಸಾ:ಬಾಂವಿ ಕಟ್ಟಿ ಗಲ್ಲಿ ಮಹಾಲಿಂಗಪೂರ,ತಾ:ರಬಕವಿ-ಬನಹಟ್ಟಿ,4.ಅಮೀನಾ ಗಂಡ ಅಬ್ದುಲ್ ರಜಾಕ ಬಾಗವಾನ, ವಯಾ:37 ವರ್ಷ, ಉದ್ಯೋಗ:ಮನೆಗೆಲಸ, ಸಾ:ಬಾಂವಿ ಕಟ್ಟಿ ಗಲ್ಲಿ ಮಹಾಲಿಂಗಪೂರ, ತಾ:ರಬಕವಿ-ಬನಹಟ್ಟಿ 5.ಆಸ್ಮಾ ಗಂಡ ಮಜ್ಜಿದ ಬಾಗವಾನ, ವಯಾ:36 ವರ್ಷ, ಉದ್ಯೋಗ: ಮನೆಗೆಲಸ, ಸಾ:ಕಾಗಲ್ ತಾ:ಜಿ:ಕೊಲ್ಹಾಪುರ 6.ಜಿನ್ನಿಲಾ ಗಂಡ ತಯಬಅಲಿ ಬಾಗವಾನ,ವಯಾ:35ವರ್ಷ, ಉದ್ಯೋಗ: ಮನೆಗೆಲಸ, ಸಾ:ಕುಂದರವಾಡಿ, ತಾ: ಶಿರೋಳ, ಜಿ:ಸಾಂಗಲಿ, 7.ಅಸಿನಾ ಗಂಡ ಸಲಿಂ ಬಾಗವಾನ, ವಯಾ:34ವರ್ಷ, ಉದ್ಯೋಗ:ಮನೆಗೆಲಸ, ಸಾ:ಕುಂದರವಾಡ, ತಾ: ಶಿರೋಳ ಜಿ: ಸಾಂಗಲಿ, 8.ಮುನಿರಾ ಗಂಡ ಅಲ್ಲಸಾಬ ಮೂಲಿಮನಿ ವಯಾ:33ವರ್ಷ, ಉದ್ಯೋಗ:ಮನೆಗೆಲಸ, ಸಾ:ತಿರೋಳ, ತಾ: ಬದಾಮಿ, ಜಿ: ಬಾಗಲಕೋಟ, 9.ರಫೀಕ ತಂದೆ ನಬಿಸಾಬ ಬಾಗವಾನ,ವಯಾ : 28ವರ್ಷ, ಉದ್ಯೋಗ: ಮನೆಗೆಲಸ, ಸಾ:ಬಾಂವಿ ಕಟ್ಟಿ ಗಲ್ಲಿ ಮಹಾಲಿಂಗಪೂರ, ತಾ:ರಬಕವಿ-ಬನಹಟ್ಟಿ 10.ತೌಫೀಕ ತಂದೆ ನಬಿಸಾಬ ಬಾಗವಾನ, ವಯಾ:27 ವರ್ಷ, ಉದ್ಯೋಗ: ಮನೆಗೆಲಸ, ಸಾ:ಬಾಂವಿ ಕಟ್ಟಿಗಲ್ಲಿ ಮಹಾಲಿಂಗಪೂರ, ತಾ:ರಬಕವಿ-ಬನಹಟ್ಟಿ

.....ಅರ್ಜಿದಾರರು

ವಿರುದ್ಧ

12) ಮುಖ್ಯಾಧಿಕಾರಿಗಳು ಪುರಸಭೆ, ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಮಹಾಲಿಂಗಪೂರ, ತಾ:ರಬಕವಿ ಬನಹಟ್ಟಿ

.....ಎದುರುದಾರ

ಜಾಹೀರನಾಮೆ

ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ನಬಿಸಾಬ ತಂದೆ ದಸಗೀರಸಾಬ ಬಾಗವಾನ ಇವನು ದಿನಾಂಕ: 14/12/2020 ರಂದು ಮಹಾಲಿಂಗಪೂರ ಪಟ್ಟಣದಲ್ಲಿ ಮರಣ ಹೊಂದಿದ್ದು, ಆ ಬಗ್ಗೆ ಎದುರುದಾರ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ದಾಖಲು ಮಾಡಿಕೊಳ್ಳಬೇಕೆಂದು ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.

ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಕೇಸನಲ್ಲಿ ಯಾರಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸಿನಲ್ಲಿ ದಿನಾಂಕ:04-08-2026ರಂದು ಮುಂಜಾನೆ10-30ಘಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರು ಏನ್ನಿದ್ದರೆ ಸಲ್ಲಿಸಬಹುದು. ಒಂದು ವೇಳೆಯಾವುದೇ ತಕರಾರು ಬಾರದಿದ್ದಲ್ಲಿ ಅರ್ಜಿದಾರರ ಮಾಗಣೆ ಪ್ರಕಾರ ಮುಂದಿನ ಆದೇಶ ಮಾಡಲು ಬರುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.

ನ್ಯಾಯಾಲಯದ ಆದೇಶದ ಮೇರೆಗೆ,
ಬನಹಟ್ಟಿ
ದಿ:27-04-2026

ಸಹಿ/-ಶಿರಸ್ತೆದಾರರು, ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,ಬನಹಟ್ಟಿ ಇವರ ನ್ಯಾಯಾಲಯ.
ಸಹಿ/-(ಎಮ್.ಕೆ.ಸಂಗನ್ನವರ) ಅರ್ಜಿದಾರರ ಪರ ವಕೀಲರು.

ಇ.ಪಿ.ನಂ 32/2026

ಮಾ॥ ಹಿರಿಯ ದಿವಾಣಿ ನ್ಯಾಯಾಧೀಶರು ಬಾದಾಮಿ ಇವರ ನ್ಯಾಯಾಲಯದಲ್ಲಿ

1)ಮಹಾದೇವಪ್ಪ ತಂದೆ ಬಸಪ್ಪ ಕೋಟಿ, ಸಾ॥ ಖ್ಯಾಡ, ತಾಲೂಕ:ಬಾದಾಮಿ, ...ವಾದಿ

ವಿರುದ್ಧ

1)ರಂಗಪ್ಪ ತಂದೆ ಬಸಪ್ಪ ಕೋಟಿ, ಸಾ॥ ಖ್ಯಾಡ, ತಾಲೂಕ: ಬಾದಾಮಿ, ...ಪ್ರತಿವಾದಿ

ನೋಟಿಸು ಕ್ರಮಾದೇಶ 5 ನಿಯಮ 20(1ಅ) ಸಿಪಿಸಿ ಅಡಿಯಲ್ಲಿ

ಗೆ:-

ಪ್ರತಿವಾದಿ ನಂಬರ1:ರಂಗಪ್ಪ ತಂದೆ ಬಸಪ್ಪ ಕೋಟಿ, ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ :ಬಾಗಲಕೋಟ,ಪ್ರತಿವಾದಿ ನಂಬರ2: ಶಂಕ್ರಪ್ಪ ತಂದೆ ರಂಗಪ್ಪ ಕೋಟಿ, ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ ಬಾಗಲಕೋಟ, ಪ್ರತಿವಾದಿ ನಂಬರ3(A):ಶಂಕ್ರವ್ವ ಗಂಡ ಯಲ್ಲಪ್ಪ ಕೋಟಿ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ: ಬಾಗಲಕೋಟ, ಪ್ರತಿವಾದಿ ನಂಬರ3(B): ಮಂಜವ್ವ ಗಂಡ ಬಾಲಪ್ಪ ಕೋಟಿ ಸಾ॥ ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ : ಬಾಗಲಕೋಟ, ಪ್ರತಿವಾದಿ ನಂಬರ6: ಶಿವನಪ್ಪ ತಂದೆ ಚನ್ನಪ್ಪ ಕೋಟಿ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ: ಬಾಗಲಕೋಟ,ಪ್ರತಿವಾದಿ ನಂಬರ7: ಪುಂಡಲೀಕಪ್ಪ ತಂದೆ ಚನ್ನಪ್ಪ ಕೋಟಿ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ :ಬಾಗಲಕೋಟ ಪ್ರತಿವಾದಿ ನಂಬರ 8(A) :ನಿಂಗಬಸವ್ವ ಗಂಡ ರಂಗಪ್ಪ ಕೋಟಿ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ: ಬಾಗಲಕೋಟ ಪ್ರತಿವಾದಿ ನಂಬರ 8(B):ಶಂಕ್ರವ್ವ ಗಂಡ ಚನ್ನಪ್ಪ ಚಿಕ್ಕನ್ನವರ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ: ಬಾಗಲಕೋಟ, ಪ್ರತಿವಾದಿ ನಂಬರ 8(C) ಶಂಕ್ರಪ್ಪ ಗಂಡ ರಂಗಪ್ಪ ಕೋಟಿ ಸಾ॥ಖ್ಯಾಡ, ತಾಲೂಕ: ಬಾದಾಮಿ, ಜಿಲ್ಲಾ : ಬಾಗಲಕೋಟ ಪ್ರತಿವಾದಿ ನಂಬರ 8(D): ಕಸ್ತೂರೆವ್ವ ಗಂಡ ಸುರೇಶ ಕೋಟಿ ಸಾ॥ಖಾನಾಪೂರ ತಾಲೂಕ: ಬಾದಾಮಿ, ಜಿಲ್ಲಾ :ಬಾಗಲಕೋಟ ಪ್ರತಿವಾದಿ ನಂಬರ 10(A): ರಂಗವ್ವಾ ಗಂಡ ಶಿವಾನಂದ @ ಶಿವಪ್ಪ ಕೋಟಿ ಸಾ॥ ಮನ್ನೇರಿ, ತಾಲೂಕ: ಬಾದಾಮಿ, ಜಿಲ್ಲಾ ಬಾಗಲಕೋಟ, ಪ್ರತಿವಾದಿ ನಂಬರ 10(D): ಪದ್ಮಾವತಿ ಗಂಡ ಬಸವರಾಜ ಅವರಾದಿ ಸಾ॥ ಮನ್ನೇರಿ, ತಾಲೂಕ: ಬಾದಾಮಿ, ಜಿಲ್ಲಾ : ಬಾಗಲಕೋಟ

ಇದರಲ್ಲಿ ಮೇಲ್ಕಾಣಿಸಿದ ಡಿ ಎಚ್ ದಾರನು ಜೆ.ಡಿ ದಾರರ ವಿರುದ್ಧ ಅಸಲ ದಾವಾ ನಂಬರ 11/2010 ಅದ ಪ್ರಾಥಮಿಕ ಹುಕುಂನಾಮ ಮತ್ತು ಎಫ್.ಡಿ.ಪಿ ನಂಬರ 9/2018 ರಲ್ಲಿ ಆಗಿರುವ ಅಂತಿಮ ಹುಕುಂನಾಮೆ ಅನುಸಾರ ಬಾದಾಮಿ ತಾಲೂಕ ಪೈಕಿ ಖ್ಯಾಡ ಗ್ರಾಮದಲ್ಲಿರುವ ಜಮೀನು ರಿ.ಸ.ನಂಬರ 141 ಇದರಲ್ಲಿಯ ತನ್ನ ಪಾಲಿಗೆ ಬಂದಿರುವ ಬ್ಲಾಕ ನಂಬರ 4 ಮತ್ತು ರಿ.ಸ.ನಂಬರ 102/1ಬಿ ಇದರಲ್ಲಿ ತನ್ನ ಪಾಲಿಗೆ ಬಂದಿರುವ ಬ್ಲಾಕ ನಂಬರ -ಇವುಗಳ ಪ್ರತ್ಯಕ್ಷ ಕಬಜಾ ಕೋರಿ ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ದಾವೆಯಲ್ಲಿ ನೀವು ಜೆ.ಡಿ ದಾರ ನಂ:1,2,3(A) & 3(B),6,7, 8(A)ರಿಂದ 8(D), 10(A) & 10(D) ಇರುತ್ತೀರಿ.

ಈಗ ಸದರಿ ಪ್ರಕರಣವನ್ನು ದಿನಾಂಕ:22-07-26 ರಂದು ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರಾಗುವ ಸಲುವಾಗಿ ನಿಗದಿ ಆಗಿರುತ್ತದೆ. ಆ ಕಾರಣ ಮೇಲ್ಕಾಣಿಸಿದ ದಿನಾಂಕದಂದು ನೀವು ಸದರಿ ಪ್ರಕರಣದಲ್ಲಿ ನೀವು ಸ್ವತಃ ಆಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಬೇಕು. ತಪ್ಪಿದಲ್ಲಿ ಸದಲ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ಏಕತರ್ಫ ಅಂತಾ ನಿಕಾಲಿ ಮಾಡಲಾಗುವದು ಅಂತಾ ಕೊಟ್ಟ ನೋಟಿಸು.

ಈ ದಿವಸ ತಾ:25-06-26 ರಂದು ಮೇ: ಕೋರ್ಟಿನ ಶೀಲು ಹಾಗೂ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ:ಬಾದಾಮಿ.
ದಿನಾಂಕ:22-06-2026

ಸಹಿ/-ಹಿರಿಯ ಶಿರಸ್ತೆದಾರರು, ಹಿರಿಯ ಸಿವಿಲ್ ನ್ಯಾಯಾಲಯ ಬಾದಾಮಿ
ಸಹಿ/-ಕೆ.ವಿ.ಕೆರೂರ),ವಕೀಲರು, ಬಾದಾಮಿ
ನ್ಯಾಯಾಲಯದ ಆದೇಶದ ಮೇರೆಗೆ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ದೂರವಾಣಿ ಸಂಖ್ಯೆ : 08232-224195, ಇ-ಮೇಲ್ - eepredmandya@gmail.com

ಸಂಖ್ಯೆ:ಕಾಅ:ಪಂರಾಇಂ:ವಿ:ಮಂಡ್ಯ:ಸಇಂ-1:ಟೆಂಪ್ರ:2026-27 ದಿನಾಂಕ: 29.06.2026

ಟೆಂಡರ್ ಪ್ರಕಟಣೆ ಸಂಖ್ಯೆ:05/2026-27

ಕರ್ನಾಟಕ ಸರ್ಕಾರದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ಮಳವಳ್ಳಿ, ಶ್ರೀರಂಗಪಟ್ಟಣ ಮತ್ತು ಮಂಡ್ಯ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ ಲೆಕ್ಕಶೀರ್ಷಿಕೆ: ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, ಲೆಕ್ಕಶೀರ್ಷಿಕೆ: 2435-00-101-0-35 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಯೋಜನೆ ಮತ್ತು ಶಿಕ್ಷಣ ಇಲಾಖೆ ಯೋಜನೆಯಡಿ ಶೌಚಾಲಯ ನಿರ್ಮಾಣ ಮಾಡುವ ಕಾಮಗಾರಿಗಳು ಅನುಮೋದನೆಯಾಗಿರುವ ಒಟ್ಟು 22 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಇಡಲಾದ ಮೊತ್ತ ಗರಿಷ್ಟ ರೂ.54.61ಲಕ್ಷ ಮತ್ತು ಕನಿಷ್ಟ ರೂ.3.36 ಲಕ್ಷ ಟೆಂಡರ್‌ಗಳನ್ನು https://kppp.karnataka.gov.in, KPP Portal, ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 15/07/2026ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಮಂಡ್ಯ

ವಾಪಾಸಂಇ/ಮಂಡ್ಯ/ಶಿರಡಿ ಸಾಯಿ/237/2026-27

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಚೇರಿ

ಲೋ. ಇ. ಉಡುಪಿ ವಿಭಾಗ, ಉಡುಪಿ-576101.

ದೂರವಾಣಿ & ಫ್ಯಾಕ್ಸ್: (0820) 2531802

ಸಂಖ್ಯೆ: ಪಿಡಬ್ಲ್ಯೂಡಿಯುಡಿಎನ್:ಎನ್ಐಟಿ:06:2026-27:ಎಇ-2 ದಿನಾಂಕ:29.06.2026

ಟೆಂಡರ್ ಪ್ರಕಟಣೆ

2025-26ನೇಸಾಲಿನರೂ. 377.13 ಲಕ್ಷದ5054-80-190-0-01-132- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಯೋಜನೆಯಡಿಯ 1 ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in"" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್‌ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:16.07.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 17:ಕಾಇಂ:ಲೋಇ:ಹಾವಿ:ಕಿಇಂ-3:2026-27,
ದಿನಾಂಕ: 25.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 ಹಾಗು ಕೆ.ಡಬ್ಲ್ಯೂ-4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯ 6 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಕಾಮಗಾರಿ ಮೊತ್ತ ರೂ. 200.00 ಲಕ್ಷ ಹಾಗೂ ಕನಿಷ್ಠ ಕಾಮಗಾರಿ ಮೊತ್ತ ರೂ. 110.00 ಲಕ್ಷ. ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದ ಮೊತ್ತವು ಮಂಜೂರಾದ ಅಂದಾಜು ಮೊತ್ತವಾಗಿದ್ದು, ಜಿ.ಎಸ್.ಟಿ ಹಾಗೂ ಇತರೆಗಳನ್ನು ಹೊರತುಪಡಿಸಿ ಇ-ಪ್ರೊಕ್ಯೂರ್‌ಮೆಂಟ್‌ನಡಿಯಲ್ಲಿ ಬರುವ ಟೆಂಡರ್‌ಗಿಟ್ಟ ಮೊತ್ತವನ್ನು ಪರಿಗಣಿಸಿ ಅದಕ್ಕನುಗುಣವಾಗಿ ಇ.ಎಂ.ಡಿ ಮತ್ತು ಗುತ್ತಿಗೆದಾರರ ದರ್ಜೆಯನ್ನು ಪರಿಗಣಿಸುವುದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ:14.07.2026 16.00 ಗಂಟೆ ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka. gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/280/ಕೆಎಸ್‌ಎಂಸಿಎ/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಕಂಗ್ರಾಳಿ ಕೆ. ಹೆಚ್. ರಸ್ತೆ, ಬೆಳಗಾವಿ - 590 010, ಜಿಲ್ಲೆ: ಬೆಳಗಾವಿ, ರಾಜ್ಯ: ಕರ್ನಾಟಕ. ದೂರವಾಣಿ : 0831 - 2478927,
ಇ-ಮೇಲ್ : apmcbelgaum@gmail.com

ಸಂಖ್ಯೆ : ಕೃ.ಮಾ.ಇ./ಕೃ.ಉ.ಮಾ.ಸ.(ಬೆ)./ಲೀ.ಕಂ.ಸೇ./701/2026-27 ದಿನಾಂಕ : 29-06-2026

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿಯ ನೂತನ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣಗಳಲ್ಲಿನ ವಿವಿಧ ಕಟ್ಟಡಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ) ನಿಯಮಗಳು 2004 ರನ್ವಯ 9ಬಿ, ನಿಯಮ-3 ಮತ್ತು 13 ಗಳನ್ವಯ ಟೆಂಡರ್ ಕಂ ಬಹಿರಂಗ ಹರಾಜು ಮತ್ತು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಸಮಿತಿಯು ವಿಧಿಸುವ ಷರತ್ತು-ವ-ನಿಬಂಧನೆಗಳಿಗೆ ಒಳಪಟ್ಟು ವಿವಿಧ ಕಟ್ಟಡಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಸಕ್ತ ಅರ್ಹ ಪೇಟೆಕಾರ್ಯಕರ್ತರಿಂದ ಆಹ್ವಾನಿಸಲಾಗಿದೆ.

ಲೀಸ್ ಕಂ ಸೇಲ್

ಅ. ನಂ.	ಕಟ್ಟಡಗಳ ವಿವರ	ಕಟ್ಟಡಗಳ ಸಂಖ್ಯೆ	ವಿಸ್ತೀರ್ಣ (ಚ.ಅ. ಗಳಲ್ಲಿ)	ನಿಗಧಿಪಡಿಸಿದ ಲೀಸ್ ಕಂ ಸೇಲ್ ಮೌಲ್ಯ (ರೂ.ಗಳಲ್ಲಿ)	ಅರ್ಜಿ ಫಾರ್ಮ ಶುಲ್ಕ (ಜಿಎಸ್‌ಟಿ ಸೇರಿಸಿ)	ಆರಂಭಿಕ ಠೇವಣಿ ರೂ. ಗಳಲ್ಲಿ	ಮೀಸಲಾತಿ ವಿವರ	ಹಂಚಿಕೆಯ ವಿಧಾನ
01	ಬ್ಲಾಕ್-ಬಿ ಅಂಗಡಿ ಸಂಖ್ಯೆ : 40, 52	02	593.37	24,00,000-00	1180-00	6,00,000-00	ಸಾಮಾನ್ಯ	ಟೆಂಡರ ಕಂ ಬಹಿರಂಗ ಹರಾಜು
02	ಬ್ಲಾಕ್-'ಡಿ' 12 ಸಂಖ್ಯೆ ನೆಲಮಹಡಿ ಮಳಿಗೆಗಳು	12	762.38	16,27,000-00	1180-00	4,06,750-00	ಅಂಗಡಿ ಸಂ : 6,12, ಪರಿಶಿಷ್ಟ ಜಾತಿ, ಅಂಗಡಿ ಸಂ: 05 ಪರಿಶಿಷ್ಟ ಪಂಗಡ, ಅಂಗಡಿ ಸಂ: 07 ರೈತ ಉತ್ಪಾದಕ ಸಂಸ್ಥೆ	
03	ಬ್ಲಾಕ್-'ಡಿ' 12 ಸಂಖ್ಯೆ ಮೇಲ್ಮಹಡಿ ಮಳಿಗೆಗಳು	12	762.38	15,21,000-00	1180-00	3,80,250-00	ಅಂಗಡಿ ಸಂ: 16, 20, ಪರಿಶಿಷ್ಟ ಜಾತಿ, ಅಂಗಡಿ ಸಂ: 15 ಪರಿಶಿಷ್ಟ ಪಂಗಡ, ಅಂಗಡಿ ಸಂ: 23 ರೈತ ಉತ್ಪಾದಕ ಸಂಸ್ಥೆ	
04	33 ಅಂಗಡಿಗಳ ಸಂಕೀರ್ಣದಲ್ಲಿನ ಮಳಿಗೆಗಳು ಸಂಖ್ಯೆ: 01 ರಿಂದ 06	06	527.5	12,61,500-00	1180-00	3,15,375-00	ಅಂಗಡಿ ಸಂ: 06, 12, 18, 24, 30 ಪರಿಶಿಷ್ಟ ಜಾತಿ, ಅಂಗಡಿ ಸಂ: 16, 31 ಪರಿಶಿಷ್ಟ ಪಂಗಡ, ಅಂಗಡಿ ಸಂ: 10, ರೈತ ಉತ್ಪಾದಕ ಸಂಸ್ಥೆ ಅಂಗಡಿ ಸಂ: 04 ಸಾಮಾನ್ಯ ಮಹಿಳೆ	ಜೇಷ್ಠತೆ ಮತ್ತು ಅರ್ಹತೆ
05	33 ಅಂಗಡಿಗಳ ಸಂಕೀರ್ಣದಲ್ಲಿನ ಮಳಿಗೆಗಳು ಸಂಖ್ಯೆ: 07	01	910.00	21,75,100-00	1180-00	5,43,775-00		
06	33 ಅಂಗಡಿಗಳ ಸಂಕೀರ್ಣದಲ್ಲಿನ ಮಳಿಗೆಗಳು ಸಂಖ್ಯೆ : 08, 09, 10, 12, 14, 15, 16, 17, 18, 19	10	575	12,61,500-00	1180-00	3,15,375-00		
07	33 ಅಂಗಡಿಗಳ ಸಂಕೀರ್ಣದಲ್ಲಿನ ಮಳಿಗೆಗಳು ಸಂಖ್ಯೆ : 20, 21, 22	03	633	15,13,600-00	1180-00	3,78,400-00		
08	33 ಅಂಗಡಿಗಳ ಸಂಕೀರ್ಣದಲ್ಲಿನ ಮಳಿಗೆಗಳು ಸಂಖ್ಯೆ : 24, 26, 27, 28, 29, 30, 31, 32, 33	09	588.20	12,61,500-00	1180-00	3,15,375-00		

ಮೇಲ್ಕಂಡ ಕಟ್ಟಡಗಳಿಗೆ (ಮಾನ್ಯ ನಿರ್ದೇಶಕರ ಪತ್ರ ಸಂಖ್ಯೆ : ಕೃಮಾಇ/ಅಭಿವಿ-3/ಲೀ&ಲೈ/ಇ/106743/2026, ದಿನಾಂಕ : 19-06-2026 ರ ಪತ್ರದಂತೆ) ಬೆಳಗಾವಿ ಸಮಿತಿಯ ಪ್ರಾಂಗಣದಲ್ಲಿನ ಭಾನುವಾರ ಸಂತೆ ಮಾರುಕಟ್ಟೆಯಲ್ಲಿ ಪ್ರಸ್ತುತ ವಹಿವಾಟು ನಡೆಸುತ್ತಿರುವ ವರ್ತರುಗಳಿಗೆ ಸೀಮಿತಗೊಳಿಸಿ ನಿಗದಿತ ಬ್ಲಾಕ್‌ಗಳಲ್ಲಿ ಮಳಿಗೆಗಳನ್ನು ನಿಯಮಾನುಸಾರ ಹಂಚಿಕೆ ಮಾಡುವ ಸಲುವಾಗಿ ಸದರಿ ಪೇಟೆಕಾರ್ಯಕರ್ತರಿಗೆ ಮಾತ್ರ ಹಂಚಿಕೆ ಪಡೆಯಲು ನೋಂದಣೆ ಮಾಡಿಕೊಳ್ಳತಕ್ಕದ್ದು ಹಾಗೂ ಟೆಂಡರ್ ಫಾರ್ಮ ಪಡೆಯಲು ಕಡೆಯ ದಿನಾಂಕ : 10-07-2026, ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 17-07-2026 ರಂದು ಸಮಯ ಮಧ್ಯಾಹ್ನ 4.00 ಗಂಟೆಯವರೆಗೆ ದಿನಾಂಕ : 21-07-2026 ರಂದು ಬೆಳಿಗ್ಗೆ 11.00 ಗಂಟೆಗೆ ಟೆಂಡರ್-ಕಂ-ಬಹಿರಂಗ ಹರಾಜನ್ನು ಕೈಗೊಳ್ಳಲಾಗುವುದು. ಜೇಷ್ಠತಾ ಪಟ್ಟಿಯನ್ನು ಕಛೇರಿ ಪ್ರಕಟಣಾ ಫಲಕದಲ್ಲಿ ದಿನಾಂಕ : 29-07-2026 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಕಟಿಸಲಾಗುವುದು. ಷರತ್ತು-ವ-ನಿಬಂಧನೆಗಳನ್ನು ಸಮಿತಿಯ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ. ಅರ್ಜಿದಾರರು ದಿನಾಂಕ : 01-06-2026 ರ ಒಳಗಾಗಿ ಮಾರುಕಟ್ಟೆ ಸಮಿತಿ ಅಥವಾ ಉಪ ನಿರ್ದೇಶಕರ ಕಛೇರಿ, ಕೃಷಿ ಮಾರಾಟ ಇಲಾಖೆ, ಬೆಳಗಾವಿ ಇವರಿಂದ ದಲ್ಲಾಲಿ / ಖರೀದಿ ಲೈಸನ್ಸ್ ಪಡೆದಿರತಕ್ಕದ್ದು.

ಮೇಲಿನ ಅಂಗಡಿಗಳಿಗೆ ಸಲ್ಲಿಸಿದ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಸಹಿ/- ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/505/ಮಣಿಪಾಲ್/2026-27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಡಿಯೂರು ವಿಭಾಗ,
4ನೇ ಕ್ರಾಸ್, ಜಯನಗರ 7ನೇ ಬ್ಲಾಕ್, ಬೆಂಗಳೂರು-560 070.

ಸಂಖ್ಯೆ: ಕಾಪಾಅ(ಯಡಿ)/ಟೆಂಡರ್/05/2026-27 ದಿನಾಂಕ: 29-06-2026

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ

ದ್ವಿ ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂಪನಪಾ ಬೆಂಗಳೂರು ರವರು ಬೆಂಪನಪಾ / ಸಿಪಿಡಬ್ಲ್ಯೂಡಿ / ಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ವಾರ್ಡ್ ಸಂಖ್ಯೆ 105ರ ಯಡಿಯೂರು ಮತ್ತು 106 ದೇವಗಿರಿ ದೇವಸ್ಥಾನ ಉಪ ವಿಭಾಗದ ರಸ್ತೆಗಳು, ಒಳಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು, 10 ಕಾಮಗಾರಿಗಳನ್ನು ಒಳಗೊಂಡಿವೆ. ಕ್ರ. ಸಂ. 112, 113, 114, 115, 116, 117, 130, 131, 132 ಮತ್ತು 133. (ಪ್ಯಾಕೇಜ್- 01-2026 ಯಡಿಯೂರು). ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 933.14. ಇಎಂಡಿ (ರೂ.ಗಳಲ್ಲಿ): ರೂ.5.00 ಲಕ್ಷಗಳು ಆನ್‌ಲೈನ್ ಮೂಲಕ ಪಾವತಿ ಮತ್ತು ಬಿಜಿ ಮೂಲಕ ರೂ.9.00 ಲಕ್ಷಗಳು.
2)	ವಾರ್ಡ್ ಸಂಖ್ಯೆ 107ರ ಧರ್ಮಗಿರಿ ಮತ್ತು 108ರ ಗಣೇಶ ಮಂದಿರ ಉಪವಿಭಾಗದಲ್ಲಿ ರಸ್ತೆಗಳು, ಒಳಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು, 6 ಕಾಮಗಾರಿಗಳನ್ನು ಒಳಗೊಂಡಿದೆ ಕ್ರ. ಸಂ. 118, 119, 120, 121, 134 ಮತ್ತು 135. (ಪ್ಯಾಕೇಜ್-02-2026 ಯಡಿಯೂರು). ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 790.85. ಇಎಂಡಿ (ರೂ.ಗಳಲ್ಲಿ): ರೂ.5.00 ಲಕ್ಷಗಳು ಆನ್‌ಲೈನ್ ಮೂಲಕ ಪಾವತಿ ಮತ್ತು ಬಿಜಿ ಮೂಲಕ ರೂ.6.86 ಲಕ್ಷಗಳು.
3)	ವಾರ್ಡ್ ಸಂಖ್ಯೆ 109, ಕಾಮಾಕ್ಯ ಮತ್ತು 110ರ ಚಿಕ್ಕಲಸಂದ್ರದಲ್ಲಿ ಯಡಿಯೂರು ವಿಭಾಗದ ರಸ್ತೆಗಳು, ಒಳಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು, ಇದರಲ್ಲಿ 6 ಕಾಮಗಾರಿಗಳು ಸೇರಿವೆ. ಕ್ರ. ಸಂ. 122, 123, 124, 125, 136 ಮತ್ತು 137. (ಪ್ಯಾಕೇಜ್-03-2026 ಯಡಿಯೂರು). ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 767.10. ಇಎಂಡಿ (ರೂ.ಗಳಲ್ಲಿ): ರೂ.5.00 ಲಕ್ಷಗಳು ಆನ್‌ಲೈನ್ ಮೂಲಕ ಪಾವತಿ ಮತ್ತು ಬಿಜಿ ಮೂಲಕ ರೂ.6.15 ಲಕ್ಷಗಳು.
4)	ವಾರ್ಡ್ ಸಂಖ್ಯೆ 111 ಇಟ್ಟುಮಡು ಮತ್ತು 112ರ ಹೊಸಕೆರೆಹಳ್ಳಿ ಉಪವಿಭಾಗದಲ್ಲಿ ರಸ್ತೆಗಳು, ಒಳಚರಂಡಿಗಳು, ಪಾದಚಾರಿ ಮಾರ್ಗಗಳು ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು, 6 ಕಾಮಗಾರಿಗಳನ್ನು ಒಳಗೊಂಡಿದೆ ಕ್ರ. ಸಂ. 126, 127, 128, 129, 138 ಮತ್ತು 139. (ಪ್ಯಾಕೇಜ್-04-2026 ಯಡಿಯೂರು). ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): 830.40. ಇಎಂಡಿ (ರೂ.ಗಳಲ್ಲಿ): ರೂ.5.00 ಲಕ್ಷಗಳು ಆನ್‌ಲೈನ್ ಮೂಲಕ ಪಾವತಿ ಮತ್ತು ಬಿಜಿ ಮೂಲಕ ರೂ.7.46 ಲಕ್ಷಗಳು.

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: 01-07-2026ರ ಸಂಜೆ 4:30 ಗಂಟೆಯ ನಂತರ ಡೌನ್‌ಲೋಡ್ ಮಾಡಬಹುದು. 2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 09-07-2026ರ ಸಂಜೆ 4.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆಯು ದಿನಾಂಕ 04.07.2026 ರಂದು ಸಂಜೆ 4.00 ಗಂಟೆಗೆ ಮುಖ್ಯ ಅಭಿಯಂತರರು, ಮಲ್ಲೇಶ್ವರಂ ವಲಯ, ಬಿಡಬ್ಲ್ಯೂಸಿಸಿ, ಪಾಲಿಕೆ ಸೌಧ ಕಟ್ಟಡ, 1ನೇ ಮಹಡಿ, 14ನೇ ಅಡ್ಡರಸ್ತೆ, ಚಂದ್ರಾ ಲೇಔಟ್, ಬೆಂಗಳೂರು-560072 ರಲ್ಲಿ ನಡೆಯಲಿದೆ. 4) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ: 10-07-2026 ಸಂಜೆ 4:30 ಗಂಟೆಗೆ. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಯಡಿಯೂರು ವಿಭಾಗ, ಬೆಂಪನಪಾ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2026-27/1962 ದಿನಾಂಕ: 25/06/2026

ಇ-ಟೆಂಡರ್/ ಮರುಟೆಂಡರ್ ಹಾಗೂ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-1 & Call-5)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2026-27 ನೇ ಸಾಲಿನ 2059-ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆ ಅಡಿ 3 ಕಾಮಗಾರಿಗಳು, 2216-ವಸತಿ ಗೃಹ ಕಟ್ಟಡಗಳ ನಿರ್ವಹಣೆ ಅಡಿ 6 ಕಾಮಗಾರಿಗಳು, 3054-ಜಿಮುರ ನಿರ್ವಹಣೆ ಅಡಿ 1 ಕಾಮಗಾರಿ, 5054-ರಾಹೆ ಸುಧಾರಣೆ ಅಡಿ 1 ಕಾಮಗಾರಿ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿ 7 ಕಾಮಗಾರಿಗಳು ಹಾಗೂ 4059- ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ /ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 19 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ:06-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:08-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:10-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 13-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 1 ರಿಂದ 18 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ : 10-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-503/KSMCA/2026-27

Vikas Souharda Co-operative Bank Ltd.

Vikas Bank

Head Office : Sardar Patel Main Road, Patel Nagar, Hosapete - 583201, Vijayanagar Dist.

Balance Sheet as on 31st March 2026

LIABILITIES	Schedule	As on 31.03.2026	As on 31.03.2025
Capital and Liabilities			
Capital	1	40,34,87,300.00	33,04,09,600.00
Reserves and Surplus	2	96,15,79,916.14	87,87,57,320.97
Deposits	3	13,65,08,18,757.96	10,15,99,15,013.71
Borrowings	4	-	-
Other Liabilitis and provisions	5	21,27,13,024.93	23,19,26,321.56
Total		**15,22,85,98,999.03**	**11,60,10,08,256.24**
ASSETS			
Cash and balances with Reserve Bank of India	6	90,25,35,468.16	51,77,84,248.46
Balance with banks and money at call and short notice	7	1,00,10,74,853.40	1,17,24,51,651.48
investments	8	4,88,74,41,578.00	3,01,16,85,555.00
Advances	9	7,83,95,98,278.76	6,40,40,41,670.18
Fixed Assets	10	32,76,28,294.59	27,30,50,238.59
Other Assets	11	27,03,20,526.12	22,19,94,892.53
Total		**15,22,85,98,999.03**	**11,60,10,08,256.24**
		-	-
Contingent liabilities	12		
Customer Liability on Guarantee		11,43,82,698.00	10,48,19,370.00
NPA Interest Receivable		15,68,27,434.92	10,88,13,565.35
Dea Fund Accounts		62,00,504.33	58,06,097.90
Gratuity Payable		75,05,158.90	81,22,901.22
Total		**28,49,15,796.15**	**22,75,61,934.47**

Form-B

Form of Profit and Loss Account for the year ended on 31st March 2026

Particulars	Schedule	As on 31.03.2026	As on 31.03.2025
Income			
Interest earned	13	1,13,16,77,222.17	1,00,34,85,698.91
Other Incomes	14	7,98,71,716.68	9,68,82,273.22
Total		**1,21,15,48,938.85**	**1,10,03,67,972.13**
Expenditure			
Interest expanditure	15	85,89,14,692.88	73,91,03,624.86
Operating expenses	16	22,05,23,269.61	24,63,23,350.22
Provisions and contingencies	17	2,87,23,587.47	1,45,87,461.00
Total		**1,10,81,61,549.96**	**1,00,00,14,436.08**
Profit/Loss			
Net profit/loss for the year		10,33,87,388.89	10,03,53,536.05
Profit/Loss brought forward			
Total		**1,21,15,48,938.85**	**1,10,03,67,972.13**
Appropriations			
Transfer to statutory reserves		2,58,46,847.22	2,77,44,983.24
Transfer to other reserves		2,79,14,595.00	2,03,06,692.00
Transfer to Govt./proposed dividend		-	3,90,87,679.00
Balance carried over to balance sheet			-

Schedule 1 - Capital

		As on 31.03.2026	As on 31.03.2025
I	For Nationalised Banks		
	Capital (Fully owned by central Govt.)		
II	For Banks incorporated outside India		
	Capital		
	i.		
	Total		
III	For Other Banks		
	Authorised Capital	1,00,00,00,000.00	1,00,00,00,000.00
	Issued Capital		
	Subscribed capital	40,34,87,300.00	33,04,09,600.00
	a. Regular Share capital each Rs. 100/share	37,81,55,000.00	31,30,07,300.00
	b. Associated Share capital each 100/share	2,53,32,300.00	1,74,02,300.00
	Called Capital	-	-
	Less: Calls unpaid	-	-
	Add : Forfeited shares	-	-

Schedule 2 - Reserves and Surplus

Sl No	Particulars	As on 31.03.2026	As on 31.03.2025
I	Statutory Reserves	27,68,19,267.97	24,47,47,826.11
	opening balance	24,47,47,826.11	20,82,40,459.60
	Addition during the year	3,20,71,441.86	3,65,07,366.52
	Deduction during the year	-	-
II	Capital Reserves	-	-
	Addition during the year	-	-
	Deduction during the year	-	-
III	Share Premium	-	-
	opening balance	-	-
	Addition during the year	-	-
	Deduction during the year	-	-
IV	Revenues and Other Reserves	58,13,73,259.28	53,36,55,958.81
	opening balance	53,36,55,958.81	50,88,06,037.08
	Addition during the year	4,77,17,300.47	2,48,49,921.73
	Deduction during the year		
V	Balance in Profit and Loss Account	10,33,87,388.89	10,03,53,536.05
	Total	**96,15,79,916.14**	**87,87,57,320.97**

Schedule 3 - Deposits

Sl No	Particulars	As on 31.03.2025	As on 31.03.2024
A.I	Demand Deposits		
	i. From banks		
	ii. From others	89,23,88,950.92	64,60,73,072.98
II	Savings Bank Deposits	91,94,09,507.83	70,24,93,093.76
III	Term Deposits		
	i. From banks		
	ii. From others	1,83,90,20,299.21	8,81,13,48,846.97
	Total	**13,65,08,18,757.96**	**10,15,99,15,013.71**
B	i. Deposits of branches in India	-	-
	ii. Deposits of branches outside India	-	-
	Total	**13,65,08,18,757.96**	**10,15,99,15,013.71**

Schedule 4 - Borrowings

Sl No	Particulars	As on 31.03.2026	As on 31.03.2025
I	Borrowings in India	-	-
	a. Reserve Bank of India	-	-
	b. Other banks	-	-
	c. Other Institutions and agencies	-	-
II	Borrowings outside India	-	-
	Total	-	-

Schedule 5 - Other Liabilities and Provisions

Sl No	Particulars	As on 31.03.2025	As on 31.03.2024
I	Bills Payable	-	-
II	Inter-Office adjustment (net)	-	-
III	Interest accrued	3,06,01,332.01	10,25,69,035.01
IV	Others (including provisions)	18,21,11,692.92	12,93,57,286.55
	Total	**21,27,13,024.93**	**23,19,26,321.56**

Schedule 6 - Cash and Balances with Reserve Bank of India

Sl No	Particulars	As on 31.03.2026	As on 31.03.2025
I	Cash in hand	33,11,31,143.00	30,91,28,929.00
II	Balances with RBI		
	a. in CA	57,14,04,325.16	20,86,55,319.46
	b. in Other accounts		
	Total	**90,25,35,468.16**	**51,77,84,248.46**

Schedule 7 - Balances with Banks and Money at call and Short Notice

Sl No	Particulars	As on 31.03.2026	As on 31.03.2025
I	In India		
	i. Balances with Banks		
	a. in Current Accounts	80,10,74,853.40	97,24,51,651.48
	b. in Other Deposit Accounts		
	ii. Money at call and short notice	20,00,00,000.00	20,00,00,000.00
	a. with banks	-	
	b. with other institutions		
	Total	**1,00,10,74,853.40**	**1,17,24,51,651.48**
II	Outside India		
	a. in Current Accounts	-	-
	b. in Other Deposit Accounts	-	-
	c. Money at call and short notice		
	Total		
	Grand Total (I and II)	**1,00,10,74,853.40**	**1,17,24,51,651.48**

Schedule 8 - Investments

Sl No	Particulars	As on 31.03.2026	As on 31.03.2025
I	Investments in India in		
	i. Governments securities	4,05,09,77,962.00	2,61,22,39,966.00
	ii. Other approved securities	-	-
	iii. Shares	3,23,000.00	3,23,000.00
	iv. Debentures and Bonds		-
	v. Subsidiaries and/or joint ventures		-
	vi. Others	83,61,40,616.00	39,91,22,589.00
	Total	**4,88,74,41,578.00**	**3,01,16,85,555.00**
	Grand Total	**4,88,74,41,578.00**	**3,01,16,85,555.00**

Schedule 9- Advances

Sl No	Particulars	As on 31.03.2026	As on 31.03.2025
A	i. Bills purchased and discounted	9,60,43,073.00	8,45,06,982.00
	ii. Cash credits, overdraft and loans repayable on demand	4,72,31,11,547.63	69,56,98,578.25
	iii. Term loans	3,02,04,43,658.13	5,62,38,36,109.93
	Total	**7,83,95,98,278.76**	**6,40,40,41,670.18**

Schedule 10 - Fixed Assets

Sl No	Particulars	As on 31.03.2026	As on 31.03.2025
I	Premises	11,99,23,130.00	11,97,96,630.00
	at cost as on 31.03.25	22,35,56,801.03	16,35,03,522.89
	Addition during the year	7,62,10,807.00	6,00,53,278.14
	Deductions during the year		
	Depreciation to date		
II	Other Fixed Assets (Including furniture and fixtures)		
	at cost as on 31.03.24	-	-
	Addition during the year	-	-
	Deductions during the year		
	Depreciation to date 31.03.2026	9,20,62,443.44	7,03,03,192.44
	Total	**32,76,28,294.59**	**27,30,50,238.59**

Schedule 11 - Other Assets

Sl No	Particulars	As on 31.03.2026	As on 31.03.2025
i	Inter Office Adjustment (net)	-	-
II	Interest accrued	7,47,22,038.00	5,19,43,124.00
III	Tax paid in advance/TDS	2,45,00,000.00	2,85,00,000.00
IV	Stationary and Stamps		-
V	Non-banking assets acquired in satisfaction of claims		-
VI	Others	17,10,98,488.12	14,15,51,768.53
	Total	**27,03,20,526.12**	**22,19,94,892.53**

Schedule 12 - Contingent Liabilities

Sl No	Particulars	As on 31.03.2026	As on 31.03.2025
I	Claims against the bank not acknowledged as debts		
II	Liability for party paid investments		
III	Liability on account of outstanding forward exchange contracts		
IV	Guarantees given on behalf of constituents		
	a. In India	11,43,82,698.00	10,48,19,370.00
	b. Outside India		
V	Acceptances, endorsements and other obligations		
VI	Other items for which the bank is contingent liability	17,05,33,098.15	12,27,42,564.47
	Total	**28,49,15,796.15**	**22,75,61,934.47**

Schedule 13 - Interest Earned

ಪಟ್ಟಣದ ಮಲಪ್ರಭಾ ಆಯಿಲ್ ಮಿಲ್ಲ ಆವರಣದಲ್ಲಿ ಕಾಂಗ್ರೇಸ್ ಪಕ್ಷದ ಕಛೇರಿಯಲ್ಲಿ ನಡೆದ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಸಭೆಯಲ್ಲಿ ಮಾತನಾಡಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಸೋಮಣ್ಣ ಬೇವಿನಮರದ



ಮಾತನಾಡಿ, ರಾಜ್ಯದಲ್ಲಿ 84% ಅಕ್ಷರಸ್ಥರು ಇದ್ದಾರೆ. ಯಾವ ಮತದಾರನು ಮತಪಟ್ಟಿಯಿಂದ ಹೊರ ಹೋಗಬಾರದು. ಬಿಜೆಪಿಯವರು ಕಾಂಗ್ರೇಸ್ ಮುಕ್ತ ಭಾರತವನ್ನಾಗಿ ಮಾಡಲು ಎಸ್ ಐಆರ್ ಜಾರಿಗೆ ತಂದಿದೆ. ರಾಜ್ಯದಲ್ಲಿ 5 ಸಾವಿರ ಜನ ಎಸ್ಐಆರ್ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆಂದು ಹೇಳಿದರು.

ಮಾಜಿ ಶಾಸಕ ಬಿ.ಆರ್.ಯಾವಗಲ್ಲ ಮಾತನಾಡಿ, ಎಸ್ ಐಆರ್ ಮೂಲಕ ಬಿಜೆಪಿ ಅವರು ಕಾಂಗ್ರೇಸ್ ಮತದಾರರನ್ನು ಹೊರ ಹಾಕುವ ಪ್ರಯತ್ನ ಮಾಡುತ್ತಿದೆ. ಬಡವರು, ದಲಿತರು ಮತ್ತು ಹಿಂದುಳಿದವರಿಗೆ ಎಸ್ಐಆರ್ ನಿಂದ ತೊಂದರೆ ಆಗುತ್ತಿದೆ. ನಮ್ಮ ಮತಕ್ಷೇತ್ರದಲ್ಲಿ ನಾನು ಬಿಎಲ್‌ಎ-1 ಆಗಿದ್ದರೆ, 220 ಜನ ಕಾರ್ಯಕರ್ತರು ಬಿಎಲ್‌ಎ-2 ಗಳಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು.

ವಿಶ್ವನಾಥ ದೇಸಾಯಿ, ಹೊಳೆಆಲೂರ ಮಂಡಲ ಅಧ್ಯಕ್ಷ ಮಲ್ಲಪ್ಪ ಕೋಳೇರಿ, ನರಗುಂದ ಮಂಡಲ ಅಧ್ಯಕ್ಷ ಪ್ರವೀಣ ಯಾವಗಲ್ಲ, ಗುರುಪಾದಪ್ಪ ಕುರಹಟ್ಟಿ, ಎಂ.ಬಿ.ಅರಹುಣಶಿ, ಬಿ.ಎನ್.ಮಾನೆ, ಶಂಕರಗೌಡ ಪಾಟೀಲ, ಪ್ರಕಾಶ ಹಡಗಲಿ, ವಿಷ್ಣು ಸಾಠೆ ಇತರರಿದ್ದರು.

ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ

ಲಕ್ಷ್ಮೇಶ್ವರ: ಪಟ್ಟಣದ ಹೊಸ ಬಸ್ ನಿಲ್ದಾಣ ಒಳಗಡೆ ಬೂತ್ ನಂ.116 ರಾಷ್ಟ್ರೀಯ ಪಲ್ಸ್ ಪೋಲಿಯೋ ಎರಡು ಹನಿ 5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನಡೆಯಿತು.

ಕಾಂಗ್ರೆಸ್ ಪಕ್ಷದ ಯುವ ಮುಖಂಡ ಯಲ್ಲಪ್ಪ.ಎಸ್.ಹಂಜಗಿ ಮಾತನಾಡಿ, ರಾಷ್ಟ್ರೀಯ ಪಲ್ಸ್ ಪೋಲಿಯೋ ದಿನದಂದು ರಾಜ್ಯ ರಾಷ್ಟ್ರ ಹಿತದೃಷ್ಟಿಯಿಂದ ಐದು ವರ್ಷದೊಳಗಿನ ಮಕ್ಕಳಿಗಾಗಿ ಪೋಲಿಯೋ ಲಸಿಕೆ ಹಾಕಿಸಿ ಮಗುವಿನ ಆರೋಗ್ಯಕರ ಭವಿಷ್ಯ ರಕ್ಷಣೆಗಾಗಿ ಪೋಲಿಯೋ ಮುಕ್ತ ಆಗಲು ಪಾಲಕರು ತಾಯಂದಿರು ಸಹಕಾರ ನೀಡಬೇಕು ಎಂದರು.

ಈಗಾಗಲೇ ಸರ್ಕಾರವು ಪಲ್ಸ್ ಪೋಲಿಯೋ ಅಭಿಯಾನ ನಡೆಸಲು ರಾಜ್ಯ ಸರ್ಕಾರ, ಆರೋಗ್ಯ ಇಲಾಖೆ, ಸ್ಥಳೀಯ ಪಟ್ಟಣ, ನಗರ, ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಅನೇಕ ಕಡೆ ಸೇರಿದಂತೆ ಎಲ್ಲ ಆರೋಗ್ಯ ಆಸ್ಪತ್ರೆಗಳಿಂದ ಐದು ವರ್ಷದ ಒಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕಲು ಕ್ಷೇತ್ರದ ಆರೋಗ್ಯ ಇಲಾಖೆದಿಂದ ವ್ಯವಸ್ಥೆಗೊಳಿಸಿದ್ದಾರೆ ಈ ವೇಳೆ ರವಿ ಕೋರಿ, ಗಂಗಾಧರ ಈಳಗೇರ, ಇಮ್ತಿಯಾಜ ಗುಡಚಿ, ರೇಣುಕಾ ಡೋಂಬರ, ಆರೋಗ್ಯ ಸಿಬ್ಬಂದಿಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.



ಬಸ್ ಸೌಕರ್ಯ ಒದಗಿಸಲು ಒತ್ತಾಯ

ನರಗುಂದ: ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬೈರನಹಟ್ಟಿ ಗ್ರಾಮದಿಂದ ನರಗುಂದ ನಗರಕ್ಕೆ ಪ್ರತಿನಿತ್ಯ ಆಗಮಿಸುವ ನೂರಾರು ವಿದ್ಯಾರ್ಥಿಗಳು ಬಸ್ ಸೌಕರ್ಯವಿಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮಯಾನುಸಾರ ಬಸ್ ಸೌಕರ್ಯ ಒದಗಿಸಬೇಕೆಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ತಾಲೂಕ ಅಧ್ಯಕ್ಷ ಸಿ.ಪಿ.ನೀಲಗುಂದ ಆಗ್ರಹ ಮಾಡಿದರು. ಸೋಮವಾರ ಪಟ್ಟಣದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಘಟಕದಿಂದ ಶಾಲಾ-ಕಾಲೇಜಿಗೆ ಬರಲು ಬಸ್ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ, ಕೆಎಸ್‌ಆರ್‌ಟಿಸಿ ನರಗುಂದ ಬಸ್ ಡಿಪೋ ವ್ಯವಸ್ಥಾಪಕ ರಾಜಶೇಖರ ಧನ್ಯಾಳ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು.

2026-27ನೇ ಸಾಲಿನ ಶೈಕ್ಷಣಿಕ ವ್ಯವಸ್ಥೆ ಸರಿಯಾಗಬೇಕೆಂದರೆ, ವಿದ್ಯಾಭ್ಯಾಸಕ್ಕಾಗಿ ಹಳ್ಳಿಗಳಿಂದ ನಗರದ ಕಾಲೇಜಿಗೆ ಆಗಮಿಸುವ ವಿದ್ಯಾರ್ಥಿಗಳಿಗೆ ಬಸ್‌ನ ಸೌಕರ್ಯ ಒದಗಿಸಬೇಕು. ಕಳೆದೆರಡು ವರ್ಷದಿಂದ ತಾಲೂಕಿನ ಅನೇಕ ಗ್ರಾಮಗಳಿಂದ ಆಗಮಿಸುವ ವಿದ್ಯಾರ್ಥಿಗಳು ಬಸ್ ಇಲ್ಲದೇ ಗೋಳಾಡಿದ್ದಾರೆ. ವರ್ಷಪೂರ್ತಿ ಬಸ್ಸಗಾಗಿ ಬಸ್ ಡಿಪೋ ವಿರುದ್ಧ ಹೋರಾಟ ಮಾಡುವುದೇ ಆಗಿದೆ. ಈ ವರ್ಷವೂ ಅದೇ ಆಗಬಾರದು. ತಾಲೂಕಿನ ಎಲ್ಲ ಗ್ರಾಮಗಳಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ಬಸ್ ತೊಂದರೆ ಆಗದಂತೆ ಡಿಪೋ ಘಟಕ ವ್ಯವಸ್ಥಾಪಕರು ಬಸ್‌ಗಳ ಸೌಕರ್ಯ ಮಾಡಬೇಕು ಎಂದು ಆಗ್ರಹಿಸಿದರು.

ಬಸ್ ಡಿಪೋ ಘಟಕದ ವ್ಯವಸ್ಥಾಪಕ ರಾಜಶೇಖರ ಧನ್ಯಾಳ ಮನವಿ ಸ್ವೀಕರಿಸಿ ಮಾತನಾಡಿ, ವಾರದೊಳಗೆ ವಿದ್ಯಾರ್ಥಿಗಳ ಬಸ್ ಸೌಕರ್ಯ ಸರಿಪಡಿಸಿ ಅನುಕೂಲ ಮಾಡಿಕೊಡಲಾಗುವುದು ಎಂದರು.

ಈ ವೇಳೆ ಶಂಕ್ರಮ್ಮ ನರಸಾಪೂರ, ಜಯಲಕ್ಷ್ಮೀ ಪಾಟೀಲ, ಸುನಂದಾ ನರಸಾಪೂರ, ಪವಿತ್ರಾ ಐನಾಪೂರ, ಅನೀತಾ ನರಸಾಪೂರ, ಪ್ರೇಮಾ ಚಿಕ್ಕನರಗುಂದ, ಶಾಹೀನಾ ಅಗಸರ, ಶಾಂತಾ ಕೀಲಿಕೈ, ಶಶಿಕಲಾ ಸಂಗಟಿ, ಮಾಲಾ ನರಸಾಪೂರ ಸೇರಿದಂತೆ ಅನೇಕ ವಿದ್ಯಾರ್ಥಿನಿಯರಿದ್ದರು.



ಗಂಟೆಗೂ ಹೆಚ್ಚು ಕಾಲ ಸುರಿದ ಮಳೆ | ಪ್ರಮುಖ ರಸ್ತೆಗಳು ಜಲಾವೃತ

ಧಾರವಾಡದಲ್ಲಿ ವರುಣನ ಆರ್ಭಟ

ಕೃಷಿ ಇಲಾಖೆ ಸಲಹೆ

ಮಳೆಯಾದ ಬೆನ್ನಲ್ಲೇ ಕೃಷಿ ಅಧಿಕಾರಿಗಳು ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಬಳಸಲು ಮತ್ತು ಕೀಟಬಾಧೆಯ ಬಗ್ಗೆ ಜಾಗರೂಕರಾಗಿರಲು ಸಲಹೆ ನೀಡಿದ್ದಾರೆ.



ಧಾರವಾಡ: ನಗರ ಸೇರಿದಂತೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸೋಮವಾರ ಅಲ್ಲಲ್ಲಿ ತುಂತುರು ಮಳೆ ಸುರಿದಿದೆ. ಧಾರವಾಡದಲ್ಲಿ ಅಬ್ಬರಿಸಿದ ವರುಣದೇವ ಒಂದು ಗಂಟೆಗೂ ಹೆಚ್ಚು ಕಾಲ ತನ್ನ ನರ್ತನ ನಡೆಸಿದ.

ವರುಣನ ಆರ್ಭಟಕ್ಕೆ ಇಡೀ ಧಾರಾನಗರಿ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಮಳೆಗೆ ಪ್ರಮುಖ ರಸ್ತೆಗಳು ಜಲಾವೃತಗೊಂಡವು. ಚರಂಡಿಗಳು ಕಸ-ಕಡ್ಡಿಗಳಿಂದ ಬ್ಲಾಕ್ ಆದ ಕಾರಣ ಮಳೆ ನೀರು ರಸ್ತೆಯ ಮೇಲೆ ಹರಿದಿದೆ.

ನಗರದ ತಗ್ಗು ಪ್ರದೇಶಗಳು, ರಸ್ತೆಗಳ ಗುಂಡಿಗಳಲ್ಲಿ ನೀರು ನಿಂತು ಸಣ್ಣಮಟ್ಟ ಕೆರೆಗಳಾಗಿ ಮಾರ್ಪಟ್ಟವು. ವಾಹನ ಸವಾರರ ಪರದಾಟ, ಪೇಚಿಗೆ ಸಿಲುಕಿದ ಸಾರ್ವಜನಿಕರು ಮಳೆಯಿಂದಾಗಿ ರಸ್ತೆ ಬದಿಯ ವ್ಯಾಪಾರಿಗಳು ಹಾಗೂ ಪಾದಚಾರಿಗಳು ಆಸರೆಗಾಗಿ ಓಡಾಡಬೇಕಾಯಿತು.

ಇನ್ನು ರಸ್ತೆಗಳ ತಗ್ಗು-ಗುಂಡಿಗಳಲ್ಲಿ ನೀರು ತುಂಬಿದ್ದರಿಂದ ಬೈಕ್ ಹಾಗೂ ಆಟೋ ಚಾಲಕರು ವಾಹನ ಚಲಾಯಿಸಲು ಹರಸಾಹಸ ಪಡಬೇಕಾಯಿತು. ಕಣ್ಣಿಗೆ ಕಾಣದ ಗುಂಡಿಗಳಿಗೆ ವಾಹನಗಳು ಇಳಿದು ಸವಾರರು ಪೇಚಿಗೆ ಸಿಲುಕಿದ ದೃಶ್ಯಗಳು ನಗರದ ಹಲವೆಡೆ ಕಂಡುಬಂದವು.

ವಿದ್ಯುತ್ ಸಮಸ್ಯೆಗೆ ಜನ ಹೈರಾಣ: ಮಳೆಯಿಂದ ನಗರದ ಬಹುತೇಕ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಮಳೆ ನಿಂತ ಬಳಿಕವೂ ಗಂಟೆಗಟ್ಟಲೆ ಪವರ್ ಬಾರದೇ ಇದ್ದುದರಿಂದ ಸಾರ್ವಜನಿಕರು, ವ್ಯಾಪಾರಸ್ಥರು ಹೆಸ್ಕಾಂ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

> **ಮಳೆ ಬಾರದೆ ಕೈ ಚೆಲ್ಲಿ ಕುಳಿತಿದ್ದೆವು. ಆದರೆ, ಈ ಮಳೆ ನಮಗೆ ಮರುಜೀವ ನೀಡಿದಂತಾಗಿದೆ. ಭೂಮಿ ಹದವಾಗಿದೆ. ಈ ವಾರದಲ್ಲೇ ಬಿತ್ತನೆ ಕಾರ್ಯ ಮುಗಿಸುತ್ತೇವೆ. ಈ ಬಾರಿ ಉತ್ತಮ ಇಳುವರಿ ಬರುವ ಭರವಸೆ ಇದೆ.**
> ■ **ಬಸವರಾಜಪ್ಪ, ಪ್ರಗತಿಪರ ರೈತ**

ರೈತರ ಮೊಗದಲ್ಲಿ ಮಂದಹಾಸ: ದೀರ್ಘಕಾಲದ ನಂತರ ವರುಣದೇವನ ಆರ್ಭಟ ಜೋರಾಗಿದ್ದು, ಸುಡುಬಿಸಿಲಿನಿಂದ ಕಂಗಾಲಾಗಿದ್ದ ಭೂಮಿಗೆ ತಂಪೆರೆದಿದ್ದಾನೆ. ಈ ಸಕಾಲಿಕ ಮಳೆಯು ಕೃಷಿ ನಂಬಿ ಬದುಕುತ್ತಿರುವ ಲಕ್ಷಾಂತರ ರೈತರ ಮೊಗದಲ್ಲಿ ಹೊಸ ಭರವಸೆಯ ಮಂದಹಾಸ ಮೂಡಿಸಿದೆ.

ಕೃಷಿ ಚಟುವಟಿಕೆಗಳಿಗೆ ಜೀವಕಳೆ: ಕಳೆದ ಕೆಲವು ವಾರಗಳಿಂದ ಮಳೆಯಿಲ್ಲದೆ ಬಹಳಷ್ಟು ಕಳವಳಗೊಂಡಿದ್ದ ಅನ್ನದಾತರು, ಈಗ ಸುರಿದ ಈ ಹದವಾದ ಮಳೆಯಿಂದಾಗಿ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಹೊಲದಲ್ಲಿ ಒಣಗುತ್ತಿದ್ದ ಬೆಳೆಗಳಿಗೆ ಈ ಮಳೆ ಹೊಸ ಜೀವಕಳೆ ತಂದಿದೆ.

ಹಸಿರಾದ ಗೋಮಾಳ: ಮಳೆಯ ಸಿಂಚನಕ್ಕೆ ಒಣಗಿದ್ದ ಹುಲ್ಲುಗಾವಲುಗಳು ಮತ್ತೆ ಹಸಿರಾಗುತ್ತಿದ್ದು, ಜಾನುವಾರುಗಳಿಗೆ ಮೇವಿನ ಕೊರತೆ ನೀಗುವ ಆಶಾಭಾವನೆ ಮೂಡಿದೆ. ಈ ಮಳೆಯು ಗ್ರಾಮೀಣ ಭಾಗದ ಆರ್ಥಿಕತೆಗೆ ಹೊಸ ಚೈತನ್ಯ ನೀಡಿದ್ದು, ಅನ್ನದಾತನ ಮನೆಯಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದೆ.

ಗಂಜೀಗದ್ದೆ ರಸ್ತೆ ಸಂಪೂರ್ಣ ಜಲಾವೃತ

ಗೋಕರ್ಣ: ಸೋಮವಾರ ಮಧ್ಯಾಹ್ನದ ನಂತರ ಈ ಭಾಗದಲ್ಲಿ ಮಳೆಯ ಅಬ್ಬರ ಹೆಚ್ಚಾಗಿದ್ದು, ಒಮ್ಮೆ ಬಿಡುವು ನಂತರ ಅತ್ಯಧಿಕವಾಗಿ ಮಳೆ ಸುರಿಯುತ್ತಿದ್ದು, ಇಲ್ಲಿನ ಗಂಜೀಗದ್ದೆ ರಸ್ತೆ ಸಂಪೂರ್ಣ ಜಲಾವೃತಗೊಂಡು ಸಂಚಾರಕ್ಕೆ ತೊಡಕಾಗಿತ್ತು.

ಇದರಂತೆ ಗೊಪ್ಪೆಗದ್ದೆ ಓಣಿಯಲ್ಲಿ ಬೃಹತ್ ಪ್ರಮಾಣದ ನೀರು ತುಂಬಿ ಮನೆ ಮುಂದೆ ನಿಲ್ಲಿಸಿದ್ದ ವಾಹನಗಳಿಗೂ ಕೆಸರು ನೀರು ತುಂಬಿ ಹಾನಿಯಾಗಿದ್ದು, ಇಲ್ಲಿನ ನಿವಾಸಿಗಳು ಮನೆಯಲ್ಲಿ ಕೆಲ ಕಾಲ ಹೊರಬರಲಾಗದೆ ಬಂಧಿಯಾಗಿದ್ದು, ನೆರೆ ಹಾವಳಿಯ ಅನುಭವ ನೀಡಿತ್ತು.



ಇಲ್ಲಿನ ಚರಂಡಿಯನ್ನ ಮಳೆಗಾಲದ ಪೂರ್ವದಲ್ಲಿ ಗ್ರಾಮ ಪಂಚಾಯತ ಸ್ವಚ್ಛಗೊಳಿಸದೆ ಬಿಟ್ಟಿರುವುದು ಈ ಅವಾಂತರಕ್ಕೆ ಕಾರಣ ಎಂದು ಇಲ್ಲಿನ ನಿವಾಸಿಗಳು ಹೇಳಿದ್ದು, ಈ ಬಗ್ಗೆ ಗ್ರಾಮ ಪಂಚಾಯತ ಅಧಿಕಾರಿಗಳಿಗೆ ತಿಳಿಸಿದರೂ ಯಾರು ಸಹ ಇತ್ತ ಮುಖ ಮಾಡಿಲ್ಲ ಎಂದಿದ್ದಾರೆ.

ಕಡಿಮೆ ಸಮಯದಲ್ಲಿ ಭರ್ಜರಿ ಮಳೆ ಬೀಳುತ್ತಿದ್ದು, ಅನುಕೂಲಕ್ಕಿಂತ ಅಧ್ವಾನಗಳೇ ಹೆಚ್ಚು ಎಂಬಂತಾಗಿದೆ. ತಗ್ಗು ಪ್ರದೇಶ ಗಟಾರವಿಲ್ಲದ ರಸ್ತೆಗಳು ಉಕ್ಕಿ ಹರಿಯುವುದು ಒಂದೆಡೆಯಾದರೆ, ಗಟಾರ ಇದ್ದರೂ ಸ್ವಚ್ಛಗೊಳಸದೆ ನಿರ್ಲಕ್ಷಿಸಿ ಕೃತಕ ನೆರೆ ಉಂಟು ಮಾಡುತ್ತಿರುವ ಸ್ಥಳೀಯ ಆಡಳಿದ ಬಗ್ಗೆ ಜನರು ಆಕ್ರೋಶ ವ್ಯಕ್ತಪಡಿಸಿದ್ದು, ಈ ಬಗ್ಗೆ ವಿಪತ್ತು ನಿರ್ವಹಣಾ ಸಮಿತಿಯವರಾದರೂ ಗಮನಹರಿಸಿ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದ್ದಾರೆ.

ಜಿಟಿಜಿಟಿ ಮಳೆ: ರೈತರು ಫುಲ್ ಖುಷ್

ಬೆಳಗಾವಿ: ಜೂನ್ ತಿಂಗಳು ಮುಕ್ತಾಯದ ಹಂತಕ್ಕೆ ಬಂದರೂ ಕೃಪೆ ತೋರದೇ ಕೈಕೊಟ್ಟಿದ್ದ ಮುಂಗಾರು ಮಳೆ, ಕೊನೆಗೂ ಭಾನುವಾರ ಮಧ್ಯಾಹ್ನದಿಂದ ಜಿಲ್ಲೆಯಾದ್ಯಂತ ಭರ್ಜರಿಯಾಗಿ ಮರುಪ್ರವೇಶ ಮಾಡಿದೆ. ವರುಣದೇವನ ಈ ಹಠಾತ್ ಕೃಪೆಯಿಂದಾಗಿ ಕಂಗಾಲಾಗಿದ್ದ ಅನ್ನದಾತನ ಮುಖದಲ್ಲಿ ಮಂದಹಾಸ ಮೂಡಿದ್ದು, ಪ್ರಾಣಿ-ಪಕ್ಷಿ ಹಾಗೂ ಸಾರ್ವಜನಿಕರು ನಿಟ್ಟುಸಿರು ಬಿಡುವಂತಾಗಿದೆ.

ಪ್ರಸಕ್ತ ವರ್ಷ ಮುಂಗಾರು ಅವಧಿಯ ಆರಂಭದಲ್ಲೇ ಮಳೆ ಸಂಪೂರ್ಣ ಕೈಕೊಟ್ಟಿತ್ತು. ಇದರಿಂದಾಗಿ ಜೂನ್ ತಿಂಗಳ ಕೊನೆಯ ವಾರ ಬಂದರೂ ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿರಲಿಲ್ಲ, ಮುಂಗಾರು ಹಂಗಾಮನ್ನು ನಂಬಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬಿತ್ತನೆ ಕಾರ್ಯ ಮುಗಿಸಿದ್ದ ರೈತಾಪಿ ವರ್ಗ ಸಂಪೂರ್ಣ ಕಂಗಾಲಾಗಿತ್ತು. ಸೂಕ್ತ ಮಳೆಯಿಲ್ಲದೆ ಬಿತ್ತಿದ ಬೆಳೆಗಳು ಭೂಮಿಯಲ್ಲೇ ಒಣಗಿ, ಸಂಪೂರ್ಣ ನಾಶವಾಗುವ ಹಂತಕ್ಕೆ ತಲುಪಿದ್ದವು.

ಕೇವಲ ಕೃಷಿ ಕ್ಷೇತ್ರ ಮಾತ್ರವಲ್ಲದೆ, ಜಿಲ್ಲೆಯಲ್ಲಿ ಕುಡಿಯುವ ನೀರಿಗೂ ಭೀಕರ ಕ್ಷಾಮ ತಲೆದೋರಿತ್ತು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನತೆಗೆ ಕುಡಿಯುವ ನೀರು ಸಿಗದೆ ಹಾಹಾಕಾರ ಶುರುವಾಗಿತ್ತು. ಇನ್ನು ಕಾಡು-ಮೇಡುಗಳಲ್ಲಿ ಹನಿ ನೀರಿಗೂ ಪರದಾಡುವಂತಾಗಿ ಜನ-ಜಾನುವಾರುಗಳು ಹಾಗೂ ಮೂಕ ಪ್ರಾಣಿ-ಪಕ್ಷಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದವು.

ಕಳೆದ ಕೆಲವು ದಿನಗಳಿಂದ ಬಿಸಿಲಿನ ಬೇಗೆ ಹಾಗೂ ಮಳೆಯಿಲ್ಲದ ಆತಂಕದಲ್ಲಿದ್ದ ಬೆಳಗಾವಿ ಜಿಲ್ಲೆಗೆ ಭಾನುವಾರ ಮಧ್ಯಾಹ್ನದಿಂದ ಪ್ರಕೃತಿ ತಂಪೆರೆದಿದೆ. ರೈತರು ಬಿತ್ತನೆ ಮಾಡಿದ ಬೆಳೆಗಳಿಗೆ ಮರುಜೀವ ಬಂದಂತಾಗಿದೆ. ಒಣಗುತ್ತಿದ್ದ ಪೈರುಗಳಿಗೆ ಈ ಮಳೆ ಸಂಜೀವಿನಿಯಾಗಿದ್ದು, ಪ್ರಾಣಿ-ಪಕ್ಷಿಗಳ ಕುಡಿಯುವ ನೀರಿನ ದಾಹವೂ ಇಂಗಿದೆ.



ಮಳೆಯಿಂದ ಹೊಸ ಚೈತನ್ಯ

ಸಾರ್ವಜನಿಕರ ಹರ್ಷ ಪ್ರಸ್ತುತ ಬೆಳಗಾವಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಟ್ಟುಬಿಡದೆ ಜಿಟಿಜಿಟಿ ಮಳೆ ಮುಂದುವರಿದಿದೆ. ಹವಾಮಾನ ಸಂಪೂರ್ಣ ತಂಪಾಗಿದ್ದು, ಜನಜೀವನಕ್ಕೆ ಹೊಸ ಚೈತನ್ಯ ಬಂದಿದೆ. ನಿರಂತರವಾಗಿ ಸುರಿಯುತ್ತಿರುವ ಜಿಟಜಿಟಿ ಮಳೆಯ ನಡುವೆಯೂ ಸಾರ್ವಜನಿಕರು ಸಂತಸದಿಂದಲೇ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಳೆ ಬಾರದೆ ಬಿತ್ತಿದ ಬೀಜಗಳೆಲ್ಲ ಮಣ್ಣಾಗುತ್ತವೆ ಎನ್ನುವ ಆತಂಕವಿತ್ತು. ಆದರೆ, ಈಗ ಸುರಿಯುತ್ತಿರುವ ಮಳೆ ನಮ್ಮ ಪಾಲಿಗೆ ಅಮೃತದಂತಾಗಿದೆ ಎಂದು ಸ್ಥಳೀಯ ರೈತರೊಬ್ಬರು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರಮುಖ ನಾಗರಿಕರ ಗೋಷ್ಠಿ

ಸಾಮಾಜಿಕ ಸಾಮರಸ್ಯ ಬಲಿಷ್ಠ ರಾಷ್ಟ್ರದ ಅಡಿಪಾಯ



ಗದಗ: ಮಹಿಳಾ ಸಬಲೀಕರಣ, ಸಾಮಾಜಿಕ ಸಾಮರಸ್ಯ, ಪರಿಸರ ಸಂರಕ್ಷಣೆ ಹಾಗೂ ಜವಾಬ್ದಾರಿಯುತ ನಾಗರಿಕ ಪ್ರಜ್ಞೆ ಇಂದಿನ ಸಮಾಜದ ಪ್ರಮುಖ ಅಗತ್ಯಗಳಾಗಿದ್ದು, ಇವುಗಳ ಸಮನ್ವಯದಿಂದಲೇ ಉತ್ತಮ ಸಮಾಜ ಮತ್ತು ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಗೋಪಿ ಜಿ.ಅಭಿಪ್ರಾಯಪಟ್ಟರು.

ನಗರದ ಸೇವಾ ಚೇತನ ಸಭಾಂಗಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಘಟಕವು ''100 ವರ್ಷಗಳ ಸಂಘಯಾತ್ರೆ'' ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಪ್ರಮುಖ ನಾಗರಿಕರ ಗೋಷ್ಠಿಯಲ್ಲಿ ಉಪನ್ಯಾಸ ನೀಡಿದರು.

'100 ವರ್ಷಗಳ ಸಂಘಯಾತ್ರೆ'

ದೇಹದುಸಿರು ಸ್ಥಿರವಲ್ಲ, ಅಮರ ನಮ್ಮ ಕಾಯಕ; ಒಂದುಗೂಡಿ ನಡೆವೆವೆಲ್ಲ, ದಾಟಿ ಸಕಲ ಕಂಟಕ''ಎಂಬ ಧ್ಯೇಯವಾಕ್ಯದಡಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಸಮಾಜದಲ್ಲಿ ಮಹಿಳೆಯರ ಗೌರವ, ಸುರಕ್ಷತೆ ಮತ್ತು ಸಮಾನ ಅವಕಾಶಗಳ ಕುರಿತು ಇನ್ನಷ್ಟು ಜಾಗೃತಿ ಮೂಡಬೇಕಿದೆ ಎಂದರು.

ಮಹಿಳೆಯರ ವಿರುದ್ಧದ ಹಿಂಸೆ, ಲಿಂಗ ತಾರತಮ್ಯ, ವರದಕ್ಷಿಣೆ, ಬಾಲ್ಯ ವಿವಾಹ ಹಾಗೂ ಆರ್ಥಿಕ ಅಸಮಾನತೆಗಳಂತಹ ಸಮಸ್ಯೆಗಳು ಇನ್ನೂ ಮುಂದುವರಿದಿರುವುದು ಕಳವಳಕಾರಿ ಸಂಗತಿಯಾಗಿದೆ. ಮಹಿಳಾ ಸಬಲೀಕರಣ ಕೇವಲ ಕಾನೂನುಗಳ ಮೂಲಕ ಸಾಧ್ಯವಲ್ಲ; ಸಮಾಜದ ಮನೋಭಾವದಲ್ಲಿ ಸಕಾರಾತ್ಮಕ ಬದಲಾವಣೆ ಮೂಡಿದಾಗ ಮಾತ್ರ ನಿಜವಾದ ಪರಿವರ್ತನೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಹಿಂದುತ್ವವು ಕೇವಲ ಧಾರ್ಮಿಕ ಆಚರಣೆಗಳ ವ್ಯಾಪ್ತಿಗೆ ಸೀಮಿತವಾದುದಲ್ಲ; ಅದು ಸಹೋದರತ್ವ, ಸಹಬಾಳ್ವೆ, ಶಾಂತಿ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಜೀವನದರ್ಶನವಾಗಿದೆ ಎಂದು ಹೇಳಿದರು. ''ವಸುದೈವ ಕುಟುಂಬಕಂ'' ಮತ್ತು ''ಸರ್ವೇ ಭವಂತು ಸುಖಿನಃ'' ಎಂಬ ಭಾರತೀಯ ತತ್ವಗಳು ವಿಶ್ವಶಾಂತಿ ಮತ್ತು ಮಾನವೀಯತೆಯ ಸಂದೇಶವನ್ನು ಸಾರುತ್ತವೆ ಎಂದು ತಿಳಿಸಿದರು.

ಸಂಘ ಪ್ರತಿಪಾದಿಸುತ್ತಿರುವ 'ಪಂಚಪರಿವರ್ತನೆ' ಪರಿಕಲ್ಪನೆಯನ್ನು ಉಲ್ಲೇಖಿಸಿದ ಅವರು, ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಮನೋಭಾವ ಹಾಗೂ ನಾಗರಿಕ ಕರ್ತವ್ಯಗಳ ಪಾಲನೆ ಇಂದಿನ ಕಾಲಘಟ್ಟದಲ್ಲಿ ಅತ್ಯಂತ ಪ್ರಸ್ತುತವಾಗಿವೆ ಎಂದರು. ಪ್ಲಾಸ್ಟಿಕ್ ಬಳಕೆ, ನೀರಿನ ದುರುಪಯೋಗ ಮತ್ತು ಅತಿಯಾದ ಉಪಭೋಗದಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದು?ರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದರು.

ಮನೆ ಹೇಗೆ ನಮ್ಮದೇ ಎಂಬ ಭಾವನೆಯಿಂದ ಕಾಪಾಡಿಕೊಳ್ಳುತ್ತೇವೆಯೋ, ಅದೇ ರೀತಿಯಲ್ಲಿ ಸಮಾಜ ಮತ್ತು ಸಾರ್ವಜನಿಕ ಆಸ್ತಿಗಳನ್ನು ಸಂರಕ್ಷಿಸುವ ಹೊಣೆಗಾರಿಕೆಯೂ ಪ್ರತಿಯೊಬ್ಬ ನಾಗರಿಕನ ಮೇಲಿದೆ. ಸಂಚಾರ ನಿಯಮಗಳ ಪಾಲನೆ, ಸ್ವಚ್ಛತೆ, ಸಾರ್ವಜನಿಕ ಆಸ್ತಿಗಳ ರಕ್ಷಣೆ ಹಾಗೂ ಸಾಮಾಜಿಕ ಕರ್ತವ್ಯಗಳ ನಿರ್ವಹಣೆ ಉತ್ತಮ ನಾಗರಿಕತೆಯ ಲಕ್ಷಣಗಳಾಗಿವೆ ಎಂದು ತಿಳಿಸಿದರು.

ಜಿಲ್ಲಾ ಸಂಘಚಾಲಕ ಮಾರುತಿ ಕಟ್ಟಿಮನಿ, ಗಣ್ಯರು, ಚಿಂತಕರು, ರಾಷ್ಟ್ರೀಯ ಸ್ವಯಂಸೇವಕರು, ಭಗಿನಿಯರು ಇದ್ದರು. ರವಿ ಬಡಿಗೇರ ಸ್ವಾಗತಿಸಿದರು. ಡಾ.ಉಮೇಶ ಹಾದಿ ನಿರೂಪಿಸಿದರು. ಬಸವರಾಜ ಪಟ್ಟಣಶೆಟ್ಟಿ ವಂದಿಸಿದರು.



ಹುಬ್ಬಳ್ಳಿ: ಸೋಮವಾರ ನಗರಕ್ಕೆ ಆಗಮಿಸಿದ ಭಾರತ ಸರ್ಕಾರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮಹಾನಗರ ಜಿಲ್ಲಾ ಅಧ್ಯಕ್ಷರಾದ ತಿಪ್ಪಣ್ಣಾ ಮಜ್ಜಗಿಯವರು ಸ್ವಾಗತಿಸಿದರು. ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ, ವಿಭಾಗೀಯ ಪ್ರಭಾರಿ ಜಯತೀರ್ಥ ಕಟ್ಟಿ, ಪ್ರಧಾನ ಕಾರ್ಯದರ್ಶಿ ಶಿವು ಮೆಣಸಿನಕಾಯಿ, ರಾಜು ಕೋರ್ಯಾಣಮಠ, ಗುರುನಾಥ ಹೇಮಕರ, ಮಂಜುನಾಥ ಊಂಟವಾಲೆ, ಶಿವು ಹಿರೇಮಠ ಉಪಸ್ಥಿತರಿದ್ದರು.

ಕಾರಿಗೆ ಬೆಂಕಿ: ತಪ್ಪಿದ ಭಾರೀ ದುರಂತ

ಬೆಳಗಾವಿ: ಕುಂದಾನಗರಿ ಬೆಳಗಾವಿಯ ರಾಮದೇವ್ ಹೋಟೆಲ್ ರಸ್ತೆಯಲ್ಲಿ ಚಲಿಸುತ್ತಿದ್ದ ಮಾರುತಿ ಕಾರಿನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು ಕೆಲವೇ ನಿಮಿಷಗಳಲ್ಲಿ ಸಂಪೂರ್ಣ ಕಾರು ಸುಟ್ಟು ಕರಕಲಾದ ಘಟನೆ ನಡೆದಿದೆ.

ರಾಮದೇವ್ ಹೋಟೆಲ್ ಎದುರಿನ ಡಿ-ಮಾರ್ಟ್ ಕಾರ್ನರ್ ಕಡೆಗೆ ಸಾಗುವ ರಸ್ತೆಯಲ್ಲಿ ಈ ಅವಘಡ ಸಂಭವಿಸಿದೆ. ರಸ್ತೆ ಮಧ್ಯೆ ಸಾಗುತ್ತಿದ್ದ ವೇಳೆ ಕಾರಿನ ಎಂಜಿನ್ ಭಾಗದಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಕೇವಲ 10ರಿಂದ 15 ನಿಮಿಷಗಳಲ್ಲೇ ಕಾರು ಧಗಧಗನೆ ಹೊತ್ತಿ ಉರಿದು ಭಸ್ಮವಾಗಿದೆ.

ಕಾರು ಒಳಗಿನಿಂದ ಹೊಗೆ ಹಾಗೂ ಬೆಂಕಿ ಹೊರಬರುತ್ತಿರುವುದನ್ನು ಗಮನಿಸಿದ ಚಾಲಕ ಮತ್ತು ಪ್ರಯಾಣಿಕರು ಸಮಯಪ್ರಜ್ಞೆ ಮೆರೆದು ತಕ್ಷಣವೇ ವಾಹನವನ್ನು ರಸ್ತೆ ಬದಿಗೆ ನಿಲ್ಲಿಸಿ ಕೆಳಗಿಳಿದಿದ್ದಾರೆ. ಇದರಿಂದ ಸಂಭವಿಸಬಹುದಾಗಿದ್ದ ಭಾರೀ ಅನಾಹುತ ತಪ್ಪಿದ್ದು, ಕಾರಿನಲ್ಲಿದ್ದ ಎಲ್ಲರೂ ಯಾವುದೇ ಗಾಯಗಳಿಲ್ಲದೆ ಸುರಕ್ಷಿತವಾಗಿ ಪಾರಾಗಿದ್ದಾರೆ.



ಬೆಂಕಿಗೆ ಆಹುತಿಯಾದ ಮಾರುತಿ ಸುಝುಕಿ ಕಾರು ಬೆಳಗಾವಿ ಪಾಸಿಂಗ್ ನೋಂದಣಿಯನ್ನು ಹೊಂದಿದೆ ಎಂದು ತಿಳಿದುಬಂದಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಶಂಕಿಸಲಾಗಿದ್ದು, ಘಟನೆಯ ನಿಖರ ಕಾರಣ ತನಿಖೆಯ ಬಳಿಕವೇ ತಿಳಿದುಬರಲಿದೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಸ್ಥಳೀಯ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಧಾವಿಸಿ ಬೆಂಕಿಯನ್ನು ನಂದಿಸಿದರು. ರಸ್ತೆ ಮಧ್ಯೆ ಕಾರು ಹೊತ್ತಿ ಉರಿದ ಪರಿಣಾಮ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳದಲ್ಲಿ ಜಮಾಯಿಸಿದ್ದರು.

ಯುವಕರ ಮಧ್ಯೆ ಗಲಾಟೆ: 8 ಜನರಿಗೆ ಗಾಯ

ಹಾನಗಲ್ಲ: ಹೋರಿ ಓಡಿಸುವ ಸಂದರ್ಭದಲ್ಲಿ ಎರಡು ಕೋಮಿನ ಯುವಕರ ಮಧ್ಯೆ ಗಲಾಟೆ ನಡೆದು 8 ಜನ ಗಾಯಗೊಂಡ ಘಟನೆ ತಾಲೂಕಿನ ನರೇಗಲ್ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ.

ಕಾರು ಹುಣ್ಣಿಮೆ ನಿಮಿತ್ತ ಸಂಪ್ರದಾಯದಂತೆ ಗ್ರಾಮದ ಪೇಟೆ ಓಣಿಯಲ್ಲಿ ಯುವಕರು ಹೋರಿ ಓಡಿಸುವ ಸಂಭ್ರಮದಲ್ಲಿದ್ದಾಗ ಈ ಘಟನೆ ನಡೆದಿದೆ.

ಇದೇ ಓಣಿಯಲ್ಲಿ ಇದ್ದ ಇನ್ನೊಂದು ಕೋಮಿನ ಯುವಕರು ಮತ್ತು ಹೋರಿ ಓಡಿಸುತ್ತಿದ್ದ ಯುವಕರ ಗುಂಪಿನ ಮಾತಿನ ಚಕಮಕಿ ವಿಕೋಪಕ್ಕೆ ತೆರಳಿದೆ. ಈ ಸಮಯದಲ್ಲಿ ಒಂದು ಕೋಮಿನ ಯುವಕ ಕುಡಗೋಲಿನಿಂದ ದಾಳಿ ಮಾಡಿದ್ದಾನೆ ಎನ್ನಲಾಗಿದೆ.

ಶಿವರಾಜ ಕುರುಬರ, ನಾಗಪ್ಪ ಕುರುಬರ, ಮಲ್ಲಪ್ಪ ಕೊಡಸಂಗಿ, ನಿಂಗರಾಜ್ ಕುರುಬರ, ಜಯಪ್ಪ ಕುರುಬರ, ಲೋಹಿತ್ ಕುರುಬರ ಮತ್ತು ಭಾಷಾಸಾಬ್ ಗೌಂಡಿ, ಖಾಜಾ ಭಾಷಾಸಾಬ್ ಗೌಂಡಿ ಗಾಯಗೊಂಡಿದ್ದಾರೆ.

ಗಾಯಗೊಂಡವರು ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇವರಲ್ಲಿ ಕೈ ಮತ್ತು ತಲೆಗೆ ಬಲವಾದ ಗಾಯವಾಗಿದ್ದ ಶಿವರಾಜ್ ಕುರುಬರ, ಜಯಪ್ಪ ಕುರುಬರ, ಲೋಹಿತ್ ಕುರುಬರ ಅವರನ್ನು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿದೆ.

ಸದ್ಯ ಗ್ರಾಮದಲ್ಲಿ ಬಿಗುವಿನ ವಾತಾವರಣ ಇದ್ದು, ಬಿಗಿ ಪೊಲೀಸ್ ಬಂದೋಬಸ್ತ ಮಾಡಲಾಗಿದೆ. ಗ್ರಾಮ ಶಾಂತ ಸ್ಥಿತಿಗೆ ಮರಳಿದೆ ಎಂದು ಆಡೂರ ಪಿಎಸ್ಐ ಕುಮಾರ ಕುರಗುಂದ ತಿಳಿಸಿದ್ದಾರೆ.



> **ನರೇಗಲ್ ಗ್ರಾಮದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ ಕರುಗಳಿಗೆ ಬಣ್ಣ ಹಚ್ಚಿ ಓಡಿಸುವಾಗ ಗಲಾಟೆ ನಡೆದಿದೆ. ಈ ಗಲಾಟೆಯಲ್ಲಿ 8 ಜನರಿಗೆ ಗಾಯವಾಗಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗುವುದು.**
> ■ **ಯಶೋಧಾ ವಂಟಗೋಡಿ, ಎಸ್ಪಿ ಹಾವೇರಿ**

ಸ್ಥಳಕ್ಕೆ ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಶಿಗ್ಗಾವ ಡಿವೈಎಸ್‌ಪಿ ಗುರುಶಾಂತಪ್ಪ ಕೆ.ವಿ, ಹಾನಗಲ್ಲ ಸಿಪಿಐ ಬಸವರಾಜ ಹಳಬಣ್ಣನವರ ಭೇಟಿ ನೀಡಿದ್ದಾರೆ.

ಗಂಡು ಮಗು ಜನಿಸಿದ್ದಕ್ಕೆ ಪಾರ್ಟಿ ಕೇಳಿದ ಗೆಳೆಯ

ಕಲ್ಲಿನಿಂದ ಜಜ್ಜಿ ಕೊಲೆ: ಆರೋಪಿ ಬಂಧನ

ಬೆಳಗಾವಿ: ಮಗ ಹುಟ್ಟಿದ ಖುಷಿಗೆ ಪಾರ್ಟಿ ಹಾಗೂ ಬೈಕ್ ಕೇಳಿದ ಗೆಳೆಯನನ್ನೇ ಅತ್ಯಂತ ಕ್ರೂರವಾಗಿ ಕಲ್ಲಿನಿಂದ ಹೊಡೆದು ಕೊಂದ ಭೀಕರ ಘಟನೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ವಣ್ಣೂರ ಗ್ರಾಮದಲ್ಲಿ ನಡೆದಿದೆ.

ಘಟನೆ ನಡೆದು ತಲೆಮರೆಸಿಕೊಂಡಿದ್ದ ಆರೋಪಿಯನ್ನು ನೇಸರಗಿ ಪೊಲೀಸರು ಕೇವಲ 48 ಗಂಟೆಗಳಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಣ್ಣೂರ ಗ್ರಾಮದ ಹನುಮಂತಪ್ಪ ಯಮನಪ್ಪ ಇತಾಪಿ ಕೊಲೆಯಾದ ದುರ್ದೈವಿ. ಅದೇ ಗ್ರಾಮದ ವಿಶ್ವನಾಥ ಸಿದ್ದಯ್ಯ ಪೂಜೇರಿ (29) ಬಂಧಿತ ಆರೋಪಿ.

ಘಟನೆ ಹಿನ್ನೆಲೆ: ಜೂನ್ 26ರಂದು ಹನುಮಂತಪ್ಪ ಅವರು ತಮ್ಮ ಗೆಳೆಯ ವಿಶ್ವನಾಥ ಪೂಜೇರಿ ಬಳಿ ಹೋಗಿ, ನಿನಗೆ ಮಗ ಹುಟ್ಟಿದ್ದಾನೆ. ಪಾರ್ಟಿ ಕೊಡು, ಸರಾಯಿ ಕುಡಿಸು ಹಾಗೂ ನಿನ್ನ ಬೈಕ್ ಕೊಡು ಎಂದು ಕೇಳಿದ್ದಾರೆ. ಈ ಸಣ್ಣ ವಿಚಾರ ಇಬ್ಬರ ನಡುವೆ ತೀವ್ರ ಜಗಳಕ್ಕೆ ಕಾರಣವಾಗಿದೆ. ಮಾತಿಗೆ ಮಾತು ಬೆಳೆದು ತೀವ್ರ ಆಕ್ರೋಶಗೊಂಡ ಆರೋಪಿ ವಿಶ್ವನಾಥ, ಕೊಲೆ ಮಾಡುವ ಉದ್ದೇಶದಿಂದಲೇ ಹನುಮಂತಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಾನೆ. ಅಷ್ಟೇ ಅಲ್ಲದೆ, ಅಲ್ಲೇ ಇದ್ದ ದೊಡ್ಡ ಕಲ್ಲಿನಿಂದ ಹನುಮಂತಪ್ಪನ ತಲೆಗೆ ಜೋರಾಗಿ ಜಜ್ಜಿದ್ದಾನೆ. ತೀವ್ರ ರಕ್ತಸ್ರಾವವಾಗಿ ಗಾಯಗೊಂಡ ಹನುಮಂತಪ್ಪ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದು, ಆರೋಪಿ ಅಲ್ಲಿಂದ ಪರಾರಿಯಾಗಿದ್ದ.



ಮೃತನ ತಂದೆ ಯಮನಪ್ಪ ಇತಾಪಿ ನೀಡಿದ ದೂರಿನ ಮೇರೆಗೆ ನೇಸರಗಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು.

ಕಾರ್ಯಪ್ರವೃತ್ತರಾದ ವಿಶೇಷ ತಂಡವು ಕೇವಲ 48 ಗಂಟೆಗಳ ಒಳಗಾಗಿ ಚುರುಕಿನ ಕಾರ್ಯಾಚರಣೆ ನಡೆಸಿ, ಜೂನ್ 28 ಭಾನುವಾರ ತಲೆಮರೆಸಿಕೊಂಡಿದ್ದ ಆರೋಪಿ ವಿಶ್ವನಾಥ ಪೂಜೇರಿಯನ್ನು ಹೆಡೆಮುರಿ ಕಟ್ಟಿದೆ. ಸದ್ಯ ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಂಶಯದ ಭೂತಕ್ಕೆ ಬಲಿಯಾದ ಪತ್ನಿ

ಕೊಡಲಿಯಿಂದ ಕೊಚ್ಚಿ ಕೊಂದ ಪತಿ ಬಂಧನ

ಬೆಳಗಾವಿ: ಸಂಶಯದ ಭೂತಕ್ಕೆ ಮತ್ತೊಂದು ಅಮಾಯಕ ಜೀವ ಬಲಿಯಾಗಿರುವ ಭೀಕರ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಬೆಳಕಿಗೆ ಬಂದಿದೆ.

ಹೆಂಡತಿಯ ನಡತೆಯ ಮೇಲೆ ಶಂಕೆ ವ್ಯಕ್ತಪಡಿಸಿ, ಪತಿಯೇ ಆಕೆಯನ್ನು ಕೊಡಲಿಯಿಂದ ಕೊಚ್ಚಿ ಕ್ರೂರವಾಗಿ ಹತ್ಯೆ ಮಾಡಿದ್ದಾನೆ. ಈ ಘಟನೆಗೆ ಸಂಬಂಧಿಸಿದಂತೆ ಆರೋಪಿ ಪತಿಯನ್ನು ಪೊಲೀಸರು ತಕ್ಷಣವೇ ಬಂಧಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ ಎಂದು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ಸೋಮವಾರ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಥಣಿ ತಾಲೂಕಿನ ನಂದಗಾಂವ ಗ್ರಾಮದ ಶ್ರೀ ಅವಜೀಕರ ಮಠದಲ್ಲಿ ಈ ಘಟನೆ ನಡೆದಿದೆ. ಶೋಭಾ ಪರಗೊಂಡ ಸಾರವಾಡ (35) ಕೊಲೆಯಾದ ದುರ್ದೈವಿ ಮಹಿಳೆ. ಆರೋಪಿ ಪತಿ ಪರಗೊಂಡ ಸಂಗಪ್ಪ ಸಾರವಾಡ ಎಂಬಾತನೇ ಹೆಂಡತಿಯನ್ನು ಕೊಂದ ಹಂತಕ.

4 ವರ್ಷಗಳ ಸಂಶಯ, ನಸುಕಿನ ಜಾವ ಅಂತ್ಯ: ಆರೋಪಿ ಪರಗೊಂಡ ಕಳೆದ ನಾಲ್ಕು ವರ್ಷಗಳಿಂದಲೂ ತನ್ನ ಹೆಂಡತಿ ಶೋಭಾಳ ನಡತೆಯ ಬಗ್ಗೆ ವಿನಾಕಾರಣ ಸಂಶಯ ಪಡುತ್ತಿದ್ದನು. ಈ ವಿಷಯವಾಗಿ ಕುಟುಂಬದ ಹಿರಿಯರು ಹಲವು ಬಾರಿ ಜಗಳ ಬಿಡಿಸಿ, ಆರೋಪಿಗೆ ಬುದ್ಧಿವಾದ ಹೇಳಿದ್ದರೂ ಆತ ತನ್ನ ಚಾಳಿಯನ್ನು ಬಿಟ್ಟಿರಲಿಲ್ಲ.

ಜೂನ್ 28ರ ಭಾನುವಾರ ನಸುಕಿನ ಜಾವ ಸುಮಾರು 5 ಗಂಟೆಯ ವೇಳೆಗೆ, ಶೋಭಾ ಅವರು ಮನೆಯಲ್ಲಿ ಗಾಢ ನಿದ್ರೆಯಲ್ಲಿದ್ದಾಗ ಸಂಶಯದ ಮದವೇರಿದ ಪತಿ ಪರಗೊಂಡ, ಕೊಡಲಿ ತೆಗೆದುಕೊಂಡು ಆಕೆಯ ಕುತ್ತಿಗೆ ಹಾಗೂ ಕೈಗಳಿಗೆ ಮನಸೋಇಚ್ಛೆ ಕೊಚ್ಚಿದ್ದಾನೆ. ತೀವ್ರ ರಕ್ತಸ್ರಾವದಿಂದಾಗಿ ಶೋಭಾ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಘಟನೆ ನಡೆದ ಬಳಿಕ ಮೃತ ಮಹಿಳೆಯ ಸಹೋದರ ಮಹಾಂತೇಶ ಗುರಪ್ಪ ಪಾಟೀಲ ಅವರು ಅಥಣಿ ಪೊಲೀಸ್ ಠಾಣೆಗೆ ಧಾವಿಸಿ ತಂಗಿಯ ಕೊಲೆಯ ಕುರಿತು ದೂರು ನೀಡಿದ್ದಾರೆ. ಸದ್ಯ ಸಹೋದರನ ದೂರಿನ ಅನ್ವಯ ಅಥಣಿ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಕರಣ ದಾಖಲಾದ ತಕ್ಷಣವೇ ಕಾರ್ಯಪ್ರವೃತ್ತರಾದ ಅಥಣಿ ಪೊಲೀಸರು ಆರೋಪಿ ಪತಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸದ್ಯ ಆರೋಪಿಯನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಎಸ್ಪಿ ಕೆ.ರಾಮರಾಜನ್ ತಿಳಿಸಿದ್ದಾರೆ.

ನಾರ್ಕೋಟಿಕ್ಸ್ ಪತ್ತೆ ಶ್ವಾನದಳದಿಂದ ತಪಾಸಣೆ

ಭಟ್ಕಳ: ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಸಾಗಾಟ ಮತ್ತು ಮಾರಾಟವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಉದ್ದೇಶ ದಿಂದ ಕಾರವಾರದಿಂದ ಆಗಮಿಸಿದ ನಾರ್ಕೋಟಿಕ್ಸ್ ಪತ್ತೆ ಶ್ವಾನದಳವು ಸೋಮವಾರ ಭಟ್ಕಳ ನಗರದ ವಿವಿಧ ಕೋರಿಯರ್ ವಿತರಣಾ ಕೇಂದ್ರಗಳು ಹಾಗೂ ಅಂಚೆ ಕಚೇರಿಗಳಲ್ಲಿ ವ್ಯಾಪಕ ತಪಾಸಣೆ ನಡೆಸಿತು.

ಮಾದಕ ವಸ್ತುಗಳನ್ನು ಪತ್ತೆಹಚ್ಚಲು ವಿಶೇಷ ತರಬೇತಿ ಪಡೆದ ಡ್ರಗ್ ಡಿಟೆಕ್ಷನ್ ಡಾಗ್‌ಗಳ ಸಹಾಯದಿಂದ ಕೋರಿಯರ್ ಪಾರ್ಸೆಲ್‌ಗಳು, ಅಂಚೆ ಮೂಲಕ ಸಾಗಿಸಲಾಗುತ್ತಿದ್ದ ವಸ್ತುಗಳು ಹಾಗೂ ಅನುಮಾನಾಸ್ಪದ ಪ್ಯಾಕೆಟ್‌ಗಳನ್ನು ಪರಿಶೀಲಿಸಲಾಯಿತು. ಯಾವುದೇ ಮಾದಕ ವಸ್ತುಗಳನ್ನು ಅಂಚೆ ಅಥವಾ ಕೋರಿಯರ್ ಸೇವೆಗಳ ಮೂಲಕ ಸಾಗಿಸದಂತೆ ತಡೆಯುವ ಉದ್ದೇಶದಿಂದ ಈ ಕಾರ್ಯಾಚರಣೆ ನಡೆಸಲಾಯಿತು.

ತಪಾಸಣೆ ವೇಳೆ ಶ್ವಾನದಳದ ಸಿಬ್ಬಂದಿ ಕಚೇರಿಯ ವಿವಿಧ ವಿಭಾಗಗಳಲ್ಲಿ ಸೂಕ್ಷ್ಮ ಪರಿಶೀಲನೆ ನಡೆಸಿ, ಪಾರ್ಸೆಲ್‌ಗಳ ಮೇಲೆ ಶ್ವಾನಗಳ ಮೂಲಕ ತಪಾಸಣೆ ನಡೆಸಿ ದರು. ಕೋರಿಯರ್ ಸಂಸ್ಥೆಗಳ ಸಿಬ್ಬಂದಿಗೆ ಅನುಮಾನಾಸ್ಪದ ಪಾರ್ಸೆಲ್‌ಗಳು ಕಂಡುಬಂದಲ್ಲಿ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡುವಂತೆ ಅಧಿಕಾರಿಗಳು ಸೂಚನೆ ನೀಡಿದರು.



ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದು, ಶಾಲೆ-ಕಾಲೇಜುಗಳ ಸುತ್ತಮುತ್ತ, ಬಸ್ ನಿಲ್ದಾಣ, ರೈಲು ನಿಲ್ದಾಣ, ಕೋರಿಯರ್ ಕೇಂದ್ರಗಳು ಹಾಗೂ ಅಂಚೆ ಕಚೇರಿಗಳಲ್ಲಿ ನಿರಂತರ ತಪಾಸಣೆ ನಡೆಸಲಾಗುತ್ತಿದೆ. ಮಾದಕ ವಸ್ತುಗಳ ಸಾಗಾಟ, ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಇಂತಹ ವಿಶೇಷ ಕಾರ್ಯಾಚರಣೆಗಳು ಮುಂದಿನ ದಿನಗಳಲ್ಲಿಯೂ ಮುಂದುವರಿಯಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಟ ಸಾವಿತ್ರಿ ಹುಣ್ಣಿಮೆ: ನವಚಂಡಿ ಹವನ

ಅಂಕೋಲಾ: ತಾಲೂಕಿನ ಶಕ್ತಿ ದೇವತೆ ಭೂಮ್ತಾಯಿಯ ಶ್ರೀಶಾಂತಾ ದುರ್ಗಾದೇವಿಯ ಸನ್ನಿಧಿಯಲ್ಲಿ ವಟ ಸಾವಿತ್ರಿ ಹುಣ್ಣಿಮೆಯ ಪ್ರಯುಕ್ತ ನವಚಂಡಿ ಹವನ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು.



ಅರ್ಚಕರು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನವಚಂಡಿ ಹವನ ಪೂರ್ಣಾಹುತಿ ನೆರವೇರಿಸಿದರು.ದೇವಿಯ ವಿಶೇಷ ಪೂಜೆಯ ನಂತರ ಅನ್ನ ಸಂತರ್ಪಣೆ ನಡೆಯಿತು.ಸುತ್ತ ಮುತ್ತಲಿನ ನೂರಾರು ಭಕ್ತರು. ದೇವಾಲಯದ ಸೇವಾಕರ್ತರು ಪಾಲ್ಗೊಂಡು ಅನ್ನ ಪ್ರಸಾದ ಸ್ವೀಕರಿಸಿದರು. ಸುಮಂಗಲಿಯರು ದೇವಿಯ ದರ್ಶನ ಪಡೆದು ದೇವಾಲಯದ ಹೊರ ಆವರಣದ ವಟವೃಕ್ಷಕ್ಕೆ ಪೂಜೆ ಸಲ್ಲಿಸಿದರು. ಸ್ವಯಂ ಸೇವಕರ ತಂಡ ಅನ್ನ ಸಂತರ್ಪಣೆ ಸೇರಿದಂತೆ ವಿವಿಧ ವಿವಿಧ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿದರು.

ಇಂದು ಮಾದಕ ವಸ್ತು ವಿರೋಧಿ ದಿನಾಚರಣೆ

ಬನವಾಸಿ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಶಿರಸಿ, ಜಿಲ್ಲಾ ಜನಜಾಗೃತಿ ವೇದಿಕೆ ಶಿರಸಿ ಹಾಗೂ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಬನವಾಸಿ ಪದವಿ ಪೂರ್ವ ಕಾಲೇಜಿನಲ್ಲಿ ಜೂ.30ರಂದು ಬೆಳಗ್ಗೆ 10.30ಕ್ಕೆ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ಕಾರ್ಯಕ್ರಮ ಉದ್ಘಾಟಿಸುವರು. ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಸಿದ್ದಲಿಂಗೇಶ ಉಗ್ರಾಣದ ಅಧ್ಯಕ್ಷತೆವಹಿಸುವರು. ಮುಖ್ಯ ಅತಿಥಿಗಳಾಗಿ ವೈದ್ಯಾಧಿಕಾರಿ ಡಾ. ಜಯಶ್ರೀ ಹೆಗಡೆ, ತಹಸೀಲ್ದಾರ ಪಿಎಸ್ಐ ರವೀಂದ್ರ ಬಿರಾದಾರ, ಜಿಲ್ಲಾ ಜನಜಾಗೃತಿ ವೇದಿಕೆಯ ಜಿಲ್ಲಾ ಸಂಘಟನಾ ಅಧ್ಯಕ್ಷ ಗೌರಿ ನಾಯ್ಕ, ಉಪಾಧ್ಯಕ್ಷ ಸುಧೀರ ನಾಯರ್, ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಎಂ. ಯೋಜನಾಧಿಕಾರಿ ಎಸ್. ಜಿ. ಮಂಜುನಾಥ, ಕಾಲೇಜಿನ ಪ್ರಾಂಶುಪಾಲರಾದ ದಿನೇಶ್ ಉಪಸ್ಥಿತರಿರುವರು ಎಂದು ವಲಯ ಮೇಲ್ವಿಚಾರಕ ಸುನಂದಾ ನಾಯ್ಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶಿಸಿ ವ್ಯಕ್ತಿ ಸಾವು

ಮುಂಡಗೋಡ: ವಿದ್ಯುತ್ ತಗುಲಿ ಯುವಕನೊಬ್ಬ ಮೃತಪಟ್ಟ ಘಟನೆ ಜೋಗೇಶ್ವರ ಹಳ್ಳದ ಗೌಳಿ ದಡ್ಡಿಯಲ್ಲಿ ಭಾನುವಾರ ಸಂಜೆ ನಡೆದಿದೆ.ತಾಲೂಕಿನ ಜೋಗೇಶ್ವರ ಗೌಳಿ ದಡ್ಡಿಯ ಜಾನು ಕೊಕರೆ (26)ಎಂಬಾತನೇ ಮೃತಪಟ್ಟ ಯುವಕ. ಪ್ರತಿನಿತ್ಯ ಈಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದನು. ಸೋಮವಾರ ಹುಣ್ಣಿಮೆ ಇದ್ದಿದ್ದರಿಂದ ಯುವಕನು ಭಾನುವಾರ ಸಂಜೆ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಹೂವು ಹರಿಯಲು ಹೋದಾಗ ವಿದ್ಯುತ್ ತಗುಲಿ ಮೃತಪಟ್ಟಿದ್ದಾನೆ ಎನ್ನಲಾಗಿದೆ.ಇಲ್ಲಿನ ಕಿರಿಯ ಪ್ರಾಥಮಿಕ ಶಾಲೆ ಪಕ್ಕದಲ್ಲಿ ವಿದ್ಯುತ್ ಟಿ.ಸಿ ಇದ್ದು, ಈ ಟಿಸಿಯ ವಿದ್ಯುತ್ ತಂತಿ ಹರಿದು ಶಾಲೆಯ ಬೇಲಿಗೆ ತಗುಲಿದೆ. ಶಾಲೆ ಅವಧಿಯಲ್ಲಿ ಈ ಘಟನೆ ನಡೆದಿದ್ದರೆ ದೊಡ್ಡ ಅನಾಹುತ ವಾಗತ್ತಿತ್ತು ಎನ್ನಲಾಗಿದೆ. ಅದೃಷ್ಟವಶಾತ್ ದೊಡ್ಡ ಅನಾಹುತ ತಪ್ಪಿದಂತಾಗಿದೆ ಎಂಬ ಮಾತು ಸ್ಥಳೀಯರಿಂದ ಮಾತು ಕೇಳಿಬಂದಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62000	71699
ಬಿಳಿಗೋಟು	22100	36599
ಕೆಂಪುಗೋಟು	33099	35323
ಬೆಟ್ಟೆ	40223	47899
ರಾಶಿ	49209	52709
ಚಾಲಿ	43649	48350
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ರಾಶಿ	44821	52869
ಬೆಟ್ಟೆ	40900	44300
ಕೆಂಪುಗೋಟು	24899	35399
ಬಿಳಿಗೋಟು	18100	33012
ಚಾಲಿ	36769	47340
ಕೋಕಾ	16900	23909
ಕಾಳುಮೆಣಸು	51239	65555



ಗೋಕರ್ಣ: ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ವಟ ಸಾವಿತ್ರಿ ಹುಣ್ಣಿಮೆಯನ್ನ ಸೋಮವಾರ ಶ್ರದ್ಧಾ ಭಕ್ತಯಿಂದ ಆಚರಿಸಲಾಯಿತು. ಬೆಳಗ್ಗೆಯಿಂದ ಮುತ್ತೈದೆಯರು ಇಲ್ಲಿನ ಗಾಯತ್ರಿ ಓಣಿಯಲ್ಲಿರುವ ಪುರಾತನ ವಟವೃಕ್ಷಕೆ ಪುರೋಹಿತರ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಕ್ಷಕ್ಕೆ ದಾರ ಕಟ್ಟುವುದು, ಕುಂಕುಮಾರ್ಚನೆ ಸೇರಿದಂತೆ ವಿವಿಧ ಪೂಜೆ ನೆರವೇರಿಸಿ ಪತಿಯ ದೀರ್ಘಾಯುಷ್ಯ, ಕುಟುಂಬಕ್ಕೆ ಒಳಿತು ಬಯಸಿ ಪ್ರಾರ್ಥಿಸಿದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಶಾನಭಾಗ

ಕುಮಟಾ: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದನ್ನು ಪೋಷಿಸುವ ಸಂಕಲ್ಪ ಮಾಡಬೇಕು ಎಂದು ಕುಮಟಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ರಾಮನಾಥ ಶಾನಭಾಗ ಹೇಳಿದರು.

ತಾಲೂಕಿನ ಹೆಗಡೆಯ ಎಸ್ಇಕಮಿಟಿಯ ಶಾಂತಿಕಾಂಬಾ ಪ್ರೌಢಶಾಲೆಯಲ್ಲಿ ಕುಮಟಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಸೋಮವಾರ ವನಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಬ್ಯಾಂಕ್ ಅಧ್ಯಕ್ಷ ರಾಮನಾಥ ಶಾನಭಾಗ ಹಾಗೂ ಮುಖ್ಯ ಅತಿಥಿಯಾಗಿದ್ದ ಹೆಗಡೆಯ ಉದ್ಯಮಿ ಮತ್ತು ದಾನಿ ಮುಕುಂದ ಆರ್. ನಾಯ್ಕ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಬ್ಯಾಂಕ್‌ನ ನಿರ್ದೇಶಕರಾದ ಪ್ರಶಾಂತ ನಾಯ್ಕ, ಸದಾನಂದ ಕಾಮತ್, ಸುನಿತಾ ಕಾಮತ್, ಮಾಧವ ಶಾನಭಾಗ, ಸುಬ್ರಾಯ ಅಂಬಿಗ, ಪ್ರಧಾನ ವ್ಯವಸ್ಥಾಪಕ ಪ್ರದೀಪ ಪೈ, ವ್ಯವಸ್ಥಾಪಕ ಪ್ರಶಾಂತ ಬಾಳಗಿ ಹಾಗೂ ಶಾಲೆಯ ಮುಖ್ಯಾಧ್ಯಾಪಕಿ ಸವಿತಾ ಶಾನಭಾಗ ಸೇರಿದಂತೆ ಗಣ್ಯರು ಆವರಣದಲ್ಲಿ ವಿವಿಧ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು.ಅನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಪ್ರದೀಪ ಪೈ, ಶಾಲೆಯ ಚೇರ್ಮನ್ ಹಾಗೂ ಬ್ಯಾಂಕ್ ಅಧ್ಯಕ್ಷ ರಾಮನಾಥ ಶಾನಭಾಗ, ಮುಖ್ಯ ಅತಿಥಿ ಮುಕುಂದ ಆರ್. ನಾಯ್ಕ ಮಾತನಾಡಿದರು. ಶಾಲಾ ಸಮಿತಿಯ ಸದಸ್ಯರಾದ ಅಮರನಾಥ ಭಟ್ಟ ಹಾಗೂ ಶ್ರೀಧರ ಗೌಡ ಉಪಸ್ಥಿತರಿದ್ದರು. ಮುಖ್ಯಾಧ್ಯಾಪಕಿ ಸವಿತಾ ಶಾನಭಾಗ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ದೀಪಕ್ ಬಾಳಗಿ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕ ಹನುಮಂತ ಪಟಗಾರ ವಂದಿಸಿದರು.



ಹೊನ್ನಾವರ: ಪಾಂಡವಪುರದ ಪುಸ್ತಕ ಮನೆಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂಕೆ ಗೌಡರನ್ನು ಜಿಲ್ಲಾ ಮತ್ತು ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸನ್ಮಾನಿಸಲಾಯಿತು. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್.ವಾಸರೆ, ಕಾರ್ಯದರ್ಶಿ ಪಿ.ಆರ್.ನಾಯ್ಕ,ತಾಲೂಕಾ ಘಟಕದ ಅಧ್ಯಕ್ಷ ಎಸ್. ಹೆಚ್. ಗೌಡ, ಕುಮಟಾ ಘಟಕದ ಅಧ್ಯಕ್ಷ ಪ್ರಮೋದ ನಾಯ್ಕ,ಹಿರಿಯ ಸಾಹಿತಿಗಳಾದ ಪಟ್ಟು ಕುಲಕರ್ಣಿ, ರೋಹಿದಾಸ ನಾಯಕ, ಡಾ. ಶ್ರೀಪಾದ ಶೆಟ್ಟಿ, ಸುಮುಖಾನಂದ ಜಲವಳ್ಳಿ, ನಾರಾಯಣ ಯಾಜಿ, ಸುರೇಶ ನಾಯ್ಕ, ವಿನಾಯಕ ನಾಯ್ಕ ಹಾಗೂ ಪರಿಷತ್ತಿನ ಪದಾಧಿಕಾರಿಗಳು ಇದ್ದರು.

ಎಚ್ಚರ ವಹಿಸಲು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಸೂಚನೆ

ಉ.ಕದಲ್ಲಿ ಆರೆಂಜ್ ಅಲರ್ಟ್

ಕಾರವಾರ: ಭಾರತೀಯ ಹವಾಮಾನ ಇಲಾಖೆ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಬೆಂಗಳೂರು ರವರ ಮುನ್ಸೂಚನೆಯಂತೆ, ಜಿಲ್ಲೆಯಲ್ಲಿ ಜೂನ್ 30 ಮಧ್ಯಾಹ್ನ 1 ಗಂಟೆಯಿಂದ ಜುಲೈ 2ರ ಬೆಳಗ್ಗೆ 8.30 ರವರೆಗೆ ಆರೆಂಜ್ ಅಲರ್ಟ್ ಇದ್ದು 30-40 ಕಿ.ಮೀ ಗಾಳಿಯ ವೇಗದೊಂದಿಗೆ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿರುವ ಬಗ್ಗೆ ಮುನ್ಸೂಚನೆ ನೀಡಲಾಗಿದ್ದು, ಜಿಲ್ಲಾಡಳಿತವು ಜಿಲ್ಲೆಯಲ್ಲಿ ಮುಂಗಾರು ಪೂರ್ವ ಸಿದ್ಧತೆಯನ್ನು ಈಗಾಗಲೇ ಕೈಗೊಂಡಿರುತ್ತದೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರವನ್ನು ತೆರೆಯಲಾಗಿದ್ದು, ಸಾರ್ವಜನಿಕರು ಜಿಲ್ಲೆಯ ಹವಾಮಾನ ಪರಿಸ್ಥಿತಿಯ ಕುರಿತಂತೆ 247 ವರದಿಗಳನ್ನು ಜಿಲ್ಲಾಧಿಕಾರಿಗಳ ಸಾಮಾಜಿಕ ಜಾಲತಾಣ ಹಾಗೂ ಸ್ಥಳೀಯ ಸುದ್ದಿ ಪತ್ರಿಕೆಗಳನ್ನು ಪರಿಶೀಲಿಸಬಹುದಾಗಿರುತ್ತದೆ.

ಮಳೆ ತೀವ್ರತೆ ಅವಧಿಯಲ್ಲಿ ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆಗೆ ಹೋಗದಂತೆ ಸೂಚಿಸಲಾಗಿದೆ. ನೀರು ಇರುವ ತಗ್ಗು ಪ್ರದೇಶ, ಕೆರೆ, ನದಿ ತೀರ, ಸಮುದ್ರ ತೀರಕ್ಕೆ ಹೋಗದಂತೆ ಸಾರ್ವಜನಿಕರು ಹಾಗೂ ಮುಖ್ಯವಾಗಿ ಮಕ್ಕಳು ಹೋಗದಂತೆ ಪಾಲಕರು ಜಾಗ್ರತೆವಹಿಸುವುದು. ಪ್ರವಾಸಿಗರು, ಹಾಗೂ ಸಾರ್ವಜನಿಕರು ನದಿ, ನೀರಿರುವ ಪ್ರದೇಶ ಮತ್ತು ಸಮುದ್ರಕ್ಕೆ ಇಳಿಯದಂತೆ ಕಟ್ಟೆಚ್ಚರ ವಹಿಸುವುದು.

ಕೃಷಿಕರು ಮಳೆ, ಸಿಡಿಲಿನಂತಹ ಸಂದರ್ಭದಲ್ಲಿ ಕೃಷಿ ಚಟುವಟಿಕೆಯಿಂದ ದೂರವಿರುವುದು ಸಾರ್ವಜನಿಕರು, ಮಕ್ಕಳು, ಕಾರ್ಮಿಕರು ಮಳೆ ಬೀಳುವ ಸಂದರ್ಭದಲ್ಲಿ ಹೊರಗೆ ತಿರುಗಾಡದೆ, ಸುರಕ್ಷಿತ ಕಟ್ಟಡದಲ್ಲಿ ಆಶ್ರಯ ಪಡೆಯುವುದು.

ಈ ಸಂದರ್ಭದಲ್ಲಿ ಮಕ್ಕಳು, ಸಾರ್ವಜನಿಕರು ಅಪಾಯಕಾರಿ ಮರ, ವಿದ್ಯುತ್ ಕಂಬದ ಹತ್ತಿರ ಸುಳಿಯಬಾರದು ಮತ್ತು ತುಂಡಾದ ವಿದ್ಯುತ್ ತಂತಿಗಳಿಂದ ದೂರವಿರುವುದು. ದುರ್ಬಲವಾದ ಹಳೆಯ ಕಟ್ಟಡ ಅಥವಾ ಮರಗಳ ಹತ್ತಿರ, ಮರಗಳ ಕೆಳಗೆ ನಿಲ್ಲಬಾರದು.

ಮೇಲಿನ ಅಂಶಗಳನ್ನು ಗುಡುಗು ಸಿಡಿಲು, ಮಳೆ ಗಾಳಿಯಂತಹ ಸಂದರ್ಭಗಳಲ್ಲಿ ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸುವುದು.

ಸಾರ್ವಜನಿಕರು ತಗ್ಗು ಪ್ರದೇಶದಲ್ಲಿ ಅಥವಾ ಮಳೆಯಿಂದ ಅಪಾಯಕ್ಕೀಡಾಗುವ ಪ್ರದೇಶದಲ್ಲಿ ವಾಸವಿದ್ದಲ್ಲಿ ಅಥವಾ ಶಿಥಿಲಾವಸ್ಥೆಯಲ್ಲಿರುವ ಜಾರುವ ಹಂತದಲ್ಲಿರುವ ಕಂಪೌಂಡ್ ಅಥವಾ ಮನೆಯ ಗೋಡೆ. ಇಂತಹ ದುರ್ಬಲವಾದ ಕಟ್ಟಡದಲ್ಲಿ ವಾಸವಿರುವ ಸಾರ್ವಜನಿಕರು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವುದು, ಅಗತ್ಯವಿದ್ದಲ್ಲಿ ಈಗಾಗಲೇ ಸಂಬಂಧಿಸಿದ ತಹಶೀಲ್ದಾರರಿಂದ ಗುರುತಿಸಲ್ಪಟ್ಟ ಕಾಳಜಿ ಕೇಂದ್ರದಲ್ಲಿ ಕಡ್ಡಾಯವಾಗಿ ಆಶ್ರಯ ಪಡೆದುಕೊಳ್ಳುವುದು.

ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕಾಲುಸಂಕ, ಕಿರು ಸೇತುವೆ ಇತ್ಯಾದಿಗಳನ್ನು ದಾಟುವ ಮುನ್ನ ಎಚ್ಚರಿಕೆ ವಹಿಸ ಬೇಕು ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ



ಸಾರ್ವಜನಿಕರಿಗೆ ಈ ಮೇಲಿನ ಅಂಶಗಳಂತೆ ಶಿಥಿಲಾವಸ್ಥೆಯಲ್ಲಿರುವ ಅಥವಾ ಕುಸಿತದ ಹಂತದ ಕಂಪೌಂಡ್ ಅಥವಾ ಮನೆಯಗೋಡೆ ಕಂಡುಬಂದಲ್ಲಿ ಈ ಕೆಳಗಿನ ದೂರವಾಣಿಗೆ ಮಾಹಿತಿ ನೀಡುವಂತೆ ಮತ್ತು ಹೆಚ್ಚಿನ ಮಾಹಿತಿಗಾಗಿ ವಿಪತ್ತು ನಿರ್ವಹಣಾ ಕಂಟ್ರೋಲ್ ರೂಂ ಸಂಖ್ಯೆ 08382-229857 ಗೆ ಅಥವಾ ವಾಟ್ಸಪ್ ನಂ: 9483511015 ಅಥವಾ ಆಯಾ ತಾಲೂಕಾ ತಹಶೀಲ್ದಾರ ಕಚೇರಿಯನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

- ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆಗೆ ಹೋಗದಂತೆ ಸೂಚನೆ
- ಪ್ರವಾಸಿಗರು,ಸಾರ್ವಜನಿಕರು ನದಿ, ನೀರಿರುವ ಪ್ರದೇಶ ಮತ್ತು ಸಮುದ್ರಕ್ಕೆ ಇಳಿಯದಂತೆ ಕಟ್ಟೆಚ್ಚರ
- ಮಳೆ ಸಂದರ್ಭದಲ್ಲಿ ಮಕ್ಕಳು ಸೂಕ್ತ ಕಟ್ಟಡದಲ್ಲಿ ಆಶ್ರಯ ಪಡೆಯಿರಿ

ಮತದಾರರ ಪಟ್ಟಿ ಪರಿಷ್ಕರಣೆಗೆ ಚಾಲನೆ

ಕಾರವಾರ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂದರ್ಭದಲ್ಲಿ ಜಿಲ್ಲೆಯ ಯಾವುದೇ ಅರ್ಹ ಮತದಾರರು ಪ್ರಕ್ರಿಯೆಯಿಂದ ಹೊರ ಉಳಿಯದಂತೆ ಎಚ್ಚರ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಹೇಳಿದರು.

ಅವರು ಸೋಮವಾರ ಜಿಪಂ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಉತ್ತರ ಕನ್ನಡ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಜಾಗೃತಿ ಮೂಡಿಸಲು ಆಯೋಜಿಸಿದ್ದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಜಿಲ್ಲೆಯಲ್ಲಿ ಮಂಗಳವಾರದಿಂದ ಪ್ರಾರಂಭ ವಾಗಲಿದ್ದು, ಈಗಾಗಲೇ ಈ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿ ಸಿಬ್ಬಂದಿಗಳಿಗೆ ಸಮಗ್ರ ತರಬೇತಿ ನೀಡಲಾಗಿದೆ. ಮತಗಟ್ಟೆ ಅಧಿಕಾರಿಗಳು ಮನೆ-ಮನೆಗೆಭೇಟಿನೀಡಿಮತದಾರರಿಗೆ ಪ್ರಿ ಫಿಲ್ಡ್ ಎನ್ಯುಮರೇಷನ್ ಫಾರ್ಮ್‌ಗಳನ್ನು ನೀಡಲಿದ್ದು ಈ ಫಾರ್ಮ್‌ಗಳನ್ನು ಭರ್ತಿ ಮಾಡಿ ಅವರಿಗೆ ಮರಳಿ ನೀಡಬೇಕು ಎಂದರು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕಾಗಿ ಜಿಲ್ಲೆಯಲ್ಲಿ 1,445 ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಈ ಪ್ರಕ್ರಿಯೆ ಯಶಸ್ವಿಗೊಳಿಸಲು ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಮತದಾನದ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ದಿಲೀಷ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಜಿ.ಪಂ ಮುಖ್ಯ ಯೋಜನಾಧಿಕಾರಿ ಸೋಮಶೇಖರ ಮೇಸ್ತಾ, ಯೋಜನಾ ನಿರ್ದೇಶಕ ಕರೀಂ ಅಸಾದಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಹೀರ್ ಅಬ್ಬಾಸ್ ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಸಿಬ್ಬಂದಿ ಇದ್ದರು.



ಯೋಜನೆ ಉಪಯೋಗ ಪಡೆದು ಆದಾಯ ವೃದ್ಧಿಸಿ

ಶಿರಸಿ: ಕೌಶಲ್ಯಾಧಾರಿತ ವ್ಯಕ್ತಿತ್ವವನ್ನು ರೂಪಿಸುವುದರಿಂದ ಸದೃಢ ಭಾರತದ ಸ್ಕಿಲ್ ಇಂಡಿಯಾ ಕನಸು ನನಸಾಗಿಸಲು ಸಾಧ್ಯ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಸೋಮವಾರ ತಮ್ಮ ಕಚೇರಿ ಸಭಾಭವನದಲ್ಲಿ ಸ್ಕೊಡ್‌ವೆಸ್ ಸಂಸ್ಥೆ, ಗುಜರಾತ್‌ನ ದೇಸಾಯಿ ಫೌಂಡೇಶನ್ ಹಾಗೂ ಸೆಜಿಲಿಟಿ ಸಂಸ್ಥೆಗಳ ಸಹಯೋಗದಲ್ಲಿ ಬ್ಯೂಟಿಷಿಯನ್ ತರಬೇತಿ ಪಡೆದ 75 ಯುವತಿಯರಿಗೆ ಸ್ವಯಂ ಉದ್ಯೋಗ ಆರಂಭಿಸಲು ಬೇಕಾಗುವ ಸೌಂದರ್ಯ ಸಲಕರಣೆಗಳ ಕಿಟ್ ವಿತರಿಸಿ ಮಾತನಾಡಿದರು.

ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಕಾಗೇರಿಯವರು ಕೌಶಲ್ಯತೆಯ ಕೊರತೆಯಿಂದ ಆಧುನಿಕತೆಯ ಪೈಪೋಟಿ ಭರಾಟೆಯಲ್ಲಿ ಉತ್ತಮ ಉದ್ಯೋಗ ಹೊಂದಲು ಹರ ಸಾಹಸ ಪಡುವಂತಾಗಿದೆ. ಸರ್ಕಾರಿ ನೌಕರಿಯೇ ಬೇಕೆಂದು ಸಮಯ ವ್ಯರ್ಥ ಮಾಡುವ ಬದಲು ಒಪ್ಪಿತ ಕೌಶಲ್ಯಗಳನ್ನು ಹೆಚ್ಚಿಸಿಕೊಂಡು ಸರ್ಕಾರದ ಹಲವಾರು ಯೋಜನೆಗಳ ಉಪಯೋಗ ಪಡೆದು ಆದಾಯದ ಮೂಲವನ್ನು ವೃದ್ಧಿಸಿಕೊಳ್ಳುವ ಮೂಲಕ ಔದ್ಯೋಗಿಕ ಭದ್ರತೆ ಹೊಂದಬೇಕು. ಸ್ವತಂತ್ರ ಉದ್ಯಮ ಆರಂಭಿಸುವುದರ ಮೂಲಕ ಸ್ವಾವಲಂಬಿ ಬದುಕಿಗೆ ಆದ್ಯತೆ ನೀಡಿ ಎಂದರು.

ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯಗಳನ್ನು ಪ್ರಶಂಶಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿಯವರು, 21ನೇ ಶತಮಾನದ ವೃತ್ತಿಪರ ಕೌಶಲ್ಯಗಳನ್ನು ಪರಿಚಯಿಸುವಂತೆ ಸಂಸ್ಥೆಯ ಮುಖ್ಯಸ್ಥರಿಗೆ ಕೋರಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸ್ಕೊಡ್‌ವೆಸ್ ಸಂಸ್ಥೆಯ ಸಹ-ಕಾರ್ಯದರ್ಶಿ ಪ್ರೊ ಕೆ.ಎನ್. ಹೊಸಮನಿ ಮಾತನಾಡಿದರು.

ಕಾರ್ಯನಿರ್ವಾಹಕ ನಿರ್ದೇಶಕ ಡಾ. ವೆಂಕಟೇಶ ನಾಯ್ಕ, ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಕಾರ್ಯದರ್ಶಿ ಮತ್ತು ಮುಖ್ಯ ಹಣಕಾಸು ಮತ್ತು ಆಡಳಿತಾಧಿಕಾರಿ ಸರಸ್ವತಿ ಎನ್ ರವಿ, ಖಜಾಂಚಿ ವಸಂತ ಹಾದಿಮನೆ ಉಪಸ್ಥಿತರಿದ್ದರು. ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯಕ್ರಮಗಳ ಮುಖ್ಯಸ್ಥ ಡಾ. ನಾರಾಯಣ ಹೆಗಡೆ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.



ಗಾಂಧಿ ಆತ್ಮಕಥನಕ್ಕೆ 100ರ ಸಂಭ್ರಮ

ಜೋಯಿಡಾ: ಮಹಾತ್ಮಾ ಗಾಂಧಿ ಆತ್ಮಕಥನ ಪುಸ್ತಕಕ್ಕೆ 100 ವರ್ಷ ಪೂರ್ಣಗೊಂಡ ಪ್ರಯುಕ್ತ ಜೊಯಡಾದಲ್ಲಿ ಕಾಳಿ ಬ್ರಿಗೇಡ್ ಮತ್ತು ಸಂಜೀವನಿ ಸೇವಾ ಟ್ರಸ್ಟ್ ಸಂಸ್ಥೆಗಳು ಕಾರ್ಯಕ್ರಮ ಸಂಯೋಜನೆ ಮಾಡಿದವು. ಗಾಂಧಿ ಸ್ಮಾರಕ ನಿಧಿ ಬೆಂಗಳೂರು, ಲೋಹಿಯಾ ಪ್ರತಿಷ್ಠಾನ ಶಿವಮೊಗ್ಗ ಮತ್ತು ಬಿಜಿವಿಎಸ್ ಪದವಿಪೂರ್ವ ಕಾಲೇಜು ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆಯಿತು.

ಖ್ಯಾತ ಕವಯಿತ್ರಿ ಹಾಗು ಸಾಹಿತಿ, ಸವಿತಾ ನಾಗಭೂಷಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೋಯಡಾ ಒಂದು ಸ್ವರ್ಗ ಅದು ಉಳಿಸಿಕೊಳ್ಳಿ, ನರಕವಾಗಲು ಬಿಡಬೇಡಿ ಎಂದು ಹೇಳಿದರು.

ಮುಖ್ಯ ಅತಿಥಿ ಗಳಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಬಿ.ಎನ್. ವಾಸರೆ, ಬಿಜಿವಿಎಸ್ ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ ಶೆಟ್ಟಿ, ಪ್ರವಾಸೋದ್ಯಮಿ ಆರ್.ಎನ್. ಹೆಗಡೆ, ಅರಿವು ಫೌಂಡೇಷನ್ ಅಧ್ಯಕ್ಷ, ರೋಷನ್ ನೇತ್ರಾವಳಿ, ಮೂರಾರರ್ಜಿ ವಸತಿ ಶಾಲೆಯ ಉಪನ್ಯಾಸಕ, ಪ್ರದೀಪ ಫರಾಳೆ, ನಿವೃತ್ತ ನಿರ್ದೇಶಕರು, ಆಕಾಶವಾಣಿ ಧಾರವಾಡ್, ಹೇಮಂತ್ ರಾಮದ್ಗಿ, ಪ್ರಕಾಶ ತಗಡಿನಮನೆ, ಪ್ರೇರಣಾ ಸಂಸ್ಥೆ ಅಧ್ಯಕ್ಷೆ ಸುಕನ್ಯಾ ದೇಸಾಯಿ ಮಾತನಾಡಿದರು.



ಸಂಜೀವನಿ ಸೇವಾ ಟ್ರಸ್ಟ್ ಮತ್ತು ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ರವಿ ರೇಡಕರ್ ಅಧ್ಯಕ್ಷತೆ ವಹಿಸಿದ್ದರು.ಉಪನ್ಯಾಸಕ ಶಿವಾಜಿ ಜೋಮಣ್ಣವರ ಸ್ವಾಗತಿಸಿದರು. ಮಹಾಂತೇಶ ಓಶಿಮಠ್ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಪಾಂಡುರಂಗ ಪಟಗಾರ ವಂದಿಸಿದರು. ನಾಗವೇಣಿ ಭಟ್ ನಿರೂಪಣೆ ಮಾಡಿದರು. ಗೌರವ ಉಪಸ್ಥಿತರಿದ್ದ ಕಾಳಿ ಬ್ರಿಗೇಡ್ ಮುಖ್ಯ ಸಂಚಾಲಕ ಸುನೀಲ್ ದೇಸಾಯಿ,ಮೂರಾರ್ಜಿ ವಸತಿ ಶಾಲೆಯ ಉಪನ್ಯಾಸಕ ಬಸವರಾಜ, ಉಪನ್ಯಾಸಕ ಪ್ರವೀಣ್ ನಾಯ್ಕ್, ಸರಸ್ವತಿ ನಾಯ್ಕ್, ಕಾಳಿ ಬ್ರಿಗೇಡ್ ಕಾರ್ಯದರ್ಶಿ ಸಮೀರ್ ಮುಜಾವರ್, ಸಂಜೀವನಿ ಸಂಯೋಜಕ ಜಯಂತ ಗಾವಡಾ, ಸಿಬ್ಬಂದಿ ಬಬಿತಾ, ಸಂದೇಶ, ಈಶ್ವರಿ, ನಾಗವೇಣಿ ಉಪಸ್ಥಿತರಿದ್ದರು.

ಮೀಟರ್ ಬಡ್ಡಿ ಪ್ರಕರಣ: ಇಬ್ಬರ ಗಡಿಪಾರಿಗೆ ಆದೇಶ

ಮುಂಡಗೋಡ: ದರೋಡೆ ಹಾಗೂ ಮೀಟರ ಬಡ್ಡಿಯ ಪ್ರಕರಣದಲ್ಲಿದ್ದ ಇಬ್ಬರನ್ನು ಆರು ತಿಂಗಳ ಕಾಲ ಕೋಲಾರದ ಕೆಜಿಎಫ್ ಹಾಗೂ ಮಂಡ್ಯ ಜಿಲ್ಲೆಗೆ ಗಡಿಪಾರು ಮಾಡಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಪಟ್ಟಣದ ಮಂಜು ನವಲೆ ಎಂಬಾತನನ್ನು ಕೋಲಾರದ (ಕೆಜಿಎಫ್) ಜಿಲ್ಲೆಯ ರಾಬರ್ಟಸನ್ ಪೊಲೀಸ ಠಾಣೆ ವ್ಯಾಪ್ತಿಗೆ ಮತ್ತು ಬಸಾಪುರ ಗ್ರಾಮದ ಮಧುಸಿಂಗ ರಜಪೂತನನ್ನು ಮಂಡ್ಯ ಜಿಲ್ಲೆಯ ನಗರ ಪೊಲೀಸ ಠಾಣೆ ವ್ಯಾಪ್ತಿಗೆ ಆರು ತಿಂಗಳ ಕಾಲ ಗಡಿಪಾರು ಮಾಡಲಾಗಿದೆ.

ಈ ಇಬ್ಬರ ಮೇಲೆ ದರೋಡೆ ಹಾಗೂ ಮೀಟರ ಬಡ್ಡಿ ವ್ಯವಹಾರ ಸೇರಿದಂತೆ ಇತರೆ ಪ್ರಕರಣಗಳು ಇದ್ದವು. ಇವಗಳನ್ನೇ ಬಂಡವಾಳ ಮಾಡುಕೊಂಡು ತಾಲೂಕಿನ ವ್ಯಾಪ್ತಿಯಲ್ಲಿ ಸಾರ್ವಜನಿಕ ಸುರಕ್ಷಿತೆಗೆ ಅಪಾಯವನ್ನು ತಂದು ಸಾರ್ವಜನಿಕ ಶಾಂತಿ, ನೆಮ್ಮದಿ, ಸೌಹಾರ್ದತೆಗೆ, ಆಸ್ತಿಪಾಸ್ತಿ, ಕಾನೂನು ಸುವ್ಯವಸ್ಥೆಗೆ ದಕ್ಕೆ ಉಂಟು ಮಾಡಿ ವ್ಯತಿರಿಕ್ತ ಪರಿಣಾಮ ಬೀರಬಹುದು ಅಂತಾ ಕಂಡು ಬಂದಿದ್ದರಿಂದ ಇಲ್ಲಿನ ಪೊಲೀಸ್ ನಿರೀಕ್ಷಕರು ಈ ಇಬ್ಬರ ವಿರುದ್ಧ ಗಡಿಪಾರಿಗೆ ವಿವರವಾದ ಸೂಕ್ತ ಪ್ರಸ್ತಾವಣೆಯ ಅರ್ಜಿಯನ್ನು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳಿಗೆ ಸಲ್ಲಿಸಿದ್ದರು.



ಅದರಂತೆ ಜಿಲ್ಲಾಪೊಲೀಸ ವರಿಷ್ಠಾಧಿಕಾರಿಗಳು ಅಪರಾಧವುಳ್ಳ ಇಬ್ಬರನ್ನು ಜಿಲ್ಲೆಯಿಂದ ಆರು ತಿಂಗಳಕಾಲ ಗಡಿಪಾರು ಮಾಡಿದ್ದಾರೆ.

ಒಟ್ಟಿನಲ್ಲಿ ತಾಲೂಕಿನಲ್ಲಿ ಮೀಟರ ಬಡ್ಡಿ, ದರೋಡೆ, ಹಾಗೂ ಕೊಲೆ ಸೇರಿದಂತೆ ಇನ್ನಿತರ ಪ್ರಕರಣದಲ್ಲಿರವವರ ಮೇಲೆ ಪೊಲೀಸರು ಹದ್ದಿನ ಕಣ್ಣು ಇಟ್ಟಿದೆ. ಇತ್ತಿಚೆಗೆ ಗುಂಡಾ ಕಾಯ್ದೆಯಲ್ಲಿ ಇಬ್ಬರನ್ನು ಬಳ್ಳಾರಿ ಜೈಲಿಗೆ ಕಳುಹಿಸಿದ್ದರು ಇದೀಗ ಇನ್ನಿಬ್ಬರಿಗೆ ಗಡಿಪಾರು ಮಾಡುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳತ್ತಿರುವುದು ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

ಸಮಸ್ಯೆ ಶೀಘ್ರ ಪರಿಹರಿಸಲು ಒತ್ತಾಯ



ಯಲ್ಲಾಪುರ : ಪಟ್ಟಣದ ಕಾಳಮ್ಮನಗರದ ಆಶ್ರಯ ಕಾಲೋನಿಯಲ್ಲಿ ಮಂಡಳ ಬಿಜೆಪಿ ನಿಯೋಗ ನೀಡಿ, ಅಲ್ಲಿನ ನಿವಾಸಿಗಳು ಅನುಭವಿಸುತ್ತಿರುವ ಮೂಲಭೂತ ಸಮಸ್ಯೆಗಳ ಕುರಿತು ಚರ್ಚಿಸಿದರು. ಮಂಡಲಾಧ್ಯಕ್ಷ ಪ್ರಸಾದ ಹೆಗಡೆ ಮಾಹಿತಿ ನೀಡಿ, ಈಗಾಗಲೇ ಸಾಕಷ್ಟು ಜನ ಮೂಲಭೂತ ಸೌಕರ್ಯಗಳ ಕೊರತೆಯಿಂದ ಸಮಸ್ಯೆ ಅನುಭವಿಸುತ್ತಿದ್ದಾರೆ ಎಂದು ಬಿಜೆಪಿ ಪಕ್ಷದಿಂದ ಸಂಭಂದಿಸಿದ ಅಧಿಕಾರಿಗಳಿಗೆ ಸಾಕಷ್ಟು ಬಾರಿ ತಿಳಿಸಿದ್ದೇವೆ. ಮಾತೆತ್ತಿದರೆ ಅಹಿಂದ ಜಪ ಮಾಡುವ ಕಾಂಗ್ರೆಸ್ ಪಕ್ಷ ಹಿಂದುಳಿದ, ದಲಿತರು ಉಳಿಯುವ ಪ್ರದೇಶಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯ ನೀಡಲು ಮುಂದಾಗಬೇಕಿತ್ತು. ಆ ಸವಲತ್ತುಗಳನ್ನು ಮಾಯ ಮಾಡಿದ ಕೀರ್ತಿ ಈ ಆಡಳಿತ ವ್ಯವಸ್ಥೆಗೆ ಸಲ್ಲಲೇಬೇಕು. ಇಲ್ಲಿನ ಹತ್ತಾರು ಬಡವರ ಮನೆಗಳು ಉರುಳುವ ಪರಿಸ್ಥಿತಿಯಲ್ಲಿದೆ. ರಾಜಕಾಲುವೆ ನಿರ್ಮಾಣ ಸಂಪೂರ್ಣವಾಗಿ ಮುಗಿಸದೇ ಅರೆ ಬರೆ ಕಾಮಗಾರಿ ಮಾಡಿದ್ದಾರೆ. ರಾಜಕಾಲುವೆ ಮೇಲಿನ ಭಾಗದ ಮನೆಗಳು ಬೀಳುವ ಹಂತಕ್ಕೆ ಬಂದು ತಲುಪಿದೆ. ಆಶ್ರಯ ಕಾಲೋನಿ ಹಿಂಭಾಗದಲ್ಲಿ ಹುಲ್ಲು ಪೊದರೆ ಕಾಡಿನಂತೆ ಬೆಳೆದಿದ್ದು ಅಲ್ಲಿನ ಹಂದಿ, ನಾಯಿಗಳ ಕಾಟದಿಂದ ಜನಜೀವನ ತತ್ತರವಾಗಿದೆ. ಇದರಿಂದಾಗಿ ಸಾಕಷ್ಟು ಬಡವರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಶಾಲೆಗೆ ಹೋಗುವ ಮಕ್ಕಳು ನಾಯಿಗಳ ಕಾಟದಿಂದ ಹೈರಾಣಾಗಿದ್ದಾರೆ. ತಕ್ಷಣ ಸಂಭಂದಿಸಿದ ಅಧಿಕಾರಿಗಳು ಇದರ ಬಗ್ಗೆ ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಮುಂದಿನ ಅನಾಹುತಕ್ಕೆ ನೇರವಾಗಿ ಅಧಿಕಾರಿಗಳೇ ನೇರ ಜವಾಬ್ದಾರಿಯಾಗುತ್ತಾರೆ ಎಂದು ಅವರು ದೂರಿದ್ದಾರೆ. ಈ ಸಂಧರ್ಭದಲ್ಲಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಗಣೇಶ ಪಾಟಣಕರ, ರವಿ ದೇವಡಿಗ, ತುಳಸಿದಾಸ ನಾಯ್ಕ ಇತರರು ಇದ್ದರು.

ಬಿಎಲ್‌ಎಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲಿ

ಹಳಿಯಾಳ : ಸಂವಿಧಾನ ಉಳಿಸುವ ಕೆಲಸ ಆಗಬೇಕು. ಪ್ರಜಾಪ್ರಭುತ್ವ ಉಳಿಸಲು ಎಲ್ಲರೂ ಒಂದಾಗಿ ಬಿಎಲ್ ಎಗಳು ಕಡ್ಡಾಯವಾಗಿ ಯಾವುದೇ ಪಕ್ಷದವರು ಎನ್ನುವ ತಾರತಮ್ಯ ಮಾಡದೇ ಎಲ್ಲಾ ಮತದಾರರ ಪರಿಶೀಲನೆಯ ವೇಳೆ ಹಾಜರಿದ್ದು ಪರಿಶೀಲಿಸಿ ಏನಾದರೂ ಸಮಸ್ಯೆ ಇದ್ದರೆ ಕೂಡಲೇ ಪರಿಹರಿಸುವ ಕಾರ್ಯ ಮಾಡಿ ನಮ್ಮ ಮತದಾರರನ್ನು ಉಳಿಸ ಬೇಕು ಎಂದು ಶಿರಸಿ ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ಹಳಿಯಾಳದ ಪುರಭವನದಲ್ಲಿ ಏರ್ಪಡಿಸಿದ್ದ ಎಸ್‌ಐಆರ್ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಸಾಯಿ ಗಾಂವಕರ ಮಾತನಾಡಿ, ಬಿಜೆಪಿ ಶ್ರೀಮಂತರ ಪರವಾದ ಪಕ್ಷವಾಗಿದ್ದು, ಯಾವತ್ತೂ ಬಡವರು, ಕೂಲಿಕಾರ್ಮಿಕರು ಎಂದರೆ ಅಸಹ್ಯ. ಆದರೆ ಕಾಂಗ್ರೆಸ್ ಯಾವತ್ತೂ ಬಡವರ , ದೀನ ದಲಿತರ, ಕೂಲಿಕಾರ್ಮಿಕರ,ಅನಕ್ಷರಸ್ಥರ ಪರವಾದ ಪಕ್ಷವಾಗಿದ್ದು ಎಸ್‌ಐಆರ್ ಮೂಲಕ ಇವರೆಲ್ಲರ ಮತದಾನ ಹಕ್ಕನ್ನು ಕಿತ್ತುಕೊಂಡು ಗೊಂದಲ ಮೂಡಿಸಿ ಷಡ್ಯಂತ್ರದ ಮೂಲಕ ಅಧಿಕಾರಕ್ಕೆ ಏರುವ ಹುನ್ನಾರವಾಗಿದೆ ಎಂದು ಹೇಳಿದರು. ಮೂರನೇ ಹಂತದ ಈ ಪ್ರಕ್ರಿಯೆಯಲ್ಲಿ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶದ ಒಟ್ಟೂ 37.80 ಕೋಟಿ ಮತದಾರರ ಮರು ಪರಿಶೀಲನೆ ನಡೆಸಲು ಮುಂದಾಗಿದ್ದು ನಾವೆಲ್ಲರೂ ಒಟ್ಟಾಗಿ ನಮ್ಮ ಮತದಾರರ ಹಕ್ಕನ್ನು ಉಳಿಸಲು ಹೋರಾಡಬೇಕು. ಒಬ್ಬರು ಮತ್ತೊಬ್ಬರಿಗೆ ಸಹಕರಿಸಿ ದಾಖಲೆಗಳನ್ನು ಒದಗಿಸಿ ಕಾಪಾಡಿಕೊಳ್ಳುವ ಕೆಲಸ ಆಗ ಬೇಕೆಂದು ಹೇಳಿದರು. ತರಬೇತುದಾರರಾಗಿ ಪ್ರಸನ್ನ ಶೆಟ್ಟಿಯವರು ಕಾರ್ಯಕರ್ತರಿಗೆ ಎಸ್‌ಐಆರ್ ಬಗ್ಗೆ ಮಾಹಿತಿ ನೀಡಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ತಿಳಿಸಿದರು. ಹಳಿಯಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಬಿ.ಡಿ.ಚೌಗಲೆ, ಪಕ್ಷದ ಮಹಿಳಾ ಮುಖಂಡರಾದ ಮಾಲಾ ಬ್ರಗಾಂಜ ಹಾಗೂ ಶಂಕರ ಬೆಳಗಾಂವಕರ ಉಪಸ್ಥಿತರಿದ್ದರು. ದೇಮಾನಿ ಸಿರೋಜಿ ಸ್ವಾಗತಿಸಿದರು. ತರಬೇತಿ ಕಾರ್ಯಾಗಾರದ ಉಸ್ತುವಾರಿ ಹೊಂದಿದ್ದ ರವಿ ತೋರಣಗಟ್ಟಿ, ಸತ್ಯಜೀತ್ ಗಿರಿ, ವೆಂಕಟೇಶ ಸಾಳುಂಕೆ, ರಾಹುಲ ಪಾಟೀಲ ಸಕಲ ವ್ಯವಸ್ಥೆ ಕಲ್ಪಿಸಿಕೊಟ್ಟರು.



ಇಂದಿನಿಂದ ಮತದಾರರ ಪಟ್ಟಿ ಪರಿಷ್ಕರಣೆ ಪ್ರಾರಂಭ

ದಾಂಡೇಲಿ: ವಿಶೇಷ ಸಮಗ್ರ ಪರಿಷ್ಕರಣೆ ಉದ್ದೇಶವು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ ಈ ವಿಶೇಷ ಸಮಗ್ರ ಪರಿಷ್ಕರಣೆ ಅವಧಿಯಲ್ಲಿ ತಮ್ಮ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಹಾಗೂ ಖಚಿತಪಡಿಸಿಕೊಳ್ಳುವುದು ಪ್ರಜಾಪ್ರಭುತ್ವದ ಭದ್ರ ಅಡಿಪಾಯವಾದ ಎಸ್ ಐಆರ್ ಜೂ.30ರಿಂದ ಪ್ರಾರಂಭವಾಗಲಿದೆ ಎಂದು ಹಳಿಯಾಳ – ಜೋಯಿಡಾ ವಿಧಾನಸಭಾ ಕ್ಷೇತ್ರದ ಚುನಾವಣಾ ನೋಂದಣಾಧಿಕಾರಿ ಶಿವಕ್ಕಾ ಮಾದರ ಅವರು ಹೇಳಿದರು.


ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಮಂಗಳವಾರದಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗಲಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಮನೆಗೆ ಭೇಟಿ ನೀಡುವ ಅಿಕಾರಿಗಳು ನಿಗದಿತ ನಮೂನೆಗಳನ್ನು ನೀಡಿ ಭರ್ತಿ ಮಾಡಿಸಿಕೊಂಡು ವಾಪಸ್ ಪಡೆದುಕೊಳ್ಳುತ್ತಾರೆ. ಹೊಸ ಹೆಸರುಗಳ ಸೇರ್ಪಡೆ ಮಾಡಿ, ನಿಧನರಾದವರು, ಮನೆ ಖಾಲಿ ಮಾಡಿದವರ ಹೆಸರನ್ನು ಮತಪಟ್ಟಿಯಿಂದ ಕೈಬಿಟ್ಟು ಪರಿಷ್ಕರಣೆ ಮಾಡಲಾಗುತ್ತದೆ. ತಾಲೂಕಿನ 59 ಮತಗಟ್ಟೆಗಳಲ್ಲಿ ಒಟ್ಟು 54,930 ಮತದಾರರನ್ನು ಈ ವಿಶೇಷ ಪರಿಷ್ಕರಣೆಗೆ ಒಳಪಡಿಸಲಾಗುತ್ತದೆ ಎಂದು ತಿಳಿಸಿದ ಶಿವಕ್ಕಾ ಮಾದರ ಅವರು ಈ ವಿಶೇಷ ಸಮಗ್ರ ಪರಿಷ್ಕರಣೆಯ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸುವಂತೆ ಕರೆ ನೀಡಿದರು.ಚುನಾವಣಾ ಉಪ ನೋಂದಣಾಧಿಕಾರಿಯಾಗಿರುವ ತಹಶೀಲ್ದಾರ್ ಶೈಲೇಶ ಪರಮಾನಂದ ಅವರು ಮಾತನಾಡಿದರು. 2025ರ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದು 2002ರ ಮತದಾರರ ಪಟ್ಟಿಯಲ್ಲಿ ಮತದಾರರ ಅಥವಾ ಅವರ ಪೋಷಕರ ವಿವರ ಇಲ್ಲದೇ ಇದ್ದರೂ ನೋಟಿಸ್ ನೀಡಲಾಗುತ್ತದೆ. ನೋಟಿಸ್ ನೀಡಿದಾಕ್ಷಣ ಮತದಾರರ ಪಟ್ಟಿಯಿಂದ ಅಂಥವರ ಹೆಸರನ್ನು ಕೈಬಿಡಲಾಗುತ್ತದೆ ಎಂದರ್ಥವಲ್ಲ, ನೋಟಿಸ್ ಪಡೆದುಕೊಂಡವರು ಅಗತ್ಯ ದಾಖಲೆಗಳನ್ನು ಒದಗಿಸಿದರೆ, ಆ ಪೈಕಿ ಅರ್ಹರನ್ನು ಕರಡು ಮತದಾರರ ಪಟ್ಟಿಗೇ ಸೇರಿಸಲಾಗುತ್ತದೆ ಎಂದು ತಿಳಿಸಿದರು.



ಕಿರುಸುದ್ದಿ

ಇಂದು ಹೊಸ ತಲೆಮಾರು ಕಂಡಂತೆ ಕಾರ್ಯಕ್ರಮ

ಹಾನಗಲ್ಲ: ಹೊಸ ತಲೆಮಾರು ಕಂಡಂತೆ ಡಾ.ವಿ.ಕೃ. ಗೋಕಾಕ ಕಾರ್ಯಕ್ರಮ ಜೂ.30ರಂದು ಹಾನಗಲ್ಲಿನ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ(ಬಿಇಡಿ ಕಾಲೇಜ್) ನಡೆಯಲಿದೆ.



ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಡಾ.ವಿ.ಕೃ.ಗೋಕಾಕ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಹಾಗೂ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯ ಸಂಯುಕ್ತವಾಗಿ ಆಯೋಜಿಸಿರುವ ಕಾರ್ಯಕ್ರಮವನ್ನು ಪ್ರಾ. ಡಾ.ಎನ್.ಸದಾಶಿವಪ್ಪ ಉದ್ಘಾಟಿಸುವರು. ಡಾ.ವಿ.ಕೃ.ಗೋಕಾಕ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಅಧ್ಯಕ್ಷ ಸತೀಶ ಕುಲಕರ್ಣಿ ಅಧ್ಯಕ್ಷತೆವಹಿಸುವರು. ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ವಿಶ್ವನಾಥ ಬೋಂದಾಡೆ ಉಪನ್ಯಾಸ ನೀಡುವರು. ಡಾ.ವಿ.ಕೃ.ಗೋಕಾಕ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಸದಸ್ಯ ಮಾರುತಿ ಶಿಡ್ಲಾಪೂರ ಆಶಯ ನುಡಿಯನ್ನಾಡುವರು. ಸದಸ್ಯರಾದ ಪುಷ್ಪಾ ಶಲವಡಿಮಠ, ಮಾಲತೇಶ ಅಂಗೂರ, ಲಿಂಗರಾಜ ಸೊಟ್ಟಪ್ಪನವರ, ಡಾ.ಜಗನ್ನಾಥ ಗೇನಣ್ಣನವರ, ಗುರುರಾಜ ನಾಡಿಗೇರ, ವಿಜಯರೂಪಾ ತಂಬಾಕದ, ಕಾರ್ಯದರ್ಶಿ ವೀರಯ್ಯಸ್ವಾಮಿ ಹಿರೇಮಠ ಪಾಲ್ಗೊಳ್ಳುವರು. ಈ ಸಂದರ್ಭದಲ್ಲಿ ಬಿ.ಇಡಿ ಕಾಲೇಜ್ ಪ್ರಶಿಕ್ಷಣಾರ್ಥಿಗಳಿಂದ ಸಮರಸವೇ ಜೀವನ ಕಿರು ರೂಪಕ ಹಾಗೂ ಡಾ.ವಿ.ಕೃ.ಗೋಕಾಕ ಅವರ ಗೀತಗಾಯನ ಕಾರ್ಯಕ್ರಮ ಪ್ರಸ್ತುತಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಾಪಂ ಸದಸ್ಯ ಸ್ಥಾನ ಸಂಖ್ಯೆ ನಿಗದಿ: ಆಕ್ಷೇಪಣೆಗೆ ಅವಕಾಶ

ಹಾವೇರಿ: ಜಿಲ್ಲೆಯ 8 ತಾಲೂಕುಗಳ ಪೈಕಿ ರಾಣೇಬೆನ್ನೂರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕುಪ್ಪೆಲೂರ ಮತ್ತು ಮಾಳನಾಯಕನಹಳ್ಳಿ ಪುನರ್ ರಚನೆಯಾದ ಗ್ರಾಮ ಪಂಚಾಯತಿಗಳಿಗೆ ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆಯನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ, ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗದಿಪಡಿಸಿ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆನ್ ಲೈನ್ ಮೂಲಕವು haveri.nic.in ಕರಡು ಅಧಿಸೂಚನೆ ಹೊರಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ ವ್ಯಾಪ್ತಿಯಲ್ಲಿ ಪುನರ್ ರಚನೆಯಾದ ಗ್ರಾಮ ಪಂಚಾಯತಿ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಯ ದಿನಾಂಕದಿಂದ 07(ಏಳು) ದಿನಗಳ ಒಳಗಾಗಿ ಅಂದರೆ ಜೂ.30ರ ಸಂಜೆ 5.30 ಗಂಟೆಯ ಒಳಗಾಗಿ ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆ ಸಲ್ಲಿಸುವವರು ತಮ್ಮ ಅರ್ಜಿಯಲ್ಲಿ ನಿಖರವಾದ ಅಂಚೆ ವಿಳಾಸ ನಮೂದಿಸಿ ಸಲ್ಲಿಸಬೇಕು. ಆಕ್ಷೇಪಣೆಗಳನ್ನು ಖುದ್ದಾಗಿ/ಅಂಚೆಯ ಮೂಲಕ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ ಹಾವೇರಿ ಜಿಲ್ಲೆ ಹಾವೇರಿ ವಿಳಾಸಕ್ಕೆ ಸಲ್ಲಿಸಬೇಕು. ಅಂಚೆಯ ಮೂಲಕ ಸಲ್ಲಿಸಿದಾಗಲೂ ಈ ಕಚೇರಿಯಿಂದ ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು, ನಂತರ ಸ್ವೀಕೃತಿಯಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಿ ಹರಿಯುವಾಗ ತಪ್ಪಿದ ಭಾರೀ ಅಪಾಯ

ಗಜೇಂದ್ರಗಡ: ನಗರದಲ್ಲಿನ ಭಜರಂಗದಳ ವೃತ್ತದ ಹತ್ತಿರ ಕಾರಹುಣ್ಣಿಮಿಯಂದು ಕರಿ ಹರಿಯುವ ಸಂದರ್ಭದಲ್ಲಿ ಹೋರಿ ಸಾರ್ವಜನಿಕರಿಗೆ ಗುದ್ದಿದ್ದು, ಕೂದಲು ಎಳೆಯಲ್ಲೆ ದೊಡ್ಡ ಅಪಾಯ ತಪ್ಪಿದ ಘಟನೆ ಸೋಮವಾರ ನಡೆದಿದೆ.ನಗರದಲ್ಲಿ ಪ್ರತಿವರ್ಷವೂ ವಾಡಿಕೆಯಂತೆ ಮೈಸೂರು ಮಠದಿಂದ ಅಗಸಿಯವರೆಗೆ ಎತ್ತುಗಳಿಂದ ಕರಿಹರಿಯುವುದು ಪದ್ಧತಿಯಂತೆಯಾಗಿದೆ. ಈ ವರ್ಷವೂ ಪದ್ಧತಿಯಂತೆ ಎತ್ತುಗಳನ್ನು ಬಿಟ್ಟಾಗ ಮೈಸೂರು ಮಠದಿಂದ ರಭಸವಾಗಿ ಬಂದ ಹೋರಿ ಜನರ ಮಧ್ಯದಲ್ಲಿ ಹಾಯ್ದು ನೇರವಾಗಿ ಸು.4 ರಿಂದ 5 ಜನಕ್ಕೆ ಹಾಯ್ದು ಕೊನೆಗೆ ಓರ್ವರಿಗೆ ನೇರವಾಗಿ ಗುದ್ದಿದ ಪರಿಣಾಮ ತಲೆಗೆ ಪೆಟ್ಟು ಬಿದ್ದಿದೆ. ಬಳಿಕ ಸ್ಥಳದಲ್ಲಿನ ಸಾರ್ವಜನಿಕರು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲು ದಾಖಲಿಸಿದರು.

ರುದ್ರಗೌಡ ಪಾಟೀಲ ನಿಧನ

ಹಾವೇರಿ: ಜಿಲ್ಲೆಯ ಮೊಟೇಬೆನ್ನೂರಿನ ಮಹಾದೇವ ಮೈಲಾರ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ರುದ್ರಗೌಡ ಮಲ್ಲನಗೌಡ ಪಾಟೀಲ(88) ಇವರು ನಿಧನರಾದರು. ಮೃತರಿಗೆ ಪತ್ನಿ, ಮಗ, ಆರು ಜನ ಹೆಣ್ಣು ಮಕ್ಕಳು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು, ಅಪಾರ ಶಿಷ್ಯ ಬಳಗದವನ್ನು ಹಾಗೂ ಬಂಧು ಬಳಗವಿದೆ.





ಹಾವೇರಿ: ಕಾರ ಹುಣ್ಣಿಮೆ ಅಂಗವಾಗಿ ಸವಣೂರ ತಾಲೂಕ ಕಳಸೂರ ಗ್ರಾಮದಲ್ಲಿ ಹೋರಿಗಳನ್ನು ಶೃಂಗರಿಸಿ ಕರಿ ಬಿಡಲಾಯಿತು.

ಸಡಗರ-ಸಂಭ್ರಮದ ಕಾರ ಹುಣ್ಣಿಮೆ

ಹಾವೇರಿ: ಕಾರ ಹುಣ್ಣಿಮೆ ಪ್ರಯುಕ್ತ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಸೋಮವಾರ ಹೋರಿಗಳನ್ನು ಶೃಂಗರಿಸಿ ಕರಿ ಬಿಡುವ ಮೂಲಕ ರೈತ ಬಾಂಧವರು ಕಾರ ಹುಣ್ಣಿಮೆ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿದರು.

ಜಿಲ್ಲೆಯ ಗ್ರಾಮೀಣ ಭಾಗದ ರೈತರು ಸೋಮವಾರ ಬೆಳಗ್ಗೆಯಿಂದಲೇ ತಮ್ಮ ಮನೆಗಳಲ್ಲಿರುವ ಎತ್ತು ಹಾಗೂ ಹೋರಿಗಳ ಮೈತೊಳೆದು, ಬಣ್ಣ ಹಚ್ಚಿ, ವಿವಿಧ ಬಣ್ಣದ ರಿಬ್ಬನ್, ಜೂಲಾ ಕಟ್ಟಿ, ಕೊಂಬಡುಸು ಹಾಕಿ, ಗೆಜ್ಜೆಸರ, ಕಾಲ್ಗೆಜ್ಜೆ, ಒಣಕೊಬ್ಬರಿ, ಚಕ್ಕಲಿ, ಕೊಡುಬಳಿ ಹಾರ ಹಾಕಿ ಸಿಂಗಾರಗೊಳಿಸಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಶೃಂಗರಿಸಲಾಗಿದ್ದ ಹೋರಿಗಳನ್ನು ಗ್ರಾಮದ ಅಗಸಿಗಳಲ್ಲಿ ಅಖಾಡಕ್ಕೆ ಕರೆತಂದು ಸಾಲು ಸಾಲಾಗಿ ಓಡಿಸಿ, ಸಿಳ್ಳೇ ಕೇಕೆ ಹಾಕಿ ಸಂಭ್ರಮಿಸಿದರು. ಬಳಿಕ ಅಖಾಡದಲ್ಲಿ ಓಟ ಪ್ರದರ್ಶಿಸಿ ಮನೆಗೆ ಬಂದ ಹೋರಿಗಳಿಗೆ ರೈತ ಮಹಿಳೆಯರು ಆರತಿ ಎತ್ತಿ ಖುಷಿಪಟ್ಟರು. ಹಬ್ಬದ ಅಂಗವಾಗಿ ರೈತಾಪಿ ಕುಟುಂಬದವರು ಮನೆಯಲ್ಲಿ ಕಡಬು, ಕರ್ಚಿಕಾಯಿ, ಅಕ್ಕಿಹುಗ್ಗಿ, ರೊಟ್ಟಿ, ಹೆಸರುಕಾಳು, ಮಡಿಕೆ ಕಾಳಿನಪಲ್ಲೆ, ಬದನೆಕಾಯಿ ಪಲ್ಯ, ಅನ್ನ ಸಾಂಬಾರ, ಚಕ್ಕಲಿ, ಸ್ಯಾಂಡಿಗೆ, ಹಪ್ಪಳ, ಮಾವಿನಹಣ್ಣಿನ ಸಿಕರಣೆ, ಹೋಳಿಗೆ ಸೇರಿದಂತೆ ಮತ್ತಿತರ ವಿಶೇಷ ಸಿಹಿ ಖಾದ್ಯಗಳನ್ನು ತಯಾರಿಸಿ ಸೇವನೆ ಮಾಡಿದರು. ಒಟ್ಟಾರೆಯಾಗಿ ದೇಶಕ್ಕೆ ಅನ್ನ ನೀಡುವ ಅನ್ನದಾತರು ಸಾಂಪ್ರದಾಯಿಕವಾಗಿ ಖುಷಿ ಖುಷಿಯಿಂದ ಕಾರ ಹುಣ್ಣಿಮೆ ಹಬ್ಬವನ್ನು ಆಚರಣೆ ಮಾಡಿ ಸಂಭ್ರಮಿಸಿದ್ದು ಎಲ್ಲೆಡೆ ಕಂಡುಬಂದಿತು.



ಧಾರವಾಡ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆ ನಗರದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಸೋಮವಾರ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಹಾಗೂ ಗಣ್ಯರು ಸೇರಿದಂತೆ ಉದ್ಘಾಟಿಸಿದರು.

ವಿಶ್ವ ಪರಿಸರ ದಿನಾಚರಣೆ | ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ

ಚಿತ್ರದಲ್ಲಿ ಅರಳಿದ ಪರಿಸರ ಜಾಗೃತಿ

ಹಾವೇರಿ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕರ್ನಾಟಕಸಾವಿತ್ರಿಬಾಯಿ ಫುಲೆಶಿಕ್ಷಕಿಯರಸಂಘದ ಜಿಲ್ಲಾ ಘಟಕದ ವತಿಯಿಂದ ನಗರದ ಜಿಲ್ಲಾ ಗುರು ಭವನದಲ್ಲಿ ಭಾನುವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ 350ಕ್ಕೂ ಅಧಿಕ ಶಾಲಾ ಮಕ್ಕಳು ಭಾಗವಹಿಸಿ ಬಣ್ಣ ಬಣ್ಣದ ಚಿತ್ರಗಳ ಮೂಲಕ ಪರಿಸರ ಜಾಗೃತಿ ಮೂಡಿಸಿದರು.

ಜಿಲ್ಲೆಯ ಎಂಟೂ ತಾಲೂಕುಗಳಿಂದ ಭಾಗವಹಿಸಿದ್ದ 6ರಿಂದ 10ನೇ ತರಗತಿಯ ಮಕ್ಕಳು ಪರಿಸರ ಸಂರಕ್ಷಣೆ ಕುರಿತು ಸುಂದರವಾದ ಚಿತ್ರಗಳನ್ನು ಬಿಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾಧ್ಯಕ್ಷೆ ಡಾ.ಗೀತಾ ಸುತ್ತಕೋಟಿ ಮಾತನಾಡಿ, ಶಿಕ್ಷಕಿಯರ ಸಂಘಟನೆಯ ಸದುದ್ದೇಶದಿಂದ ದೇಶಾದ್ಯಂತ ನಿರ್ಮಾಣವಾಗಿರುವ ನಮ್ಮ ಸಂಘ ಅನೇಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದೆ ಎಂದರು.

ಪರಿಸರ ಸಂರಕ್ಷಣೆ ಮಾಡಿದ್ದರೆ ಮುಂದೆ ಪರಸರ ನಾಶವಾಗಿ ಆಕ್ಸಿಜನ್ ಸಿಲಿಂಡರ್ ಬೆಮ್ಮಹಿಂದೆ ಕಟ್ಟಿಕೆ ಹುಂಡುಓಡಾಡುವಅನಿವಾರ್ಯತೆಸೃಷ್ಟಿಯಾಗುತ್ತದೆ. ಹಾಗಾಗಿ ಎಲ್ಲರೂ ಎಚ್ಚರದಿಂದ ಪರಿಸರ ಸಂರಕ್ಷಣೆ ಕಾರ್ಯ ಆರಂಭಿಸಬೇಕಿದೆ ಎಂದರು.

ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಸಿದ ವಿಜಯವಾಣಿ ಜಿಲ್ಲಾ ವರದಿಗಾರ, ಪತ್ರಕರ್ತ ಕೇಶವಮೂರ್ತಿ ವಿ. ಬೇಲೂರಪ್ಪನವರ ಮಾತನಾಡಿ, ವಿಶ್ವಸಂಸ್ಥೆ 1972ರಲ್ಲಿ ಪರಿಸರ ಸಂರಕ್ಷಣೆ ಸಲುವಾಗಿ ವಿಶ್ವ ಪರಿಸರ ದಿನಾಚರಣೆ ಆರಂಭಿಸಿದೆ. ಪ್ರತಿಯೊಬ್ಬ ಮಕ್ಕಳು ವರ್ಷಕ್ಕೆ ತಲಾ ಒಂದೊಂದು ಸಸಿ ನೆಟ್ಟು, ಪ್ರತಿದಿನ ಅದಕ್ಕೆ ನೀರು, ಗೊಬ್ಬರ ಉಣಿಸಿ ಹೆಮ್ಮರವಾಗುವಂತೆ ಮಾಡಿದರೆ ಜೀವನ ಸಾರ್ಥಕವಾಗುತ್ತದೆ. ಮುಂದಿನ ಪೀಳಿಗೆಗೆ



ಕೊಡುಗೆ ನೀಡಿದಂತಾಗುತ್ತದೆ ಎಂದರು.

ಜಿಲ್ಲೆಯಲ್ಲಿ ವ್ಯಾಸಂಗ ಮಾಡುವ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪರಿಸರ ನಾಶದಿಂದ ಆಗುವ ಹಾನಿ ಹಾಗೂ ಪರಿಸರ ಜಾಗೃತಿ ಮೂಡಿಸುವ ಕುರಿತು ಚಿತ್ರ ಬಿಡಿಸಿದರು. ಸಮಾರಂಭದ ಕೊನೆಯಲ್ಲಿ ಸ್ಥಳದಲ್ಲೇ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಥಮ ಬಹುಮಾನ 5,000 ರೂ., ದ್ವಿತೀಯ ಬಹುಮಾನ 3,000 ರೂ., ತೃತೀಯ ಬಹುಮಾನ 2,000 ರೂ. ಹಾಗೂ ಇಬ್ಬರಿಗೆ ತಲಾ 1,000 ರೂ. ಸಮಾಧಾನಕರನಗದುಬಹುಮಾನವಿತರಿಸಲಾಯಿತು. ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

ಕೆನರಾ ಬ್ಯಾಂಕ್ ಮುಂಬೈ ವ್ಯವಸ್ಥಾಪಕ ಬಾಬಾರಾವ್ ತುಪ್ಪಮುಂಡ್ರೆ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಬಿ.ಎಂ.ಬೇವಿನಮರದ ಹಾಗೂ ಸಂಘದ ರಾಜ್ಯ ಕಾರ್ಯದರ್ಶಿ ರಾಜೇ ಶ್ರೀ ಸಜ್ಜೇಶ್ವರ ಮಾತನಾಡಿದರು.

ಕೃಷ್ಣವೇಣಿ ಪ್ರಥಮ, ರಂಜಿತಾ ದ್ವಿತೀಯ

ಭೂ ವೀರಾಪುರದ ಎಂಎಂಡಿಆರ್ ಎಸ್ ಶಾಲೆಯ ಕೃಷ್ಣವೇಣಿ ಮಣಿಗಾರ ಪ್ರಥಮ, ಕೂಡಲ ಸರ್ಕಾರಿ ಪ್ರೌಢಶಾಲೆಯ ರಂಜಿತಾ ಶಿವಳ್ಳಿ ದ್ವಿತೀಯ ಹಾಗೂ ಕುಡುಪಲಿ ಇಂದಿರಾಗಾಂಧಿ ವಸತಿ ಶಾಲೆಯ ಪ್ರಥಮ ಮಣಕೂರ ತೃತೀಯ ಬಹುಮಾನ ಪಡೆದಿದ್ದಾರೆ. ಶಿಗ್ಗಾಂವನ ಗೋಹಾರ ಫಾತಿಮಾ ಪಠಾಣ ಹಾಗೂ ವರುಣ ಬಡಿಗೇರ ಇಬ್ಬರೂ ಸಮಾಧಾನಕರ ಬಹುಮಾನ ಪಡೆದರು. ನಿರ್ಣಾಯಕರಾಗಿ ಚಿತ್ರಕಲಾ ಶಿಕ್ಷಕರಾದ ಎಂ.ಜಿ.ಹಿರೇಮಠ, ವಿ.ಬಿ.ಕುರ್ತಕೋಟಿ ಹಾಗೂ ಗಂಗಾಧರಯ್ಯ ಹಿರೇಮಠ ಭಾಗವಹಿಸಿ ತೀರ್ಪು ನೀಡಿದರು.

ಸಮಾರಂಭದಲ್ಲಿ ಬಸವಣ್ಣಯ್ಯ ಹಿರೇಮಠ, ಸಂತೋಷ ತೋಟದ, ಈರಣ್ಣ ಬೆಳವಡಿ, ಸುನಿತಾ ಪೂಜಾರ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಾಕ್ಷಾಯಿಣಿ ವಾಲ್ಮೀಕಿ, ಕೋಶಾಧ್ಯಕ್ಷೆ ಸಿದ್ದಮ್ಮ ಎಂ., ದಾಕ್ಷಾಯಿಣಿ ವಾಲ್ಮೀಕಿ, ಪದ್ಮಾ ಕಲ್ಲು, ಸಿದ್ದಮ್ಮ ಎಂ,ರೇಣುಕಾ ಬಸುನಾಯಕ್, ಸುಮಾ ಮಣ್ಣೂರು, ಶೈಲಾ, ಜಯಶ್ರೀ, ಮಂಜುಳಾ, ಅನ್ನಪೂರ್ಣ ಚೌಹಾಣ, ಕುಸುಮಾ ಮುದಿಗೌಡರ, ಶೋಭಾ ತುಂಗಳದ, ಪ್ರತಿಭಾ ಆರ್., ಚಂಪಾ ಹುಣಸಿಕಟ್ಟಿ, ಬಸವಣ್ಣಪ್ಪ ಹಿರೇಮಠ ಮಂಜುಳಾ ಮಕರಿ, ಸುನಂದಾ ಸಾಲಿಮಠ , ಶಂಕರ್ ಬಡಿಗೇರ, ಮಲ್ಲಯ್ಯ ಹಿರೇಮಠ, ಎಂ.ಜಿ.ಹಿರೇಮಠ, ಪೃಥ್ವಿರಾಜ ಬೆಟಗೇರಿ, ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಣ ವ್ಯವಸ್ಥೆ ಸುಧಾರಿಸಿ: ಮಾನೆ

ಹಾನಗಲ್ಲ: ಶಾಲೆಗಳ ಸುಧಾರಣೆಗೆ ಸರ್ಕಾರದ ಅನುದಾನಕ್ಕೆ ಕಾಯದೇ ತಾಲೂಕಿನಲ್ಲಿ ಆರಂಭಿಸಲಾಗಿರುವಶೇ50-50 ಯೋಜನೆ ಇಡೀ ರಾಜ್ಯದಲ್ಲಿ ಗಮನ ಸೆಳೆದಿದೆ. ಈ ಯೋಜನೆಯಡಿ ಒಟ್ಟು 3.60 ಕೋಟಿ ರೂ. ವೆಚ್ಚದಲ್ಲಿ 128 ಸರ್ಕಾರಿ ಶಾಲೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಸೋಮವಾರ ತಾಲೂಕಿನ ಬೈಚವಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ತಮ್ಮ ವೈಯಕ್ತಿಕ ಹಾಗೂ ಬೆಂಗಳೂರಿನ ಶಿ ಫಾರ್ ಸೊಸೈಟಿಯ ಆರ್ಥಿಕ ನೆರವಿನಿಂದ ಸ್ಥಾಪಿಸಲಾದ ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿಗಳ ಭವಿಷ್ಯ ಅಡಗಿದೆ. ಈ ದೇಶಕ್ಕೆ ಭದ್ರ ಬುನಾದಿ ಹಾಕಬೇಕಾದರೆ ಶಿಕ್ಷಣದ ವ್ಯವಸ್ಥೆ ಸುಧಾರಿಸಬೇಕಿದೆ. ಗ್ರಾಮಸ್ಥರು, ಹಳೆಯ ವಿದ್ಯಾರ್ಥಿಗಳು ಶಾಲೆಗಳ ಸುಧಾರಣೆಗೆ ಸೇರಿಸುವಷ್ಟೇ ಹಣವನ್ನು ವೈಯಕ್ತಿಕವಾಗಿ ನೀಡಲಾಗುತ್ತಿದೆ. ಇದರಿಂದ ಡೆಸ್ಕ್, ಸ್ಮಾರ್ಟ್ ಕ್ಲಾಸ್, ವಿಜ್ಞಾನ ಮತ್ತು ಗಣಿತ ಉಪಕರಣ ಸೇರಿದಂತೆ ಅಗತ್ಯ ಸಾಮಗ್ರಿ ಒದಗಿಸಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ಪರಿವರ್ತನ ಕಲಿಕಾ ಕೇಂದ್ರ ಆರಂಭಿಸಲಾಗಿದೆ. ಬದಲಾದ ಇಂದಿನ ಕಾಲಘಟ್ಟದಲ್ಲಿ ಬರೀ ಪಠ್ಯಪುಸ್ತಕ ಓದುವುದರಿಂದ ಸಾಧನೆ ಸಾಧ್ಯವಿಲ್ಲ. ಹಾಗಾಗಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಿ ಜಾಗತಿಕ ವಿದ್ಯಮಾನಗಳ ಬಗ್ಗೆಯೂ ಅರಿವು ಮೂಡಿಸಲಾಗುತ್ತಿದೆ ಎಂದರು.

ಶಿ ಫಾರ್ ಸೊಸೈಟಿಯ ಸಂಸ್ಥಾಪಕಿ ಹರ್ಷಿಣಿ ವೆಂಕಟೇಶ ಮಾತನಾಡಿದರು.

ಶಿ ಫಾರ್ ಸೊಸೈಟಿಯ ನಿರ್ದೇಶಕಿ ಸಂಧ್ಯಾ ವೆಂಕಟರಾಮನ್, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹನುಮಂತಪ್ಪ ಮರಗಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಎಸ್‌ಡಿಎಂಸಿ ಅಧ್ಯಕ್ಷ ಶಂಕ್ರಣ್ಣ ತಾವರಗೇರಿ, ಶ್ರೀಕಾಂತ ಹರಳೇಶ್ವರ, ಸಿದ್ದನಗೌಡ ಪಾಟೀಲ, ತಿಮ್ಮಣ್ಣ ಅಲಿಲವಾಡ, ಭರಮಗೌಡ ಪಾಟೀಲ, ನಾಗೇಂದ್ರ ಮುದ್ದಕ್ಕನವರ, ಮಲ್ಲೇಶಪ್ಪ ಸಾವಿಕೇರಿ, ಮುಖಂಡರಾದ ಉಮೇಶ ದಾನಪ್ಪನವರ, ರಾಮಚಂದ್ರಪ್ಪ ಚಿಕ್ಕೇರಿ, ಸೋಮಣ್ಣ ವಾಲಿಕಾರ, ಶಿವಣ್ಣ ಗೊಲ್ಲರ, ಉಮೇಶ ದೊಡ್ಡಮನಿ, ಬಸಣ್ಣ ವಾಲಿಕಾರ, ಕ್ಷೇತ್ರ ಸಮನ್ವಯಾಧಿಕಾರಿ ನಾಗೇಂದ್ರಪ್ಪ ಡಿ., ಇಸಿಒ ಬಿ.ಎನ್.ಸಂಗೂರ, ಮುಖ್ಯಶಿಕ್ಷಕ ಮಹೇಶ ನಾಯಕ, ಡಾ.ವಿರುಪಾಕ್ಷಗೌಡ ಸೇರಿದಂತೆ ಇನ್ನಿತರರು ಇದ್ದರು.



ಉತ್ತಮ ಸಂಸ್ಕಾರ ಬೆಳೆಸಿಕೊಳ್ಳಿ: ಡಾ. ಮಮತಾ

ರಾಣೇಬೆನ್ನೂರ: ವಿದ್ಯಾರ್ಥಿಗಳು ಕೇವಲ ಹೆಚ್ಚಿನ ಅಂಕಗಳಿಸುವುದಕ್ಕೆ ಸೀಮಿತವಾಗದೆ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ತಂದೆ-ತಾಯಿ ಹಾಗೂ ಪೋಷಕರನ್ನು ಗೌರವಿಸಿ, ಅವರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂದು ದೊಡ್ಡಪೇಟೆಯ ಸುಕ್ಷೇಮ ಹೆಲ್ತ್ ಸೆಂಟರ್‌ನ ವೈದ್ಯೆ ಡಾ. ಮಮತಾ ಮುಳಕೊಂಪಿಮಠ ಹೇಳಿದರು.

ಇಲ್ಲಿನ ಮೃತ್ಯುಂಜಯನಗರದ ಚನ್ನೇಶ್ವರಮಠದ ಲಿಂ.ವಾಗೀಶ ಪಂಡಿತಾರಾಧ್ಯ ಸ್ವಾಮೀಜಿ ಸಭಾಂಗಣದಲ್ಲಿ ಜಂಗಮ ಜ್ಯೋತಿ ಮಹಿಳಾ ವೇದಿಕೆಯಿಂದ ಏರ್ಪಡಿಸಿದ ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮೊದಲ ವರ್ಷದ ಪ್ರತಿಭಾ ಪುರಸ್ಕಾರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ನಿರಂತರ ಅಧ್ಯಯನ ಕೈಗೊಂಡು ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಎಸ್.ಸಿ. ಷಡಕ್ಷರಿಮಠ ಅವರು ಮಾತನಾಡಿ, ಯಾವುದೇ ಸಮುದಾಯದ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಸಾಧನ. ವಿದ್ಯಾರ್ಥಿಗಳನ್ನು ಉತ್ತೇಜಿಸುವ ಉದ್ದೇಶದಿಂದ ಜಂಗಮ ಜ್ಯೋತಿ ಮಹಿಳಾ ವೇದಿಕೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಿದ್ದು ಹೆಮ್ಮೆ ತಂದಿದೆ ಎಂದರು.

ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಶಿಕ್ಷಕಿ ಗುರುಬಸಮ್ಮ ಸುರಳಿಕೇರಿಮಠ ಸೌಂಡ್ ಸಿಸ್ಟಮ್‌ನ್ನು ಜಂಗಮ ವೇದಿಕೆಗೆ ದೇಣಿಗೆ ಸಲ್ಲಿಸಿದರು. ಪಲ್ಲವಿ ನೀರಲಗಿಮಠ ಕುಟುಂಬದವರು ಪ್ರಸಾದ ಸೇವೆ ಸಲ್ಲಿಸಿದರು. ಜಂಗಮ ಜ್ಯೋತಿ ಮಹಿಳಾ ವೇದಿಕೆ ಅಧ್ಯಕ್ಷೆ ಗೀತಾ ಭಸ್ಮಾಂಗಿಮಠ ಅಧ್ಯಕ್ಷತೆ ವಹಿಸಿದ್ದರು.

ಗೌರವ ಅಧ್ಯಕ್ಷೆ ಇಂದಿರಾ ಹಿರೇಮಠ, ರಾಜೇಶ್ವರಿ ಹನಗೋಡಿಮಠ, ಶೋಭಾ ದೇವಗಿರಿಮಠ, ಗಾಯತ್ರಾ ಹಿರೇಮಠ, ವಿದ್ಯಾಶ್ರೀ, ನಿರುಪಮಾ ಮಳೇಮಠ, ಶೈಲಜಾ ಉಜ್ಜನಿಮಠ, ಶಶಿಕಲಾ ಮಠದ, ಚೆನ್ನಮ್ಮ ಗುರುಪಾದದೇವರಮಠ, ವನಿತಾ, ಕವಿತಾ ಮುಕ್ತೇಶ ಕೂರಗುಂದಮಠ, ಜಯಮ್ಮ ಆರಾಧ್ಯಮಠ, ಮಂಗಳಾ ತೊರ್ಗಸಿಮಳೆಮಠ, ಉಮಾ ಚಪ್ಪರದಳ್ಳಿಮಠ, ಸುಧಾ ಮಠದ, ಶೋಭಾ ಶಂಕ್ರಿಮಠ, ಪೂರ್ಣಿಮಾ ತೊರ್ಗಸಿಮಳೇಮಠ, ವಿಜಯಲಕ್ಷ್ಮಿ ಬೂದಿಹಾಳಮಠ, ಎಂ.ಕೆ. ಸಾಲೀಮಠ, ರವಿಕುಮಾರ ಪಾಟೀಲ, ನಾಗಯ್ಯ ಮಾಗನೂರಮಠ , ಪಂಚಾಕ್ಷರಯ್ಯ ಚಪ್ಪರದಳ್ಳಿಮಠ, ವರ್ತಕ ಬೂದಿಹಾಳಮಠ ಮತ್ತು ಜಂಗಮ ಜ್ಯೋತಿ ಮಹಿಳಾ ವೇದಿಕೆಯ ಪದಾಧಿಕಾರಿಗಳು ಇದ್ದರು.



ಪೋಲಿಯೋ ಮುಕ್ತ ಸಮಾಜ ನಿರ್ಮಿಸಿ: ಗುತ್ತಲ

ಬ್ಯಾಡಗಿ: ಪೋಲಿಯೊ ರೋಗವು ಜೀವನಪರ್ಯಂತ ಅಂಗವೈಕಲ್ಯ ಉಂಟುಮಾಡುವ ಅಪಾಯಕಾರಿ ವೈರಸ್‌ಗಿದ್ದು, ಇದಕ್ಕೆ ಯಾವುದೇ ಚಿಕಿತ್ಸೆ ಇಲ್ಲ. ಆದರೆ, ಸಮಯಕ್ಕೆ ಸರಿಯಾಗಿ ಪೋಲಿಯೊ ಹನಿ ಹಾಕಿಸುವುದರ ಮೂಲಕ ಈ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಬಹುದು. ಭಾರತವು ಪೋಲಿಯೊ ಮುಕ್ತ ರಾಷ್ಟ್ರ ಎಂದು ಘೋಷಿಸಲಾಗಿದ್ದರೂ ಮುಂಜಾಗ್ರತಾ ಕ್ರಮವಾಗಿ ಪೋಲಿಯೊ ಹನಿ ಅಭಿಯಾನ ಜಾರಿಯಲ್ಲಿದೆ.




ಪೋಷಕರು ತಮ್ಮ ಐದು ವರ್ಷ ಒಳಗಿನ ಮಕ್ಕಳಿಗೆ ಎರಡು ಹನಿ ಲಸಿಕೆ ಹಾಕಿಸಲು ಮರೆಯ ಬಾರದು ಎಂದು ನಾಗರಾಜ ಗುತ್ತಲ ಹೇಳಿದರು.

ತಾಲೂಕಿನ ಅಗಸನಹಳ್ಳಿ ಗ್ರಾಮದ ಅಂಗನವಾಡಿ 1.2 ಕೇಂದ್ರದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ದಿನ ಕಾರ್ಯಕ್ರಮದಲ್ಲಿ ಮಗುವಿಗೆ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಈರಣ್ಣ ಹುಲಗೆಜ್ಜಿ, ಗುಡ್ಡಪ್ಪ ಕನವಳ್ಳಿ, ದಯಾನಂದ ಚೌಡಪ್ಪನವರ, ಹನುಮಂತಪ್ಪ ಮಡಿವಾಳರ, ರಮೇಶ ಗಾಜೇರ, ಬೋಜರಾಜ ಬಣಕಾರ, ಮಂಜುನಾಥ ಬೇಳಕೇರಿ, ಮದೇವಪ್ಪ ಗೌಡ್ರು, ಶಾಂತವ್ವ ಬೇಳಕೇರಿ, ಶಶಿಕಲಾ ಬೇಳಕೇರಿ, ಅಂಗನವಾಡಿ ಕೇಂದ್ರದ ಶೋಭಾ ಕ್ಯಾತಗೌಡ್ರ, ರಾಜೇಶ್ವರಿ ಶಿದ್ದನಗೌಡ್ರ, ಲಕ್ಷ್ಮೀ ಚೌಟಿ, ಬಸಮ್ಮ ಚೌಟಿ, ಸವಿತಾ ಬಮ್ಮನಹಳ್ಳಿ, ಲಕ್ಷ್ಮೀ ಮಡಿವಾಳರ ಸೇರಿದಂತೆ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಆ್ಯಪ್ ಮೂಲಕ ಬೆಳೆ ಸಮೀಕ್ಷೆ ವಿವರ ದಾಖಲಿಸಿ

ಬ್ಯಾಡಗಿ: ಪ್ರಸಕ್ತ ಸಾಲಿನ 2026-27ನೇ ಪೂರ್ವ ಮುಂಗಾರು ಹಂಗಾಮಿನ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆಪ್ ಬಿಡುಗಡೆ ಮಾಡಲಾಗಿದ್ದು, ತಾಲೂಕಿನ ರೈತರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇ ಸ್ಟೋರ್‌ನಿಂದ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಬೆಳೆ ಸಮೀಕ್ಷೆ ನಡೆಸಿ ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳ ವಿವರಗಳನ್ನು ದಾಖಲಿಸಬಹುದಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿ ಗಣೇಶ್ ಕುಮ್ಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳೆ ಸಮೀಕ್ಷೆಯ ಮೂಲಕ ಸಂಗ್ರಹವಾಗುವ ದತ್ತಾಂಶವನ್ನು ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಬೆಳೆ ಸಾಲ, ಪಹಣಿ (ಉತಾರ)ಯಲ್ಲಿ ಬೆಳೆ ದಾಖಲಾತಿ ಹಾಗೂ ವಿವಿಧ ಇಲಾಖೆಗಳ ಯೋಜನೆಗಳ ಸೌಲಭ್ಯಗಳ ವಿತರಣೆಗೆ ಬಳಸಲಾಗುತ್ತದೆ. ಆದ್ದರಿಂದ ರೈತರು ತಮ್ಮ ಜಮೀನಿನಲ್ಲಿ ಬೆಳೆದಿರುವ ಬೆಳೆಗಳ ಮಾಹಿತಿಯನ್ನು ನಿಖರವಾಗಿ ದಾಖಲಿಸುವುದು ಅತ್ಯಂತ ಅವಶ್ಯಕವಾಗಿದೆ.

ರೈತರು ಬೆಳೆ ಸಮೀಕ್ಷೆಯಲ್ಲಿ ದಾಖಲಿಸಿದ ಮಾಹಿತಿಯನ್ನು 'ಬೆಳೆದರ್ಶಕ್' ಮೊಬೈಲ್ ಆಪ್ ಮೂಲಕ ಪರಿಶೀಲಿಸಬಹುದಾಗಿದೆ. ದಾಖಲಾದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸ ಅಥವಾ ತಪ್ಪು ಕಂಡುಬಂದಲ್ಲಿ, ಸರ್ಕಾರ ನಿಗದಿಪಡಿಸಿರುವ ಅವಧಿಯೊಳಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ಕಾರಣದಿಂದ ರೈತರು ಸ್ವತಃ ಬೆಳೆ ಸಮೀಕ್ಷೆ ನಡೆಸಲು ಸಾಧ್ಯವಾಗದಿದ್ದಲ್ಲಿ ಅಥವಾ ಸಮೀಕ್ಷೆ ಮಾಡದೇ ಇದ್ದಲ್ಲಿ, ಅಂತಹ ಜಮೀನುಗಳ ಬೆಳೆ ಮಾಹಿತಿಯನ್ನು ಸರ್ಕಾರದಿಂದ ನೇಮಕಗೊಂಡ ಖಾಸಗಿ ನಿವಾಸಿಗಳ ಮೂಲಕ ಸಂಗ್ರಹಿಸಲಾಗುವುದು. ಖಾಸಗಿ ನಿವಾಸಿಗಳು ಬೆಳೆ ಸಮೀಕ್ಷೆಗಾಗಿ ರೈತರ ಜಮೀನುಗಳಿಗೆ ಭೇಟಿ ನೀಡಿದಾಗ, ರೈತರು ಅಗತ್ಯ ಮಾಹಿತಿ ನೀಡಿ ಸಹಕರಿಸುವಂತೆ ಕೋರಲಾಗಿದೆ.

ತಾಲೂಕಿನ ಎಲ್ಲಾ ರೈತರು ಕಡ್ಡಾಯವಾಗಿ ಬೆಳೆ ಸಮೀಕ್ಷೆ ನಡೆಸಿ, ನಿಖರ ಮಾಹಿತಿಯನ್ನು ದಾಖಲಿಸುವ ಮೂಲಕ ಸರ್ಕಾರದ ವಿವಿಧ ಯೋಜನೆಗಳು, ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಪಡೆಯಲು ಮುಂದಾಗಬೇಕೆಂದು ತಿಳಿಸಿದ್ದಾರೆ.

ಜನತಾ ದರ್ಶನ: ಸಮಸ್ಯೆಗೆ ಶಾಸಕ ಮಾನೆ ಸ್ಪಂದನೆ



ಹಾನಗಲ್ಲ: ಶಾಸಕ ಶ್ರೀನಿವಾಸ ಮಾನೆ ಅವರು ಭಾನುವಾರ ಹಾನಗಲ್ಲ ನಗರದ ಪ್ರವಾಸಿ ಮಂದಿರದಲ್ಲಿ ಜನತಾ ದರ್ಶನ ನಡೆಸಿ ಸಾರ್ವಜನಿಕರಿಂದ ಅಹವಾಲುಗಳನ್ನು ಆಲಿಸಿ, ವಿವಿಧ ಸಮಸ್ಯೆಗಳಿಗೆ ಸ್ಪಂದಿಸಿದರು.

ಜನತಾ ದರ್ಶನದಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಾರ್ವಜನಿಕರು ಕುಡಿಯುವ ನೀರು, ರಸ್ತೆ, ವಿದ್ಯುತ್, ವಸತಿ, ಪಿಂಚಣಿ, ಭೂ ದಾಖಲೆ, ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳ ಸಮಸ್ಯೆಗಳನ್ನು ಗಮನಕ್ಕೆ ತಂದರು.

ಪ್ರತಿಯೊಂದು ಅಹವಾಲನ್ನು ಆಲಿಸಿದ ಶಾಸಕ ಶ್ರೀನಿವಾಸ ಮಾನೆ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ಗೋಕರ್ಣ: ಇಲ್ಲಿನ ನೆಲಗುಣಿಯ ಪ್ರತಿಷ್ಠಿತ ಮೊಡರ್ನ್ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ನಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಗಿಡ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಹೈಸ್ಕೂಲ್ ವಿಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ತಮ್ಮ ಮನೆಯ ಸುತ್ತಮುತ್ತಲಿನ ವಿವಿಧ ಗಿಡಗಳನ್ನು ತಂದು ಶಿಕ್ಷಕರ ಮಾರ್ಗದರ್ಶನದಲ್ಲಿ ಶಾಲಾ ಆವರಣದಲ್ಲಿ ನೆಟ್ಟರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನಾಡಪ್ರಭು ಕೆಂಪೇಗೌಡರ ಆದರ್ಶಗಳು, ನಾಯಕತ್ವ ಗುಣಗಳು ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ತಿಳಿಸಲಾಯಿತು.

ಈ ಸಂದರ್ಭದಲ್ಲಿ 2026-27ನೇ ಸಾಲಿನ ಶಾಲಾ ಸಂಸತ್ತಿನ ಚುನಾವಣೆಯು ಅತ್ಯಂತ ಶಿಸ್ತಿನಿಂದ ಹಾಗೂ ಕ್ರಮಬದ್ಧವಾಗಿ ನಡೆಯಿತು. ಹತ್ತನೇ ತರಗತಿಯ ವಿದ್ಯಾರ್ಥಿ ಕುಮಾರ್ ಅಶ್ವಿನ್ ಅತಿ ಹೆಚ್ಚು ಮತಗಳನ್ನು ಪಡೆದು ಬಾಲಕರ ವಿಭಾಗದ ಜನರಲ್ ಸೆಕ್ರೆಟರಿಯಾಗಿ ಆಯ್ಕೆಯಾದರು. ಬಾಲಕಿಯರ ವಿಭಾಗದ ಜನರಲ್ ಸೆಕ್ರೆಟರಿಯಾಗಿ ಸಿಯಾನ್, ಕ್ರೀಡಾ ಕಾರ್ಯದರ್ಶಿಯಾಗಿ ನಿಯತಿ , ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಸಮೀಕ್ಷಾ ಹಾಗೂ ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತಾ ಕಾರ್ಯದರ್ಶಿಯಾಗಿ ಶ್ರೇಯಸ್ ಆಯ್ಕೆಯಾದರು.

ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲಾ ಶಿಕ್ಷಕರು ಚುನಾವಣಾ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

ಶಾಲಾ ಸಂಸತ್ತಿಗೆ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಸಂತೋಷ್ ನಾಯಕ್ ತೋರ್ಕೆ ಅವರು ಶುಭ ಹಾರೈಸಿ, ಜವಾಬ್ದಾರಿಯುತ ನಾಯಕತ್ವದ ಮೂಲಕ ಶಾಲೆಯ ಅಭಿವೃದ್ಧಿಗೆ ಶ್ರಮಿಸುವಂತೆ ಸಲಹೆ ನೀಡಿದರು.

ಈ ವೇಳೆ ಶಾಲಾ ಮುಖ್ಯಾಧ್ಯಾಪಕರಾದ ರಾಜೇಶ್ ಗೊನ್ಸಾಲ್ವೀಸ್, ಹೈಸ್ಕೂಲ್ ವಿಭಾಗದ ಮುಖ್ಯಸ್ಥರಾದ ವಿಕಾಸ್ ನಾಯಕ್, ಹಿರಿಯ ಶಿಕ್ಷಕರಾದ ವೃಂದ ಗಾಂವ್ಕರ್, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬರದಲ್ಲೂ ಹಸಿರು ಉಳಿಸುವ ಪ್ರಯತ್ನ

ಕವಳಿ ಹಣ್ಣಿನ ವಿಶೇಷತೆ

ಕಾಡಿನಲ್ಲಿ ಹೆಚ್ಚು ಬೆಳೆಯುವ ಕವಳಿ ಹಣ್ಣು ಸದ್ಯ ಕಾಡು ಬಿಟ್ಟು ಜಮೀನಿನಲ್ಲಿ ಬೆಳೆಯುವ ಮೂಲಕ ಒಂದು ಹೊಸ ಪ್ರಯೋಗಕ್ಕೆ ಕೈಹಾಕಿದ್ದಾರೆ. ಕವಳಿಕಾಯಿ ಪಿತ್ತ ಹೊಡೆದೋಡಿಸಲು ಸಿದ್ದೌಷಧವಿದ್ದಂತೆ ಪ್ಯಾಕೆಟ್ ಸಂಸ್ಕೃತಿಯಲ್ಲಿ ಎಲ್ಲವನ್ನೂ ತಿನ್ನುತ್ತಿರುವ ಪಟ್ಟಣ, ನಗರ ಪ್ರದೇಶದ ಮಕ್ಕಳಿಗೆ ಹಳ್ಳಿಗಾಡಿನ ನೈಸರ್ಗಿಕವಾಗಿ ದೊರೆಯುವ ಹಣ್ಣುಗಳ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ ಇದೊಂದು ಮಾದರಿ ಕೆಲಸವಾಗಿದೆ.

ಲಕ್ಷ್ಮೇಶ್ವರ: ಕಳೆದ ಒಂದು ತಿಂಗಳಿನಿಂದ ಮಳೆ ಇಲ್ಲದೆ ಅನ್ನದಾತ ಕಂಗಾಲು ಆಗಿದ್ದು, ಬೆಳೆ ಉಳಿಸಿಕೊಳ್ಳಲು ರೈತರು ಟ್ಯಾಂಕರ್ ಮೊರೆ ಹೋಗಿದ್ದಾರೆ.

ಹೌದು ತಾಲೂಕಿನ ಶಿಗ್ಲಿ ಗ್ರಾಮದ ರೈತ ಮಹಿಳೆ ಯಶೋಧಾ ಎಂ.ಬಮ್ಮನಕಟ್ಟಿ ಹೊಸ ಪ್ರಯತ್ನಕ್ಕೆ ಕೈ ಹಾಕಿ ಎಲ್ಲ ರೈತರಿಗೆ ಮಾದರಿಯಾಗಿದ್ದು, ತಮ್ಮ ನಾಲ್ಕು ಎಕರೆ ಜಮೀನಿನ ಸುತ್ತಲೂ ಕಲ್ಲಿನ ಕಂಬಗಳ ಮೂಲಕ ತಂತಿ ಬೇಲಿ ಅಳವಡಿಸಿದ್ದು, ತಮ್ಮ ಜಮೀನಿನ ಸುತ್ತಲೂ ಅತೀ ವಿರಳವಾಗಿ ಬೆಳೆಯುವ ಕವಳಿ ಹಣ್ಣಿನ ಸಸಿ ಬೆಳೆಸಲು ಮುಂದಾಗಿದ್ದಾರೆ. ಜಮೀನು ಸುತ್ತಲೂ ಸಾವಿರಾರು ರೂ. ಖರ್ಚು ಮಾಡಿ 300 ಸಸಿ ನೆಟ್ಟಿರುವ ಇವರು ಮಳೆ ಕೈ ಕೊಟ್ಟ ಕಾರಣ ಒಂದು ಟ್ಯಾಂಕರಗೆ 600 ರೂ. ಅಂತಾ ಖರ್ಚು ಮಾಡಿ ಕವಳಿ ಸಸಿಗಳಿಗೆ ನೀರು ಉಣಿಸಿ ಸಸಿಗಳನ್ನು ಕಾಪಾಡಲು ಮುಂದಾಗಿದ್ದಾರೆ.



> ರಾಜ್ಯದಲ್ಲಿ ಏಕೈಕ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ವಿಶ್ವವಿದ್ಯಾಲಯವು ಕವಳಿ ಬೀಜ ಸಂಗ್ರಹಿಸಿ ಸಸಿ ಮಾಡಿ ಅವುಗಳನ್ನು ನೆಡಲು ಪ್ರೋತ್ಸಾಹ ನೀಡುತ್ತಿದೆ. ಈ ವಿಶ್ವವಿದ್ಯಾಲಯ ನಶಿಸಿ ಹೋಗುತ್ತಿರುವ ಕವಳಿ ಸಸಿಗಳನ್ನು ರೈತರ ಅನುಕೂಲಕ್ಕೆ ಸಿದ್ಧಗೊಳಿಸಿ ಮಾರಾಟ ಮಾಡುತ್ತಿದ್ದಾರೆ.
>
> ■ ಯಶೋಧಾ ಎಂ.ಬಮ್ಮನಕಟ್ಟಿ, ಶಿಗ್ಲಿ ಗ್ರಾಮದ ರೈತ ಮಹಿಳೆ

ಕಿರುಸುದ್ದಿ

ವಿದ್ಯುತ್ ಖಾಸಗೀಕರಣ ನೀತಿ ಹಿಂಪಡೆಯಲು ಆಗ್ರಹ

◆**ಬೆಳಗಾವಿ:** ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವ, ವಿವಿಧ ಕ್ಷೇತ್ರಗಳ ಖಾಸಗೀಕರಣ ನೀತಿಗಳನ್ನು ತಕ್ಷಣ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಹಲವು ರೈತ ಸಂಘಟನೆಯ ಮುಖಂಡರು ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಖಾಸಗೀಕರಣದ ವಿರುದ್ಧ ಅಸಮಾಧಾನ ಹೊರ ಹಾಕಿದರು. ರೈತರು ದೇಶದ ಆಹಾರ ಭದ್ರತೆಯ ಬೆನ್ನೆಲುಬಾಗಿದ್ದು, ಪ್ರತಿಕೂಲ ಹವಾಮಾನ, ಬೆಲೆ ಏರಿಳಿತ, ಉತ್ಪಾದನಾ ವೆಚ್ಚ ಹೆಚ್ಚಳ ಸೇರಿದಂತೆ ಹಲವು ಸಂಕಷ್ಟಗಳ ನಡುವೆಯೂ ಅನ್ನದಾತರು ದೇಶದ ಜನತೆಗೆ ಆಹಾರ ಒದಗಿಸುವ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೃಷಿ, ವಿದ್ಯುತ್, ನೀರಾವರಿ ಹಾಗೂ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಖಾಸಗೀಕರಣಕ್ಕೆ ಉತ್ತೇಜನ ನೀಡುವುದು ರೈತ ಸಮುದಾಯಕ್ಕೆ ಮತ್ತಷ್ಟು ಸಂಕಷ್ಟ ಉಂಟುಮಾಡಲಿದೆ ಎಂದು ಆರೋಪಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘ ಸಹಿರು ಸೇನೆಯ ಮುಖಂಡರು, ಸದಸ್ಯರು, ಪದಾಧಿಕಾರಿಗಳು ಕಾರ್ಯಕರ್ತರು ಸೇರಿದಂತೆ ಹಲವರು ಇದ್ದರು.

ಗ್ರಾಮೀಣ ಭಾಗಕ್ಕೂ ಬಿಎಸ್ಎನ್ಎಲ್ ಸೇವೆ



◆**ಬೆಳಗಾವಿ:** ಬಿಎಸ್ಎನ್ಎಲ್ ಬೆಳಗಾವಿ 4ಜಿ ಸ್ಯಾಚುರೇಶನ್ ಯೋಜನೆಯಡಿ ಗ್ರಾಮೀಣ ಹಾಗೂ ದೂರದ ಹಳ್ಳಿಗಳಲ್ಲಿ ಫೈಬರ್ ಟು ದಿ ಹೋಮ್, 4ಜಿ ಮೊಬೈಲ್ ಸೇವೆಗಳು ಮತ್ತು ವಿವಿಧ ಎಂಟರ್ಪ್ರೈಸ್ ಸೇವೆಗಳನ್ನು ಒದಗಿಸುತ್ತಿದೆ ಎಂದು ಭಾರತೀಯ ದೂರ ಸಂಚಾರ ನಿಗಮ ಮಹಾಪ್ರಬಂಧಕ ವಿಕಾಸ ಜಯಕರ ತಿಳಿಸಿದರು. ಶನಿವಾರ ಪತ್ರಿಕಾಗೋಷ್ಠಿಯಲ್ಲಿ, ಉಪ ಮಹಾಪ್ರಬಂಧಕ ಜಿ. ದೇವೆಂದ್ರ ಮಾತನಾಡಿದ ಅವರು, ಭಾರತೀಯ ಸಂಚಾರ ನಿಗಮಲಿಮಿಟೆಡ್ ಈಗ ಸಾಕಷ್ಟು ಸುಧಾರಣೆ ಆಗಿದ್ದು, ಜನರಿಗೆ ಉತ್ತಮ ದೂರ ಸಂಪರ್ಕ ಸೇವೆ ಒದಗಿಸುತ್ತಿದೆ ಎಂದು ತಿಳಿಸಿದರು.

ಪ್ರಸ್ತುತ ಜಿಲ್ಲೆಯಾದ್ಯಂತ 11,600ಕ್ಕೂ ಹೆಚ್ಚು ಎಫ್‌ಟಿಟಿಎಚ್ ಗ್ರಾಹಕರು, 2 ಲಕ್ಷಕ್ಕೂ ಅಧಿಕ ಮೊಬೈಲ್ ಬಳಕೆದಾರರು ಹಾಗೂ 1,150ಕ್ಕೂ ಹೆಚ್ಚು ಸಂಸ್ಥೆಗಳು ಎಫ್‌ಟಿಟಿಎಚ್ ಸೇವೆಗಳ ಪ್ರಯೋಜನ ಪಡೆಯುತ್ತಿವೆ. 64 ಫ್ರಾಂಚೈಸಿಗಳ ಮೂಲಕ ಸೇವೆಗಳನ್ನು ವಿಸ್ತರಿಸಲಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕೈಗೆಟುಕುವ ದರದಲ್ಲಿ ಸಂಪರ್ಕ ಕಲ್ಪಿಸಲಾಗುತ್ತಿದೆ. ಹೊಸ ಗ್ರಾಹಕರಿಗೆ ಉಚಿತ ಮೋಡಂ, ಇತರ ಸೌಲಭ್ಯಗಳು ಹಾಗೂ ವಿಶೇಷ ಭಾರತ್‌ನೆಟ್ ಯೋಜನೆಗಳನ್ನೂ ಪರಿಚಯಿಸಲಾಗಿದೆ. ಇತರ ಖಾಸಗಿ ದೂರಸಂಪರ್ಕ ಮೊಬೈಲ್ ಸೇವೆಗಳಿಗಿಂತ ಈಗ ಬಿಎಸ್ ಎನ್ ಎಲ್ ಯಾವುದಕ್ಕೂ ಕಮ್ಮಿಯಿಲ್ಲ. ನೆಟವರ್ಕ್ ಮತ್ತು ಅಂತರ್ಜಾಲ ಸೇವೆ ಸುಧಾರಣೆ ಆಗಿದೆ. ಸಾರ್ವಜನಿಕ ಗ್ರಾಹಕರು ಕಡಿಮೆ ಬೆಲೆಯಲ್ಲಿ ಹೆಚ್ಚು ಉತ್ಕೃಷ್ಟ ಆಗಿರುವ ಬಿಎಸ್ಎನ್ ಎಲ್ ಸೇವೆ ಪಡೆಯಬೇಕು ಎಂದು ಮನವಿ ಮಾಡಿದರು.

ಈ ವೇಳೆ ಉಪ ಮಹಾಪ್ರಬಂಧಕ ಜಿ. ದೇವೆಂದ್ರ ಸೇರಿ ದೂರಸಂಚಾರ ನಿಗಮದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ರಾಯಬಾಗ: ತಾಲೂಕಿನ ದಿಗ್ಗೇವಾಡಿ ಗ್ರಾಮದ ನಿವಾಸಿ ಪ್ರವೀಣ ಅರ್ಜುನ್ ಬಂಡಗರ ಅವರು ಎ ಎಸ್ ಐ ಆಗಿ ಬಡ್ತಿ ಹೊಂದಿದ್ದಾರೆ. ಪ್ರವೀಣ ಅವರು ಮೊದಲು ಪೊಲೀಸ್ ಪೇದೆಯಾಗಿ ಕಳೆದ 20 ವರ್ಷಗಳಿಂದ ಮುಗಳಖೋಡದ ಯಲ್ಲಾಲಿಂಗ ಮಠದ ಪೀಠಾಧಿಪತಿಗಳಾದ ಮುರುಘರಾಜೇಂದ್ರ ಶ್ರೀಗಳಿಗೆ ಅಂಗರಕ್ಷಕ(ಗನ್ ಮ್ಯಾನ್) ಆಗಿ ಕಾರ್ಯನಿರ್ವಹಿಸುತ್ತ ಬಂದಿದ್ದರು.



ಬೆಳಗಾವಿ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವ, ವಿವಿಧ ಕ್ಷೇತ್ರಗಳ ಖಾಸಗೀಕರಣ ನೀತಿಗಳನ್ನು ತಕ್ಷಣ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರಕ್ತದಾನ, ನೇತ್ರದಾನ ಶಿಬಿರ ಯಶಸ್ವಿ

◆**ಬೆಳಗಾವಿ:** ಬಸವ ಕಾಯಕ ಜೀವಿಗಳ ಸಂಘ ಹಾಗೂ ರಾಷ್ಟ್ರೀಯ ಬಸವ ದಳದ ಸಂಯುಕ್ತಾಶ್ರಯದಲ್ಲಿ ವಚನ ಶಾಸ್ತ್ರ ಪಿತಾಮಹರ ಸಂಸ್ಮರಣೋತ್ಸವದ ಅಂಗವಾಗಿ ನಗರದ ಮಹಾಂತೇಶನಗರದ ವಿಶ್ವಗುರು ಬಸವ ಮಂಟಪದಲ್ಲಿ ಬೃಹತ್ ರಕ್ತದಾನ ಮತ್ತು ನೇತ್ರದಾನ ಶಿಬಿರ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಶಿಬಿರವನ್ನು ಕೆಎಲ್ಇ ಸಂಸ್ಥೆ ನಿರ್ದೇಶಕ ಮಹಾಂತೇಶ ಕವಟಗಿಮಠ ಉದ್ಘಾಟಿಸಿ ಮಾತನಾಡಿ, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಸಮಾಜಸೇವಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಹೇಳಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಅನೀಲ ಬೆಣಕೆ ಮಾತನಾಡಿ, ಈಗಾಗಲೇ 20ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದ್ದು, ರಕ್ತದಾನಿಗಳಿಗೆ ಒಂದು ಲಕ್ಷರೂ. ಉಚಿತ ಆರೋಗ್ಯ ವಿಮೆ ಕಲ್ಪಿಸುವ ಯೋಜನೆ ಶ್ಲಾಘನೀಯವಾಗಿದೆ ಎಂದರು. ಶಂಕರ ಗುಡಸ್ ಮಾತನಾಡಿ, ಶಿಬಿರಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಿಂದ ನಾಲ್ವರು ಮಹಿಳೆಯರು ಆಗಮಿಸಿ ರಕ್ತದಾನ ಮಾಡಿರುವುದು ವಿಶೇಷವಾಗಿದೆ ಎಂದರು.

ಈ ವೇಳೆ ಜಂಬಿಗಿ ಕಣ್ಣಿನ ಆಸ್ಪತ್ರೆಯ ಡಾ.ಅಮೋಘ ಜಂಬಿಗಿ, ಅಶೋಕ ಬೆಂಡಿಗೇರಿ, ಶಂಕರ ಗುಡಸ್, ಕೆ.ಶರಣ ಪ್ರಸಾದ್, ಮಹಾಂತೇಶ್ ಗುಡಸ್, ಸೂರ್ಯಕಾಂತ ಭಾಂವಿ, ಆನಂದ್ ಗುಡಸ್, ಮಾಜಿ ಶಾಕ ಅನಿಲ್ ಬೇನಕೆ, ಸಂತೋಷ್ ಗುಡಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೆಳಗಾವಿ: ಬಸವ ಕಾಯಕ ಜೀವಿಗಳ ಸಂಘ ಹಾಗೂ ರಾಷ್ಟ್ರೀಯ ಬಸವ ದಳದ ಸಂಯುಕ್ತಾಶ್ರಯದಲ್ಲಿ ವಚನ ಶಾಸ್ತ್ರ ಪಿತಾಮಹರ ಸಂಸ್ಮರಣೋತ್ಸವದ ಅಂಗವಾಗಿ ನಗರದ ಮಹಾಂತೇಶನಗರದ ವಿಶ್ವಗುರು ಬಸವ ಮಂಟಪದಲ್ಲಿ ಬೃಹತ್ ರಕ್ತದಾನ ಮತ್ತು ನೇತ್ರದಾನ ಶಿಬಿರ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಹೇಳಿಕೆ

ಇಂದಿನಿಂದ ಎಸ್‌ಐಆರ್ ಆರಂಭ

◆**ಬೆಳಗಾವಿ:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರ ದಕ್ಷಿಣ ಎರಡು ಕ್ಷೇತ್ರಗಳಿದ್ದು, ಜೂನ್ 30 ರಿಂದ ಜುಲೈ 29 ರವರೆಗೆ ಎಸ್ಐಆರ್ ಪ್ರಕ್ರಿಯೆ ನಡೆಯಲಿದೆ ಎಂದು ಪಾಲಿಕೆ ಆಯುಕ್ತ ಕಾರ್ತಿಕ್.ಎಂ ಹೇಳಿದರು.



ಸೋಮವಾರ ಈ ಕುರಿತು ಪಾಲಿಕೆಯ ಕಚೇರಿಯಲ್ಲಿ ಮಾಹಿತಿ ನೀಡಿದ ಅವರು, ದಕ್ಷಿಣ ಉತ್ತರ ಸೇರಿ ಒಟ್ಟು 514 ಮತಗಟ್ಟೆಗಳು ಹಾಗೂ ಮತಗಟ್ಟೆ (ಬಿಎಲ್ಒ) ಅಧಿಕಾರಿಗಳಿದ್ದಾರೆ.

ಗುರುತಿನ ಚೀಟಿ ಹೊಂದಿರುವ ಬಿಎಲ್ಒ ಗಳು ಮನೆಮನೆಗೆ ಆಗಮಿಸಿ ಇನ್ಯುಮೇರಿಟಿಂಗ್ ಫಾರ್ಮ್ ನೀಡಲಿದ್ದಾರೆ.

ವೆಬ್ಸೈಟ್ ಮೂಲಕ ಮಾಹಿತಿ ಪಡೆದು ಫಾರಂ ಭರ್ತಿ ಮಾಡಬೇಕು. ಸಮಸ್ಯೆಗಳು ಉಂಟಾದರೆ ಬಿಎಲ್ಒಗಳು, ಮೇಲಾಧಿಕಾರಿಗಳು ಹಾಗೂ ನಗರಸೇವಕರ ಸಹಾಯ ಪಡೆಯಬಹುದು. ಮತದಾರರ ಪಟ್ಟಿಯಲ್ಲಿ ಹೆಸರು ಮುಂದುವರೆಯಲು ಮತ್ತು ಮತದಾನದ ಹಕ್ಕನ್ನು ಖಾತರಿಪಡಿಸಿಕೊಳ್ಳಲು ಸಾರ್ವಜನಿಕರು ಫಾರಂ ಅನ್ನು ಭರ್ತಿ ಮಾಡಿ ಹಿಂದಿರುಗಿಸುವುದು ಕಡ್ಡಾಯವಾಗಿದೆ. ಹೊಸ ಯುವ ಮತದಾರರು ಸಹ ಅಗತ್ಯ ಫಾರಂ ಭರ್ತಿ ಮಾಡಿ ನೋಂದಣಿ ಮಾಡಿಕೊಳ್ಳಬಹುದು.

▸▸ **ಚುನಾವಣಾ ಆಯೋಗದ ಆದೇಶದಂತೆ ಈ ಕಾರ್ಯ ನಡೆದಿದ್ದು, ಸಿಬ್ಬಂದಿ ಹಾಗೂ ಸಾರ್ವಜನಿಕರ ಜಂಟಿ ಸಹಯೋಗದಿಂದ ಎಸ್ ಐಆರ್ ಪ್ರಕ್ರಿಯೆ ಸುಗಮವಾಗಲಿದೆ.**

▸▸ **ಈ ಕುರಿತು ಸಾರ್ವಜನಿಕರಲ್ಲಿ ಯಾವುದೇ ಭಯ ಆತಂಕ ಬೇಡವೆಂದು ಹೇಳಿದರು.**



ಜನತೆ ಸಹಕಾರ ನೀಡಿ

◆**ಗೋಕಾಕ:** ಗೋಕಾಕ ತಾಲೂಕಿನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಎಸ್ಐಆರ್ ಕಾರ್ಯ ಜೂ.30ರಿಂದ ಒಂದು ತಿಂಗಳ ವರೆಗೆ ನಡೆಯಲಿದ್ದು, ಪ್ರತಿ ಮನೆಮನೆಗೆ ಭೇಟಿ ನೀಡಿ ಪರಿಷ್ಕರಣೆಯನ್ನು ಬಿಎಲ್ಒಗಳು ಮಾಡುತ್ತಿದ್ದು, ಜನತೆ ಅವರಿಗೆ ಸಹಕಾರ ನೀಡುವಂತೆ ತಹಶೀಲ್ದಾರ್ ಡಾ.ಮೋಹನ ಭಸ್ಮೆ ಹಾಗೂ ಪೌರಾಯುಕ್ತ ರವಿ ರಂಗಸುಭೆ ಹೇಳಿದರು. ಅವರು, ಸೋಮವಾರದಂದು ನಗರದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಲ್ಲ ಅರ್ಹ ಮತದಾರರಿಗೆ ಮತದಾನ ಹಕ್ಕು ನೀಡುವ ಉದ್ದೇಶದಿಂದ ಚುನಾವಣಾ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆ ಎಸ್ಐಆರ್ ನಡೆಸುತ್ತಿದ್ದು ತಮ್ಮ ಮನೆಗಳಿಗೆ ಪರಿಷ್ಕರಣೆಗೆ ಬರುವವರಿಗೆ ಸರಿಯಾದ ಮಾಹಿತಿಯನ್ನು ನೀಡಿ, ಗೊಂದಲಗಳಿಗೆ ಒಳಗಾಗದೆ ಅವರು ಕೇಳುವ ದಾಖಲೆಗಳೊಂದಿಗೆ ಪಾಸ್‌ಪೋರ್ಟ್ ಸೈಜ್ ಪೋಟೊ(ಭಾವಚಿತ್ರ) ನೀಡಬೇಕು. ಪ್ರತಿ ಮನೆಗೆ ಮೂರು ಬಾರಿ ಭೇಟಿ ನೀಡಿ ಯಾರು ಈ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಈ ಕಾರ್ಯವನ್ನು ಮಾಡಲಾಗುತ್ತಿದೆ. ತಾಲೂಕಿನಲ್ಲಿ 2.60ಲಕ್ಷ ಮತದಾರರಿದ್ದು 290 ಮತಗಟ್ಟೆಗಳಲ್ಲಿ ಮತದಾರರ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇಲ್ಲಿಗೆ ಬರುವ ಸಾರ್ವಜನಿಕರಿಗೆ ಬಿಎಲ್ಒಗಳು ಸೂಕ್ತ ಮಾಹಿತಿ ನೀಡಿ ಸಹಕರಿಸಲಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಚುನಾವಣಾ ಇಲಾಖೆಯ ಪ್ರವೀಣ ಮಾಳಾಜ ಇದ್ದರು.



ಜಿಲ್ಲೆಯಲ್ಲಿ ವಟಪೂರ್ಣಿಮೆ ಸಂಭ್ರಮ



ರಾಯಬಾಗ: ಪಟ್ಟಣದಲ್ಲಿ ಸೋಮವಾರ ಸುಮಂಗಲೆಯರಿಂದ ಆಲದ ಮರಕ್ಕೆ ನೂಲು ಸುತ್ತಿ, ಪೂಜೆ ಸಲ್ಲಿಸಿ, ವಟ ಸಾವಿತ್ರಿ ವ್ರತ ಆಚರಿಸಿದರು. ಪಲ್ಲವಿ ಹೊಸಮನಿ, ವಿದ್ಯಾ ಗೋಕಾಕ, ಸುಜಾತಾ ಕೊಟಿವಾಲೆ, ಭಾರತಿ ಬೆಲ್ಲದ, ಸುಜಾತಾ ಹೊಸಮನಿ, ಸುನಂದಾ ಪಾಟೀಲ, ಸಾಕ್ಷಿ, ಪಾಟೀಲ ಮುಂತಾದವರು ಇದ್ದರು.

◆**ಬೆಳಗಾವಿ:** ಜಿಲ್ಲೆಯಾದ್ಯಂತ ವಟ ಪೂರ್ಣಿಮೆಯನ್ನು ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಪತಿಯ ದೀರ್ಘಾಯುಷ್ಯ, ಆರೋಗ್ಯ ಹಾಗೂ ಕುಟುಂಬದ ಸುಖ-ಸಮೃದ್ಧಿಗಾಗಿ ಮುತ್ತೈದೆಯರು ವಟಸಾವಿತ್ರಿ ವ್ರತ ಆಚರಿಸಿ ವಿಶೇಷ ಪೂಜೆ ಸಲ್ಲಿಸಿದರು.

ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ವಿವಿಧ ಗ್ರಾಮೀಣ ಭಾಗಗಳಲ್ಲಿ ಬೆಳಗ್ಗೆಯಿಂದಲೇ ದೇವಸ್ಥಾನಗಳು ಹಾಗೂ ಆಲದ ಮರಗಳ ಬಳಿ ಮಹಿಳೆಯರ ದಂಡು ನೆರೆದಿತ್ತು. ನಗರದ ರಾಣಿ ಚೆನ್ನಮ್ಮ ವೃತ್ತದ ಶ್ರೀ ಗಣೇಶ ಮಂದಿರ, ಆರ್.ಟಿ.ಒ. ರಸ್ತೆಯ ಸೋನ್ಯಾ ಮಾರುತಿ ಮಂದಿರ, ಹರಿದ್ರಾ ಗಣೇಶ ಮಂದಿರ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ಭಕ್ತಿಭಾವದಿಂದ ಪೂಜೆಗಳು ನೆರವೇರಿದವು. ವಡಗಾಂವ, ಶಹಾಪೂರ, ಖಾಸಬಾಗ ಸೇರಿದಂತೆ ಹಲವು ಪ್ರದೇಶಗಳಲ್ಲೂ ಸುಮಂಗಲಿಯರು ಸಾಂಪ್ರದಾಯಿಕ ಉಡುಪು ಧರಿಸಿ ಆಲದ ಮರಕ್ಕೆ ನೂಲು ಸುತ್ತಿ ಪ್ರದಕ್ಷಿಣೆ ಹಾಕಿ ತಮ್ಮ ಪತಿಯ ಆಯುಷ್ಯ ಹಾಗೂ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು.

ಪೌರಾಣಿಕ ನಂಬಿಕೆಯಂತೆ, ಮಹಾಸತಿ ಸಾವಿತ್ರಿಯು ತನ್ನ ಪತಿಭಕ್ತಿ ಹಾಗೂ ಧೈರ್ಯದಿಂದ ಯಮಧರ್ಮರಾಜನಿಂದ ತನ್ನ ಪತಿ ಸತ್ಯವಾನನ ಪ್ರಾಣವನ್ನು ಮರಳಿ ಪಡೆದ ದಿನವನ್ನು ವಟಸಾವಿತ್ರಿ ವ್ರತವಾಗಿ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಮಂಗಲಿಯರು ದೀರ್ಘಾಯುಷ್ಯದ ಸಂಕೇತವಾಗಿರುವ ಆಲದ ಮರವನ್ನು ಪೂಜಿಸಿ, ಪತಿಯ ಆಯುಷ್ಯ, ಆರೋಗ್ಯ ಹಾಗೂ ಕುಟುಂಬದ ಸುಖ-ಸಮೃದ್ಧಿಗಾಗಿ ಪ್ರಾರ್ಥಿಸುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ನಗರದ ಪ್ರಸಿದ್ಧ ಕಪಿಲೇಶ್ವರ ಮಂದಿರದಲ್ಲೂ ವಟಪೂರ್ಣಿಮೆಯ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ನೂರಾರು ಮಹಿಳೆಯರು ಆಲದ ಮರಕ್ಕೆ ನೂಲು ಸುತ್ತಿ ಪ್ರದಕ್ಷಿಣೆ ಹಾಕಿದರು. ಹಣ್ಣುಗಳು, ಉಡಿ ಸಾಮಗ್ರಿಗಳನ್ನು ಸಮರ್ಪಿಸಿ ಪೂಜೆ ಸಲ್ಲಿಸಿದ ಬಳಿಕ ಪರಸ್ಪರ ಉಡಿ ತುಂಬಿಕೊಂಡು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ದಿನವಿಡೀ ಉಪವಾಸ ವ್ರತ ಆಚರಿಸಿದ ಸುಮಂಗಲಿಯರು ಸಂಜೆ ನಡೆಯುವ ವಿಶೇಷ ಪೂಜೆಯೊಂದಿಗೆ ವಟಸಾವಿತ್ರಿ ವ್ರತವನ್ನು ಸಂಪೂರ್ಣಗೊಳಿಸಲಿದ್ದಾರೆ.

ಸಸಿ ನೆಡುವ ಕಾರ್ಯಕ್ರಮ



◆**ಹಾರೂಗೇರಿ:** ಕೇಂದ್ರ ಸಹಕಾರ ಸಚಿವಾಲಯದ 5 ವರ್ಷಗಳ ಸಾಧನೆಯ ಅಂಗವಾಗಿ ಸಹಕಾರ ಸಪ್ತಾಹ ಆಚರಣೆಯ ನಿಮಿತ್ತ ಸ್ಥಳೀಯ ಶ್ರೀ 1008 ಪಾರ್ಶ್ವನಾಥ ಅಲ್ಪಸಂಖ್ಯಾತರ ಸೌಹಾರ್ದ ಸಹಕಾರಿ ಸಂಘ , ಹಾರೂಗೇರಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.ಸಂಘದ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಸಿ ನೆಟ್ಟು, ಸಸಿಗೆ ನೀರುಣಿಸುವ ಮೂಲಕ ಪರಿಸರ ಸಂರಕ್ಷಣೆ ಹಾಗೂ ಹಸಿರು ಅಭಿವೃದ್ಧಿಯ ಸಂಕಲ್ಪವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮವು ಸಹಕಾರದ ಮನೋಭಾವ ಮತ್ತು ಪರಿಸರ ಜಾಗೃತಿಗೆ ಸಾಕ್ಷಿಯಾಯಿತು.

ಅಧ್ಯಯನವಿಲ್ಲದೆ ಕೃತಿ ಬರೆಯಲು ಸಾಧ್ಯವಿಲ್ಲ: ಜಗಜಂಪಿ

◆**ಬೆಳಗಾವಿ:** ಸತತ ಓದು, ಅಧ್ಯಯನವಿಲ್ಲದೆ ಕೃತಿ ಬರೆಯಲು ಸಾಧ್ಯವಿಲ್ಲ ಎಂದು ಹಿರಿಯ ಸಾಹಿತಿ ಡಾ.ಬಸವರಾಜ ಜಗಜಂಪಿ ಹೇಳಿದರು.

ರಂಗಸೃಷ್ಟಿ ಸಾಂಸ್ಕೃತಿಕ ಸಂಘ ವತಿಯಿಂದ ಡಾ.ಪಿ.ಜಿ.ಕೆಂಪಣ್ಣವರ ಅವರ ಜಿನ ದೀವಿಗೆ ಹಾಗೂ ಶಿರೀಷ ಜೋಶಿ ಅವರ ಮರಾಠಿಯೊಳಗೊಂದು ಕನ್ನಡ ಗತವೈಭವ ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ ವೇಳೆ



ಬಿಡುಗಡೆಯಾಗಿರುವ ಎರಡೂ ಕೃತಿಗಳು ಅತ್ಯಂತ ತಳಸ್ಪರ್ಶಿ ಯಾಗಿ ಬರೆದವುಗಳಾಗಿವೆ. ಬಹಳಷ್ಟು ಅಧ್ಯಯನ ಮಾಡಿ ಬರೆದವುಗಳಾಗಿವೆ ಎಂದರು.

ಧರ್ಮ ಸಹಿಷ್ಣುತೆ ಎಂದರೆ ಏನು ಎನ್ನುವುದನ್ನು ಜೈನ ಧರ್ಮೀಯರಿಂದ ಕಲಿತುಕೊಳ್ಳ ಬೇಕು. ಕನ್ನಡ ಸಾರಸ್ವತ ಲೋಕಕ್ಕೆ ಜೈನ ಧರ್ಮೀಯರ ಕೊಡುಗೆ ಸಾಕಷ್ಟಿದೆ ಎಂದರು.

ಸಾಹಿತಿ ಎಲ್.ಎಸ್.ಶಾಸ್ತ್ರಿ ಮಾತನಾಡಿ, ಕನ್ನಡ-ಮರಾಠಿ ಬಾಂಧವ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿಯಾಗಿರುವ ಮರಾಠಿಯೊಳಗೊಂದು ಕನ್ನಡ ಗತವೈಭವ ಮರಾಠಿ ಭಾಷೆಗೂ ಅನುವಾದವಾಗಬೇಕೆಂದರು.

ಹಿರಿಯ ಲೇಖಕಿ ಡಾ.ಗುರುದೇವಿ ಹುಲೆಪ್ಪನವರಮಠ, ಪ್ರಾಧ್ಯಾಪಕ ಡಾ.ಎಚ್.ಬಿ.ಕೋಲ್ಕಾರ ಕೃತಿಗಳ ಕುರಿತು ಮಾತನಾಡಿದರು.

ರಂಗಸೃಷ್ಟಿ ಸಾಂಸ್ಕೃತಿಕ ಸಂಘದ ಅಧ್ಯಕ್ಷ ರಮೇಶ ಜಂಗಲ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಎಂ.ಕೆ.ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಕೃತಿಕಾರ ಡಾ.ಪಿ.ಜಿ.ಕೆಂಪಣ್ಣವರ್ ಹಾಗೂ ಶಿರೀಷ ಜೋಶಿ ಮಾತನಾಡಿದರು. ಶರಣಯ್ಯ ಮಠಪತಿ ಸ್ವಾಗತಿಸಿ, ನಿರೂಪಿಸಿದರು. ಶುಭಾ ಶ್ರೀನಾಥ್ ಜೋಶಿ ವಂದಿಸಿದರು.

ಎಂ.ವಿ.ಗುಂಡಪ್ಪಗೋಳಗೆ ಸನ್ಮಾನ



◆**ಯರಗಟ್ಟಿ:** ತಹಶೀಲ್ದಾರ್ ಹಾಗೂ ತಾಲೂಕ ಕಾರ್ಯನಿರ್ವಾಹಕ ದಂಡಾಧಿಕಾರಿಗಳಾದ ಎಮ್.ವ್ಹಿ. ಗುಂಡಪ್ಪಗೋಳ ಅವರು ಗ್ರೇಡ್ 2 ದಿಂದ ಗ್ರೇಡ್ 1 ಮುಂಬಡ್ತಿ ಪಡೆದು ಹಿನ್ನೆಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಸರ್ವ ಪದಾಧಿಕಾರಿಗಳಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಸಂಚಾಲಕ ಉದಯಕುಮಾರ ಚಿಕ್ಕಣ್ಣವರ, ಯರಗಟ್ಟಿ ಯುವ ಘಟಕ ಅಧ್ಯಕ್ಷ ರಾಯಪ್ಪ ಟಪಾಲ, ಮಹಾಂತೇಶ ತಳವಾರ, ಬಸಪ್ಪ ಮಾದರ, ನಾಗರಾಜ ಜಟನ್ನವರ, ವೀರಭದ್ರ ಗೌಡರ, ನಾಗರಾಜ ಹುಡೇದ, ಬಸವರಾಜ ಬಹಿಲನ್ನವರ, ಪುಂಡಲಿಕ ಸಾವಳಗಿ, ರುದ್ರಪ್ಪ ಬೈಲವಾಡ, ದೇವೇಂದ್ರ ಶಿರಸಂಗಿ, ಸೋಮನಿಂಗ ಮಾದರ, ಫಿರೋಜ ಖಾದ್ರಿ ಸೇರಿದಂತೆ ಹಲವಾರು ಕರವೇ ಕಾರ್ಯಕರ್ತರು ಇದ್ದರು.

ಪೂರ್ವಜರ ತ್ಯಾಗ, ಕೊಡುಗೆ ಸ್ಮರಿಸೋಣ: ಘೋರ್ಪಡೆ

◆**ಸವದತ್ತಿ:** ನಮ್ಮ ಪೂರ್ವಜರು ಈ ಪುಣ್ಯ ಭೂಮಿಗಾಗಿ ಮಾಡಿದ ತ್ಯಾಗ ಮತ್ತು ಅವರು ನೀಡಿದ ಕೊಡುಗೆಗಳನ್ನು ನಾವು ಈಗ ನೆನಪಿಸಿಕೊಳ್ಳಬೇಕಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಪ್ರಾಂತ ಪ್ರಮುಖರಾದ ಸುಧೀರ್ ಘೋರ್ಪಡೆ ಹೇಳಿದರು.

ಅವರು ಸ್ಥಳೀಯ ಮಾಮನಿ ಕಲ್ಯಾಣ ಮಂಟಪದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸವದತ್ತಿ ಏರ್ಪಡಿಸಿದ್ದ ಸಂಘ ಶತಕ ಪಯಣ ಸಾರ್ಥಕ ಎಂಬ ವೇದಿಕೆಯ ಮೇಲೆ ಬೌದ್ಧಿಕವಾಗಿ ಮಾತನಾಡಿದ ಅವರು, ಸಂಘ ಶತಾಬ್ದಿ ವರ್ಷ ನಿಮಿತ್ತ ದೇಶದ ಉದ್ದಗಲಕ್ಕೂ ಈ ಕಾರ್ಯಕ್ರಮ



ನಡೆಯುತ್ತಾ ಬರುತ್ತಿದೆ ಅದೇ ರೀತಿಯಾಗಿ ಈ ನಿಮಿತ್ಯವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈ ನಿಮಿತ್ತ ಸದ್ಭಾವನಾ ಗೋಷ್ಠಿ, ಚಿಂತನೆ ಗಳನ್ನು ಸಮಾಜದ ಎಲ್ಲ ವರ್ಗಗಳಲ್ಲಿ ಸೇವೆ ಸಲ್ಲಿಸಿದ ಮೇಧಾವಿಗಳಿಂದ ಚಿಂತನೆ ನಡೆಯುತ್ತಿದೆ. 2000ಕ್ಕೂ ಹೆಚ್ಚು ಪ್ರಮುಖ ನಾಗರಿಕರಿಂದ ವಿಚಾರಗೋಷ್ಠಿಗಳು ನಡೆಯುತ್ತಿವೆ. ಸಂಘದ ಶಕ್ತಿ ಹೆಚ್ಚಾಗುತ್ತಲೇ ಇದೆ. ಆ ನಿಟ್ಟಿನಲ್ಲಿ ನಾವು ಇಂದು ನಮ್ಮ ದೇಶ ಜಗತ್ತಿಗೆ ಮಾದರಿಯಾಗುವುದರ ಬಗ್ಗೆ ತಿಳಿದುಕೊಳ್ಳಬೇಕು ಈ ನಮ್ಮ ದೇಶ ಇಡೀ ಜಗತ್ತಿಗೆ ದೈವ ಕುಟುಂಬಕಂ ಎಂಬ ಮಂತ್ರದ ಮಹತ್ವವನ್ನು ತಿಳಿಸಿಕೊಟ್ಟ ದೇಶ ಎಂದರು.

ವೇದಿಕೆ ಮೇಲೆ ಜಿಲ್ಲಾ ಸಂಘ ಚಾಲಕರಾದ ಸಿಬಿ ದೊಡ ಗೌಡರ ವೇದಿಕೆ ಮೇಲೆ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಲಕ್ಷ್ಮಿ ಹರಿಬೆಂಚ ಆ ರಿಬೆಂಚಿ ಭಕ್ತಿಗೀತೆ ಹಾಡಿದರು. ಮಯೂರ್ ಕಾರದಗಿ ಸ್ವಾಗತಿಸಿದರು.

ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ: ಇಬ್ಬರ ಬಂಧನ

◆**ಬೆಳಗಾವಿ:** ನಗರದ ಸಾರ್ವಜನಿಕ ಸ್ಥಳಗಳಲ್ಲಿ ಕಾನೂನುಬಾಹಿರವಾಗಿ ಮದ್ಯಪಾನ ಮಾಡಿ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವವರ ವಿರುದ್ಧ ಉದ್ಯಮಬಾಗ ಪೊಲೀಸ್ ಠಾಣೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಜೂನ್ 28 ರಂದು ಉದ್ಯಮಬಾಗ ಪೊಲೀಸ್ ಠಾಣೆ ವ್ಯಾಪ್ತಿಯ ಸರ್ವೋ ಕಂಟ್ರೋಲ್ ಫ್ಯಾಕ್ಟರಿ ಸಮೀಪ ಸಾರ್ವಜನಿಕ ಸ್ಥಳದಲ್ಲಿ ಕೆಲವರು ಕಾನೂನುಬಾಹಿರವಾಗಿ ಮದ್ಯಪಾನ ಮಾಡುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಮಾಹಿತಿ ಆಧರಿಸಿ ಪಿಎಸ್ಐ ಪ್ರವೀಣ ಬಿರಾದಾರ ನೇತೃತ್ವದ ಪೊಲೀಸ್ ತಂಡ ದಾಳಿ ನಡೆಸಿ, ಸ್ಥಳದಲ್ಲೇ ಇಬ್ಬರನ್ನು ಬಂಧಿಸಿತು.

ಬಂಧಿತರನ್ನು ಯಲ್ಲಪ್ಪ ಭರಮಪ್ಪ ನಾಯಕ (45), ತಾನಾಜಿ ಗಲ್ಲಿ ನಿವಾಸಿ ಹಾಗೂ ಆನಂದ ದೀಪಕ ಪಾಟೀಲ (39), ಅನಗೋಳ ನಿವಾಸಿ ಎಂದು ಗುರುತಿಸಲಾಗಿದೆ.

ಕಾರ್ಯಾಚರಣೆ ನಡೆಸಿದ ಪಿಎಸ್ಐ ಪ್ರವೀಣ ಬಿರಾದಾರ ಹಾಗೂ ಪೊಲೀಸ್ ಸಿಬ್ಬಂದಿಯ ಸಮಯಪ್ರಜ್ಞೆ ಮತ್ತು ಕರ್ತವ್ಯನಿಷ್ಠೆಯನ್ನು ಬೆಳಗಾವಿ ನಗರ ಪೊಲೀಸ್ ಆಯುಕ್ತರು ಹಾಗೂ ಡಿಸಿಪಿ ಶ್ಲಾಘಿಸಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಮುಂದೆಯೂ ನಿರಂತರವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ವೈದ್ಯರ ನೇಮಕಕ್ಕೆ ಆಗ್ರಹ



◆**ಗೋಕಾಕ:** ತಾಲೂಕಿನ ಅಂಕಲಗಿ ಪಟ್ಟಣದಲ್ಲಿ ಸುಸಜ್ಜಿತ ಸಾರ್ವಜನಿಕ ಆರೋಗ್ಯ ಕೇಂದ್ರವಿದ್ದು, ಸಿಬ್ಬಂದಿಗಳಿಲ್ಲದೆ ತಾಲೂಕು ಕೇಂದ್ರಕ್ಕೆ ತೆರಳುವ ದುಸ್ಥಿತಿ ಎದುರಾಗಿದ್ದು ವೈದ್ಯ ಸಿಬ್ಬಂದಿ ನೇಮಕ ಮಾಡುವಂತೆ ಆಗ್ರಹಿಸಿ ಆರೋಗ್ಯ ಇಲಾಖೆಯ ಉಪನಿರ್ದೇಶಕ ಡಾ. ರಾಧಾಕೃಷ್ಣ ಅವರಿಗೆ ಅಂಕಲಗಿ ಪಟ್ಟಣದ ಸಾರ್ವಜನಿಕರು ಮನವಿ ಸಲ್ಲಿಸಿದರು.

ಅಂಕಲಗಿ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಕಲಗಿ ಆಸ್ಪತ್ರೆಗೆ ದಿನ ನಿತ್ಯ 200 ರಿಂದ 400 ಜನ ಆಸ್ಪತ್ರೆಗೆ ಚಿಕಿತ್ಸೆ ಸಲುವಾಗಿ ಬರುತ್ತಿದ್ದು, ಆಸ್ಪತ್ರೆಯಲ್ಲಿ ವೈದ್ಯರು ಇಲ್ಲ.

▸▸ **ಅಂಕಲಗಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ**

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಆಸ್ಪತ್ರೆಗೆ ವೈದ್ಯರನ್ನು ಹಾಗೂ ಹೆಚ್ಚಿನ ಸಿಬ್ಬಂದಿ ನಿಯೋಜಿಸುವಂತೆ ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕು ವೈದ್ಯಾಧಿಕಾರಿ ಡಾ.ಮುತ್ತಣ್ಣ ಕೊಪ್ಪದ, ಡಾ.ರವಿಂದ್ರ ಅಂಟಿನ, ಸುರೇಶ ಸನದಿ, ಜಯಾನಂದ ಹುಣಚ್ಯಾಳ, ಸಚೀನ ಕಮತೇಕರ, ಅಂಕಲಗಿ ಪಟ್ಟಣ ಜನಪ್ರತಿನಿಧಿಗಳು, ಮುಖಂಡರು ಸೇರಿದಂತೆ ಅನೇಕರು ಇದ್ದರು.


ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ

◆**ಬೆಳಗಾವಿ:** ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಬೆಳಗಾವಿ ತಾಲೂಕಿನ ಶಿಂದೊಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಉಪ-ಕೇಂದ್ರದಲ್ಲಿ ಭಾನುವಾರ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಹಾಗೂ ನಿಕಟಪೂರ್ವ ಗ್ರಾಮ ಪಂಚಾಯಿತಿ ಸದಸ್ಯ ವೀರಭದ್ರಯ್ಯ ಪೂಜಾರ ಮಾತನಾಡಿ, ಭಾರತವನ್ನು ಪೋಲಿಯೋ ರೋಗಮುಕ್ತ ರಾಷ್ಟ್ರವನ್ನಾಗಿ ರೂಪಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವ್ಯವಸ್ಥಿತ ಯೋಜನೆಗಳು, ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ನಿರಂತರ ಪರಿಶ್ರಮ ಮಹತ್ತರ ಪಾತ್ರ ವಹಿಸಿದೆ. ಭಾರತದ ಪಲ್ಸ್ ಪೋಲಿಯೋ ಅಭಿಯಾನವು ಇಂದು ವಿಶ್ವಕ್ಕೆ ಮಾದರಿಯಾಗಿದ್ದು, ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು ಎಂದರು. ಶಿಂದೊಳ್ಳಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ಅಶೋಕ ಹಂಚಿನಮನಿ ಮಾತನಾಡಿದರು. ಈ ಸಂದರ್ಭದಲ್ಲಿ ಮುತಗಾ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಶಾಲೆಯ ಶಿಕ್ಷಕ-ಶಿಕ್ಷಕಿಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು, ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಅಭಿಯಾನಕ್ಕೆ ಯಶಸ್ವಿ ಚಾಲನೆ ನೀಡಲಾಯಿತು.



ತುಕ್ಕಾನಟ್ಟಿಯಲ್ಲಿ ಪಲ್ಸ್ ಪೋಲಿಯೋ



◆**ಮೂಡಲಗಿ:** ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಉನ್ನತೀಕರಿಸಿದ ಪ್ರೌಢಶಾಲೆ ತುಕ್ಕಾನಟ್ಟಿ ಹಾಗೂ ಆರೋಗ್ಯ ಇಲಾಖೆ, ಗ್ರಾಮ ಪಂಚಾಯತ ಆಶ್ರಯದಲ್ಲಿ ತುಕ್ಕಾನಟ್ಟಿ ಗ್ರಾಮದಲ್ಲಿ ಜೂನ್ 28 ರಂದು 5 ವರ್ಷದೊಳಗಿನ ಮಕ್ಕಳಿಗೆ ರಾಷ್ಟ್ರೀಯ ಪಲ್ಸ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಆರೋಗ್ಯ ಇಲಾಖೆಯೊಂದಿಗೆ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಕರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಕಾರ್ಯಕ್ರಮದಲ್ಲಿ ಸರಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರ.ಗು. ಎ.ಜಿ ಗಿರೆಣ್ಣವರ, ವಿ.ಜಿ. ತೋರಗಲ, ಅತಿಥಿ ಶಿಕ್ಷಕರಾದ ಹೊಳೆಪ್ಪಾ ಗದಾಡಿ, ಪರಮಾನಂದ ನಾಂವಿ, ಜ್ಯೋತಿ ಉಪ್ಪಾರ, ಪವಿತ್ರಾ ಬಡಿಗೇರ, ಲಕ್ಷ್ಮೀ ಖಾನಪ್ಪನವರ, ಗಂಗವ್ವಾ ಗುಬ್ಬನ್ನವರ ಮುಂತಾದವರು ಹಾಜರಿದ್ದರು.

ಕಿರುಸುದ್ದಿ

ವಟ ಸಾವಿತ್ರಿ ಹುಣ್ಣಿಮೆ: ನವಚಂಡಿ ಹವನ



ಅಂಕೋಲಾ: ತಾಲೂಕಿನ ಶಕ್ತಿ ದೇವತೆ ಭೂಮ್ತಾಯಿಯ ಶ್ರೀಶಾಂತಾ ದುರ್ಗಾದೇವಿಯ ಸನ್ನಿಧಿಯಲ್ಲಿ ವಟ ಸಾವಿತ್ರಿ ಹುಣ್ಣಿಮೆಯ ಪ್ರಯುಕ್ತ ನವಚಂಡಿ ಹವನ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ಅರ್ಚಕರು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನವಚಂಡಿ ಹವನ ಪೂರ್ಣಾಹುತಿ ನೆರವೇರಿಸಿದರು.ದೇವಿಯ ವಿಶೇಷ ಪೂಜೆಯ ನಂತರ ಅನ್ನ ಸಂತರ್ಪಣೆ ನಡೆಯಿತು.ಸುತ್ತ ಮುತ್ತಲಿನ ನೂರಾರು ಭಕ್ತರು. ದೇವಾಲಯದ ಸೇವಾಕರ್ತರು ಪಾಲ್ಗೊಂಡು ಅನ್ನ ಪ್ರಸಾದ ಸ್ವೀಕರಿಸಿದರು. ಸುಮಂಗಲಿಯರು ದೇವಿಯ ದರ್ಶನ ಪಡೆದು ದೇವಾಲಯದ ಹೊರ ಆವರಣದ ವಟವೃಕ್ಷಕ್ಕೆ ಪೂಜೆ ಸಲ್ಲಿಸಿದರು. ಸ್ವಯಂ ಸೇವಕರ ತಂಡ ಅನ್ನ ಸಂತರ್ಪಣೆ ಸೇರಿದಂತೆ ವಿವಿಧ ವಿವಿಧ ಕಾರ್ಯಕ್ರಮಗಳಲ್ಲಿ ಸೇವೆ ಸಲ್ಲಿಸಿದರು.

ವಿದ್ಯುತ್ ಸ್ಪರ್ಶಿಸಿ ವ್ಯಕ್ತಿ ಸಾವು

ಮುಂಡಗೋಡ: ವಿದ್ಯುತ್ ತಗುಲಿ ಯುವಕನೊಬ್ಬ ಮೃತಪಟ್ಟ ಘಟನೆ ಜೋಗೇಶ್ವರ ಹಳ್ಳದ ಗೌಳಿ ದಡ್ಡಿಯಲ್ಲಿ ಭಾನುವಾರ ಸಂಜೆ ನಡೆದಿದೆ.ತಾಲೂಕಿನ ಜೋಗೇಶ್ವರ ಗೌಳಿ ದಡ್ಡಿಯ ಜಾನು ಕೊಕರೆ (26)ಎಂಬಾತನೇ ಮೃತಪಟ್ಟ ಯುವಕ. ಪ್ರತಿನಿತ್ಯ ಈಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದನು. ಸೋಮವಾರ ಹುಣ್ಣಿಮೆ ಇದ್ದಿದ್ದರಿಂದ ಯುವಕನು ಭಾನುವಾರ ಸಂಜೆ ಕಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಹೂವು ಹರಿಯಲು ಹೋದಾಗ ವಿದ್ಯುತ್ ತಗುಲಿ ಮೃತಪಟ್ಟಿದ್ದಾನೆ ಎನ್ನಲಾಗಿದೆ.ಇಲ್ಲಿನ ಕಿರಿಯ ಪ್ರಾಥಮಿಕ ಶಾಲೆ ಪಕ್ಕದಲ್ಲಿ ವಿದ್ಯುತ್ ಟಿ.ಸಿ ಇದ್ದು, ಈ ಟಿಸಿಯ ವಿದ್ಯುತ್ ತಂತಿ ಹರಿದು ಶಾಲೆಯ ಬೇಲಿಗೆ ತಗುಲಿದೆ. ಶಾಲೆ ಅವಧಿಯಲ್ಲಿ ಈ ಘಟನೆ ನಡೆದಿದ್ದರೆ ದೊಡ್ಡ ಅನಾಹುತ ವಾಗುತ್ತಿತ್ತು ಎನ್ನಲಾಗಿದೆ. ಅದೃಷ್ಟವಶಾತ್ ದೊಡ್ಡ ಅನಾಹುತ ತಪ್ಪಿದಂತಾಗಿದೆ ಎಂಬ ಮಾತು ಸ್ಥಳೀಯರಿಂದ ಮಾತು ಕೇಳಿಬಂದಿದೆ.

ಮೀಟರ್ ಬಡ್ಡಿ: ಇಬ್ಬರ ಗಡಿಪಾರು

ಮುಂಡಗೋಡ: ದರೋಡೆ ಹಾಗೂ ಮೀಟರ ಬಡ್ಡಿಯ ಪ್ರಕರಣದಲ್ಲಿದ್ದ ಇಬ್ಬರನ್ನು ಆರು ತಿಂಗಳ ಕಾಲ ಕೋಲಾರದ ಕೆಜಿಎಫ್ ಹಾಗೂ ಮಂಡ್ಯ ಜಿಲ್ಲೆಗೆ ಗಡಿಪಾರು ಮಾಡಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಆದೇಶ ಹೊರಡಿಸಿದ್ದಾರೆ. ಪಟ್ಟಣದ ಮಂಜು ನವಲೆ ಎಂಬಾತನನ್ನು ಕೋಲಾರದ (ಕೆಜಿಎಫ್) ಜಿಲ್ಲೆಯ ರಾಬರ್ಟಸನ್ ಪೊಲೀಸ ಠಾಣೆ ವ್ಯಾಪ್ತಿಗೆ ಮತ್ತು ಬಸಾಪುರ ಗ್ರಾಮದ ಮಧುಸಿಂಗ ರಜಪೂತನನ್ನು ಮಂಡ್ಯ ಜಿಲ್ಲೆಯ ನಗರ ಪೊಲೀಸ ಠಾಣೆ ವ್ಯಾಪ್ತಿಗೆ ಆರು ತಿಂಗಳ ಕಾಲ ಗಡಿಪಾರು ಮಾಡಲಾಗಿದೆ. ಈ ಇಬ್ಬರ ಮೇಲೆ ದರೋಡೆ ಹಾಗೂ ಮೀಟರ ಬಡ್ಡಿ ವ್ಯವಹಾರ ಸೇರಿದಂತೆ ಇತರೆ ಪ್ರಕರಣಗಳು ಇದ್ದವು. ಇವಗಳನ್ನೇ ಬಂಡವಾಳ ಮಾಡುಕೊಂಡು ತಾಲೂಕಿನ ವ್ಯಾಪ್ತಿಯಲ್ಲಿ ಸಾರ್ವಜನಿಕ ಸುರಕ್ಷತೆಗೆ ಅಪಾಯವನ್ನು ತಂದು ಸಾರ್ವಜನಿಕ ಶಾಂತಿ, ನೆಮ್ಮದಿ, ಸೌಹಾರ್ದತೆಗೆ, ಆಸ್ತಿಪಾಸ್ತಿ, ಕಾನೂನು ಸುವ್ಯವಸ್ಥೆಗೆ ದಕ್ಕೆ ಉಂಟು ಮಾಡಿ ವ್ಯತಿರಿಕ್ತ ಪರಿಣಾಮ ಬೀರಬಹುದು ಅಂತಾ ಕಂಡು ಬಂದಿದ್ದರಿಂದ ಇಲ್ಲಿನ ಪೊಲೀಸ್ ನಿರೀಕ್ಷಕರು ಈ ಇಬ್ಬರ ವಿರುದ್ಧ ಗಡಿಪಾರಿಗೆ ವಿವರವಾದ ಸೂಕ್ತ ಪ್ರಸ್ತಾವಣೆಯ ಅರ್ಜಿಯನ್ನು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳಿಗೆ ಸಲ್ಲಿಸಿದ್ದರು.ಅದರಂತೆ ಜಿಲ್ಲಾಪೊಲೀಸ ವರಿಷ್ಠಾಧಿಕಾರಿಗಳು ಅಪರಾಧವುಳ್ಳ ಇಬ್ಬರನ್ನು ಜಿಲ್ಲೆಯಿಂದ ಆರು ತಿಂಗಳಕಾಲ ಗಡಿಪಾರು ಮಾಡಿದ್ದಾರೆ.ಒಟ್ಟಿನಲ್ಲಿ ತಾಲೂಕಿನಲ್ಲಿ ಮೀಟರ ಬಡ್ಡಿ, ದರೋಡೆ, ಹಾಗೂ ಕೊಲೆ ಸೇರಿದಂತೆ ಇನ್ನಿತರ ಪ್ರಕರಣದಲ್ಲಿರವವರ ಮೇಲೆ ಪೊಲೀಸರು ಹದ್ದಿನ ಕಣ್ಣು ಇಟ್ಟಿದೆ.

ವಿದ್ಯುತ್ ವ್ಯತ್ಯಯ ಇಂದು

ಸವದತ್ತಿ: 220 ಕೆ ವಿ ವಿದ್ಯುತ್ ಸ್ವೀಕರಣ ಕೇಂದ್ರ ಬನ್ನೂರಿನಲ್ಲಿ ಮೊದಲನೆಯ ತ್ರೈಮಾಸಿಕ ತುರ್ತು ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳುತ್ತಿರುವುದರಿಂದ ಜೂ.30ರಂದು ಯರಗಟ್ಟಿ ತಾಲೂಕಿನ ಮುಗಳಿಹಾಳ ಅಕ್ಕಿಸಾಗರ ಕೊಡ್ಲಿವಾಡ , ಗೋವನಕೊಪ್ಪ ಕೆ ಎಸ್ ., ದಾಸನಾಳ ಮೆಳ್ಳಿಕೇರಿ ಇಟ್ನಾಳ , ಸತ್ತಿಗೇರಿ ಗ್ರಾಮಗಳು ಸೇರಿದಂತೆ ಇನ್ನು ಕೆಲವು ಗ್ರಾಮಗಳಿಗೆ ಬೆಳಿಗ್ಗೆ 12 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ. ಆದ್ದರಿಂದ ಸಾರ್ವಜನಿಕರು ಹಾಗೂ ಗ್ರಾಮಸ್ಥರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹು ವಿ ಸ ಕಂ ನಿ ಸವದತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಿಕ್ಕೋಡಿ ಪಟ್ಟಣದ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿರುವ ಅಶ್ವತ್ಥವೃಕ್ಷಕ್ಕೆ ಮಹಿಳೆಯರು ಪೂಜೆ ಸಲ್ಲಿಸುವ ಮೂಲಕ ಸೋಮವಾರ ವಟಸಾವಿತ್ರಿ ವೃತ ಆಚರಿಸಿ ಪತಿಯ ಆರೋಗ್ಯ, ಆಯುಷ್ಯ ಹೆಚ್ಚಲಿ ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಪ್ರತಿಕ್ಷಾ ಹಿರೇಮಠ, ದುರ್ಗಾ ಅಂಬಲೆ, ಅಮೃತಾ ಪೂಜಾರಿ, ಸೀತಾ ಉಮರಾಣಿ, ರೇಣುಕಾ ಅಂಬಲೆ, ಸೋನಾಲಿ ಕಲಾದಗಿಮಠ, ಮಂಗಲಾ ಗಾಡಗೆ, ಸಂಗೀತಾ ಅಂಬಲೆ, ಚಿತ್ರಾ ಅಂಬಲೆ, ರೋಜಾ ಪಾಟೀಲ ಇತರರು ಇದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

ತೆಲಸಂಗ: ಕೇವಲ ಸಸಿ ನೆಡುವುದಷ್ಟೇ ಅಲ್ಲದೆ, ಅವುಗಳನ್ನು ಮರಗಳಾಗಿ ಪೋಷಿಸಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂದು ಬಸವೇಶ್ವರ ಸಹಕಾರ ಸಂಘದ ಕಾರ್ಯದರ್ಶಿ ಗೋಪಾಲ ಶೆಲ್ಲೆಪ್ಪಗೋಳ ಹೇಳಿದರು. ಗ್ರಾಮದ ಬಸವೇಶ್ವರ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ಹಮ್ಮಿಕೊಂಡ, ಕೇಂದ್ರ ಸಹಕಾರ ಸಚಿವಾಲಯವು ಯಶಸ್ವಿಯಾಗಿ 5 ವರ್ಷಗಳನ್ನು ಪೂರೈಸುತ್ತಿರುವ ಸಂಭ್ರಮದ ಸಹಕಾರ ಸಪ್ತಾಹ ನಿಮಿತ್ತ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯದೊಂದಿಗೆ ಪರಿಸರ ಜಾಗೃತಿ ಅಭಿಯಾನದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಮನುಷ್ಯನ ಸ್ವಾರ್ಥದಿಂದಾಗಿ ಪರಿಸರವು ತೀವ್ರವಾಗಿ ಹಾನಿಗೊಳಗಾಗುತ್ತಿದೆ ಮತ್ತು ವಿನಾಶದ ಅಂಚಿಗೆ ತಲುಪುತ್ತಿದೆ. ಹದಗೆಡುತ್ತಿರುವ ಇಂದಿನ ಪರಿಸರವನ್ನು ಮತ್ತೆ ಯಥಾಸ್ಥಿತಿಗೆ ತರಬೇಕಾದರೆ ಮತ್ತು ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯ ನೀಡಬೇಕಾದರೆ, ಪ್ರತಿಯೊಬ್ಬ ನಾಗರಿಕನೂ ಪರಿಸರ ಕಾಳಜಿಯನ್ನು ತನ್ನ ಆದ್ಯ ಕರ್ತವ್ಯವೆಂದು ಭಾವಿಸಬೇಕು ಎಂದು ಹೇಳೀದರು. ತಾಪಂ ಮಾಜಿ ಸದಸ್ಯ ಶ್ರೀಶೈಲ ಶೆಲ್ಲೆಪ್ಪಗೋಳ, ಡಾ.ಆರ್.ಡಿ.ಪೂಜಾರಿ, ಕಬೀರ ಕೋರಬು, ಸೈಬಣ್ಣ ಶೇಲ್ಲೆಪ್ಪಗೋಳ, ಸಚೀನ ಸಾವಂತ, ಆಸಿಫ್ ಮುಜಾವರ, ಕಾಸಪ್ಪ ಹಳ್ಳದ, ಆನಂದ ಥೈಕಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದು, ಸಸಿಗಳನ್ನು ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸಿದರು.



ತೆಲಸಂಗ ಗ್ರಾಮದಲ್ಲಿ ಬಸವೇಶ್ವರ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ವತಿಯಿಂದ ಸಸಿ ನೆಡುವ ಮೂಲಕ ಸಹಕಾರಿ ಸಪ್ತಾಹ ಕಾರ್ಯಕ್ರಮ ಆಚರಿಸಲಾಯಿತು.

ಅಂಚೆ ಚೀಟಿ,ನಾಣ್ಯ ಸಂಗ್ರಹಣೆ ಜ್ಞಾನ ವೃದ್ಧಿಗೆ ಸಹಕಾರಿ:ಮಾಳಗಿ

ಬೆಳಗಾವಿ: ಇಲ್ಲಿನ ಮಹಾಂತೇಶ ನಗರ ರಹವಾಸಿಗಳ ಸಂಘ, ಭಾರತ ಸರ್ಕಾರದ ಅಂಚೆ ಇಲಾಖೆ ಹಾಗೂ ಬೆಳಗಾವಿ ಅಂಚೆಚೀಟಿ ಮತ್ತು ನಾಣ್ಯ ಸಂಗ್ರಹಣಾ ಸಂಘದ ಸಂಯುಕ್ತಾಶ್ರಯದಲ್ಲಿ ಸಂಚಯ ಹೆಸರಿನ ಅಂಚೆಚೀಟಿ ಹಾಗೂ ನಾಣ್ಯ ಸಂಗ್ರಹಣೆಯ ಪ್ರದರ್ಶನ ಕಾರ್ಯಕ್ರಮವು ಸೋಮವಾರ ಮಹಾಂತೇಶ ನಗರದ ಮಹಾಂತ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಭಾರತ ಸರ್ಕಾರ ಅಂಚೆ ಇಲಾಖೆ ಬೆಳಗಾವಿ ಅಧೀಕ್ಷಕ ಬಿ.ಪಿ. ಮಾಳಗಿ ಮಾತನಾಡಿ ಅವರು, ಅಂಚೆ ಚೀಟಿ ಹಾಗೂ ನಾಣ್ಯ ಸಂಗ್ರಹಣೆಯುಜ್ಞಾನವೃದ್ಧಿಗೆಸಹಕಾರಿಯಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ನಡೆದ ಮಹತ್ವದ ಘಟನೆಗಳಿಗೆ ಇವು ಕೈಗನ್ನಡಿಯಂತಿದ್ದು, ಉತ್ತಮ ಹವ್ಯಾಸಗಳು ವ್ಯಕ್ತಿಯ ಜೀವನಶೈಲಿಯನ್ನು ಉತ್ತಮಗೊಳಿಸುತ್ತವೆ. ಈ ಸಂಗ್ರಹಣಾ ಕೌಶಲ್ಯವು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಂಚೆಚೀಟಿ ಹಾಗೂ ನಾಣ್ಯ ಸಂಗ್ರಹಣಾ ಸಂಘದ ಅಧ್ಯಕ್ಷ ಪ್ರಸಾದ ಹಿರೇಮಠ ಅವರು ಮಾತನಾಡಿ, ಈ ಹವ್ಯಾಸವು ಮೊಬೈಲ್ ಬಳಕೆಯಿಂದ ದೂರವಿರಿಸಿ, ಸೃಜನಾತ್ಮಕ ಶಕ್ತಿಯನ್ನು ವೃದ್ಧಿಸುತ್ತದೆ. ಸಂಘವು ಕಳೆದ 15 ವರ್ಷಗಳಿಂದ ಸಂಗ್ರಹಣಾ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿದೆ ಎಂದು ಅಭಿಪ್ರಾಯ ಪಟ್ಟರು.



» ಸುಮಾರು 1,500 ವಿದ್ಯಾರ್ಥಿಗಳು ಪ್ರದರ್ಶನವನ್ನು ವೀಕ್ಷಿಸಿದರು.

ಮಹಾಂತೇಶ ನಗರ ರಹವಾಸಿಗಳ ಸಂಘದ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ನಿರ್ಮಲಾ ಬಟ್ಟಲ ಅವರು ಮಾತನಾಡಿ, ಅಂಚೆಚೀಟಿ ಮತ್ತು ನಾಣ್ಯ ಸಂಗ್ರಹಣೆಯು ಇತಿಹಾಸವನ್ನು ಮರುಸೃಷ್ಟಿಸುವ ಸಾಧನಗಳಾಗಿದ್ದು, ದೇಶ-ವಿದೇಶಗಳ ಇತಿಹಾಸವನ್ನು ಅರಿಯಲು ಸಹಕಾರಿಯಾಗುತ್ತದೆ. ಭಾವಿ ಶಿಕ್ಷಕರು ಈ ಕೌಶಲ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಚೆ ಇಲಾಖೆಯ ಅಧಿಕಾರಿಗಳು, ಮಹಾಂತೇಶ ನಗರ ರಹವಾಸಿಗಳ ಸಂಘ ಹಾಗೂ ಅಂಚೆಚೀಟಿ-ನಾಣ್ಯ ಸಂಗ್ರಹಣಾ ಸಂಘದ ಪದಾಧಿಕಾರಿಗಳು, ವಿವಿಧ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಪ್ರಶಿಕ್ಷಣಾರ್ಥಿ ಪ್ರಿಯಾಂಕಾ ಚೌಗಲಾ ಕಾರ್ಯಕ್ರಮ ನಿರೂಪಿಸಿದರು. ಡಾ. ಎಸ್.ವಿ. ವಾಲಿಶೆಟ್ಟಿ ಸ್ವಾಗತಿಸಿ ಕಾರ್ಯಕ್ರಮದ ನಿರೂಪಣೆ ನಡೆಸಿದರು. ಶ್ರೀಕಾಂತ ಪಾಟೀಲ ವಂದಿಸಿದರು.

> ಮರೆಮಾಚಿರುವ ಅನೇಕ ಐತಿಹಾಸಿಕ ಸತ್ಯಾಂಶಗಳನ್ನು ಇಂತಹ ಪ್ರದರ್ಶನಗಳ ಮೂಲಕ ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಈ ಅವಕಾಶ ಸದುಪಯೋಗ ಪಡೆದುಕೊಳ್ಳಬೇಕು.
> ■ **ಲಕ್ಷ್ಮಿಕಾಂತ ಗುರುವ**, ಮಹಾಂತೇಶ ನಗರ ರಹವಾಸಿಗಳ ಸಂಘದ ಅಧ್ಯಕ್ಷ

ರೋಟರಿ,ಇನ್ನರ್ ವ್ಹೀಲ್ ಕಾರ್ಯ ಶ್ಲಾಘನೀಯ

ಗೋಕಾಕ: ಸಮಾಜಮುಖಿ ಕಾರ್ಯಗಳನ್ನು ರೋಟರಿ ಹಾಗೂ ಇನ್ನರ್ ವ್ಹೀಲ್ ಸಂಸ್ಥೆಗಳು ಜಗತ್ತಿನಾದ್ಯಂತ ಮಾದರಿಯಾಗಿ ಮಾಡುತ್ತ ಜನರ ಮನದಲ್ಲಿ ಉಳಿದಿದ್ದಾವೆ ಎಂದು ರೋಟರಿ ಸಂಸ್ಥೆಯ ಜ್ಯೂನಲ್ ಕೋಆರ್ಡಿನೇಟರ್ ಸತೀಶ ಧಮನಕರ ಹೇಳಿದರು.

ನಗರದ ರೋಟರಿ ರಕ್ತ ಭಂಡಾರ ಸಭಾ ಭವನದಲ್ಲಿ ಇಲ್ಲಿಯ ರೋಟರಿ ಹಾಗೂ ಇನ್ನರ್ ವ್ಹೀಲ್ ಸಂಸ್ಥೆಯ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಅಧಿಕಾರ ಹಸ್ತಾಂತರ ಅಧಿಕಾರಿಯಾಗಿ ಪಾಲ್ಗೊಂಡು ಮಾತನಾಡಿದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಈ ಸಂಸ್ಥೆಗಳು ವಿಶೇಷ ಕೊಡುಗೆ ನೀಡುತ್ತಿವೆ. ಇಲ್ಲಿಯ ರೋಟರಿ ಸಂಸ್ಥೆ ಬ್ಲಡ್ ಬ್ಯಾಂಕಸ್ಥಾಪಿಸಿ ಜನರ ಜೀವ ಉಳಿಸುವಂತಹ ಪವಿತ್ರ ಕಾರ್ಯ ಮಾಡುತ್ತಿದೆ. ಪ್ರಕೃತಿ ವಿಕೋಪದಂತಹ ಸಮಯದಲ್ಲೂ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತ ಜನರ ಪ್ರೀತಿಗಳಿಸಿದೆ. ನೂತನ ಪದಾಧಿಕಾರಿಗಳ ನೇತ್ರತ್ವದಲ್ಲಿ ಈ ಸಂಸ್ಥೆಗಳಿಂದ ಇನ್ನು ಹೆಚ್ಚಿನ ಕೊಡುಗೆ ಸಮಾಜಕ್ಕೆ ದೊರೆಯಲಿ ಎಂದು ಆಶಿಸಿದರು.

ಸಮಾರಂಭದ ಸಾನ್ನಿಧ್ಯವನ್ನು ಮುನವಳ್ಳಿಯ ಸೋಮಶೇಖರ ಮಠದ ಮುರುಘರಾಜೇಂದ್ರ ಸ್ವಾಮೀಜಿ ವಹಿಸಿದ್ದರು.ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ರೋಟರಿಸಹಾಯಕ ಪ್ರಾಂತಪಾಲ ರಾಜೇಂದ್ರ ಪಾಟೀಲ, ಬೆಳಗಾವಿ ಇನ್ನರ್ ವ್ಹೀಲ್ ಸಂಸ್ಥೆಯ ಸೋನಾಲ ಧಾಮನಕರ ಹಾಗೂ ನೂತನ ರೋಟರಿ ಅಧ್ಯಕ್ಷ ಪ್ರಕಾಶ ವರದಾಯಿ, ಕಾರ್ಯದರ್ಶಿ ಪ್ರಸಾದಸೊಲಾಪೂರಮಠ, ಖಜಾಂಚಿ ಚಂದ್ರಶೇಖರ ಕಡೆವಾಡಿ, ಇನ್ನರ್ ವ್ಹೀಲ್ ಸಂಸ್ಥೆಯ ನೂತನ ಅಧ್ಯಕ್ಷೆ ಅನಸೂಯಾ ಧುಳಾಯಿ, ಕಾರ್ಯದರ್ಶಿ ವಿದ್ಯಾ ಮಗದುಮ, ಖಜಾಂಚಿ ರಾಜೇಶ್ವರಿ ಕಲ್ಲೋಳಿ, ನಿಕಟಪೂರ್ವ ಪದಾಧಿಕಾರಿಗಳಾದ ಗಿರೀಶ ಝುಂವರ, ಬಸವರಾಜ ಹುಳ್ಳೇರ, ಅನುಪಾ ಕೌಶಿಕ, ಜಯಾ ಕಮತ ಇದ್ದರು.



11ಸಾವಿರಕ್ಕೂ ಹೆಚ್ಚು ನಕಲಿ ಮತದಾರರು: ಮಾಮನಿ

ಯರಗಟ್ಟಿ : ವಿಧಾನಸಭಾ ಮತ ಕ್ಷೇತ್ರದಲ್ಲಿ ಸುಮಾರು 11ಸಾವಿರಕ್ಕೂ ಹೆಚ್ಚು ನಕಲಿ ಮತದಾರರು ಇದ್ದಾರೆ ಎನ್ನುವ ಸುಳಿವು ಸಿಕ್ಕಿದೆ ಎಂದು ಸವದತ್ತಿ ಬಿಜೆಪಿ ಮಂಡಲ ಅಧ್ಯಕ್ಷ, ಬಿಡಿಸಿಸಿ ಬ್ಯಾಂಕ ನಿರ್ದೇಶಕ ವಿರೂಪಾಕ್ಷ ಮಾಮನಿ ಹೇಳಿದರು.

ಸಮೀಪದ ಬುದಿಗೊಪ್ಪ, ಯರಝರ್ವಿ ಗ್ರಾಮದಲ್ಲಿ ಇತ್ತೀಚಗೆ ಹಮ್ಮಿಕೊಂಡಿದ್ದ ಮತದಾರರ ಪಟ್ಟಿ ಪರಿಷ್ಕರಣೆಯ ವಿಶೇಷ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ಈಗಾಗಲೆ ಪ್ರತಿ ಬೂತ್ ಗೂ ಏಜೆಂಟರನ್ನು ನೇಮಕ ಮಾಡಿದ್ದು ಬಿಎಲ್‌ಎ- ಎ2 ಅವರು ಸರಕಾರದಿಂದ ನೇಮಕವಾಗಿರುವ ಬಿಎಲ್‌ಓ ಅಧಿಕಾರಿಗಳ ಜೊತೆಗೂಡಿ ನಿರ್ಭಯದಿಂದ ಕೆಲಸ ಮಾಡಬೇಕು ಬಿಎಲ್‌ಓ ಗಳು ಯಾವುದೇ ಒತ್ತಡಕ್ಕೂ ಮಣಿಯಬಾರದು ಎಂದರು. ಕಾಂಗ್ರೆಸ ಪಕ್ಷ ಆಡಳಿತದಲ್ಲಿ ಇರುವದರಿಂದ ಅಧಿಕಾರಿಗಳು ಸಾಮಾನ್ಯವಾಗಿ ಆಪಕ್ಷದ ಪರವಾಗಿ ಕೆಲಸ ಮಾಡುವ ಸಂಶಯವಿದೆ. ಪಶ್ಚಿಮ ಬಂಗಾಳದಲ್ಲಿ ಬಾಂಗ್ಲಾ ದೇಶದಿಂದ ಅಕ್ರಮವಾಗಿ ನುಸುಳಿ ಬಂದಿದ್ದ ವಲಸೆಗಾರರನ್ನು ಯಾವುದೇ ಮುಲಾಜಿಲ್ಲದೇ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಯಿತು. ನಮ್ಮ ವಿಧಾನಸಭಾ ಕ್ಷೇತ್ರದಲ್ಲೂ ಮೃತರು, ಸ್ಥಳಾಂತರಗೊಂಡವರ ಮತ್ತು ಎರಡು ಕಡೆಗಳಲ್ಲಿ ಹೆಸರು ಇರುವಂತವರನ್ನು ಮತದಾರರ ಪಟ್ಟಿಯಿಂದ ಕೈ ಬಿಡುವಂತಹ ಕೆಲಸವಾಗಬೇಕಾಗಿದೆ ಎಂದು ಹೇಳಿದರು.

ಸವದತ್ತಿ ತಾಲೂಕು ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಮಹಾದೇವ ಮುರಗೋಡ ಮಾತನಾಡಿದರು.

ತಾಲೂಕ ಬಿಜೆಪಿ ಮುಖಂಡ ಬಸಯ್ಯ ಹಿರೇಮಠ, ಜಗದೀಶ ಕೌಜಗೇರಿ, ಬಿಜೆಪಿ ಮಂಡಲ ನಿಕಟಪೂರ್ವ ಅಧ್ಯಕ್ಷ ಈರಣ್ಣ ಚಂದರಗಿ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಆನಂದ ಬಾಗೋಡಿ, ತಾಲೂಕ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೃಷ್ಣ ತೋರಗಲ್ಲ, ಯರಗಟ್ಟಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚೇತನ ಜಕಾತಿ, ಮಾಧ್ಯಮ ಪ್ರಮುಖ ವೀರಣ್ಣ ವೀರಶೆಟ್ಟಿ, ಮಲ್ಲೇಶ ಕಲಕುಟ್ರಿ, ಬಸರತ ಬಮ್ಮನ್ನವರ, ಕಲ್ಮೇಶ ಸೊಪ್ಪಡ್ಲ, ಬಸವರಾಜ ಇಂಚಲ, ಪಿಕೆಪಿಎಸ್ ಮಾಜಿ ಅಧ್ಯಕ್ಷ ನೀಲಕಂಠ ಕಾನೋಜಿ, ಚಾಯಪ್ಪ ಸಿಂಗನವರ, ಮಲ್ಲಿಕಾರ್ಜುನ ರುದ್ರಪ್ಪನವರ, ಫಕ್ಕೀರಪ್ಪ ದಾಸಪ್ಪನವರ, ಗೀತಾ ಕಟ್ಟಿ ಹಾಗೂ ಮುಖಂಡರು ಕಾರ್ಯಕರ್ತರು ಇದ್ದರು.



ಚಿಕ್ಕೋಡಿಯಲ್ಲಿ ಕಾರಹುಣ್ಣಿಮೆಯ ಕರಿ ಹರಿಯುವ ಸಂಭ್ರಮ

ಚಿಕ್ಕೋಡಿ: ಪಟ್ಟಣದ ಡಂಬಳ ಪ್ಲಾಟ್ ಬಡಾವಣೆಯಲ್ಲಿ ಕಾರ ಹುಣ್ಣಿಮೆ ನಿಮಿತ್ತ ಕರಿ ಹರಿಯುವ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಹಾಲಟ್ಟಿ ಬಡಾವಣೆಯಿಂದ ಹೊರಟ ಕರಿ ಹರಿಯುವ ಎತ್ತುಗಳನ್ನು ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಮೆರವಣಿಗೆ ಮೂಲಕ ಡಂಬಳ ಪ್ಲಾಟ್ ತಲುಪಿದವು. ಎತ್ತುಗಳ ಮೈಗೆ ಬಣ್ಣ ಬಳಿದು ಸಿಂಗರಿಸಲಾಗಿತ್ತು.

ಡಂಬಳ ಪ್ಲಾಟ್ ಬಡಾವಣೆಯಲ್ಲಿ ವಿರೂಪಾಕ್ಷಿ ಕಾಮಗೌಡ ಅವರ ಮನೆಯ ಎದುರಿನಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಎತ್ತುಗಳನ್ನು ಮೆರವಣಿಗೆ ಮೂಲಕ ತಂದ ಯುವಕರನ್ನು ಕಾಮಗೌಡ ಮನೆತನದವರು ಸತ್ಕರಿಸಿ ಬೀಳ್ಕೊಟ್ಟರು. ನಂತರದಲ್ಲಿ ಪಟ್ಟಣದ ಅಗಸಿಯಲ್ಲಿ ಕಾರ ಹುಣ್ಣಿಮೆಯ ಕರಿ ಹರಿಯುವ ಸಂಭ್ರಮ ಮನೆ ಮಾಡಿತು.

ಈ ಸಂದರ್ಭದಲ್ಲಿ ಉದ್ಯಮಿ ವಿಶ್ವನಾಥ ಕಾಮಗೌಡ, ಮಹಾದೇವ ಬಾಗೇವಾಡಿ, ವಿಶಾಲ ಪಾಟೀಲ, ಉದಯ ಕಾಳಿಂಗೆ, ವಿಶಾಲ ಜಮಗೌಡರ, ಬಸು ಕಟ್ಟಿ, ಸಂದೀಪ ಮಾನೆ, ಪ್ರತಾಪ ಕಾಂಬಳೆ, ಕಲ್ಲು ಇರಗಾರ, ಆದಿತ್ಯ ಕಾಮಗೌಡ, ಅಥರ್ವ ಕಾಮಗೌಡ, ಓಂಕಾರ ಮೊರೆ. ಪ್ರವೀಣ ಕುರಬೇಟ್ಟ. ಶಿವರಾಜ ಮಗದುಮ್ಮ. ಪೂಜಾರಿ, ಕಾಂಬಳೆ, ಜಮಗೌಡ ಕುಟುಂಬ ವರ್ಗದ ಸದಸ್ಯರು ಇದ್ದರು.



ಜು.1ರಂದು ಪ್ರತಿಕಾ ದಿನಾಚರಣೆ

ಯಮಕನಮರಡಿ: ಸಮೀಪದ ನಾಗನೂರ ಕೆ.ಎಂ.ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಜುಲೈ1 ರಂದು ಪ್ರತಿಕಾ ದಿನಾಚರಣೆ, ಪರಿಸರ ದಿನಾಚರಣೆ ಹಾಗೂ ಶಾಲಾ ಮಕ್ಕಳಿಗೆ ಬಹುಮಾನ ವಿತರಣೆ ಕಾರ್ಯಕ್ರಮದ ಅಂಗವಾಗಿ ಯಮಕನಮರಡಿ ಪತ್ರಕರ್ತರ ಬಳಗದಿಂದ ಪೂರ್ವಭಾವಿ ಸಭೆ ಹಿರಿಯ ಪತ್ರಕರ್ತರ ಗೋಪಾಲ ಚಪಣಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜುಲೈ1ರಂದು ಮಧ್ಯಾಹ್ನ 3ಕ್ಕೆ ಯಮಕನಮರಡಿ ಪರ್ತಕರ್ತರ ಬಳಗ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ಪತ್ರಿಕಾ ದಿನಾಚರಣೆ ಮತ್ತು ಪರಿಸರ ದಿನಾಚರಣೆ ಹಾಗೂ ಶಾಲಾ ಮಕ್ಕಳಿಗೆ ಬಹುಮಾನ ವಿತರಣೆ, ಶಾಲಾ ಆವರಣದಲ್ಲಿ ಸಸಿ ನೆಟ್ಟುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.

ಸಾನ್ನಿಧ್ಯವನ್ನು ಹತ್ತರಗಿ ಸುಕ್ಷೇತ್ರದ ಗುರುಸಿದ್ದೇಶ್ವರ ಸ್ವಾಮೀಜಿ, ಹತ್ತರಗಿ ಹರಿ ಮಂದಿರದ ಆನಂದ ಗೋಸಾವಿ ಮಹಾರಾಜರು ವಹಿಸುವರು. ಹಿರಿಯ ಪರ್ತಕರ್ತ ಗೋಪಾಲ ಚಿಪಣಿ ಅಧ್ಯಕ್ಷತೆ ವಹಿಸುವರು. ಅತಿಥಿಯಾಗಿ ಸಚಿವ ಸತೀಶ ಜಾರಕಿಹೊಳಿ, ಕಾಂಗ್ರೆಸ್ ಯುವ ಮುಖಂಡ ಕಿರಣ ರಜಪೂತ, ಹತ್ತರಗಿ ಯುವ ಮುಖಂಡ ರವಿ ಜಿಂಡ್ರಾಳಿ, ಹತ್ತರಗಿಯ ಶಿಕ್ಷಣ ಪ್ರೇಮಿ ಮಹಾದೇವ ಪಟೋಳಿ, ದಡ್ಡಿ ಯುವ ಮುಖಂಡ ದಯಾನಂದ ಪಾಟೀಲ, ಹುಕ್ಕೇರಿ ಸಾಮಾಜಿಕ ಅರಣ್ಯ ಅಧಿಕಾರಿ ಎಚ್.ಎಸ್.ಇಂದಳಗಿ, ಯಮಕನಮರಡಿ ಕಂದಾಯ ನಿರೀಕ್ಷಕ ಸಿ.ಕೆ.ಕಲಕಾಂಬಕರ, ಸರ್ಕಾರಿ ಪ್ರೌಢಶಾಲೆ ಎಸ್ಡಿಎಂಸಿ ಅಧ್ಯಕ್ಷ ಬಸವರಾಜ ದೇಸಾಯಿ, ಉಪಾಧ್ಯಕ್ಷ ವಿರುಪಾಕ್ಷಿ ಚೌಗಲಾ, ನಾಗನೂರ ಕೆ.ಡಿ. ಗ್ರಾಪಂ ಪಿಡಿಒ ಶಿವಾನಂದ ವಾಸನವರ, ನಾಗನೂರ ಕೆ.ಎಂ.ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ತನುಜಾ ಗುಡಶಿ, ಈರಣ್ಣಾ ದೇಸಾಯಿ, ಅಶೋಕ ತಳವಾರ ಮುಂತಾದವರು ಆಗಮಿಸುವರು ಎಂದು ತಿಳಿಸಿದರು.



ವಿದ್ಯುತ್ ಖಾಸಗೀಕರಣ ವಿರೋಧಿಸಿ ಅನ್ನದಾತರಿಂದ ಪ್ರತಿಭಟನೆ

ಚನ್ನಮ್ಮನ ಕಿತ್ತೂರು: ಸರಕಾರವು ವಿದ್ಯುತ್ ಖಾಸಗೀಕರಣ ಮಾಡುವದನ್ನು ವಿರೋಧಿಸಿ ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿಸೋಮವಾರ ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರೆ ಪಕ್ಕದ ಚನ್ನಮ್ಮಾಜಿ ವರ್ತುಳದಲ್ಲಿ ರೈತರೆಲ್ಲರೂ ಸೇರಿ ಸರಕಾರದ ವಿರುದ್ಧ ಘೋಷಣೆಗಳನ್ನುಕೂಗುತ್ತ ಪಾದಯಾತ್ರೆಯ ಮೂಲಕ ತಹಶೀಲ್ದಾರ ಕಚೇರಿ ತಲುಪಿ ತಹಶೀಲ್ದಾರ ಕಲಗೌಡ ಪಾಟೀಲ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯಾಧ್ಯಕ್ಷ ಎಂ ಎಫ್ ಜಕಾತಿ ಮಾತನಾಡಿ ಸರಕಾರವು ವಿದ್ಯುತ್ ಖಾಸಗೀಕರಣ ಮಾಡಲು ಹೊರಟಿರುವದನ್ನು ನಾವು ವಿರೋಧಿಸುತ್ತೇವೆ ಈ ಸಾಹಸಕ್ಕೆ ಕೈ ಹಾಕಬಾರದು ಒಂದು ವೇಳೆ ಸರಕಾರದ ಈ ಖಾಸಗೀಕರಣದ ನೀತಿಯ ಭಾಗವಾಗಿ ಟೆಂಡರ್ ಪ್ರಕ್ರಿಯೇಯಲ್ಲಿ ಯಾರಾದರೂ ಭಾಗವಹಿಸಿದರೆ ಅದರ ಪರಿಣಾಮ ಅವರೇ ಅನುಭವಿಸಬೇಕಾಗುತ್ತದೆ ಆದ್ದರಿಂದ ರೈತರನ್ನು ರೊಚ್ಚಿಗೆಬ್ಬುಸವ ಮುನ್ನ ಸರಕಾರವು ಎಚ್ಚೆತ್ತು ಖಾಸಗೀಕರಣ ಮಾಡುವದನ್ನು ಕೈಬಿಡಬೇಕು ರೈತರನ್ನು ರೊಚ್ಚಿಗೆಬ್ಬಿಸಿದರೆ ಜೇನು ಹುಟ್ಟಿಗೆ ಕಲ್ಲು ಒಗೆದಂತೆ ಎಂದು ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿದರು.



> ನಮ್ಮ ಸರ್ಕಾರವು ಸದಾ ರೈತರ ಹಿತವನ್ನು ಬಯಸುತ್ತದೆ ಎಂದು ಹೇಳಿ ಅಧಿಕಾರ ಚುಕ್ಕಾಣಿ ಹಿಡಿದ ಸರಕಾರ ಕೊಟ್ಟ ಮಾತಿನಂತೆ ನಡೆಯಬೇಕು. ವಿದ್ಯುತ್ ಖಾಸಗೀಕರಣ ಮಾಡುವದರಿಂದ ರೈತರು ಸೇರಿದಂತೆ ಎಲ್ಲ ಜನರಿಗೂ ತೊಂದರೆಯಾಗುತ್ತದೆ.
> ■ **ಬಿಷ್ಟಪ್ಪ ಶಿಂದೆ**, ರೈತ ಮುಖಂಡ

ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ ಮಾತನಾಡಿ ಸರಕಾರ ವಿದ್ಯುತ್ ಖಾಸಗೀಕರಣ ಮಾಡುವದನ್ನು ಕೈ ಬಿಡಬೇಕು ವಿದ್ಯುತ್ ಖಾಸಗೀಕರಣವಾದರೆ ಈಗಿರುವ ಸೌಲಭ್ಯಗಳು ಇಲ್ಲದಂತಾಗಿ ರೈತರು, ನೇಕಾರರು ಸೇರಿದಂತೆ ಎಲ್ಲ ವೃತ್ತಿಯವರಿಗೂ ಅತೀ ಹೊರೆಯಾಗುತ್ತದೆ ಆದ್ದರಿಂದ ರಾಜ್ಯಾದ್ಯಂತ ಎಲ್ಲರೂ ಸೇರಿ ಉಗ್ರವಾದ ಹೋರಾಟಮಾಡಬೇಕಾಗುತ್ತದೆ ಎಂದು ಹೇಳಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಪ್ರವೀಣ ಸರದಾರ ಮಾತನಾಡಿ ರೈತರು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗುತ್ತಿಲ್ಲವೆಂದು ಕೃಷಿ ಕ್ಷೇತ್ರಕ್ಕೆ ಇಂದಿನ ಯುವ ಪಿಳಿಗೆ ಮುಂದೆ ಬರುತ್ತಿಲ್ಲ ಹಿಂತಹ ಸಂದರ್ಭದಲ್ಲಿ ವಿದ್ಯುತ್‌ನ್ನು ಖಾಸಗೀಕರಣಗೊಳಿಸದರೆ ಇದ್ದ ರೈತರು ಕೃಷಿಯನ್ನು ಬಿಡಬೇಕಾಗುತ್ತದೆ ಇದರಿಂದ ಆಹಾರದ ಕೊರತೆಯುಂಟಾಗಬಹುದು ಮತ್ತು ಇಲ್ಲಿರುವ ನೌಕರ ವರ್ಗವು ಬೀದಿಪಾಲಾಗುವದು ಆದ್ದರಿಂದ ಸರಕಾರವು ಈ ಖಾಸಗೀರಣ ನೀತಿಯನ್ನು ಕೈ ಬಿಡಬೇಕೆಂದರು.

ಮುಖಂಡರಾದ ವಿಯಕುಮಾರ ಶಿಂದೆ, ಕಲ್ಲಪ್ಪ ಕುಗಟಿ ಮಾತನಾಡಿದರು.ಮಡಿವಾಳಪ್ಪ ವರಗನ್ನವರ, ಅಬ್ದುಲ್‌ರಜಾಕ್ ಗಡಕರಿ, ನಾಗಪ್ಪ ಅಸಲನ್ನವರ, ಫಕ್ಕೀರಪ್ಪ ಜಾಂಗಟಿ, ಇರಫಾನ್ ದಾಸ್ತಿಕೊಪ್ಪ, ಗಿಡ್ಡಪ್ಪ ಬುಡರಕಟ್ಟಿ, ರಾಜು ದಳವಾಯಿ, ರಾಜು ಜಾಂಗಟಿ, ರಹಮತ್ತುಲ್ಲಾ ಹೊಂಗಲ, ಮಹಮ್ಮದ ಗಡಕರಿ, ಬುಡ್ಡೇಸಾಬ ಹವಾಲ್ದಾರ, ಸತೀಶ ಲಂಗೋಟಿ, ಶಂಕರ ಹಳಮನಿ, ರಾಚಯ್ಯ ತೊರಗಲ್ಮಠ, ವಿಶ್ವನಾಥ ಹಾಲ್ಮಠ, ಈರಣ್ಣ ವರಗನ್ನವರ ಸೇರಿದಂತೆ ನೂರಾರು ರೈತರು ಉಪಸ್ಥಿತರಿದ್ದರು.

ಜನ್ಮದಿನ: 100 ಸಸಿ ನೆಟ್ಟ ಶಾಸಕ ತಮ್ಮಣ್ಣವರ

ಮುಗಳಖೋಡ: ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಅವರ ಪುತ್ರನಾದ ಶಿವಕುಮಾರನ ಮೊದಲ ವರ್ಷದ ಜನ್ಮದಿನದ ಅಂಗವಾಗಿ ಪರಿಸರ ಸಂರಕ್ಷಣೆಯತ್ತ ಒಂದು ಹೆಜ್ಜೆ ಇಟ್ಟು ಸೋಮವಾರ ದಿನಾಂಕ 29 ರಂದು ಮುಗಳಖೋಡ ಪಟ್ಟಣದ ಜಿ.ಎಲ್.ಬಿ.ಸಿ, ನಿರೀಕ್ಷಣಾ ಮಂದಿರ ಹತ್ತಿರದ ಗಾಯರಾಣ ಜಾಗದಲ್ಲಿ 100 ಸಸಿಗಳನ್ನು ಹಚ್ಚಿದ ಶಾಸಕರು ಪರಿಸರ ಪ್ರೇಮಿ ಎನಿಸಿಕೊಂಡಿದ್ದಾರೆ.

ಅರಭಾವಿ ಫೌಂಡೇಶನ್ ನೇತೃತ್ವದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಾಕಿಕೊಂಡು ಕಾಂಗ್ರೆಸ್ ಮುಖಂಡರು ಹಾಗೂ ಪಟ್ಟಣದ ಜನರೊಂದಿಗೆ ಶಾಸಕ ಮಹೇಂದ್ರ ತಮ್ಮಣ್ಣವರ ಆಗಮಿಸಿ 100 ಸಸಿಗಳನ್ನು ನೆಟ್ಟಿದ್ದಾರೆ.

ಈ ಸಂದರ್ಭದಲ್ಲಿ ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗದ ರಾಜ್ಯ ಉಪಾಧ್ಯಕ್ಷ ಡಾ.ಸಿ.ಬಿ. ಕುಲಿಗೋಡ, ಕಾಂಗ್ರೆಸ್ ಪಕ್ಷದ ಮುಗಳಖೋಡ ಪಟ್ಟಣದ ಉಸ್ತುವಾರಿ ಶಂಭುಗೌಡ ಪಾಟೀಲ್, ಪ್ರದೀಪ್ ಹಾಲ್ಲುಗ್ಗೆ, ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಶೆಟ್ಟಿ, ಸದಸ್ಯರಾದ ಪರಪ್ಪಗೌಡ ಖೇತಗೌಡರ, ಮಹಾವೀರ ಕುರಾಡೆ, ರಾವಸಾಬ ಗೌಲತ್ತಿನವರ, ಹನುಮಾಸಾಬ ನಾಯಕ್, ಶ್ರೀಕಾಂತ್ ಖೇತಗೌಡರ, ಮುಪ್ಪಯ್ಯಾ ಹಿರೇಮಠ, ಕರೆಪ್ಪ ಮಂಟೂರ್, ಸುರೇಶ್ ಹೊಸಪೇಟಿ, ರಾಜು ನಾಯಿಕ, ಸಂತೋಷ ಅರಭಾಂವಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಪಟ್ಟಣದ ಹಿರಿಯರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ ಮತದಾರರ ಪಟ್ಟಿ ಪರಿಷ್ಕರಣೆ

•ಕಮತಗಿ: ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ 18 ಮತಗಟ್ಟೆಗಳಲ್ಲಿ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಜೂ.30ರಿಂದ ಜು.29ರ ವರೆಗೆ ಜರುಗಲಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು ಪ್ರತಿ ಮನೆ ಮನೆಗೆ ಭೇಟಿ ಮಾಡಲಿದ್ದಾರೆ. ಅಧಿಕಾರಿಗಳು ಮನೆಗೆ ಬಂದಾಗ ನಮೂನೆಯನ್ನು ನೀಡುವರು, ಸದರಿ ನಮೂನೆಗಳನ್ನು ಸರಿಯಾಗಿ ಭರ್ತಿ ಮಾಡಿ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಪರತ್ ನೀಡುವುದು ಹಾಗೂ ಎಲ್ಲ ಮತದಾರರು ಮತಗಟ್ಟೆ ಅಧಿಕಾರಿಗಳಿಗೆ ಅಗತ್ಯ ದಾಖಲಾತಿ ನೀಡಿ ಸಹಕರಿಸಲು ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ, ನೋಡಲ್ ಎಫ್.ಎನ್ ಹುಲ್ಲಿಕೇರಿ ತಿಳಿಸಿದ್ದಾರೆ.

ಮತದಾರರ ಪರಿಷ್ಕರಣೆ ಇಂದಿನಿಂದ: ಕುಲಕರ್ಣಿ



•ಬಾದಾಮಿ: ಮತದಾರರ ಪಟ್ಟಿ ನಿಖರ, ಸಮಗ್ರ ಹಾಗೂ ಪಾರದರ್ಶಕವಾಗಿಡುವ ಉದ್ದೇಶದಿಂದ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಬಾಗಲಕೋಟೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಆದ ಬಾದಾಮಿ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ಅರುಣಕುಮಾರ ಕುಲಕರ್ಣಿ ತಿಳಿಸಿದರು. ನಗರದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ಕಾರ್ಯಕ್ರಮದ ಮೂಲಕ ಅರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದು, ಮರಣ ಹೊಂದಿರುವವರು, ಸ್ಥಳಾಂತರಗೊಂಡಿರುವರು, ನಕಲು ಹೆಸರುಗಳು, ಮತ್ತು ಇತರ ಅನರ್ಹ ಮತದಾರರನ್ನು ಪರಿಶೀಲಿಸಿ ಸೂಕ್ತ ಕ್ರಮಕ್ಕೆ ಗೊಳಪಡಿಸುವುದು ಉದ್ದೇಶವಾಗಿದೆ ಎಂದರು. ಅ.1ರಂದು 18 ವರ್ಷ ಪೂರ್ಣಗೊಳಲಿರುವ ಮತದಾರರು ಸಹ ತಮ್ಮ ಹೆಸರು ಸೇರಿಸಲು ನಮೂನೆ-6ರಲ್ಲಿ ಮಾಹಿತಿ ಭರ್ತಿ ಮಾಡಿ ಬಿಎಲ್‌ಒ ಹತ್ತಿರ ಸಲ್ಲಿಸಬಹುದು. ಮತಗಟ್ಟೆ ಅಧಿಕಾರಿಗಳು ಜೂ.30ರಿಂದ ಜು.29ರವರೆಗೆ ಪ್ರತಿ ಮನೆ ಮನೆಗೆ 3 ಬಾರಿ ಭೇಟಿ ನೀಡಿ ದ್ವಿಪ್ರತಿ ಗಣತಿ ನಮೂನೆ ನೀಡಲಾಗುತ್ತಿದೆ. ಇದನ್ನು ಭರ್ತಿ ಮಾಡಿ ಒಂದು ಪ್ರತಿ ಸಹಿ ಮಾಡಿ ಬಿಎಲ್‌ಒ ಅವರಿಗೆ ನೀಡುವುದು ಎಂದು ತಿಳಿಸಿದರು. ಆ.5ರಂದು ಮತದಾರರ ಅಂತಿಮ ಕರಡು ಪಟ್ಟಿ ಪ್ರಕಟಿಸಲಾಗುತ್ತಿದೆ. ಇದಕ್ಕೆ ಒಂದು ತಿಂಗಳ ಒಳಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ. ಅ.7ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ನಗರ ಪ್ರದೇಶದ ಮತದಾರರು ಪುರಸಭೆ, ನಗರಸಭೆ, ಪಟ್ಟಣ ಪಂಚಾಯತಿ ಮತ್ತು ತಹಶೀಲ್ದಾರ್ ಕಚೇರಿಯ ಸಹಾಯವಾಣಿ ಕೇಂದ್ರಕ್ಕೆ ಸಂಪರ್ಕಿಸಬಹುದು ಎಂದರು. ತಹಶೀಲ್ದಾರ್ ಎಸ್.ಬಿ.ಬೊಮ್ಮನ್ನವರ, ಚುನಾವಣಾ ವಿಭಾಗದ ಶಿರಸ್ತೆದಾರ ಗಿರೀಶ ಉಪಸ್ಥಿತರಿದ್ದರು.

ಇಂದಿನಿಂದ ಮನೆ ಮನೆಗೆ ಭೇಟಿ: ಡಿಸಿ




•ಬಾಗಲಕೋಟೆ: ಭಾರತ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗುತ್ತಿದ್ದು ಜೂ.30ರಿಂದ ಜು.29ರ ವರೆಗೆ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆಂದು ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ. ಅ.1, 2026ನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಜರುಗಿಸಲಾಗುತ್ತಿದೆ. ಈಗಾಗಲೇ ಬೂತ ಮಟ್ಟದ ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿರುವ ಎಲ್ಲಾ ಮತದಾರರಿಗೆ ಎನ್ಯೂಮರೇಷನ್ ಫಾರಂಗಳನ್ನು ವಿತರಣೆ ಮಾಡಿದ್ದಾರೆ. ಜೂ.30ರಿಂದ ಜು.29ರ ವರೆಗೆ ನಿಮ್ಮ ಮನೆಗಳಿಗೆ ಭೇಟಿ ನೀಡಲಿದ್ದಾರೆ. ಈ ಪರಿಷ್ಕರಣೆ ಕಾರ್ಯವು ಮತದಾರರು, ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಸಿಬ್ಬಂದಿ ಒಳಗೊಂಡಂತೆ ಪಾಲ್ಗೊಳ್ಳುವಿಕೆ ಹಾಗೂ ಪಾರದರ್ಶಕ ಪ್ರಕ್ರಿಯೆಯಾಗಿದೆ. ನಮೂನೆ ವಿತರಣೆ ಮತ್ತು ಸಂಗ್ರಹಣೆಗಾಗಿ ಬೂತ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಮತದಾರರಿಗೆ ಅನುಕೂಲವಾಗುವಂತೆ ಪ್ರತಿ ಗ್ರಾಮ ಪಂಚಾಯತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ವಾರ್ಡಗಳಲ್ಲಿ ಓಟರ್ ಫೆಸಿಲಿಟಿ ಸೆಂಟರ್ ಹಾಗೂ ಪ್ರತಿ ಮತಗಟ್ಟೆಯಲ್ಲಿ ಬಿಎಲ್‌ಓ ಫೆಸಿಲಿಟಿ ಸೆಂಟರ್ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.



ಕಲಾದಗಿ: ಮಳೆಗಾಲ ಪ್ರಾರಂಭದ ರೈತರ ಮೊದಲ ಹಬ್ಬವಾದ ಕಾರ ಹುಣ್ಣಿಮೆ ನಿಮಿತ್ತ ಗ್ರಾಮದಲ್ಲಿ ಎತ್ತುಗಳಿಗೆ ಬಣ್ಣ ಬಣ್ಣದ ಅಲಂಕಾರ ಮಾಡಿ ಗ್ರಾಮದ ಅಗಸಿಯಲ್ಲಿ ಬೇವಿನ ತಪ್ಪಲು ಹಾಗೂ ಕೊಬ್ಬರಿ ಬಟ್ಟಲನ್ನು ಕಟ್ಟಿ ಎತ್ತುಗಳನ್ನು ಓಡಿಸಿ ಕರಿ ಹರಿಯಲು ಬಿಡಲಾಯಿತು. ಮೊದಲೇ ನಿಶ್ಚಯಿಸಿದಂತೆ ಕರಿ ಮತ್ತು ಬಿಳಿ ಎತ್ತುಗಳಿಗೆ ಮುಂಗಾರಿ ಹಿಂಗಾರಿ ಎಂದು ಹೆಸರಿಡಲಾಗಿತ್ತು. ಈ ಬಾರಿ ಬಿಳಿ ಎತ್ತು ಮುಂಚೂಣಿಯಾಗಿ ಬಂದು ಮೊದಲಿಗೆ ಕರಿ ಹರಿಯಿತು. ಇದರಿಂದ ಹಿಂಗಾರಿ ಬೆಳೆ ಉತ್ತಮವಾಗಿ ಬರಲಿದೆ ಎನ್ನುವ ನಂಬಿಕೆ ರೈತರದ್ದಾಯಿತು.

ಬದುಕಿನಲ್ಲಿ ಸಕಾರಾತ್ಮಕತೆ ಅಗತ್ಯ: ಕಡ್ಡಿ

•ಜಮಖಂಡಿ: ಬದುಕಿನಲ್ಲಿ ಕಷ್ಟಗಳು ಬರುವುದು ಸಹಜ. ಕಷ್ಟಗಳು ನಮಗೇಕೆ ಬಂದವು, ಕಷ್ಟಗಳು ನಮ್ಮ ಕರ್ಮದ ಫಲ ಎಂದು ಯೋಚಿಸುವುದು ನಕಾರಾತ್ಮಕತೆ. ಆದರೆ, ಬಂದದ್ದೆಲ್ಲವು ಪರಮಾತ್ಮನ ಪ್ರಸಾದವೆಂದು ಸ್ವೀಕರಿಸುವುದು ಸಕಾರಾತ್ಮಕತೆ. ಬದುಕಿನಲ್ಲಿ ಸಕಾರಾತ್ಮಕತೆ ಅಗತ್ಯವಿದೆ ಎಂದು ಹಿರಿಯ ಸಾಹಿತಿ ಪ್ರೊ.ಬಸವರಾಜ ಕಡ್ಡಿ ಹೇಳಿದರು. ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಶ್ರೀಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮದಲ್ಲಿ ಮನುಷ್ಯನಲ್ಲಿ ಸಕಾರಾತ್ಮಕತೆ ಕುರಿತು ಮಾತನಾಡಿದ ಅವರು ದುಃಖ ಬಂದರೆ ಪರಮಾತ್ಮನ ಪರೀಕ್ಷೆ, ಸುಖ ಬಂದರೆ ಪರಮಾತ್ಮನ ಪ್ರಸಾದ. ಪರೀಕ್ಷೆ ಮತ್ತು ಪ್ರಸಾದ ಎರಡೂ ಪರಮಾತ್ಮನದ್ದೆ ಎಂದುಕೊಳ್ಳಬೇಕು. ನಮ್ಮ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರ ನಮ್ಮಲ್ಲೆಯಿವೆ. ಪರಿಹಾರ ಸಿಗದಿದ್ದರೆ ಸಮಸ್ಯೆಗೆ ಹೊಂದಿಕೊಂಡು ಬದುಕುವುದನ್ನು ಕಲಿಯಬೇಕು ಎಂದರು. ಗುರುದೇವಾಶ್ರಮದ ಹರ್ಷಾನಂದ ಮಾತನಾಡಿದರು. ಋಷಿಕೇಶದ ಗಂಗಾಧರ ಸ್ವಾಮಿಗಳು, ಹುನ್ನೂರಿನ ಶಿವಪುತ್ರಯ್ಯ ಸಿದ್ದಗಿರಿಮಠ, ಮರೇಗುದ್ದಿಯ ದಿಗಂಬರ ಮಠದ ಕೈಲಾಸಪತಿ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ನಿರ್ಮಾಣ ಹಂತದಲ್ಲಿರುವ ವೇದಾಂತಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಮಂದಿರಕ್ಕೆ ಗ್ರಾಮಸ್ಥರಿಂದ ದೇಣಿಗೆ ಸಂಗ್ರಹಿಸಿದ ಹಿರಿಯರು, ವಿಶೇಷ ಸಾಧಕರು ಹಾಗೂ ಮಹಾಪ್ರಸಾದ ದಾಸೋಹ ಸೇವೆಗೈದ ಸುಭಾಸ ಕೋರಡ್ಡಿ ದಂಪತಿಗೆ ಸನ್ಮಾನಿಸಲಾಯಿತು. ಗುರುಬಸಗೌಡ ಪಾಟೀಲ, ಪರಮೇಶ್ವರ ಶೆಟ್ಟಿ, ರಾಮಚಂದ್ರ ಹೂಗಾರ, ಸಿದ್ದು ಉಪ್ಪಲದಿನ್ನಿ, ಜಿ.ಎಸ್.ನ್ಯಾಮಗೌಡ, ಬಾಬು ಕರಗಾರ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಡಾ.ಟಿ.ಪಿ.ಗಿರಡ್ಡಿ ಸ್ವಾಗತಿಸಿದರು. ಉಪನ್ಯಾಸಕ ಸಂಗಮೇಶ ತೆಲಸಂಗ ನಿರೂಪಿಸಿದರು.



ಜಮಖಂಡಿ: ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಶ್ರೀಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮ ನಡೆಯಿತು.

ಪರಿಶೀಲನಾ ಸಮಿತಿ ಸಭೆ | ಸಂಸದ ಗದ್ದಿಗೌಡರ ಸೂಚನೆ

ಸಾಲ ಮಂಜೂರಾತಿಯಲ್ಲಿ ವಿಳಂಬ ಸಲ್ಲ

•ಬಾಗಲಕೋಟೆ: ಸರ್ಕಾರದ ವಿವಿಧ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರಾತಿಯಲ್ಲಿ ಅನಗತ್ಯ ವಿಳಂಬವಾಗದಂತೆ ಕ್ರಮ ವಹಿಸಬೇಕೆಂದು ಸಂಸದ ಪಿ.ಸಿ.ಗದ್ದಿಗೌಡರ ಬ್ಯಾಂಕರ್‌ಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ಸೋಮವಾರ ಜಿಲ್ಲಾ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾಮಟ್ಟದ ಪರಿಶೀಲನಾ ಸಮಿತಿಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದ ವಿವಿಧ ಯೋಜನೆಗಳ ಉದ್ದೇಶವು ಜನಸಾಮಾನ್ಯರಿಗೆ ಸುಲಭವಾಗಿ ತಲುಪಬೇಕಾದರೆ ಬ್ಯಾಂಕ್‌ಗಳು ಹಾಗೂ ಇಲಾಖೆಗಳ ನಡುವೆ ಉತ್ತಮ ಸಮನ್ವಯ ಅಗತ್ಯವಿದೆ. ರೈತರು, ಮಹಿಳೆಯರು, ಯುವ ಉದ್ಯಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ಅಗತ್ಯ ಹಣಕಾಸು ನೆರವು ಒದಗಿಸುವ ಕೆಲಸವಾಗಬೇಕು ಎಂದರು.

ಆದ್ಯತಾ ವಲಯಗಳಾದ ಕೃಷಿ, ತೋಟಗಾರಿಕೆ, ಪಶು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಲ ವಿತರಣೆಯಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ವಿವಿಧ ಯೋಜನೆಗಳಡಿ ಬಾಕಿ ಉಳಿದಿರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಅರ್ಹರಿಗೆ ಸಲ ಮಂಜೂರು ಮಾಡುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಮಾತನಾಡಿದ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರು ಸರಕಾರದ ವಿವಿಧ ಯೋಜನೆಗಳ ಲಾಭ ನಿಯಮಾನುಸಾರ ನಿಗದಿತ ಅವಧಿಯಲ್ಲಿ ಲಾಭ ದೊರೆಯದಿದ್ದರೆ ಹೇಗೆ ಎಂದು ಪ್ರಶ್ನಿಸಿದರು. ಬಾಕಿ ಇರುವ ಅರ್ಜಿಗಳನ್ನು 10 ದಿನಗಳೊಳಗಾಗಿ ವಿಲೇ ಮಾಡಿ ವರದಿ ಸಲ್ಲಿಸಲು ತಿಳಿಸಲಾಯಿತು.



ಸೋಲಾರ್ ಅಳವಡಿಕೆ ಜಾಗೃತಿ ಮೂಡಿಸಿ

ಬೀದಿ ಬದಿ ವ್ಯಾಪಾರಸ್ಥರಿಗೆ ಬ್ಯಾಂಕ್ ಸಾಲ ಕೊಡಲು ಆರ್‌ಡಿ ಸ್ಕಿಮ್ ಮಾಡಿದರೆ ಮಾತ್ರ ಸಾಲ ಮಂಜೂರು ಮಾಡುವುದಾಗಿ ಕೆಲವೊಂದು ಬ್ಯಾಂಕ್‌ಗಳು ಹೇಳುತ್ತಿರುವುದರಿಂದ ವ್ಯಾಪಾರಸ್ಥರಿಗೆ ತೊಂದರೆಯಾಗುತ್ತಿದೆ. ಈ ರೀತಿ ಆಗಬಾರದು. ಬ್ಯಾಂಕ್ ಅಧಿಕಾರಿಗಳಿಗೆ ತಮ್ಮ ವ್ಯಾಪ್ತಿಯ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನಿರ್ದೇಶನ ನೀಡಲು ತಿಳಿಸಿದರು. ಸೂರ್ಯಾಘರ್ ಯೋಜನೆಯಡಿ ಸೋಲಾರ ಅಳವಡಿಕೆ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ತಿಳಿಸಿದರು. ನಬಾರ್ಡ ಮತ್ತು ಆರ್‌ಬಿಐ ಅಧಿಕಾರಿಗಳು ಹೊಸ ಯೋಜನೆಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಆರ್‌ಸೆಟ್ ಸಂಸ್ಥೆಯಿಂದ ವಿವಿಧ ವೃತ್ತಿ ಕೌಶಲ್ಯ ಕುರಿತು ತರಬೇತಿ ನೀಡಿರುವ ಬಗ್ಗೆ ಮಾಹಿತಿಯನ್ನು ಸಭೆಗೆ ತಿಳಿಸಿದಾಗ ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ, ಮುಖ್ಯವಾಗಿ ವೈರಿಂಗ್, ಪ್ಲಂಬಿಂಗ್ ಸೇರಿದಂತೆ ಮೊಬೈಲ್, ಪೋಟೋಗ್ರಾಫಿ ಹಾಗೂ ಲೇಬರ್ ಓರಿಯಂಟ್ ತರಬೇತಿ ನೀಡುವುದು ಅವಶ್ಯವಾಗಿದೆ. ತರಬೇತಿ ಕೊಟ್ಟು ಬ್ಯಾಂಕ್‌ನಲ್ಲಿ ಸಾಲ ಒದಗಿಸಿದರೆ ಸಾಲದು ಇದರಿಂದ ಪ್ರಯೋಜನವಾಗುತ್ತಿರುವ ಬಗ್ಗೆ ಗಮನ ಹರಿಸಲು ತಿಳಿಸಿದರು. ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಸಾಲ ಮಂಜೂರಾತಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಹತ್ತು ದಿನಗಳಲ್ಲಿ ವಿಲೇ ಮಾಡುವಂತೆ ಜಿ.ಪಂ ಸಿಇಒ ಗಜಾನನ ಬಾಲೆ ತಿಳಿಸಿದರು.

ಪ್ರಸಕ್ತ ಸಾಲಿನ ಸಾಲ ಯೋಜನೆಯ ಮಾಹಿತಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಜಿಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಜಿಲ್ಲಾ ಅಗ್ರಣಿ ಬ್ಯಾಂಕ್‌ನ ವ್ಯವಸ್ಥಾಪಕ ರಾಜಕುಮಾರ ಹೂಗಾರ, ನಬಾರ್ಡ ಬ್ಯಾಂಕ್‌ನ ಡಿಡಿಎಂ ವಿಷ್ಣುವರ್ಧನ, ಆರ್‌ಬಿಐ ಎಲ್‌ಡಿಒ ಸೀಲಪ್ರೀಯಾ ಗೌತಮ, ಕೆರನಾ ಬ್ಯಾಂಕ್ ಎಜಿಎಂ ಯೋಗೇಶ ಪೂಜಾರ, ಕೆಜಿಬಿ ಬ್ಯಾಂಕ್‌ನ ಆರ್‌ಎಂ ಪರಮೇಶ್ವರ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು, ಬ್ಯಾಂಕರ್‌ಗಳು ಉಪಸ್ಥಿತರಿದ್ದರು.

ಅರ್ಹ ಮತದಾರರ ಹೆಸರು ಬಿಟ್ಟು ಹೋಗದಂತೆ ಕಾರ್ಯನಿರ್ವಹಿಸಿ: ಜೆಟಿಪಾ

•ಬೀಳಗಿ: ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯಿಂದ ಯಾವುದೇ ಅರ್ಹ ಮತದಾರರ ಹೆಸರು ಬಿಟ್ಟು ಹೋಗದಂತೆ ಸರ್ಕಾರಿ ಬಿಎಲ್‌ಎಗಳು ಮತ್ತು ಬಿಎಲ್‌ಒಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಇದರಲ್ಲಿ ನೈಜ ಮತದಾರರ ಹೆಸರು ಕಡಿಮೆಯಾದಲ್ಲಿ ಅವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಕೊರ್ತಿ ಸಮುದಾಯ ಭವನದಲ್ಲಿ ಭಾನುವಾರ 22-ಬೀಳಗಿ ವಿಧಾನಸಭಾ ಮತಕ್ಷೇತ್ರ ವಿಶೇಷ ಸಮಗ್ರ ಪರಿಷ್ಕರಣೆ ಮತಗಟ್ಟೆ ಮಟ್ಟದ ಅಧಿಕಾರಿಗಳ ಹಾಗೂ ಮತಗಟ್ಟೆ ಮಟ್ಟದ ಏಜೆಂಟರ (ಬಿಎಲ್‌ಎ) ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಮತದಾನದ ಹಕ್ಕು ಯಾರು ಕಳೆದುಕೊಳ್ಳುತ್ತಾರೆ ಅವರಿಗೆ ಸರ್ಕಾರದ ಯಾವುದೇ ಸೌಲಭ್ಯ ದೊರೆಯುವುದಿಲ್ಲ. ಆದ್ದರಿಂದ ಅಧಿಕಾರಿಗಳು ಜಾಗೃತೆಯಿಂದ ನೈಜ ಮತದಾರರ ಹೆಸರು ಕಡಿಮೆಯಾಗದಂತೆ ನೋಡಿಕೊಳ್ಳಬೇಕು ಎಂದರು

ವಿಪ ಸದಸ್ಯ ಎಚ್.ಆರ್.ನಿರಾಣಿ ಮಾತನಾಡಿ, ಮತದಾನವು ಪ್ರಜಾಪ್ರಭುತ್ವದ ಹಕ್ಕು. ಯಾವುದೇ ಅಕ್ರಮ ಮತದಾನಕ್ಕೆ ಅವಕಾಶ ಇಲ್ಲ. ಚುನಾವಣಾ ಆಯೋಗವು ಪಾರದರ್ಶಕ ಚುನಾವಣೆ ನಡೆಯಬೇಕೆನ್ನುವ ಉದ್ದೇಶದಿಂದ ಮತದಾರರ ಪಟ್ಟಿ ಪರಿಷ್ಕರಣೆಗೆ ಸರ್ಕಾರ ಕೈ ಹಾಕಿದೆ. ಸರಿಯಾದ ಮಾಹಿತಿ ಪಡೆದು ರಾಜಕೀಯ ಪಕ್ಷದ (ಬಿಎಲ್‌ಎ)-2ಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು ಎಂದರು.

ಜಮಖಂಡಿ ಉಪವಿಭಾಧಿಕಾರಿ ಶ್ವೇತಾ ಬೀಡಿಕರ ಮಾತನಾಡಿ, ಈಗಾಗಲೇ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ತರಬೇತಿ ನೀಡಲಾಗಿದೆ. ಯಾವ ರೀತಿಯಾಗಿ ಕೆಲಸ ಮಾಡಬೇಕು. ಇದು 3ನೇ ಹಂತದ ಪ್ರಕ್ರೀಯೆ ಪ್ರಾರಂಭವಾಗಿದೆ. ರಾಜಕೀಯ ಪಕ್ಷದ ಬಿಎಲ್‌ಎಗಳು ಅಧಿಕಾರಿಗಳೊಂದಿಗೆ ಸಹಕಾರ ನೀಡಿ ಸಹಕರಿಸಬೇಕಾಗಿದೆ. ಪರಿಷ್ಕರಣೆಯಲ್ಲಿ ನೈಜ ಮತದಾರರ ಹೆಸರು ಹೋಗದಂತೆ ಕಾರ್ಯನಿವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ತಹಶೀಲ್ದಾರ್ ವಿನೋದ ಹತ್ತಳ್ಳಿ, ಎಸ್‌ಎಲ್‌ಒ ಚುನಾವಣಾಧಿಕಾರಿ ವಿ.ಎಸ್. ಬಣಗಾರ, ಜಿಪಂ ಮಾಜಿ ಅಧ್ಯಕ್ಷ ಎಂ.ಎಲ್. ಕೆಂಪಲಿಂಗಣ್ಣವರ, ತಾಪಂ ಮಾಜಿ ಸದಸ್ಯ ಮಿಥುನ್ ನಾಯಕ ಇದ್ದರು.



ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲಿ

•ಮಹಾಲಿಂಗಪುರ: ರಾಜ್ಯದ ಉಪ್ಪಾರ ಸಮಾಜಕ್ಕೆ ಸಮರ್ಪಕ ಪ್ರಾತಿನಿಧ್ಯ ದೊರಕಿಸುವ ನಿಟ್ಟಿನಲ್ಲಿ ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ರಬಕವಿ-ಬನಹಟ್ಟಿ ತಾಲೂಕಿನ ಉಪ್ಪಾರ ಸಮಾಜದ ಮುಖಂಡರು ಆಗ್ರಹಿಸಿದ್ದಾರೆ.

ಸಮೀಪದ ಕೆಸರಗೊಪ್ಪ ಗ್ರಾಮದ ಭಗೀರಥ ಉಪ್ಪಾರ ಸಮಾಜದ ದೇವಸ್ಥಾನದ ಸಭಾಂಗಣದಲ್ಲಿ ಬುಧವಾರ ಸಂಜೆ ನಡೆದ ಉಪ್ಪಾರ ಸಮಾಜದ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಸಿ, ಈ ಮನವಿಯನ್ನು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಅವರ ಮೂಲಕ ಸರ್ಕಾರಕ್ಕೆ ರವಾನಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಸಮಾಜದ ಮುಖಂಡರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸತತ ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಜನರ ಅಪಾರ ವಿಶ್ವಾಸ ಗಳಿಸಿರುವ ನಾಯಕರಾಗಿದ್ದಾರೆ. ಅವರು ತಮ್ಮ ಕ್ಷೇತ್ರದಲ್ಲಿ ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಿ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಜನನಾಯಕನಾಗಿ ಗುರುತಿಸಿಕೊಂಡಿದ್ದಾರೆ ಎಂದು ಹೇಳಿದರು.

ಉಪ್ಪಾರ ಸಮಾಜವು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಇನ್ನೂ ಹಿಂದುಳಿದಿದ್ದು, ಸಮಾಜದ ಏಳಿಗೆಗಾಗಿ ಸರ್ಕಾರದಲ್ಲಿ ಸೂಕ್ತ ಪ್ರಾತಿನಿಧ್ಯ ಅತ್ಯಗತ್ಯವಾಗಿದೆ. ಸಚಿವ ಸಂಪುಟದಲ್ಲಿ ಉಪ್ಪಾರ ಸಮಾಜಕ್ಕೆ ಅವಕಾಶ ನೀಡುವುದರಿಂದ ಸಮಾಜದ ಅಭಿವೃದ್ಧಿಗೆ ಹೊಸ ದಿಕ್ಕು ದೊರೆಯಲಿದ್ದು, ಯುವಜನರಲ್ಲಿ ಆತ್ಮವಿಶ್ವಾಸ ಮೂಡಲಿದೆ ಎಂದು ಮುಖಂಡರು ತಿಳಿಸಿದರು.

ಪರಪ್ಪ ಬ್ಯಾಕೋಡ, ದುಂಡಪ್ಪ ಜಾಧವ, ಕರೆಪ್ಪ ಬ್ಯಾಕೋಡ, ಭೀಮಪ್ಪ ಸಸಾಲಟ್ಟಿ, ವಿಠ್ಠಲ ಹೆಗ್ಗನ್ನವರ, ಹಣ್ಮಂತ ಬ್ಯಾಕೋಡ, ಎಂ.ಎಸ್. ಬ್ಯಾಕೋಡ, ಜ್ಯೋತೆಪ್ಪ ಕಪರಟ್ಟಿ, ಭೀಮಶಿ ಪೂಜಾರಿ, ಮಲ್ಲಪ್ಪ ಬ್ಯಾಕೋಡ, ಎಸ್.ಪಿ.ಕೊಡಗಾನೂರ, ವಿ.ಆರ್.ಸರವಿ, ಎಚ್.ಎಂ.ಬ್ಯಾಕೋಡ, ಎಂ.ಬಿ.ಲಾತೂರ, ಬಿ.ಎಲ್. ಬ್ಯಾಕೋಡ, ಶ್ರೀಶೈಲ ಅಡಿಹುಡಿ, ಈರಪ್ಪ ಬ್ಯಾಕೋಡ, ಎಂ.ಬಿ.ಕಲ್ಲಟ್ಟಿ, ಎಂ.ಎಲ್. ತೇಜಪ್ಪಗೋಳ, ಎಸ್.ಎಂ.ಉಸಳಿ ಉಪಸ್ಥಿತರಿದ್ದರು.



ಶಿಕ್ಷಣ ಪಡೆದು ಉನ್ನತ ಹುದ್ದೆಗೇರಲು ಪ್ರಯತ್ನಿಸಿ: ಸಂಗ್ರೇಶಿ

•ಬಾದಾಮಿ: ಹಾಲುಮತ ಸಮಾಜದ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಹುದ್ದೆಗೇರಲು ಪ್ರಯತ್ನಿಸಿ ತಂದೆ ತಾಯಿ ಋಣ ತೀರಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಡಾ.ಜಿ.ಎಸ್.ಸಂಗ್ರೇಶಿ ಹೇಳಿದರು.

ಭಾನುವಾರ ನಗರದ ಕುಮಾರೇಶ್ವರರ ಸಭಾಭವನದಲ್ಲಿ ಹಾಲುಮತ ನೌಕರರ ಸಂಘ, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೀರಲಿಂಗೇಶ್ವರ ಸೇವಾ ಸಮಿತಿ, ನಿವೃತ್ತ ನೌಕರರ ಸಂಘ ಹಾಗೂ ಸಮಾಜದ ಎಲ್ಲ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಾಸಕ ಭೀಮಸೇನ ಬಿ.ಚಿಮ್ಮನಕಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, 2009ರ ನಂತರ ಮೊದಲ ಬಾರಿಗೆ ಇಂತಹ ಉತ್ತಮ ಕಾರ್ಯಕ್ರಮ ಸಂಘಟನೆ ಮಾಡಿದ ಸಂಘಟಕರಿಗೆ ಅಭಿನಂದನೆ ಸಲ್ಲಿಸಿ ಇಂದಿನ ಯುವಕರು ಗುರಿ ಇಟ್ಟು ಓದಿ ಸಾಧನೆ ಮಾಡಿ ಸಾಧಕರಾಗಬೇಕು. ಇನ್ನೊಬ್ಬರಿಗೆ ಮಾದರಿಯಾಗಬೇಕು. ಸಾಧನೆ ಮಾಡಿದ ನಂತರ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಧಾರವಾಡ ಜೀನಿಯಸ್ ಅಕಾಡಮಿಯ ಸಿದ್ದಣ್ಣ ದಳವಾಯಿ ಉಪನ್ಯಾಸ ನೀಡಿ, ಯಾವುದರಲ್ಲಿ ಆಸಕ್ತಿ ಇದೆ ಅದನ್ನೇ ಮಾಡಬೇಕು. ಶ್ರೇಷ್ಟ ಎನಿಸಿಕೊಳ್ಳಬೇಕು. ಜಗತ್ತಿಗೆ ಅವಶ್ಯಕತೆ ಇರುವುದನ್ನು ಮಾಡಬೇಕು. ವಯಕ್ತಿಕ ಲಾಭ ಇರುವುದನ್ನು ಮಾಡಬೇಕು. ಇಂದಿನಿಂದಲೇ ಬದಲಾವಣೆ ಮಾಡಬೇಕು ಎಂದು ಗುರಿಯೊಂದಿಗೆ ಮುನ್ನಗ್ಗಬೇಕು ಎಂದು ಯುವಕರಿಗೆ ಸಲಹೆ ನೀಡಿದರು. ಶಿರೂರ ಕನಕ ಬ್ರಹ್ಮ ವಿದ್ಯಾಶ್ರಮದ ಚಿನ್ಮಯಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ, ಶಿಕ್ಷಕ ಭಾಸ್ಕರ ಬೂದಿನಗಡ, ಶಿಕ್ಷಕ ಉಜ್ವಲ ಬಸರಿ, ಸದಾಶಿವ ಮರಡಿ, ಕೆ.ಎಂ.ಮಾಗುಂಡಪ್ಪನ್ನವರ, ವೈ.ವೈ.ಹಾವರಗಿ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ಹಾಲುಮತ ಸಮಾಜದವರು, ಅಧಿಕಾರಿಗಳು, ನೌಕರರು, ವಿದ್ಯಾರ್ಥಿಗಳು ಹಾಜರಿದ್ದರು.



ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ

•ಬಾದಾಮಿ: ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯಿಂದ ತಮ್ಮ ಮತಗಟ್ಟೆಯಲ್ಲಿರುವ ಪಟ್ಟಿಯು ನಿಜವಾದ ಅರ್ಹ ನಾಗರಿಕರನ್ನು ಪ್ರತಿಬಿಂಬಿಸುವಂತೆ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಸೋಮವಾರ ನಗರದ ಕುಮಾರೇಶ್ವರರ ಸಭಾಭವನದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ಬ್ಲಾಕ್ ಮಟ್ಟದ ಬಿಎಲ್‌ಎ-2 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ರಾಜ್ಯದಲ್ಲಿ ಎಸ್‌ಐರ್ ನಡೆದಿದ್ದು, ಈಗ ಜೂ.30ರಿಂದ ಪರಿಷ್ಕರಣೆ ನಡೆಯುತ್ತಿದ್ದು, ಚುನಾವಣೆ ಅಧಿಕಾರಿಗಳು ಪ್ರತಿ ಮನೆಮನೆಗೆಭೇಟಿನೀಡಿಮಾಹಿತಿಸಂಗ್ರಹಿಸಲಿದ್ದಾರೆ ಎಂದು ಹೇಳಿದರು. ಕಾರ್ಯಕರ್ತರು ಬೂತ್ ಮಟ್ಟದ ಏಜೆಂಟರು ಶ್ರಮಪಟ್ಟಷ್ಟು ಮತಗಟ್ಟೆವಾರು ಮತದಾರರು ಹೊರಗುಳಿಯದಂತೆ ಜಾಗೃತಿ ವಹಿಸಬೇಕು. ಇದರಿಂದ ನಮ್ಮ ಪಕ್ಷಕ್ಕೆ ಹೆಚ್ಚಿನ ಮತಗಳು ಪಕ್ಷಕ್ಕೆ ಬರಲು ಸಾಧ್ಯ. ಸ್ಥಳೀಯ ಸಂಸ್ಥೆಗಳ ಚುನಾವಣೆಯೂ ಸೇರಿದಂತೆ 2028ರ ಚುನಾವಣೆ ಗುರಿಯಾಗಿಟ್ಟುಕೊಂಡು ನಾವೆಲ್ಲರೂ ಕೆಲಸ ಮಾಡೋಣ ಎಂದರು. ಕಾಂಗ್ರೆಸ್ ಪಕ್ಷದ ತರಬೇತಿದಾರ ಸಂತೋಷ ಬಗಲಿ ದೇಸಾಯಿ ಮಾತನಾಡಿ, ಕಾಂಗ್ರೆಸ್ ಸರಕಾರ ಐದು ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದೆ. ಸ್ಥಳೀಯ ಸಂಸ್ಥೆಗಳು, ತಾಪಂ, ಜಿಪಂ ಮತ್ತು ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪುನಃ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸೋಣ ಎಂದು ತಿಳಿಸಿದರು.



ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ನಾಗರಾಜ ಹದ್ಲಿ, ಎಸ್.ಸಿ.ಘಟಕದ ಜಿಲ್ಲಾಧ್ಯಕ್ಷ ನಾಗರಾಜ ಮನ್ನಿಕೇರಿ, ಪುರಸಭೆ ಮಾಜಿ ಅಧ್ಯಕ್ಷ ಪಾಂಡು ಕಟ್ಟಿಮನಿ, ಮಾಜಿ ಸದಸ್ಯರಾದ ಫಾರೂಖ ದೊಡಮನಿ, ನಿಂಗನಗೌಡ ಜನಾಲಿ, ಸಂಜಯ ಬರಗುಂಡಿ, ಮಹಾಂತೇಶ ಹಟ್ಟಿ, ಶಿವಕುಮರ ಹಿರೇಮಠ, ಆನಂದ ದೊಡಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗುರುವಿನಿಂದ ಮುಕ್ತಿ ಸಾಧ್ಯ: ಚಿಕ್ಕರಾಮಲಿಂಗ ಶ್ರೀ

•ಗುಳೇದಗುಡ್ಡ: ಮನುಷ್ಯನ ಜೀವ ಪೂರ್ವ ಜನ್ಮದ ಫಲದಿಂದ ಸಿಕ್ಕಿದೆ. ಇದರ ಮುಕ್ತಿ ಸಿಗಬೇಕೆಂದರೆ ಗುರುವಿನ ಸ್ಮರಣೆ ಅವಶ್ಯವಾಗಿದೆ. ಗುರು ಮಾತ್ರ ಯೋಗ್ಯ ಮಾರ್ಗ ತೋರಿಸಬಲ್ಲ, ಆ ಗುರುವಿನ ಸೇವೆಯಲ್ಲಿ ಪ್ರಾಮಾಣಿಕತೆ ಇರಬೇಕು. ಗುರುವಿನ ಚರಣದಲ್ಲಿನ ಆನಂದ ಸದಾವಕಾಲವಾಗಿರುತ್ತದೆ. ಗುರುವಿನ ಆಶ್ರಯದಲ್ಲಿರಬೇಕೆಂದು ನೂತನ ಪಟ್ಟಾಭೀಷಿಕ್ತರಾದ ಚಿಕ್ಕರಾಮಲಿಂಗ ಶ್ರೀಗಳು ಹೇಳಿದರು.

ಪಟ್ಟಣದ ಅಕ್ಕಲಕೋಟಿ ರೇವಣಸಿದ್ಧ ಶಿವಶರಣರ ಮಠದ ಜೀರ್ಣೋದ್ಧಾರ ಸಮಿತಿ ವತಿಯಿಂದ ನಡೆದ ನೂತನ ಪಟ್ಟಾಭಿಷಿಕ್ತ ಶ್ರೀಗಳಾದ ಚಿಕ್ಕರಾಮಲಿಂಗ ಶಿವಶರಣ ಸ್ವಾಮಿಗಳವರ ಪುರಪ್ರವೇಶದ ಮೆರವಣಿಗೆ ನಿಮಿತ್ತ ನಡೆದ ಧರ್ಮಸಭೆಯಲ್ಲಿ ಮಾತನಾಡಿ, ಈ ಮನುಷ್ಯ ಜನ್ಮ ಬಹಳ ಶ್ರೇಷ್ಠವಾಗಿದ್ದು, ಗುರುವಿನ ನಾಮಸ್ಮರಣೆ, ತಂದೆ-ತಾಯಿಯವರ ಸೇವೆ ಮಾಡಿ, ಜೀವನ ಪಾವನಗೊಳಿಸಿಕೊಳ್ಳಬೇಕೆಂದು ಹೇಳಿದರು.

ಗುರುಸಿದ್ದೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಶ್ರೀಗಳು ಮಾತನಾಡಿ, ನಿತ್ಯ ತಮ್ಮ ಕೆಲಸ ಕಾರ್ಯಗಳ ಜೊತೆಗೆ ಗುರುವಿನ ಸೇವೆಗೆ ಸಮಯ ಮೀಸಲಿಡಬೇಕು. ಸ್ವಾಮೀಜಿಗಳು ಈ ಸಮಾಜದ ಮಕ್ಕಳಿದ್ದಂತೆ. ಅಷ್ಟೇ ಅಲ್ಲದೇ ಈ ಸಮಾಜವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಕೆಲಸವನ್ನು ಸ್ವಾಮೀಜಿಗಳು ಮಾಡುತ್ತಾರೆ ಎಂದು ಹೇಳಿದರು.



ಮೈಂದರ್ಗಿಯ ಅಭಿನವ ರೇವಣಸಿದ್ಧ ಶ್ರೀಗಳು ಮಾತನಾಡಿದರು. ನೀರಲಕೇರಿಯ ಘನಲಿಂಗ ಶ್ರೀಗಳು, ಹರಗನಳ್ಳಿ ಸಂಗನ್ನಜ್ಜ, ವಸಂತ ಸ್ವಾಮಿಗಳು, ಶಿವರುದ್ರಯ್ಯ ಹಿರೇಮಠ ಸ್ವಾಮಿಗಳು, ಚನ್ನಬಸಯ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಮಠದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗುರಪ್ಪಗೌಡ ಪಾಟೀಲ, ಉಪಾಧ್ಯಕ್ಷ ಲಕ್ಷ್ಮಣ ದಡ್ಡಿ, ಬಿ.ಬಿ.ವಜ್ರಬಂಡಿ, ವಿಶ್ರಾಂತ ಪ್ರಾಚಾರ್ಯ ಎನ್.ಬಿ.ಚಿತ್ರಗಾರ, ಪುರುಷೋತ್ತಮ ಗಂಡಿ, ಮಲ್ಲಿಕಾರ್ಜುನ ಮುದೇನೂರ, ಮಲ್ಲಿಕಾರ್ಜುನ ಸೂಡಿ, ನಾಗೇಶ ಸಿದ್ದಣ್ಣವರ, ಸಿದ್ದಪ್ಪ ಆಡಿನ, ಹುಲ್ಯಾಳದ ದಯಾನಂದ ಕೊಣ್ಣೂರ, ಶರಣಪ್ಪ ದಿಂಡಿ, ಬಸಣ್ಣ ದಿಂಡಿ, ನಾರಾಯಣಪ್ಪ ಉಣಚಗಿ, ಹಳ್ಳೂರ ಡಿ.ಡಿ.ಮೇಟಿ, ಕೊಪ್ಪದ ಸಂಗಪ್ಪ ಮಸೂತಿ, ಚಿಟಗಿನಕೊಪ್ಪದ ರಾಮಸ್ವಾಮಿ ಶಿರೂರ, ಮಂಡಪ್ಪ ಕಡೂರ ಹಾಗೂ ರೊಳ್ಳಿ, ಎಸ್.ಆರ್.ಕೊಪ್ಪ ಪಾಲ್ಗೊಂಡಿದ್ದರು.

ಜಿಲ್ಲಾದ್ಯಂತ ಕಾರಹುಣ್ಣಿಮೆ ಸಂಭ್ರಮ

•ಬಾಗಲಕೋಟೆ: ಜಿಲ್ಲೆಯಾದ್ಯಂತ ಸೋಮವಾರ ರೈತರ ಹಬ್ಬ ಕಾರಹುಣ್ಣಿಮೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ನಗರದಲ್ಲಿ ನಡೆದ ಕಾರಹುಣ್ಣಿಮೆಯ ಕರಿಯಲ್ಲಿ ಬಿಳಿ ಎತ್ತು ಪ್ರಥಮ ಸ್ಥಾನ ಪಡೆದಿದ್ದರಿಂದ ಈ ಭಾರಿ ಬಿಳಿ ಜೋಳ ಉತ್ತಮವಾಗಿ ಬೆಳೆಯಲಿದೆ ಎಂದು ರೈತರು ಸಂಭ್ರಮಪಟ್ಟರು. ನಗರದ ವಲ್ಲಭಾಯಿ ಚೌಕನಲ್ಲಿ ಎತ್ತುಗಳನ್ನು ಕರಿ ಹರಿಯಲಾಯಿತು. ಕಿಲ್ಲಾ ಓಣಿಯ ಬಸವಪ್ರಭು ಸರನಾಡಗೌಡ ಅವರ ಬಿಳಿ ಬಣ್ಣದ ಎತ್ತು ಕರಿ ಹರಿಯಿತು. ಈ ಸಾರಿ ಬಿಳಿ ಬಣ್ಣದ ಎತ್ತು ಕರಿ ಹರಿದಿದ್ದರಿಂದ ಬಿಳಿ ಜೋಳ ಉತ್ತಮವಾಗಿ ಬರುತ್ತದೆ ಎಂದು ವಾಡಿಕೆಯಂತೆ ತಿಳಿಸಲಾಯಿತು. ಒಟ್ಟು ಐದು ಎತ್ತುಗಳು ಭಾಗವಹಿಸಿದ್ದವು. ಎತ್ತು ಕರಿ ಹರಿಯುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಕೃಷಿಕರು ಸಂಭ್ರಮಿಸಿದರು. ಕುಣಿದು ಕುಪ್ಪಳಿಸತ್ತಾ, ಭಾಜಾ ಭಜಂತ್ರಿಯೊಂದಿಗೆ ಎತ್ತಿನ ಮೆರವಣಿಗೆ ಮಾಡಲಾಯಿತು. ಇನ್ನು ಕಾರಣ ಹುಣ್ಣಿಮೆ ಅಂಗವಾಗಿ ರಾಸುಗಳಿಗೆ ಮಗಡಾ, ಹಗ್ಗ, ಮೂಗದಾನ, ಹಣೆಕಟ್ಟ, ಬಾರ್ ಸೇರಿದಂತೆ ವಿವಿಧ ವಸ್ತುಗಳ ಖರೀದಿಗೆ ರೈತರು ಮುಗಿಬಿದ್ದಿದ್ದರು. ಕಾರ ಹುಣ್ಣಿಮೆ ಸಂಭ್ರಮ, ಸಡಗರದಿಂದ ಆಚರಿಸಿದ್ದು ರೈತರ ಮೊಗದಲ್ಲಿ ಸಂಭ್ರಮ ಮನೆ ಮಾಡಿತ್ತು.



ಉತ್ತಮ ಆರೋಗ್ಯಕ್ಕೆ ಮನೆಯ ಆಹಾರ ಮುಖ್ಯ

•ರನ್ನ ಬೆಳಗಲಿ: ಕಲುಷಿತ ವಾತಾವರಣ, ಅಶುದ್ಧ ನೀರು, ವಿಪರೀತ ರಾಸಾಯನಿಕ ಬಳಕೆಯ ತರಕಾರಿಗಳ ಬಳಕೆಯಿಂದಾಗಿ ಇಂದಿನ ಮಕ್ಕಳು ಚಿಕ್ಕವಯಸ್ಸಿನಲ್ಲಿಯೇ ಹಲವು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಮಕ್ಕಳ ಆರೋಗ್ಯ ರಕ್ಷಣೆಗೆ ಪೌಷ್ಟಿಕ ಆಹಾರ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಕೊಪ್ಪಳದ ಧರ್ಮಸ್ಥಳ ಪ್ರಾದೇಶಿಕ ಕಚೇರಿಯ ನಿರ್ದೇಶಕ ಚಂದ್ರಶೇಖರ ಜೆ. ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಬಾಗಲಕೋಟೆ ಜಿಲ್ಲಾ ಕಚೇರಿ, ಮುಧೋಳ ಯೋಜನಾ ಕಚೇರಿ, ರನ್ನ ಬೆಳಗಲಿ ವಲಯಯದ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ಷೇತ್ರ ನಾಗರಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಪೌಷ್ಟಿಕ ಆಹಾರ ಮತ್ತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನೆಯ ಆಹಾರವೇ ಆರೋಗ್ಯಕ್ಕೆ ಆಧಾರ, ಮಕ್ಕಳಿಗೆ ಆರೋಗ್ಯದ ಅರಿವು ಮೂಡಿಸಬೇಕು. ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ತಾಯಂದಿರ ಪಾತ್ರ ಪ್ರಮುಖವಾಗಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಶ್ರೀಶೈಲಗೌಡ ಪಾಟೀಲ, ಜಿಲ್ಲಾ ನಿರ್ದೇಶಕ ಚನ್ನಕೇಶ, ಮುಧೋಳ ಯೋಜನಾ ನಿರ್ದೇಶಕ ಎನ್.ರಾಜು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಮಹಿಳೆಯರ ಆರ್ಥಿಕ ಅಭಿವೃದ್ಧಿ, ದೇವಸ್ಥಾನಗಳ ಜೀರ್ಣೋದ್ಧಾರ, ಕೆರೆ ಸ್ಮಶಾನಗಳ ಅಭಿವೃದ್ಧಿ, ನಿರ್ಗತಿಕರಿಗೆ ಮಾಶಾಸನ, ವಾತ್ಸಲ್ಯ ಮನೆ, ಜ್ಞಾನವಿಕಾಸ ಕಾರ್ಯಕ್ರಮ, ವಿದ್ಯಾರ್ಥಿ ಶಿಷ್ಯ ವೇತನ, ಮದ್ಯವರ್ಜನ ಶಿಬಿರ ಸೇರಿದಂತೆ ಜನಸಾಮಾನ್ಯರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದರು.



ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದಪ್ಪ ರಡರಟ್ಟಿ, ನಿವೃತ್ತ ಹಿರಿಯ ನಿರೀಕ್ಷನಾಧಿಕಾರಿ ಡಿ.ವಿ.ನಾಗನೂರು, ನಾಗರಾಳ ಒಕ್ಕೂಟದ ರೇಖಾ ಪಾಟೀಲ, ಮಳಲಿ ಆರೋಗ್ಯ ಇಲಾಖೆ ಹಿರಿಯ ನಿರೀಕ್ಷಣಾಧಿಕಾರಿ ಈರಣ್ಣ ಕೋರಿಶೆಟ್ಟಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುವರ್ಣಾ ನಂದಿಕೋಲಮಠ, ಸೇವಾ ಪ್ರತಿನಿಧಿ ಗೋವಿಂದಪ್ಪ ಗಿರವ್ವಗೋಳ ಸೇರಿದಂತೆ ಕೇಂದ್ರದ ಸದಸ್ಯರು, ಸೇವಾಪ್ರತಿನಿಧಿಗಳು, ಗ್ರಾಮಸ್ಥರು ಇದ್ದರು.

ಕಿರುಸುದ್ದಿ

ಕಾಯಕದಿಂದ ಬದುಕಿಗೆ ದಾರಿ ತೋರಿದ ಸಿದ್ಧಲಿಂಗ ಶ್ರೀ



ಆಲಮೇಲ: ಪಟ್ಟಣದ ಗುರು ಸಂಸ್ಥಾನ ಹಿರೇಮಠದಲ್ಲಿ ಲಿಂ.ಸಿದ್ಧಲಿಂಗ ಶಿವಾಚಾರ್ಯರ ಹಾಗೂ ಗಾನಯೋಗಿ ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವ ನಡೆಯಿತು. ಈ ಹಿನ್ನೆಲೆ ಬಮ್ಮನಹಳ್ಳಿ ಗ್ರಾಮದಿಂದ ಆಲಮೇಲ ಶ್ರೀಮಠದವರೆಗೆ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಅನೇಕ ಶ್ರೀಗಳು ಹಾಗೂ ಮಠದ ಸದ್ಭಕ್ತರು ಪಾಲ್ಗೊಂಡಿದ್ದರು. ನಂತರ ಜರುಗಿದ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿದ ಶ್ರೀಮಠದ ಒಡೆಯರಾದ ಚಂದ್ರಶೇಖರ ಶಿವಾಚಾರ್ಯರು ಮಾತನಾಡಿ, ಸಿದ್ಧಲಿಂಗ ಶಿವಾಚಾರ್ಯರ ಈ ಭಾಗದ ಮಹಾನ ತಪಸ್ವಿಗಳು. ಅನೇಕ ಭಕ್ತರನ್ನು ಕಾಯಕದಿಂದ ಬದುಕುವ ದಾರಿ ತೋರಿದ ಮಹಿಮಾ ಪುರುಷರು.


ಸಮಾಜಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟು ಮಹನೀಯರು ಪಂ.ಪುಟ್ಟರಾಜ ಗವಾಯಿಗಳವರು ಎಂದರು. ಬಂಡಯ್ಯ ಶಾಸ್ತ್ರಿಗಳು ಸುಂಟನೂರ ಮಾತನಾಡಿ, ಆಲಮೇಲ ಮಠ ಸಂಗೀತ, ಸಾಹಿತ್ಯ, ಕಲೆ ಕಲಾವಿದರನ್ನು ಬೆಳೆಸಿ ಪ್ರೋತ್ಸಾಹಿಸುವುದರ ಜೊತೆಗೆ ಕೃಷಿ ಕ್ಷೇತ್ರದಲ್ಲಿಯೂ ವಿಶಿಷ್ಟ ಛಾಪನ್ನು ಮೂಡಿಸಿದೆ ಎಂದರು. ರಥನಂದ ಶಾಸ್ತ್ರಿಗಳು ಅರಳಗುಂಡಗಿ, ರೇಣುಕ ಗವಾಯಿಗಳು ಕೆರೂಟಗಿ, ಯಶವಂತ ಬಡಿಗೇರ ಸಿಂದಗಿ ಸಂಗೀತ ಸೇವೆ ಸಲ್ಲಿಸಿದರು. ರಾಜು ಕಟ್ಟಿಸಂಗಾವಿ, ಸುರೇಶ ಆಳಂದ, ಮೂರ್ತಾಚಾರಿ ಬಡಿಗೇರ ತಬಲಾ ಸಾಥ ನೀಡಿದರು. ಶ್ರೀಶೈಲ ಮಠಪತಿ ಸ್ವಾಗತಿಸಿದರು. ಶಿವಗುಂಡ ನಿರೂಪಿಸಿದರು. ವೇತಾಳ ಜೋಶಿ, ಅಪ್ಪು ಉಪ್ಪಿನ, ಅಶೋಕ ಬಡಿಗೇರ, ಬಿರಾದಾರ, ಮಹಿಳಾ ಮಂಡಳ ಕಮಲಾ ಕೆಂಗ, ಸವಿತಾ ಹಿರೇಮಠ, ಗೀತಾ ಉಪ್ಪಿನ, ಭಾಗ್ಯ ಭಾವಿಮನಿ, ಶ್ವೇತಾ ಪತ್ತಾರ, ಗೀತಾ ಉಪ್ಪಿನ ಅವರಿಂದ ಸಂಗೀತ ಸೇವೆ ನಡೆಯಿತು.

ಕೆಂಪೇಗೌಡರ ಅಭಿವೃದ್ಧಿ ಇಂದಿಗೂ ಮಾದರಿ



ಇಂಡಿ: 16ನೇ ಶತಮಾನದಲ್ಲೇ ಬೆಂಗಳೂರನ್ನು ಭವಿಷ್ಯದ ಜಾಗತಿಕ ನಗರವಾಗಿ ಕಲ್ಪಿಸಿಕೊಂಡಿದ್ದ ಕೆಂಪೇಗೌಡರ ಸಮಗ್ರ ನಗರಾಭಿವೃದ್ಧಿ, ಪರಿಸರ ಕಾಳಜಿ, ಜನಪರ ಆಡಳಿತ ಮಂತ್ರವು ಇಂದಿಗೂ ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು. ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಮಾತನಾಡಿದರು. ಕೆಂಪೇಗೌಡರು ತಮ್ಮ ದಾರ್ಶನಿಕ ಯೋಜನೆಗಳ ಜತೆಗೆ ವಿವಿಧ ಕುಲಕಸುಬಿನವರಿಗೆ ನೆಲೆಸಲು 64 ಪೇಟೆ ಕಟ್ಟಿ ಬೆಂಗಳೂರು ಕುಶಲತೆಯ ತವರಾಗಿ ಅಭಿವೃದ್ಧಿಗೆ ಅಂದೇ ಶಿಲೆ ಹಾಕಿದರು.ಸಾವಿರ ಕೆರೆ ನಿರ್ಮಿಸಿದ ಕೀರ್ತಿ ಇವರದು. ಎಲ್ಲ ಜಾತಿ-ಧರ್ಮದ ಜನರನ್ನು ಒಟ್ಟಿಗೆ ಕರೆದೊಯ್ಯುವ ಮೂಲಕ ಸರ್ವಜನಾಂಗದ ಶಾಂತಿಯ ತೋಟಕ್ಕೆ ಭದ್ರ ಅಡಿಪಾಯ ಹಾಕಿದರು ಎಂದು ಹೇಳಿದರು. ಅಂತರ್ಜಲ ಕುಸಿಯುತ್ತಿರುವ ಮತ್ತು ನೀರಿನ ಅಭಾವದ ಇಂದಿನ ದಿನಗಳಲ್ಲಿ ಕೆಂಪೇಗೌಡರ ನೀರು ನಿರ್ವಹಣಾ ತಂತ್ರಗಳು ಇಡೀ ಜಗತ್ತಿಗೆ ಮಾದರಿ ಆಗಿವೆ. ಕೆರೆ ನಿರ್ಮಿಸಿ, ಮರ ನೆಡು ಎಂಬ ಅವರ ಮಂತ್ರ ಪರಿಸರ ಕಾಳಜಿಯ ಪ್ರತೀಕವಾಗಿದೆ ಎಂದು ಹೇಳಿದರು. ಮುಖ್ಯ ಶಿಕ್ಷಕ ಕೆ.ಬಿ.ಮಹಾನವರ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೆಂಗಳೂರು ಇಂದು ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲ್ಪಡಲು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹೂಡಿಕೆಗೆ ಆಕರ್ಷಕ ತಾಣವಾಗಲು ಕೆಂಪೇಗೌಡರು ಅಂದು ಬಿತ್ತಿದ ವಾಣಿಜ್ಯ ಸ್ನೇಹಿ ವಾತಾವರಣವೇ ಕಾರಣ ಎಂದರು. ಶಿಕ್ಷಕರಾದ ಎಸ್. ಎಸ್.ಅರಬ, ಎನ್.ಬಿ.ಚೌಧರಿ, ಎಸ್.ಪಿ.ಪೂಜಾರಿ, ಅತಿಥಿ ಶಿಕ್ಷಕ ಅಫ್ತಾಬ್ ಮುಲ್ಲಾ ಸೇರಿದಂತೆ ಮಕ್ಕಳು ಹಾಜರಿದ್ದರು.

ಸತ್ಯಾತ್ಮತೀರ್ಥ ಶ್ರೀಗಳು ಇಂದು ಪಟ್ಟಣಕ್ಕೆ



ದೇವರಹಿಪ್ಪರಗಿ: ಪಟ್ಟಣಕ್ಕೆ ಶ್ರೀಮದುತ್ತರಾದಿಮಠಾಧೀಶ ಸತ್ಯಾತ್ಮತೀರ್ಥ ಶ್ರೀಪಾದ ಗುರುಗಳು ಪಟ್ಟಣದ ವರ್ಕಾನಹಳ್ಳಿ ಪಾಟೀಲರ ತೋಟದ ಮನೆಗೆ ಶೋಭಾಯಾತ್ರೆ ಮೂಲಕ ಆಗಮಲಿಸಿದ್ದಾರೆ. ಜೂ.30ರಂದು ಮೂಲ ರಾಮ ದೇವರ ಪೂಜಾ ಮಹೋತ್ಸವ, ಮುದ್ರಧಾರಣ, ಪಾದ ಪೂಜೆ ಆರ್ಶೀವಚನ ಮತ್ತು ಶ್ರೀತೀರ್ಥ ಪ್ರಸಾದ ನಡೆಯುತ್ತದೆ ಎಂದು ಚಿದಂಬರ ಸೇವಾ ಸಮಿತಿಯ ಅಧ್ಯಕ್ಷ ನರೇಂದ್ರ ನಾಡಗೌಡ ಹಾಗೂ ವಿನಾಯಕ ಪಟೀಲ, ವರ್ಕಾನಹಳ್ಳಿ ತಿಳಿಸಿದ್ದಾರೆ.



ತಾಳಿಕೋಟೆ: ಪಟ್ಟಣದ ವಿವಿ ಸಂಘದ ಆವರಣದಲ್ಲಿ ಅನುದಾನಿತ ಎಸ್.ಕೆ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ಸಮಗ್ರ ಮತದಾರರ ಜಾಗೃತಿ-2026ರ ಅಂಗವಾಗಿ ಬೃಹತ್ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಎಸ್‌ಕೆ ಕಾಲೇಜಿನ ಚೇರ್ಮನ್ ಎಂ.ಆರ್. ಕತ್ತಿ ಅವರು ಹಾಗೂ ಪ್ರೌಢಶಾಲಾ ವಿಭಾಗದ ಚೇರ್ಮನ್ ಎಂ.ಜಿ.ಕತ್ತಿ ಅವರು ಜಂಟಿಯಾಗಿ ಚಾಲನೆ ನೀಡಿದರು. ಕಾಲೇಜಿನ ಪ್ರಾಚಾರ್ಯ ಕಿಶೋರಕುಮಾರ ಕೆ., ಕಾಲೇಜಿನ ಸಮಸ್ತ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹಾಕಿಸಿ

ಇಂಡಿ: 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಿ ಅಂಗವೈಕಲ್ಯದಿಂದ ರಕ್ಷಿಸಬೇಕು. 2014ರಲ್ಲಿ ವಿಶ್ವ ಸಂಸ್ಥೆ ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರ ಎಂದು ಘೋಷಣೆ ಮಾಡಿದೆ ಅದನ್ನು ಮುಂದುವರಿಸಿಕೊಂಡು ಹೋಗಲು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು. ನಗರದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಅವರು ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳಿಗೆ ಪಾಲಕರು ತಪ್ಪದೇ ತಮ್ಮ ಮಕ್ಕಳ ಜೀವಕ್ಕಾಗಿ ಎರಡು ಹನಿ ಪೋಲಿಯೋ ಲಸಿಕೆ ಹಾಕಿಸಬೇಕು ಎಂದರು. ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ, ತಾಲೂಕು ಆರೋಗ್ಯ ಅಧಿಕಾರಿ ಡಾ.ಆರ್.ಎಸ್.ಇಂಗಳೆ ಮಾತನಾಡಿ, 5 ವರ್ಷಕ್ಕೂ ಒಳಗಿನ ಮಕ್ಕಳು 60439 ಮಕ್ಕಳಿಗೆ ಪೋಲಿಯೋ ಹನಿ ನೀಡಲಾಗುವುದು. 266 ಬೂತ್ ಕೇಂದ್ರಗಳಿದ್ದು, 532 ಲಸಿಕೆ ಹಾಕುವರು. 54 ಸುಪ್ರವೈಸರ್, 6 ಸಾರಿಗೆ ಬೂತ್‌ಗಳು, 93777 ಒಟ್ಟು ಮನೆಗಳಿಗೆ ಭೇಟಿ ನೀಡಿಲಾಗುವುದು ಎಂದರು. ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಮಹಾದೇವಪ್ಪಾ ಏವೂರ, ತಾಲೂಕು ಸಾರ್ವಜಿನಿಕ ಆಸ್ಪತ್ರೆ ರಕ್ಷಾ ಸಮಿತಿ ಸದ್ಯಸರು ರಾಜಶೇಖರ ತೋಳನೂರ, ಸತೀಶ ಕುಂಬಾರ, ರಾಜೂ ಪಂತಂಗೆ, ಸುರೇಶ ಕರಖಟ್ಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಯೋಗಪ್ಪಾ ಚನಗೊಂಡ, ಬಳ್ಳೊಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಸಿ.ಸಾಹುಕಾರ ಇದ್ದರು.



ಇಂಡಿ: ನಗರದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಶಾಸಕ ಯಶವಂತರಾಯಗೌಡ ಪಾಟೀಲ ಚಾಲನೆ ನೀಡಿದರು. ಚಿಕ್ಕ ಮಕ್ಕಳ ತಜ್ಞ ಡಾ.ವಿಪುಲ್ ಕೋಳೆಕರ್, ದಂತ ವೈದ್ಯ ಡಾ.ರವಿ ಭತಗುಣಕಿ, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಇದ್ದರು.

ವಿವಿಧೆಡೆ ಸಂಭ್ರಮದ ಕಾರ ಹುಣ್ಣಿಮೆ

ಆಲಮೇಲ: ಪಟ್ಟಣದಲ್ಲಿ ಸೋಮವಾರ ಕಾರ ಹುಣ್ಣಿಮೆಯ ಲಕ್ಷ್ಮೀ ಬಂಡಿಗಳ ಓಟದ ಸ್ಪರ್ಧೆ ನಡೆಯಿತು. ಗ್ರಾಮದೇವರಾದ ಹಜರತ್ ಪೀರ್ ಗಾಲೀಬ ಶಹೀದ್ ದರ್ಗಾದ ಆವರಣದಲ್ಲಿ ದೇಶಮುಖಿ ಹಾಗೂ ದೇಶಪಾಂಡೆ ಅವರ ಲಕ್ಷ್ಮೀ ಬಂಡಿಗಳು ಓಟದ ಸ್ಪರ್ಧೆ ನಡೆಸಿ ಬೇರೆ ಬೇರೆ ಗ್ರಾಮಗಳಿಂದ ಕಾರ ಹುಣ್ಣಿಮೆ ವಿಕ್ಷಿಸಿದರು. ಸಂಜೆ ನಾಲ್ಕು ಗಂಟೆಗೆ ದೇಶಮುಖಿ, ದೇಶಪಾಂಡೆಯವರ ವಾಡೆಯಿಂದ ವಾದ್ಯಗಳೊಂದಿಗೆ ಎತ್ತುಗಳಿಗೆ ಶೃಂಗರಿಸಿ ದೇಶಮುಖಿ, ದೇಸಪಾಂಡೆಯವರ ಬಂಡಿಗಳು ದರ್ಗಾದ ಆವರಣಕ್ಕೆ ಬಂದು ಐದು ಸುತ್ತು ಓಟದ ಸ್ಪರ್ಧೆ ನಡೆಸಿ ನಂತರ ಸಂಪ್ರದಾಯದಂತೆ ಪಟ್ಟಣದ ದೇವರ ಅಗಸಿಗೆ ಕಟ್ಟಿರುವ ಬೇವಿನ ತೋರಣ (ಕರಿ) ದೇಸಮುಖಿರ ಬಂಡಿ ಹರಿದುಕೊಳ್ಳುವ ಮೂಲಕ ಪುನ: ಬಂಡಿ ದೇಶಮುಖಿರ ವಾಡೆಗೆ ತೆರಳಿ ಹರಿದುಕೊಂಡು ಬಂದಿರುವ ಕರಿಯ ಪೂಜೆ ನೆರವೇರಿಸಿದರು. ಜಿಪಂ ಮಾಜಿ ಸದಸ್ಯ ಬಿ.ಆರ್.ಯಂಟಮನ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಅಶೋಕ ಕೊಳಾರಿ, ಗ್ರಾಪಂ ಮಾಜಿ ಅಧ್ಯಕ್ಷ ಅಯೂಬ ದೇವರಮನಿ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭು ವಾಲೀಕಾರ, ಬಸವರಾಜ ತೆಲ್ಲೂರ, ಆಮದ ವಾಲೀಕಾರ ಇದ್ದರು.



ದೇವರಹಿಪ್ಪರಗಿ: ಕಾರ ಹುಣ್ಣಿಮೆ ಅಂಗವಾಗಿ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ರೈತರು ಎತ್ತುಗಳನ್ನು ವಿಶೇಷವಾಗಿ ಸಿಂಗರಿಸಿ ಹಬ್ಬ ಆಚರಿಸಿ ಸಂಭ್ರಮಿಸಿದರು. ಪಟ್ಟಣದಲ್ಲಿ ಎತ್ತುಗಳಿಗೆ ಅಲಂಕಾರಿಕ ಬಣ್ಣಗಳನ್ನು ಹಚ್ಚಿ, ಕೋಡಣಸು, ಜೂಲುಗಳನ್ನು ಹಾಕಿ ಸಿಂಗರಿಸಲಾಗಿತ್ತು.

ಸಂಜೆ ಪಟ್ಟಣದ ಕರಿದೇವರ ದೇವಸ್ಥಾನದಿಂದ ವಿವಿಧ ಬಡಾವಣೆಗಳಲ್ಲಿ ಸಂಚರಿಸಿ ಮೇನ್ ಬಜಾರ್ ರಥದ ಮುಂದೆ ಸಾಂಪ್ರದಾಯಿಕವಾಗಿ ಎತ್ತುಗಳನ್ನು ಒಟ್ಟುಗೂಡಿಸಿ ಎತ್ತಿನ ಕೋಡು ಮತ್ತು ಕೊರಳಿಗೆ ಕಡುಬು, ವಡೆ, ಕರಚಿಕಾಯಿ, ಶೇಂಗಾಕಾಯಿ , ಕೊಬ್ಬರಿ ಬಟ್ಟಲು ಸೇರಿದಂತೆ ವಿವಿಧ ಖಾದ್ಯ ಪದಾರ್ಥಗಳನ್ನು ಕಟ್ಟಿ ಸಾಲಾಗಿ ನಿಲ್ಲಿಸಲಾಗಿತ್ತು. ಎತ್ತುಗಳಿಗೆ ಪೂಜೆ ಸಲ್ಲಿಸಿದ ನಂತರ ಎತ್ತುಗಳಿಗೆ ಮುಂಗಾರು ಮತ್ತು ಹಿಂಗಾರು



ಎಂದು ನಾಮಕರಣ ಮಾಡಿ ಐದು ಬಾರಿ ಓಡಿಸಲಾಯಿತು.

ರೈತ ಮುಖಂಡರಾದ ಸಂಗು ಯಂಬತ್ನಾಳ, ನಿಂಗು ಅವಟಿ, ರಾಚಯ್ಯ ಹಿರೇಮಠ, ಸಂಪತ್ ಜಮಾದಾರ, ವೀರೇಶ ಕುದರಿ, ಕಾಶಿನಾಥ ಕೋರಿ, ಅಪ್ಪು ಪಾಟೀಲ ಸೇರಿದಂತೆ ಯುವಕರು, ಪ್ರಮುಖರು ಉಪಸ್ಥಿತರಿದ್ದರು.

ಇಂಡಿಯಲ್ಲಿ ಸಂಭ್ರಮದ ಕಾರ ಹುಣ್ಣಿಮೆ



ಇಂಡಿ: ಇಂಡಿ ನಗರ ಸೇರಿದಂತೆ ಇಂಗಳಗಿ ಆಳೂರ, ಲಚ್ಯಾಣ ಎಲ್ಲ ಗ್ರಾಮಗಳಲ್ಲಿ ಸೋಮವಾರ ಕಾರಹುಣ್ಣಿಮೆ ಆಚರಿಸಲಾಯಿತು. ಎತ್ತುಗಳಿಗೆ ಬಣ್ಣ ಬಳಿದು ಬಣ್ಣ ಬಣ್ಣದ ಶೃಂಗರಿಸಿ ನಗರದಲ್ಲಿ ಹಾಗೂ ಗ್ರಾಮಗಳಲ್ಲಿ ಬಾಜಾ ಬಜಂತ್ರಿಯೊಂದಿಗೆ ಗುಂಪು ಗುಂಪಾಗಿ ಎತ್ತುಗಳ ಮೆರವಣಿಗೆ ಮಾಡಿದರು. ನಂತರ ಜೊಡು ಎತ್ತುಗಳ ಕಾಲು ಬಂಡಿ ಹಾಗೂ ಬಂಡಿಗಳ ಓಡಿಸುವ ಮೂಲಕ ರೈತರು ಯುವಕರು ಸಂಭ್ರಮಿಸುತ್ತಿರುವುದು ನೋಡುಗರಿಗೆ ಮನರಂಜಿಸಿದರು. ನಂತರ ಹಿಂಗಾರು ಮುಂಗಾರು ಕಲ್ಲು ಬಂಡಿಯನ್ನು ಎತ್ತಿ ಮಳೆ ಬೆಳೆ ಬಗ್ಗೆ ಅಲೋಕನ ಮಾಡಿದರು. ಬಳಿಕ ಊರ ಅಗಸಿ ಬಳಿ ಭಾರ ಎತ್ತುವ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಯಲ್ಲಿ ಯುವಕರು, ರೈತರು ಭಾರವಾದ ಕಲ್ಲು ಎತ್ತಿ ತಮ್ಮ ತಮ್ಮ ಬಲ ಪ್ರದರ್ಶಿಸಿದರು.

ಸಹಕಾರ ಸಪ್ತಾಹ ಅರ್ಥಪೂರ್ಣ ಆಚರಣೆ

ವಿಜಯಪುರ: ಸಹಕಾರ ಇಲಾಖೆಯ ಪ್ರತ್ಯೇಕ ಸಚಿವಾಲಯ ಆರಂಭವಾಗಿ ಐದು ವಸಂತ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಸಮಾಜ ಮುಖಿಯಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಜೂ.29ರಿಂದ ಏಳು ದಿನ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸಲಾಗಿದೆ ಎಂದು ಕರ್ನಾಟಕ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಸಂಜಯ ಪಾಟೀಲ ಕನಮಡಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಹಕಾರ ಸಚಿವಾಲಯ ಆರಂಭವಾಗಿ ಐದು ವರ್ಷ ಸಂದಿವೆ, ಪ್ರಧಾನಿ ಮೋದಿ ಅವರ ದೂರದೃಷ್ಟಿ ಫಲವಾಗಿ ಸಹಕಾರ ಇಲಾಖೆ ಸ್ಥಾಪನೆಯಾಗಿದೆ, ಸಹಕಾರ ಸಪ್ತಾಹಕ್ಕೆ ಈ ಬಾರಿ ವಿಭಿನ್ನತೆಯ ಸ್ಪರ್ಶ ನೀಡುವ ದೃಷ್ಟಿಯಿಂದ ಏಳು ದಿನಗಳ ಸಸಿನೆಡುವ ಕಾರ್ಯಕ್ರಮ, ಸಹಕಾರ ಜಾಗೃತಿ ಶಿಬಿರ, ಸಾಮಾಜಿಕ ಜಾಲತಾಣ ಮೂಲಕ ಸಹಕಾರ ಚಟುವಟಿಕೆಗಳ ಪ್ರಚಾರ ಕಾರ್ಯಕ್ರಮ, ಕೃಷಿ ಮಾಹಿತಿ ಶಿಬಿರ ಹಾಗೂ ವೈದ್ಯಕೀಯ ಶಿಬಿರ ಸಂಘಟಿಸಲಾಗಿದೆ ಎಂದರು.

ನಗರದ ಶಾಂತಿನಿಕೇತನ ಸಂಸ್ಥೆಯಲ್ಲಿ ಯುವಕರಿಗೆ ಸಹಕಾರಿ ಕ್ಷೇತ್ರದ ಮಾಹಿತಿ ನೀಡುವ ಕಾರ್ಯಾಗಾರ ನಡೆಯಲಿದೆ, ಸಿಂದಗಿಯಲ್ಲಿ ಪ್ರೇರಣಾ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಹಾಗೂ ತಾಳಿಕೋಟಿಯಲ್ಲಿ ಸದಾನಂದ ಸೌಹಾರ್ದ ಸಹಕಾರಿಯಲ್ಲಿ ಉಪನ್ಯಾಸ ಹಾಗೂ ಚರ್ಚಾಕೂಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

2021ರ ವರೆಗೂ ಸಹಕಾರ ಇಲಾಖೆ ಕೇಂದ್ರದ ಕೃಷಿ ಇಲಾಖೆಯಲ್ಲಿತ್ತು, ಆದರೆ ಪ್ರಧಾನಿ ಮೋದಿಜಿ ಅವರು ಕೃಷಿ ಇಲಾಖೆಯಿಂದ ಸಹಕಾರ ಇಲಾಖೆಯನ್ನು ಬೇರ್ಪಡಿಸಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಿದರು. ಮೊದಲು ಸಹಕಾರ ಇಲಾಖೆಯಲ್ಲಿ ದತ್ತಾಂಶವೇ ಇರಲಿಲ್ಲ, ಮೊದಲನೆ ಸಭೆಯಲ್ಲಿಯೇ ಮೊದಲ ಕೇಂದ್ರ ಸಹಕಾರಿ ಸಚಿವ ಅಮಿತ್ ಶಾ ಅವರು ಆದೇಶ ಹೊರಡಿಸಿ ದೇಶಾದ್ಯಂತ ಇರುವ ಸಹಕಾರಿಗಳ ಅಂಕಿ ಅಂಶಗಳ ಡೇಟಾ ಸಂಗ್ರಹಿಸಲು ಸೂಚಿಸಿದರು ಎಂದರು.

ಇಫ್ಕೋ ಕ್ರಿಫ್ಕೋ ಸಂಸ್ಥೆಗಳನ್ನು ಮಾಡಿ ಅವುಗಳನ್ನು ಬೆಳೆಸುವ ಕೆಲಸ ಮಾಡಿದರು ಎಂದರು.

ಒಕ್ಕೂಟದ ಉಪಾಧ್ಯಕ್ಷ ಚಂದ್ರಶೇಖರ ಕವಟಗಿ, ಪರುಶರಾಮ ಚಿಂಚಲಿ, ದೀಪಕ ಶಿಂತ್ರೆ, ಡಾ.ಸುರೇಶ ಬಿರಾದಾರ, ಸಿದ್ದು ಮಲ್ಲಿಕಾರ್ಜುನಮಠ, ವಿವೇಕಾನಂದ ಶಿರೋಳಕರ, ವಿಜಯ ಜೋಶಿ ಇದ್ದರು.



ಸಾರ್ವಜನಿಕ ಸ್ಥಳಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಕ್ರಮ ಕೈಗೊಳ್ಳಿ

ಕೊಲ್ಹಾರ: ಶಾಲಾ ಕಾಲೇಜುಗಳ ಮುಂದೆ ಗುಟ್ಕಾ ಸಿಗರೇಟ್ ಬಿಡಿ ಹಾಗೂ ಇತರೆ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಸಾರ್ವಜನಿಕರು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ವಾರ್ಡ್ ಸಂಖ್ಯೆ 4ರಲ್ಲಿ ಬರುವ ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಯ ಶಾಲಾ ಕಾಲೇಜುಗಳು ಮುಂದೆ ಕಾನೂನು ಬಹಿರ ಚಟುವಟಿಕೆಗಳು ನಡೆಯುತ್ತಿದ್ದು ಕೂಡಲೇ ತಡೆಗಟ್ಟಲು ಆಗ್ರಹಿಸಿ ಸೋಮವಾರ ಸಾರ್ವಜನಿಕರು ತಹಸಿಲ್ದಾರ್, ಪೊಲೀಸ್ ಠಾಣೆ ಮತ್ತು ಪಪಂಗೆ ಮನವಿ ಸಲ್ಲಿಸಿದರು.

ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ವಿರುಪಾಕ್ಷಿ ಕೋಲಕಾರ ಹಾಗೂ ಪಪಂ ಸದಸ್ಯ ಬಾಬು ಭಜಂತ್ರಿ ಮಾತನಾಡಿ, ಶಾಲಾ ಕಾಲೇಜುಗಳಿಂದ ಸುಮಾರು 200 ಮೀಟರ್ ಅಂತರದಲ್ಲಿ ಗುಟ್ಕಾ ಸಿಗರೇಟ್ ನಂತಹ ಅಂಗಡಿಗಳು ದೂರವಿರಬೇಕು ಎಂಬ ಆದೇಶವಿದ್ದರೂ ಕೂಡ ಈ ಶಾಲಾ ಕಾಲೇಜುಗಳ ಆವರಣದ ಮುಂದೆ ಗುಟ್ಕಾ, ಸಿಗರೇಟ್ ಹಾಗೂ ಅತಿಯಾದ ಕೆಫೆನ್ ಇರುವ ಸ್ಟಿಂಗ್, ಅಗ್ನಿ, ಇನ್ನಿತರ ಮಾದಕ ವಸ್ತುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು ಜೊತೆಗೆ ತಮ್ಮ ಅಂಗಡಿ ಗಳಲ್ಲಿ ಯುವಕರು ಕುಳಿತುಕೊಂಡು ಧೂಮಪಾನ ಸೇವನೆ ಸೇರಿದಂತೆ ಇತರೆ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಶಾಲಾ-ಕಾಲೇಜುಗಳ ಮುಂದಿನ ಮುಖ್ಯ ರಸ್ತೆಯಲ್ಲಿ ಶಿವಾಜಿ ಸರ್ಕಲ್ ಸಂತ ಸೇವಾಲಾಲ್ ಸರ್ಕಲ್ ಬಸ್ ನಿಲ್ದಾಣ ಇತರಡೆಗೆ ದ್ವಿಚಕ್ರ ವಾಹನದಲ್ಲಿ ಕಾನೂನುಬಾಹಿರವಾಗಿ ಮೂರು, ನಾಲ್ಕು, ಐದು ಜನರು ಯುವಕರು ಕುಳಿತುಕೊಂಡು ಸಂಚರಿಸುತ್ತಾ ಈ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಹೆಣ್ಣು ಮಕ್ಕಳಿಗೆ ತೊಂದರೆ ಕೊಡುತ್ತಿದ್ದು ಅವರನ್ನು ಚುಡಾಯಿಸುವುದೂ ಸಾರ್ವಜನಿಕರಿಗೆ ಕಂಡುಬಂದಿದ್ದು ಕೂಡಲೇ ತಾವುಗಳು ಇದರ ಕುರಿತು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ರಾಮಣ್ಣ ಉಪ್ಪಲದಿನ್ನಿ, ರಾಜು ತುಂಬರಮಟ್ಟಿ, ವೀರಭದ್ರಪ್ಪ ಬಾಗಿ, ರಮೇಶ ಕಾಕಂಡಕಿ, ರಾಕೇಶ ಕೆಳಗಿನಮನಿ, ಸುನೀಲ ನಂದಿ ಸೇರಿದಂತೆ ಇತರರು ಇದ್ದರು.



ಸಂಸದ ರಮೇಶ ಜಿಗಜಿಣಗಿ ತೇಜೋವಧೆ ಸರಿಯಲ್ಲ: ಡಬ್ಬಿ

ವಿಜಯಪುರ: ಸಾತ್ವಿಕ ರಾಜಕಾರಣಿ ಆಗಿರುವ ಸಂಸದ ರಮೇಶ ಜಿಗಜಿಣಗಿ ಅವರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಿ, ಅವರ ತೇಜೋವಧೆ ಮಾಡುವುದು ಸರಿಯಲ್ಲ ಎಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಡಬ್ಬಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಕಾ, ಬಾಬಾ, ಅಣ್ಣ ಎಂದು ಸಾತ್ವಿಕತನದಿಂದ ಕೂಡಿದ ಮಾತುಗಳನ್ನಾಡುವ ಸಂಸದ ರಮೇಶ ಜಿಗಜಿಣಗಿ ಲಕ್ಷ ಕೋಟಿ ರೂ.ಗೂ ಹೆಚ್ಚು ಅನುದಾನವನ್ನು ಜಿಲ್ಲೆಗೆ ತಂದಿರುವ ಕೀರ್ತಿ ಸಂಸದ ರಮೇಶ ಜಿಗಜಿಣಗಿ ಅವರಿಗೆ ಸಲ್ಲುತ್ತದೆ. ಈ ಹಿಂದಿನ ಸಂಸದರು ಮಾಡಿದ ಕಾರ್ಯವೈಖರಿ ಹಾಗೂ ಸಂಸದ ರಮೇಶ ಜಿಗಜಿಣಗಿ ಅವರ ಕಾಲಘಟ್ಟದಲ್ಲಿ ಕೈಗೊಂಡ ಕಾಮಗಾರಿಗಳನ್ನು ತುಲನೆ ಮಾಡಿ ನೋಡಿ, ಸಂಸದ ರಮೇಶ ಜಿಗಜಿಣಗಿ ಅವರು ಸಂಸದರಾಗಿದ್ದ ಅವಧಿಯಲ್ಲಿ ರೈಲ್ವೇ ಓವರ್ ಬ್ರಿಡ್ಜ್, ವಿಮಾನ ನಿಲ್ದಾಣ, ಬಹುಹಳ್ಳಿ ಕುಡಿಯುವ ನೀರು, ವಿಜಯಪುರ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ಪ್ರಗತಿ ಹೀಗೆ ಅವರ ಸಾಧನೆ ಹೇಳಲು ದಿನಗಳೇ ಬೇಕು ಎಂದರು.

ಮುಖಂಡರಾದ ರವಿ ವಗ್ಗೆ ಮಾತನಾಡಿ, ಎಸ್‌ಇಪಿ- ಟಿಎಸ್‌ಪಿ ಹಣವನ್ನು



ಬೇರೆ ಉದ್ದೇಶಕ್ಕೆ ಬಳಕೆ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ- ಪರಿಶಿಷ್ಟ ಸಮುದಾಯಗಳಿಗೆ ಮಾಡಿದ ಘೋರ ಅನ್ಯಾಯ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಚುನಾವಣೆ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿರುವುದು ಪರಿಶಿಷ್ಟ ಪಂಗಡಗಳಿಗೆ ಮಾಡಿದ ಘೋರ ಅನ್ಯಾಯ. ಇಷ್ಟೆಲ್ಲ ದೊಡ್ಡ ಅನ್ಯಾಯದ ವಿರುದ್ಧ ದಲಿತ ಸಂಘಟನೆಗಳು ಪ್ರಬಲ ಧ್ವನಿ ಎತ್ತಬೇಕು, ಅವರು ಏನೂ ಮಾಡಿಕೊಳ್ಳಲು ಸಾಧ್ಯವಿಲ್ಲ, ಸಂಘಟನೆಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಸಿಡಿದೇಳಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡರಾದ ಈರಣ್ಣ ರಾವೂರ, ಮಳುಗೌಡ ಪಾಟೀಲ, ಸಿದ್ದು ಬುಳ್ಳಾ, ಮಂಜುನಾಥ ಮೀಸೆ, ವಿಜಯ ಜೋಶಿ ಇದ್ದರು.

ಮಕ್ಕಳಿಗೆ ಶಿಕ್ಷಣದ ಜೊತೆ ಸಂಸ್ಕಾರ ಮುಖ್ಯ

ಮುದ್ದೇಬಿಹಾಳ: ಪ್ರಸ್ತುತ ಆಧುನಿಕ ತಂತ್ರಜ್ಞಾನ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅತೀ ಹಿಂದುಳಿದ ಹೆಳವ ಸಮಾಜ ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದು ಕಾಂಗ್ರೆಸ್ ಮುಖಂಡ ವೈ.ಎಚ್ ವಿಜಯಕರ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಅಖಿಲ ಕರ್ನಾಟಕ ಹೆಳವ ಸಮಾಜ ವಿಜಯಪುರ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಸವ ಭೃಂಗೇಶ್ವರ ಸ್ವಾಮಿಗಳು, ಬಸವರಾಜ ಗುರೂಜಿ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ 28 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಜೊತೆಗೆ ನಿವೃತ್ತ ನೌಕರರಿಗೆ ಗೌರವಿಸಲಾಯಿತು. ಜೊತೆಗೆ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಿಂಗಣ್ಣ ಬಿಳೆಬಾವಿ ಉಚಿತವಾಗಿ ನೀಡಿರುವ



2000 ರೂ. ಮುಖಬೆಲೆಯ 3 ಪುಸ್ತಕಗಳನ್ನು ನೀಡಲಾಯಿತು.

ಬಿಜೆಪಿ ಮುಖಂಡ ಬಸನಗೌಡ ಯಡಿಯಾಪುರ ಮಾತನಾಡಿದರು. ಎನ್ ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ, ಪಿಎಸ್‌ಐ ಸಂಜಯ್ ತಿಪ್ಪಾರಡ್ಡಿ, ಉಪನ್ಯಾಸಕ ಬಸವರಾಜ ಹಂಚಲಿ, ಜಿಲ್ಲಾಧ್ಯಕ್ಷ ಬಾಬು ಹೆಳವರ ಮಾತನಾಡಿದರು. ಗದಗ ಜಿಲ್ಲಾಧ್ಯಕ್ಷ ಕೆಂಚಪ್ಪ ಹೆಳವರ, ಕಲಬುರ್ಗಿ ಜಿಲ್ಲಾಧ್ಯಕ್ಷ ಸಾಯಬಣ್ಣ ಹೆಳವರ, ಯಾದಗಿರಿ ಜಿಲ್ಲಾಧ್ಯಕ್ಷ ಹಣಮಂತರಾಯ ಹಳಿಸಗರ, ಬಾಗಲಕೋಟೆ ಜಿಲ್ಲಾಧ್ಯಕ್ಷ ಅಶೋಕ್ ಹಾಲಿಗೇರಿ, ನಿಂಗಣ್ಣ ಬಿಳೇಬಾವಿ, ಪರಶುರಾಮ ಅಂಗಡಿ, ಮಲ್ಲಿಕಾರ್ಜುನ ಖಾನಾಪುರ, ಬಸವರಾಜ ಯಾಳಗಿ, ಶ್ರೀಮಂತ ಸೌಂದರ್ಗೆ, ಶರಣಪ್ಪ ಸಾರಥಿ ಇದ್ದರು. ಸಂಗಮೇಶ ಐಹೊಳೆ, ಮಹಾಂತೇಶ ಹೆಳವರ ಇಟಗಿ ಹಾಗೂ ರಾಘವೇಂದ್ರ ಮಾಸ್ತರ ಸ್ವಾಗತಿಸಿ ವಂದಿಸಿದರು.

ವಿದ್ಯಾರ್ಥಿಗಳು ಸಮಯ ಪಾಲನೆ ಮಾಡಲಿ

ಬಸವನಬಾಗೇವಾಡಿ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಮಾಧ್ಯಮಿಕ ಮತ್ತು ಪಿಯು ಕಾಲೇಜಿನ ಹಂತದಲ್ಲಿ ಶ್ರದ್ಧೆಯಿಂದ ಸಮಯ ಪಾಲನೆ ಮಾಡಿಕೊಂಡು ಅಧ್ಯಯನ ಮಾಡುತ್ತಾರೊ ಅವರು ಯಶಸ್ಸು ಸಾಧಿಸಬಲ್ಲರು ಎಂದು ಸ್ಥಳೀಯ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ರಮೇಶ ಪೂಜಾರಿ ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಪಿಯು ಕಾಲೇಜಿನಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬಾಲ್ಯಾವಸ್ಥೆಯಲ್ಲಿನ ಕಲಿಕೆ ವಿದ್ಯಾರ್ಥಿಗಳಿಗೆ ಉತ್ತಮ ತಳಹದಿಯಾಗುತ್ತದೆ. ಆದ್ದರಿಂದ ತಾವೆಲ್ಲರೂ ತಮ್ಮ ಪಾಲಕರು ಕಂಡ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅತ್ಯಂತ ಶ್ರದ್ಧೆಯಿಂದ ಶಿಸ್ತಿನಿಂದ ತಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆದರೆ ತಾವು ಕೇವಲ ಮನೆಗೆ ಅಷ್ಟೇ ಅಲ್ಲ ಇಡೀ ದೇಶಕ್ಕೆ ಮಾದರಿಯಾಗುವಂತೆ ಬೆಳೆದು ನಿಲ್ಲುತ್ತಾರೆ ಎಂದರು.

ಇಂದಿನ ಆಧುನಿಕ ಸಮಾಜದಲ್ಲಿ ಶಿಕ್ಷಣಕ್ಕೆ ಯಾವುದು ಸರಿಸಮವಾಗಿ ನಿಲ್ಲಲಾರದು ಆದ್ದರಿಂದ ಸಮಯವನ್ನು ವ್ಯರ್ಥ ಮಾಡದೆ ಶಿಕ್ಷಣಕ್ಕೆ ಆದ್ಯತೆ ನೀಡಬೇಕು, ತಂದೆ ತಾಯಿಗಳು ಕಷ್ಟಪಟ್ಟು ಕೊಡಿಸಿದ ಶಿಕ್ಷಣಕ್ಕೆ ಒಂದು ಬೆಲೆ



ಬರುತ್ತದೆ ಎಂದು ತಿಳಿಸಿದರು.

ಮಹಾವಿದ್ಯಾಲಯದ ಪ್ರಾಚಾರ್ಯ ರಾಮಚಂದ್ರ ಪವಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಎರಡು ವರ್ಷದ ಪಿಯುಸಿ ಅಧ್ಯಯನವು ವಿದ್ಯಾರ್ಥಿಯನ್ನು ಯಾವ ದಿಕ್ಕಿಗಾದರೂ ಕೊಂಡಬಹುದು. ಆದ್ದರಿಂದ ಪ್ರತಿಯೊಬ್ಬರೂ ಧನಾತ್ಮಕ ವಿಚಾರಗಳೊಂದಿಗೆ ಎದುರಾದ ಸಮಸ್ಯೆಗಳನ್ನು ಸುಲಭವಾಗಿ ಪಕ್ಕಕ್ಕೆ ಸರಿಸಿ ಸಾಧನೆ ಮಾಡುವಂತವರಾಗಬೇಕೆಂಬುವುದು ಸ್ಫೂರ್ತಿದಾಯಕ ಎಂದು ಹೇಳಿದರು. ನಿಖಿತಾ ಹಂಜಗಿ, ಸವಿತಾ ಅಡಗಿಮನಿ ನಿರೂಪಿಸಿದರು. ಕಾಲೇಜಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದು ಕೀರ್ತಿ ತಂದ ಹಿರಿಯ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ವತಿಯಿಂದ ವಿಭಾಗವಾರು ಸನ್ಮಾನಿಸಲಾಯಿತು.

ಕೊಂಡಗೂಳಿ ಗ್ರಾಮಕ್ಕೆ ಬಸ್: ಸಂಭ್ರಮ

ದೇವರಹಿಪ್ಪರಗಿ: ಬಸವನಬಾಗೇವಾಡಿಯಿಂದ ಕೊಂಡಗೂಳಿ ಮಾರ್ಗವಾಗಿ ಸಿಂದಗಿ ಪಟ್ಟಣಕ್ಕೆ ಹೋಗುವ ನೂತನ ಬಸ್‌ಗೆ ಗ್ರಾಮಸ್ಥರಿಂದ ಹಾರ, ತುರಾಯಿ ಪೂಜೆ ಸಲ್ಲಿಸುವ ಮೂಲಕ ಸಂಭ್ರಮಿಸಿದರು.

ಬಹು ದಿನಗಳ ಬೇಡಿಕೆಯಾದ ಕೊಂಡಗೂಳಿ ಮಾರ್ಗವಾಗಿ ಬಸವನ ಬಾಗೇವಾಡಿ, ಹೂವಿನ ಹಿಪ್ಪರಗಿ, ಕುದುರಿ ಸಾಲವಾಡಗಿ, ಯಾಳವಾರ , ಕೊಂಡಗೂಳಿ, ಕೋರವಾರ ಹಾಗೂ ಕೊಕಟನೂರ ಮಾರ್ಗವಾಗಿ ಸಿಂದಗಿ ಪಟ್ಟಣಕ್ಕೆ ನೂತನವಾಗಿ ಬಸ್ ಸಂಚಾರಕ್ಕೆ ಶಾಸ್ತು ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಹಾಗೂ ವಿಜಯಪುರ ವಿಭಾಗದ ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಗ್ರಾಮಸ್ಥರು ಸಮಸ್ಯೆಗೆ ಸ್ಪಂದಿಸಿದ್ದಕ್ಕೆ ಅಭಿನಂದನೆ ಸಲ್ಲಿಸಿದರು.

ಗ್ರಾಮದ ಮುಖಂಡರು ಮಾತನಾಡಿ, ಗ್ರಾಮಸ್ಥರ ಬಹುದಿನದ ಬೇಡಿಕೆ ಈಡೇರಿಕೆಗೆ ಸಹಕರಿಸಿದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಅಭಿನಂದಿಸಿದರು.

ಮುಖಂಡರಾದ ಶಿವು ಕೊಳ್ಳಾರಿ, ಬಾಬು ನದಾಫ್, ಉಮೇಶ ಹನ್ನಿ,ಕಾಸಿಲಿಂಗ ಸಿಂದಗೇರಿ,ಅಕ್ಷಯ ಗೊಬ್ಬರ, ಕಲ್ಲು ಆವರಾದಿ, ಶಿವಾನಂದ ಗೊಬ್ಬರ,ಮಹಿಬೂಬ ಖಾಜಿ, ಮುನೀರ್ ನದಾಫ್, ಬಸವಲಿಂಗಯ್ಯ ಹಿರೇಮಠ ಹಾಗೂ ಬಸವರಾಜ ಕುಲಕರ್ಣಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



ಮತ ಹಕ್ಕು ಉಳಿವಿಗೆ ಅರಿವು ಅವಶ್ಯ: ಗಣಿಹಾರ

ವಿಜಯಪುರ: ಜಾಗೃತಿ ಕೊರತೆಯಿಂದ ಮತದಾರರು ತಮ್ಮ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗದಂತೆ ವ್ಯಾಪಕ ಅರಿವು ಮೂಡಿಸುವ ಕಾರ್ಯ ಅಗತ್ಯ ಎಂದು ಅಹಿಂದ ಮುಖಂಡ ಎಸ್. ಎಂ.ಪಾಟೀಲ ಗಣಿಹಾರ ಹೇಳಿದರು.

ಜಿಲ್ಲೆಯ ತಿಕೋಟಾ ತಾಲೂಕಿನ ತಿಕೋಟಾ ಪಟ್ಟಣದ ಅಮ್ಮ ಫೌಂಡೇಶನ್ ಸಭಾಂಗಣದಲ್ಲಿ ಅಂಜುಮನ್ ಇಸ್ಲಾಂ ಕಮಿಟಿ ತಿಕೋಟಾ ಹಾಗೂ ದಲಿತ ವಿದ್ಯಾರ್ಥಿ ಪರಿಷತ್ ಆಶ್ರಯದಲ್ಲಿ ಎಸ್‌ಐಆರ್ ಕುರಿತಾದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆಲವೊಂದು ರಾಜಕೀಯ ಪಕ್ಷಗಳು ಉದ್ದೇಶಪೂರ್ವಕವಾಗಿ ಮತಗಳನ್ನು ಡಿಲೀಟ್ ಮಾಡಿಸುವ ಹುನ್ನಾರದಲ್ಲಿ ತೊಡಗಿವೆ, ಕಾನೂನುಬದ್ಧವಾಗಿ ಎಲ್ಲರೂ ದಾಖಲಾತಿ ನಿರ್ವಹಣೆ ಮಾಡಿ ಮತಪಟ್ಟಿಯಲ್ಲಿ ತಮ್ಮ ಹೆಸರು ಇರಿಸುವಂತೆ ನೋಡಿಕೊಳ್ಳಬೇಕು ಎಂದರು.

ದಲಿತ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಶ್ರೀನಾಥ ಪೂಜಾರಿ ಮಾತನಾಡಿ, ಮತ ಎಂಬುದು ಚುನಾವಣೆಗೆ ಸೀಮಿತವಾದ ಅಧಿಕಾರವಲ್ಲ, ಸಮಗ್ರ ಅಭಿವೃದ್ಧಿ ಬರೆಯುವ ಒಂದು ದಿವ್ಯ ಅಸ್ತ್ರ ಹೀಗಾಗಿ ಕೆಲವು ಪಕ್ಷಗಳ ಕುತಂತ್ರದಿಂದ ಈ ಅಧಿಕಾರ ಮೊಟಕಾಗಬಾರದು ಎಂದರು.

ಮತ ಎನ್ನುವುದು ಕೇವಲ ಚುನಾವಣೆಗೆ ಸಂಬಂಧಿಸಿದ ವಿಷಯವಲ್ಲ ಅಥವಾ ಯಾವುದೋ ಒಂದು ಪಕ್ಷದ



ಅಭ್ಯರ್ಥಿಯನ್ನು ಆಯ್ಕೆ ಮಾಡಲು ಬಳಸುವ ಕ್ಷಣಿಕ ಅಧಿಕಾರವೂ ಅಲ್ಲ, ಅದು ದೇಶದ ಜನರ ಸಮಗ್ರ ಅಭಿವೃದ್ಧಿಗೆ ಇರುವ ಪ್ರಬಲ ಅಸ್ತ್ರವಾಗಿದೆ ಎಂದರು.

ಎಸ್‌ಐಆರ್ ಜಾಗೃತಿ ಅಭಿಯಾನದ ಕಾರ್ಯಕರ್ತ ಮೊಹಮ್ಮದ್ ಇಸ್ಮಾಯಿಲ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಎಸ್‌ಐಆರ್ ಅರ್ಜಿ ಭರ್ತಿ ಮಾಡುವ ವಿಧಾನ, ಅಗತ್ಯ ದಾಖಲೆಗಳು ಹಾಗೂ ಚುನಾವಣೆ ಆಯೋಗಕ್ಕೆ ಸಲ್ಲಿಸಬೇಕಾದ ಪ್ರಕ್ರಿಯೆಯ ಕುರಿತು ಮಾಹಿತಿ ನೀಡಿದರು.

ಮುಖಂಡ ಯಾಕೂಬ್ ಜತ್ತಿ ಮಾತನಾಡಿದರು. ಅಲ್ತಾಫ್ ಬಾಗವಾನ, ಇರ್ಫಾನ್ ಬಾಗವಾನ, ಸಿದ್ದು ಗೌಡೆನವರ, ರಾಮು ದೇಸಾಯಿ, ರಜಾಕ್ ಮುಲ್ಲಾ, ಅನ್ವಾರ್ ಭಗವಾನ್, ಹಾಜಿಲಾಲ್ ಭಗವಾನ್, ಖತಿಬ್ ಯಳಾಪುರ, ಫಯಾಜ್ ಖತೀಬ್ ಮುಜಾವರ್, ವಸೀಂ ಮುಲ್ಲಾ, ಮಹಿಬೂಬ್‌ಸಾಬ್ ಖತೀಬ್, ಬಂದೇನವಾಜ್ ಖೈನೂರ ಇದ್ದರು.

ಕಿರುಸುದ್ದಿ

ನಾಳೆ ಉಚಿತ ಮೆಗಾ ಹೆಲ್ತ್ ಕ್ಯಾಂಪ್



ಕಲಬುರಗಿ: ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಎನ್.ಕೆ. ಆಸ್ಪತ್ರೆ, ಕಲಬುರಗಿ ವತಿಯಿಂದ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಜು.1ರಂದು ಉಚಿತ ಮೆಗಾ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ವಿವಿಧ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ, ವೈದ್ಯಕೀಯ ಸಲಹೆ ಹಾಗೂ ಅಗತ್ಯವಿರುವ ರೋಗಿಗಳಿಗೆ ಉಚಿತ ಔಷಧಗಳ ವಿತರಣೆ ಮಾಡಲಾಗುತ್ತದೆ. ಜನಸಾಮಾನ್ಯರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಸುಲಭವಾಗಿ ತಲುಪಿಸುವ ಉದ್ದೇಶದಿಂದ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಆಸ್ಪತ್ರೆಯಲ್ಲಿರುವ ವಿವಿಧ ವಿಭಾಗಗಳ ಅನುಭವಿ ತಜ್ಞ ವೈದ್ಯರು ಶಿಬಿರದಲ್ಲಿ ಭಾಗವಹಿಸಿ ಸಾರ್ವಜನಿಕರಿಗೆ ಸೇವೆ ಸಲ್ಲಿಸಲಿದ್ದಾರೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಆಸ್ಪತ್ರೆಯ ಆಡಳಿತ ಮಂಡಳಿ ಮನವಿ ಮಾಡಿದೆ.

ಇಂದು ಬೃಹತ್ ಪ್ರತಿಭಟನೆ

ಸಿಂಧನೂರು: ನಗರದ ವಾರ್ಡ್ ಒಂದರಲ್ಲಿ ಇತ್ತೀಚೆಗೆ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ದುಷ್ಕರ್ಮಿಯೊಬ್ಬ ಲೈಂಗಿಕ ದೌರ್ಜನ್ಯ ನಡೆಸಿರುವುದನ್ನು ಖಂಡಿಸಿ, ದುಷ್ಕರ್ಮಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಇಂದು ಜೂ.30ರಂದು ತಹಶೀಲ್ ಕಾರ್ಯಾಲಯದ ಮುಂದೆ ಬೆಳಗ್ಗೆ 10 ಗಂಟೆಗೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ರವಾನಿಸಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಈ ಪ್ರತಿಭಟನೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಸೇರಿದಂತೆ ನಗರದ ವಿವಿಧ ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಉಪನ್ಯಾಸಕರು ಹಾಗೂ ವಿವಿಧ ಜನಪರ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಅಧಿಕಾರಿ, ಸಿಬ್ಬಂದಿಗೆ ತರಬೇತಿ ಕಾರ್ಯಾಗಾರ



ಕೊಪ್ಪಳ: ವಿಕಸಿತ ಭಾರತ ಗ್ಯಾರಂಟಿ ರೋಜಗಾರ್ ಮತ್ತು ಅಜೀವಿಕ ಮಿಷನ್ (ಗ್ರಾಮೀಣ) ಕುರಿತು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕೊಪ್ಪಳ ತಾಲೂಕಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಾಗಾರ ಜರುಗಿತು.

ಜುಲೈ 1 ರಿಂದ ದೇಶದಾದ್ಯಂತ ಜಾರಿಯಾಗಲಿರುವ ವಿಬಿ-ಜಿ ರಾಮ್ ಜಿ ಯೋಜನೆನ್ನು ಅನುಷ್ಠಾನಿಸುವ ಕುರಿತಾಗಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಕೊಪ್ಪಳ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಕಾರಟಗಿ ತಾ.ಪಂ (ಗ್ರಾ.ಉ) ಸಹಾಯಕ ನಿರ್ದೇಶಕರಾದ ವೈ.ವನಜಾ, ಕುಷ್ಟಗಿ ತಾ.ಪಂ (ಗ್ರಾ.ಉ) ಸಹಾಯಕ ನಿರ್ದೇಶಕರಾದ ನಿಂಗನಗೌಡ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಂಶೀರ್ ಅಲಿ ಅವರು ಈ ತರಬೇತಿಯಲ್ಲಿ ಯೋಜನೆ ಕಾರ್ಯವೈಖರಿ ವಿಧಾನಗಳ ಕುರಿತು ಪಿಪಿಟಿ ಮುಖಾಂತರ ಮಾಹಿತಿ ವಿವರಿಸಿದರು.

ತರಬೇತಿಯಲ್ಲಿ ಅನುಷ್ಠಾನ ಇಲಾಖೆಗಳಾದ ಕೃಷಿ, ಅರಣ್ಯ, ತೋಟಗಾರಿಕೆ, ರೇಷ್ಮೆ, ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜಿಲ್ಲಾ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ತಾ.ಪಂ ವಿವಿಧ ವಿಭಾಗಗಳ ಸಹಾಯಕ ನಿರ್ದೇಶಕರು, ಜಿ.ಪಂ ಎಡಿಪಿಸಿ, ಜಿಲ್ಲಾ ಐಇಸಿ ಸಂಯೋಜಕರು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಮತ್ತು ತಾಲೂಕಾ ಪಂಚಾಯತಿಯ ನರೇಗಾ ಸಿಬ್ಬಂದಿಗಳು, ತಾಂತ್ರಿಕ ಸಹಾಯಕರುಗಳು (ಗ್ರಾಮ ಪಂಚಾಯತ ಅನುಷ್ಠಾನ ಇಲಾಖೆ), ಕಂಪ್ಯೂಟರ್ ಆಪರೇಟರ್‌ಗಳು, ಬಿ.ಎಫ್.ಟಿಗಳು, ಗ್ರಾಮ ಕಾಯಕ ಮಿತ್ರರು ಹಾಜರಿದ್ದರು.



ಮಾನ್ವಿ: ಪಟ್ಟಣದ ಅಂಬಿಗರ ಚೌಡಯ್ಯ ನಗರದಲ್ಲಿ ಕಾರುಹುಣ್ಣಿಮೆಯ ಅಂಗವಾಗಿ ರೈತರು ತಮ್ಮ ಎತ್ತುಗಳ ಕೋಡಿಗೆ ಬಾಶಿಂಗ ಕಟ್ಟಿ ಸಿಂಗರಿಸಿ ದೊಡ್ಡ ಅಗಸೆಯ ವರೆಗೆ ಮೆರವಣಿಗೆ ನಡೆಸಿ ಕರಿ ಹರಿಯುವುದಕ್ಕೆ ಬಿಡಲಾಯಿತು. ಮುಖಂಡರಾದ ನಾಗೇಶ್ ಕಬ್ಬೇರ್, ರಾಮಣ್ಣ ಮಾಡುಬಾಯ್, ಯಲ್ಲಪ್ಪ ಮಡಿವಾಳ, ಈರಪ್ಪ ಉಪ್ಪಾರ್, ವೆಂಕಟೇಶ್ ಬೆಲ್ಲ, ಅಂಬರೀಶ್ ತಳವಾರ್, ಮುದುಕಪ್ಪ ತಳವಾರ್, ತಳವಾರ್ ನಾಗರಾಜ್, ಕಬ್ಬೇರ್ ವೀರೇಶ್‌ಹಾಲ್ವಿ, ಭೀಮಣ್ಣ ಹಾಲ್ವಿ ರಮೇಶ್ ಕಬ್ಬೇರ್ ಇತರರು ಭಾಗವಹಿಸಿದರು.

ಪೊಲೀಸ್ ಭವನ, ಅತಿಥಿ ಗೃಹ ನಿರ್ಮಾಣಕ್ಕೆ ಅಡಿಗಲ್ಲು

ಕೊಪ್ಪಳ: ಜಿಲ್ಲಾ ಪೊಲೀಸ್ ಇಲಾಖೆಗೆ ಅವಶ್ಯ ಇರುವ ಎಲ್ಲಾ ಕೆಲಸಗಳನ್ನು ಮಾಡಿಕೊಡಲು ಅಗತ್ಯವಾಗಿ ಅವಶ್ಯ ಇರುವ ಅನುದಾನವನ್ನು ನೀಡುತ್ತೇನೆ ಎಂದು ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಹೇಳಿದರು.

ತಾಲೂಕಿನ ಗಿ. ಬಸಾಪುರ ಗ್ರಾಮದ ಹತ್ತಿರ ಬರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕೊಪ್ಪಳ ಆವರಣದಲ್ಲಿ 2.31 ಕೋಟಿ ವೆಚ್ಚದಲ್ಲಿ ಪೊಲೀಸ್ ಭವನ ಹಾಗೂ ಅತಿಥಿ ಗೃಹ ನಿರ್ಮಾಣದ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಅನುಕೂಲವಾಗುವ ಸೌಲಭ್ಯಗಳನ್ನು ಮಂಜೂರು ಮಾಡಿಸಲು ಕ್ರಮ ವಹಿಸುತ್ತೇನೆ ಎಂಬ ಭರವಸೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಡಿ.ಆರ್ ಡಿವೈಎಸ್ಪಿ ಶಶಿಧರ್ ಹಿರೇಮಠ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಗೂಳಪ್ಪ ಹಲಿಗೇರಿ, ಗವಿಸಿದ್ದಪ್ಪ ಕರಡಿ, ವಿಶ್ವನಾಥ್ ರಾಜು, ಕೆ.ಎಂ. ಸೈಯದ್, ಹನಮಂತ ಬೋರೆವೆಲ್, ಆನಂದ ಕಿನ್ನಾಳ, ಗ್ಯಾನಪ್ಪ ತಳಕಲ್, ಕಾಮಣ್ಣ ಕಂಬ್ಳಿ, ಭರಮಪ್ಪ ಹಾಲವರ್ತಿ, ಮುದಿಯಪ್ಪ ಆದೋನಿ, ಫಕೀರಪ್ಪ ಬಂಗ್ಲಿ, ಗೋವಿಂದ ಚೌಡ್ಕಿ, ನಾಗರಾಜ್ ಕಿಡದಾಳ, ಹನಮಂತ ವಾಲ್ಮೀಕಿ, ಅಕ್ಬರ್ ಪಲ್ವಾನ್, ಪದ್ಮಾವತಿ ಕಂಬಳಿ, ನಿಂಗಪ್ಪ ಕುಟುಗನಹಳ್ಳಿ, ನಿಂಗಪ್ಪ ಮಜ್ಜಿಗಿ, ಅಮರೇಶ್ ಕಂಬ್ಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕೊಪ್ಪಳ: ತಾಲೂಕಿನ ಗಿ. ಬಸಾಪುರ ಗ್ರಾಮದ ಹತ್ತಿರ ಬರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕೊಪ್ಪಳ ಆವರಣದಲ್ಲಿ 2.31 ಕೋಟಿ ವೆಚ್ಚದಲ್ಲಿ ಪೊಲೀಸ್ ಭವನ ಹಾಗೂ ಅತಿಥಿ ಗೃಹ ನಿರ್ಮಾಣದ ಕಾಮಗಾರಿಗೆ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಅವರು ಭೂಮಿಪೂಜೆ ನೆರವೇರಿಸಿದರು.

ಎತ್ತುಗಳ ಮೆರವಣಿಗೆ, ಕರಿ ಹರಿಯುವ ಸಂಪ್ರದಾಯದ ಸಡಗರ
ತೊಗರಿ ನಾಡಿನಲ್ಲಿ ಕಾರ ಹುಣ್ಣಿಮೆ ಕಳೆ

ಕಲಬುರಗಿ: ಬಿಸಿಲ ನಾಡಿನಲ್ಲಿ ಬೇಸಿಗೆಯ ತಾಪ ಕಳೆದು ಮುಂಗಾರು ಹೊಸ್ತಿಲಿಗೆ ಬರುವ ಸಂಭ್ರಮದ ಹೆಬ್ಬಾಗಿಲು, ಕನ್ನಡದ ಮೊದಲ ಮಣ್ಣಿನ ಹಬ್ಬ ಎಂದೇ ಪ್ರಸಿದ್ಧಿಯಾದ 'ಕಾರ ಹುಣ್ಣಿಮೆ'ಯನ್ನು ಕಲಬುರಗಿ ಜಿಲ್ಲಾದ್ಯಂತ ಅತ್ಯಂತ ವೈಭವ ಮತ್ತು ಸಡಗರದಿಂದ ಆಚರಿಸಲಾಯಿತು. ಮುಂಗಾರು ಮಳೆಯ ಕಣ್ಣುಮುಚ್ಚಾಲೆ ನಡುವೆಯೂ ಒಕ್ಕಲು ಮಕ್ಕಳ ಮೊಗದಲ್ಲಿ ಹಬ್ಬದ ಕಳೆ ಎದ್ದು ಕಾಣುತ್ತಿತ್ತು. ವರ್ಷವಿಡೀ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ತಮ್ಮ ಜೀವನಾಡಿಯಾದ ಎತ್ತು ಹಾಗೂ ಆಕಳುಗಳನ್ನು ರೈತರು ಕೃತಜ್ಞತಾ ಭಾವದಿಂದ ಪೂಜಿಸಿ ಸಂಭ್ರಮಿಸಿದರು.

ಕಲಬುರಗಿ ಜಿಲ್ಲೆಯ ತಾಲೂಕುಗಳಾದ ಚಿತ್ತಾಪುರ, ಜೇವರ್ಗಿ, ಯಡ್ರಾಮಿ, ಅಫಜಲಪುರ, ಆಳಂದ, ಕಾಳಗಿ, ಕಮಲಾಪುರ, ಶಹಾಬಾದ್, ಸೇಡಂ, ಚಿಂಚೋಳಿ ಹಾಗೂ ಕಲಬುರಗಿ ತಾಲ್ಲೂಕಿನ ಗ್ರಾಮೀಣ ಭಾಗಗಳಲ್ಲಿ ಸೋಮವಾರ ಹಬ್ಬದ ವಾತಾವರಣ ಮನೆಮಾಡಿತ್ತು.

ಬೆಳಗ್ಗೆಯಿಂದಲೇ ರೈತರು ತಮ್ಮ ಜಾನುವಾರುಗಳನ್ನು ನದಿ, ಕೆರೆ ಹಾಗೂ ಬಾವಿಗಳಿಗೆ ಕರೆದೊಯ್ದು ಸ್ವಚ್ಛವಾಗಿ ತೊಳೆದು ತಂದರು. ನಂತರ ಎತ್ತುಗಳ ಕೊಂಬುಗಳಿಗೆ ಆಕರ್ಷಕ ಬಣ್ಣ, ವಾರ್ನೀಸ್ ಹಚ್ಚಿ, ಹಣೆಗೆ ಬಾಸಿಂಗ, ಹಣೆಪಟ್ಟಿ, ಕೊರಳಿಗೆ ಘಂಟೆ ಹಾಗೂ ಸುಂದರವಾದ ಕೊರಳಪಟ್ಟಿ (ಘರಾರಿ) ಕಟ್ಟಿ ಶೃಂಗರಿಸಿದರು. ಎತ್ತುಗಳ ಮೈಮೇಲೆ ವಿವಿಧ ಬಣ್ಣಗಳ ಚಿತ್ತಾರಗಳನ್ನು ಬಿಡಿಸಿ ಗ್ರಾಮದ ಬೀದಿಗಳಲ್ಲಿ ವಾದ್ಯಮೇಳಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಯುವಕರು ಜೈಕಾರ ಹಾಕುತ್ತಾ ಹಳ್ಳಿ ಸೊಗಡಿಗೆ ಮತ್ತಷ್ಟು ಮೆರಗು ನೀಡಿದರು.

ಕಿಚಡಿ-ಹೋಳಿಗೆಯ ನೈವೇದ್ಯ, ಕರಿ ಹರಿಯುವ ಸಂಪ್ರದಾಯ: ಮನೆಮನೆಗಳಲ್ಲಿ ಜೋಳದ ಕಿಚಡಿ, ಹೋಳಿಗೆ, ಕಡುಬು, ಪಾಯಸ ಮುಂತಾದ ಸಿಹಿ ಖಾದ್ಯಗಳನ್ನು ತಯಾರಿಸಿ ದೇವರಿಗೆ ಹಾಗೂ ಎತ್ತುಗಳಿಗೆ ನೈವೇದ್ಯ ಮಾಡಲಾಯಿತು. ಜೇವರ್ಗಿ ಮತ್ತು ಯಡ್ರಾಮಿಯ ಮಳ್ಳಿ ಗ್ರಾಮ ಸೇರಿದಂತೆ ಹಲವೆಡೆ ಹಬ್ಬದ ಪ್ರಮುಖ ಆಕರ್ಷಣೆಯಾದ 'ಕರಿ ಹರಿಯುವ' ವಿಶಿಷ್ಟ ಸಂಪ್ರದಾಯ ಜರುಗಿತು. ಕಂದು ಹಾಗೂ ಬಿಳಿ ಬಣ್ಣದ ಎತ್ತುಗಳನ್ನು ಓಡಿಸಿ, ಯಾವ ಎತ್ತು ಮೊದಲು ಗುರಿ ತಲುಪುತ್ತದೆಯೋ ಆ ವರ್ಷ ಆ ಬಣ್ಣದ ಫಸಲು ಚೆನ್ನಾಗಿ ಬರುತ್ತದೆ ಎಂಬ ನಂಬಿಕೆಯಿಂದ ರೈತರು ಭವಿಷ್ಯದ ಬೆಳೆಯ ಯೋಗವನ್ನು ಲೆಕ್ಕ ಹಾಕಿದರು. ಸಂಜೆ ವೇಳೆ ಎತ್ತುಗಳನ್ನು ಬೆಂಕಿಯಲ್ಲಿ ಹರಿಸಿ ಸಾಹಸ ಮೆರೆದದ್ದು ರೋಮಾಂಚನಕಾರಿಯಾಗಿತ್ತು.



ಕರಿ ಹರಿಯುವ ಕೃಷಿ ಜ್ಯೋತಿಷ್ಯ!

ಕಾರ ಹುಣ್ಣಿಮೆಯ ಪ್ರಮುಖ ಆಕರ್ಷಣೆಯೇ 'ಕರಿ ಹರಿಯುವುದು'. ಊರಿನ ಹೊರಗೆ ಕಟ್ಟಲಾದ ಕರಿಯನ್ನು ಮೆರವಣಿಗೆಯ ಯಾವ ಬಣ್ಣದ ಎತ್ತು ಮೊದಲು ದಾಟುತ್ತದೆಯೋ, ಆ ವರ್ಷ ಅದೇ ಬಣ್ಣದ ಬೆಳೆಗೆ (ಉದಾಹರಣೆಗೆ ಬಿಳಿ ಎತ್ತಾದರೆ ಬಿಳಿ ಜೋಳ/ಹತ್ತಿ) ಉತ್ತಮ ಫಸಲು ಬರುತ್ತದೆ ಎಂಬುದು ರೈತರ ಅಚಲ ನಂಬಿಕೆ. ಇದು ಕೇವಲ ಆಟವಲ್ಲ, ಮುಂಗಾರಿನ ಕೃಷಿ ಜ್ಯೋತಿಷ್ಯ!.

ಭಾರ ಎತ್ತಿ ಸಾಹಸ ಮೆರೆದ ಯುವಪಡೆ!

ಮಳೆ ಕೊರತೆಯ ಆತಂಕದ ನಡುವೆಯೂ ಜಂಬಗಾ(ಬಿ) ಗ್ರಾಮದಲ್ಲಿ ಕಾರ ಹುಣ್ಣಿಮೆಯ ಅಂಗವಾಗಿ ಹಮ್ಮಿಕೊಂಡಿದ್ದ 120 ಕೆ.ಜಿ. ತೂಕದ ಗುಂಡು ಎತ್ತುವ ಸ್ಪರ್ಧೆ ಹಬ್ಬದ ಕಳೆ ಹೆಚ್ಚಿಸಿತು. ಗ್ರಾಮದ ಯುವಕರು ಮುಂಗಾರಿನ ಭವಿಷ್ಯಕ್ಕಾಗಿ ಸಾಂಪ್ರದಾಯಿಕ ನಂಬಿಕೆಯಂತೆ ಭಾರ ಎತ್ತಿ ಶಕ್ತಿ ಪ್ರದರ್ಶನ ಮಾಡಿದರು. ರೈತರ ಸಂಕಷ್ಟದ ನಡುವೆಯೂ ಯುವಕರ ಈ ಸಾಹಸ ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಗಿ, ಹಳ್ಳಿಯ ಗತ್ತು-ಗಾಂಭೀರ್ಯವನ್ನು ಎತ್ತಿಹಿಡಿಯಿತು.

ಆತ್ಮ ಯೋಜನೆಯ ಕೊಪ್ಪಳ ತಾಲೂಕು ಮಟ್ಟದ ರೈತ ಸಲಹಾ ಸಮಿತಿ ಸಭೆ

ಕೊಪ್ಪಳ: 2026-27ನೇ ಸಾಲಿನ ಆತ್ಮ ಯೋಜನೆಯಡಿ ಕೊಪ್ಪಳ ತಾಲೂಕ ಮಟ್ಟದ ರೈತ ಸಲಹಾ ಸಮಿತಿ ಸಭೆಯು ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಜರುಗಿತು.

ಕೊಪ್ಪಳ ತಾಲೂಕಾ ಮಟ್ಟದ ರೈತ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸಹಾಯಕ ಕೃಷಿ ನಿರ್ದೇಶಕರಾದ ಜೀವನಸಾಬ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಭೆಯಲ್ಲಿ ಎಲ್ಲಾ ಇಲಾಖೆಯ ತಾಲೂಕಾ ಅಧಿಕಾರಿಗಳು ಮತ್ತು ರೈತ ಸಲಹಾ ಸಮಿತಿಯ ಸದಸ್ಯರು ರೈತ ಭಾಂದವರು ಆತ್ಮ ಯೋಜನೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ತಾಲೂಕಾ ತಾಂತ್ರಿಕ ವ್ಯವಸ್ಥಾಪಕರಾದ ಯಮನೂರಪ್ಪ ಅವರು ಸಭೆಯಲ್ಲಿ ಭಾಗವಹಿಸಿದ ಸರ್ವರಿಗೂ ಸ್ವಾಗತಿಸಿದರು. ಆತ್ಮ ಯೋಜನೆಯ ಬಗ್ಗೆ ಕಾರ್ಯಕ್ರಮ ತರಬೇತಿ ಬಗ್ಗೆ ಪ್ರಾಸ್ತಾವಿಕವಾಗಿ ಡಿ.ಪಿ.ಡಿ ಕೊಪ್ಪಳ ಶಿವಪ್ಪ ನಾಯಕ ಅವರು ಮಾತನಾಡಿದರು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ರವೀಂದ್ರ ಅವರು ಇಲಾಖೆಯ ಪ್ರಯೋಜನೆಗಳನ್ನು ತಿಳಿಸಿದರು.

ರೇಷ್ಮ ಇಲಾಖೆಯ ಪ್ರಸಾದ ಎತ್ತಿನಮಠ ಅವರು ತಮ್ಮ ಇಲಾಖೆಯ ಮೂಲಕ ಇರುವ ಸರ್ಕಾರದ ಸೌಲಭ್ಯ ಸದಪಯೋಗ ಮಾಡಿಕೊಳ್ಳಲು ರೈತರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಗುಂಡಪ್ಪ ಅವರು, ಸರ್ಕಾರದ ಯೋಜನೆಗಳ ಬಗ್ಗೆ ವಿವರವಾಗಿ ತಿಳಿಸಿದರು. ಪಶುಸಂಗೋಪನೆ ಇಲಾಖೆಯ ಅಧಿಕಾರಿ ಗೋಣೆಪ್ಪ ವಾಡಿ ಅವರು, ರೈತರನ್ನು ಉದ್ದೇಶಿಸಿ ಮಾತನಾಡಿದರು. ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಾದ ಬಸವರಾಜ ಪಾಟೀಲ ಮಾತನಾಡಿದರು.

ಕೊನೆಯದಾಗಿ ಅಧ್ಯಕ್ಷರಾದ ಜೀವನಸಾಬ ಅವರು, ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಖೇತ್ ಬಚಾವೂ ಅಭಿಯಾನದ ಬಗ್ಗೆ ರೈತರಿಗೆ ಮನವರಿಕೆ ಮಾಡಿ, ಸಾವಯವ ಕೃಷಿ, ನೈಸರ್ಗಿಕ ಕೃಷಿ ಮತ್ತು ಸಿರಿಧಾನ್ಯಗಳ ವಿವರವಾಗಿ ತಿಳಿಸುತ್ತಾ, ರಾಸಾಯನಿಕ ರಸಗೊಬ್ಬರ ಬಳಿಕೆ ಕಡಿಮೆ ಮಾಡಿ ಬೆಳೆಗಳನ್ನು ಬೆಳೆಯುವಂತೆ ರೈತರಿಗೆ ಕರೆ ನೀಡಿದರು.

ತಾಲೂಕಾ ತಾಂತ್ರಿಕ ವ್ಯವಸ್ಥಾಪಕರು ಸಭೆಯಲ್ಲಿ ಪಾಲ್ಗೊಂಡ ಎಲ್ಲ ಇಲಾಖೆಯ ಅಧಿಕಾರಿಗಳಿಗೆ, ರೈತರಿಗೆ ವಂದಿಸಿದರು.



ಪ್ರತಿ ದಿನ ಶಾಲೆಗೆ ಬನ್ನಿ, ಜ್ಞಾನದ ಬೆಳಕಿನಲ್ಲಿ ಬೆಳೆಯಿರಿ

ಕುಷ್ಟಗಿ: ಪ್ರತಿ ದಿನ ಶಾಲೆಗೆ ಬನ್ನಿ ಜ್ಞಾನದ ಬೆಳಕಿನಲ್ಲಿ ಬೆಳೆಯಿರಿ ಎಂದು ತಾಲೂಕಿನ ಬಿಜಕಲ್ಲ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್‌ಗಳ ಸಹಯೋಗದಲ್ಲಿ ಶಾಲಾ ದಾಖಲಾತಿ ಮತ್ತು ಹಾಜರಾತಿ ಆಂದೋಲನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಮಾಜಿ ಜಿಪಂ ಸದಸ್ಯರಾದ ಸಂಗನಗೌಡ ಜೈನರ, ಎನ್‌ಜಿಒ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಗುರಪ್ಪ ಕುರಿ, ಶಿಕ್ಷಣ ಸಂಯೋಜಕರಾದ ರಾಘಪ್ಪ ಶ್ರೀರಾಮ, ಎಸ್‌ಡಿಎಂಸಿ ಅಧ್ಯಕ್ಷರಾದ ಮಂಜುನಾಥ್ ಬನ್ನಿಗೋಳ, ಉಪಾಧ್ಯಕ್ಷರಾದ ಶರಣಪ್ಪ ವಡ್ಡರ ಹಾಗೂ ಕಲಿಕೆ ಟಾಟಾ ಟ್ರಸ್ಟ್‌ನ ಸಂಯೋಜಕರಾದ ಬಸವರಾಜ ನಾಗಣ್ಣವರ ಅವರು ರಿಬ್ಬನ್ ಕತ್ತರಿಸುವ ಮೂಲಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಎನ್‌ಜಿಒ ಕುಷ್ಟಗಿಯ ಹಿರಿಯ ಉಪಾಧ್ಯಕ್ಷರಾದ ಎಚ್.ಎಚ್. ಉಸ್ತಾದ್, ಕುಷ್ಟಗಿ ಕನ್ಯಾ ಶಾಲೆಯ ಹಿರಿಯ ಮುಖ್ಯ ಶಿಕ್ಷಕರಾದ ಸಿದ್ದರಾಮಪ್ಪ ಅಮರಾವತಿ, ಕೆಎಸ್‌ಪಿಎಸ್‌ಟಿಎ ಮಾಜಿ ಸಹ ಕಾರ್ಯದರ್ಶಿಗಳಾದ ಅಲ್ತಾಫ್ ಹುಸೇನ್ ಮುಜಾವರ್, ಬಿಆರ್‌ಪಿ ಸೋಮನಾಥ, ಬಿಜಕಲ್ಲ ಮುಖ್ಯ ಶಿಕ್ಷಕರಾದ ಬಸವರಾಜ ಬಾಗಲಿ, ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ವೀರನಗೌಡ ಪಾಟೀಲ, ನಿವೃತ್ತ ಮುಖ್ಯ ಶಿಕ್ಷಕ ಅಮರೇಗೌಡ ನಾಗೂರು, ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ರುದ್ರಮ್ಮ ಗುತ್ತೂರು, ಕನಕೊಪ್ಪ ಶಾಲೆಯ ಶಿಕ್ಷಕ ಹನಮಪ್ಪ ಮರಿಚೆನ್ನವರ ಹಾಗೂ ಬಿಸನಾಳ ಶಾಲೆಯ ಮುಖ್ಯ ಶಿಕ್ಷಕರಾದ ಧರ್ಮಗೌಡ ಪಾಟೀಲ, ಈರಣ್ಣ ಎ ಎಸ್ ಐ, ಪೊಲೀಸ್ ಠಾಣೆ ಕುಷ್ಟಗಿ ಉಪಸ್ಥಿತರಿದ್ದರು. ಎಸ್‌ಡಿಎಂಸಿ ಸರ್ವ ಸದಸ್ಯರು, ಮುಖ್ಯ ಶಿಕ್ಷಕರಾದ ಪಾರ್ವತೆಮ್ಮ ನಿಡಶೇಸಿ, ಸಹ ಶಿಕ್ಷಕರಾದ ಕಳಕಮಲ್ಲೇಶ ಭೋಗಿ, ಶಾಲೆಯ ಸಿಬ್ಬಂದಿ ವರ್ಗ, ಎಸ್ ಡಿ ಎಂ ಸಿ ಸರ್ವ ಸದಸ್ಯರು, ಶಾಲೆಯ ಮುದ್ದು ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು, ಗ್ರಾಮದ ಗುರು-ಹಿರಿಯರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.ಬ ಎತ್ತಿನ ಬಂಡಿ ಮೆರವಣಿಗೆ, ಮಕ್ಕಳ ನೃತ್ಯ ಮತ್ತು ಹಾಡುಗಳ ಜೊತೆಗೆ ವೈವಿಧ್ಯಮಯ ಛದ್ಮವೇಷಗಳ ಮೂಲಕ ದಾಖಲಾತಿ ಆಂದೋಲನಕ್ಕೆ ಮೆರಗು ಬಂದಿತು. ಶಾಲೆಗೆ ಶೈಕ್ಷಣಿಕ ಉಪಯುಕ್ತತೆ ವಸ್ತುಗಳನ್ನು ನೀಡಿದ ದಾನಿಗಳನ್ನು ಗೌರವಿಸಲಾಯಿತು.



ಶಿರಪುರ ಯೋಜನೆ ಕೇವಲ ಬಿಲ್ ಎತ್ತುವ ತಂತ್ರ: ಬಸವರಾಜ ಶಾಸ್ತ್ರೀ

ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನಲ್ಲಿ ಶಿರಪುರ ಮಾದರಿ ಯೋಜನೆ ಸಂಪೂರ್ಣ ಯಶಸ್ವಿಯಾಗಿದೆ ಎಂದು ಶಾಸಕ ಬಿ.ಆರ್. ಪಾಟೀಲ ಅವರ ಬೆಂಬಲಿಗರು ಮಾಡುತ್ತಿರುವ ಪ್ರಚಾರ ಸತ್ಯಕ್ಕೆ ದೂರವಾಗಿದ್ದು, ಸಾರ್ವಜನಿಕರನ್ನು ತಪ್ಪುದಾರಿಗೆಳೆಯುವ ಯತ್ನವಾಗಿದೆ ಎಂದು ಮುಖಂಡ ಬಸವರಾಜ್ ಶಾಸ್ತ್ರೀ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿ ಮಾತನಾಡಿ, ತಾಲೂಕಿನಲ್ಲಿ ನೀರಿನ ಸಮಸ್ಯೆ ಇಲ್ಲದಿದ್ದರೆ ಇತ್ತೀಚೆಗೆ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಈ ಬಗ್ಗೆ ಗಂಭೀರ ಚರ್ಚೆಯಾಗಿದ್ದೇಕೆ ಮತ್ತು 4.37 ಕೋಟಿ ರೂ. ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಇಟ್ಟಿದ್ದೇಕೆ ಎಂದು ಅವರು ಪ್ರಶ್ನಿಸಿದರು. ಶಾಸಕರ ಸ್ವಗ್ರಾಮ ಸರಸಂಬಾದಲ್ಲೇ ಹತ್ತು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದ್ದು, ಇದಕ್ಕೆ ಜಿಪಿಎಸ್ ಫೋಟೋಗಳೇ ಸಾಕ್ಷಿಯಾಗಿವೆ. ಭೀಮಾ ನದಿಯಲ್ಲಿ ನೀರಿಲ್ಲದೆ ನಾರಾಯಣಪುರ ಕಾಲುವೆಯಿಂದ ನೀರು ಬಿಡುಗಡೆ ಮಾಡಲು ಕೋರುತ್ತಿರುವುದು ತಾಲ್ಲೂಕಿನ ಭೀಕರ ಸ್ಥಿತಿಯನ್ನು ತೋರಿಸುತ್ತದೆ ಎಂದರು.

ತಾಲ್ಲೂಕಿನ ಒಟ್ಟು 34 ಗ್ರಾಮ ಪಂಚಾಯಿತಿಗಳ ಪೈಕಿ 24 ಪಂಚಾಯಿತಿಗಳಲ್ಲಿ ಇಂದಿಗೂ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದೆ. ಬೇಸಿಗೆ ಆರಂಭದಿಂದಲೂ ಅನೇಕ ಹಳ್ಳಿಗಳಿಗೆ ಟ್ಯಾಂಕರ್ ಮೂಲಕವೇ ನೀರು ಪೂರೈಸಲಾಗುತ್ತಿದೆ. ಶಿರಪುರ ಮಾದರಿ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದ್ದರೂ, ಅಂತರ್ಜಲ ಮಟ್ಟದಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ. ಈ ಯೋಜನೆಯು ಕೇವಲ 'ಬಿಲ್ ಎತ್ತುವ' ಯೋಜನೆಯಾಗಿದೆಯೇ ಹೊರತು ಜನರಿಗೇನೂ ಲಾಭವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದ್ದರಿಂದ, ಶಿರಪುರ ಮಾದರಿ ಯಡಿ ನಡೆದ ಕಾಮಗಾರಿಗಳ ಕುರಿತು ಸ್ವತಂತ್ರ, ತಾಂತ್ರಿಕ ಸಮಿತಿಯಿಂದ ತನಿಖೆ ನಡೆಸಿ, ವೆಚ್ಚದ ಸಂಪೂರ್ಣ ವಿವರಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು. ಆರ್.ಟಿ.ಐ ಅಡಿ ಮಾಹಿತಿ ಕೇಳಿದರೂ ಅಧಿಕಾರಿಗಳು ಉತ್ತರಿಸದ ಹಿನ್ನೆಲೆಯಲ್ಲಿ, ಪ್ರಸ್ತುತ ಈ ವಿಷಯವನ್ನು ಮಾಹಿತಿ ಹಕ್ಕು ಆಯೋಗದಲ್ಲಿ ಪ್ರಶ್ನಿಸಲಾಗಿದೆ ಎಂದು ತಿಳಿಸಿದರು.

ಪ್ರಮುಖರಾದ ಪ್ರಭುಲಿಂಗ್ ಹಳ್ಳಿ, ಗುರುನಾಥ, ಈರಣ್ಣ, ಸಿದ್ಧರೂಢ, ಕಲ್ಯಾಣಪ್ಪ, ಯುವರಾಜ್, ಸುರೇಶ್ ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ

ಹನುಮಸಾಗರ: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ವತಿಯಿಂದ ಉಚಿತವಾಗಿ ನೀಡಲಾದ ಪಠ್ಯಪುಸ್ತಕಗಳ ವಿತರಣಾ ಕಾರ್ಯಕ್ರಮ ಸೋಮವಾರ ನಡೆಯಿತು.

ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೆಡ್ಡಿ ರಾಮನಗೌಡ ಮಾತನಾಡಿ, ಶಿಕ್ಷಣವು ಪ್ರತಿಯೊಬ್ಬ ವಿದ್ಯಾರ್ಥಿಯ ಬದುಕನ್ನು ರೂಪಿಸುವ ಅತ್ಯಂತ ಶಕ್ತಿಯುತ ಸಾಧನವಾಗಿದೆ. ಆರ್ಥಿಕವಾಗಿ ಯಾವುದೇ ವಿದ್ಯಾರ್ಥಿ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಉಚಿತ ಪಠ್ಯಪುಸ್ತಕಗಳನ್ನು ವಿತರಿಸುತ್ತಿದೆ. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ನಿಯಮಿತವಾಗಿ ಅಧ್ಯಯನ ಮಾಡಿ ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಪೋಷಕರಿಗೆ ಶಿಕ್ಷಕರಿಗೆ ಹಾಗೂ ಪಟ್ಟಣಕ್ಕೆ ಕೀರ್ತಿ ತರಬೇಕು. ಶಿಸ್ತು, ಸಮಯಪಾಲನೆ ಮತ್ತು ನಿರಂತರ ಪರಿಶ್ರಮವೇ ಯಶಸ್ಸಿನ ಮೂಲಮಂತ್ರವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಉನ್ನತ ಗುರಿ ಹೊಂದಿ ವಿದ್ಯಾಭ್ಯಾಸ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಎಸ್ಸಿ ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಬಸವರಾಜ ದ್ಯಾವಣ್ಣನವರ, ಸದಸ್ಯ ನಾಗರಾಜ ಹಕ್ಕಿ ಹಾಗೂ ಕಾಲೇಜಿನ ಪ್ರಾಚಾರ್ಯ ಭೀಮಪ್ಪ ಎಚ್. ಗೊಲ್ಲರ, ಉಪನ್ಯಾಸಕರಾದ ಲಕಪತಿ ರಾಥೋಡ, ಶರಣಪ್ಪ ಗೋಡೆಕಾರ, ಗೀತಾ ಬಂಡಿಹಾಳ, ಭರಮಲಿಂಗಪ್ಪ ದೇವರಮನೆ, ರೇಣುಕಾ ಟಿ., ಸಿಬ್ಬಂದಿಗಳು ಹಾಗೂ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ವಿವಿಧ ಬೇಡಿಕೆ ಈಡೇರಿಸುವಂತೆ ರೈತರಿಂದ ಅನಿರ್ದಿಷ್ಟಾವಧಿ ಮುಷ್ಕರ

ಯಲಬುರ್ಗಾ: ತಾಲೂಕಿನ ಗುತ್ತೂರ ಗ್ರಾಮದ ರೈತರ ಮೇಲೆ ಹಲ್ಲೆ ನಡೆಸಿದ ಬೇವೂರ ಠಾಣೆಯ ಪಿಎಸ್‌ಐ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು, ಹೈಟೆನ್ಷನ್ ಖಾಸಗಿ ಕಂಪನಿಯ ವಿದ್ಯುತ್ ಕಂಬ ಅಳವಡಿಕೆಯಲ್ಲಿ ಭೂಮಿ ಕಳೆದುಕೊಂಡ ರ‍್ಯತರಿಗೆ ಸೂಕ್ತ ಪರಿಹಾರ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸೋಮವಾರ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ(ನಾರಾಯಣರಡ್ಡಿ) ಬಣದಿಂದ ಬೃಹತ್ ಪ್ರತಿಭಟನೆ ಹಾಗೂ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಪಟ್ಟಣದ ಕನಕದಾಸ ವೃತ್ತದಿಂದ ಬೃಹತ್ ಪ್ರತಿಭಟನಾಕಾರರು ನಗರದ ಪ್ರಮುಖ ರಸ್ತೆಗಳ ಮೂಲಕ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗುತ್ತಾ ಚನ್ನಮ್ಮ ವೃತ್ತದಿಂದ ಬಯಲುರಂಗ ಮಂದಿರದ ಹತ್ತಿರ ಕೆಲಕ್ಷಣ ಮಳೆಯಲ್ಲೇ ಕುಳಿತು ಬಳಿಕ ರಂಗಮಂದಿರದ ಆವರಣದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.



ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಹುರಳಿ ಹಾಗೂ ರೈತ ಮುಖಂಡರಾದ ವಿಜಯ ಯರಾಸಿ, ಈಶಪ್ಪ ಸಬರದ ಮಾತನಾಡಿ, ಗುತ್ತೂರ ಗ್ರಾಮದ ಸೀಮಾದ 10 ಎಕ್ಕರೆ ಜಮೀನಿನಲ್ಲಿ ನಿರ್ಮಾಣವಾಗುತ್ತಿರುವ ಹೈಟೆನ್ಷನ್ ಖಾಸಗಿ ಕಂಪನಿಯ ವಿದ್ಯುತ್ ಕಂಬ ಅಳವಡಿಕೆ ವಿಚಾರವಾಗಿ ಪರಿಹಾರಕ್ಕೆ ಒತ್ತಾಯಿಸಿದ ರೈತರ ಮೇಲೆ ಇತ್ತೀಚೆಗೆ ಬೇವೂರು ಠಾಣೆಯ ಪಿಎಸ್‌ಐ ಗುರುರಾಜ ಅವರು ರೈತರ ಕೊರಳು ಪಟ್ಟಿ ಹಿಡಿದು ಹಲ್ಲೆ ನಡೆಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ವಿದ್ಯುತ್ ಟವರ್‌ನಿಂದ ಹಾಗೂ ಕಾರಿಡಾರ್ ನಿಂದ ಅನ್ಯಾಯ ವಾಗಿದ್ದು, ರೈತರ ಜಮೀನಿಗೆ 2 ಕೋಟಿ ರೂ, ನೀಡಬೇಕು, ರೈತರ ಸಾಲಮನ್ನಾ ಮಾಡಬೇಕು, ಬರಪರಿಹಾರ ಎಕರೆಗೆ 50 ಸಾವಿರ ನೀಡಬೇಕು, ವಿದ್ಯುತ್ ಖಾಸಗೀಕರಣ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡರಾದ ವಜೀರಸಾಬ ತಳಕಲ್ ಮಾತನಾಡಿ ರೈತರ ಮೇಲೆ ಪೊಲೀಸರ ದೌರ್ಜನ್ಯ ತಡೆಯಲು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಎಸ್.ಪಿಯವರು ಕ್ರಮವಹಿಸಬೇಕು. ಟೊರೆಂಟೋ ಕಂಪನಿಯು ತಳಕಲ್‌ದಿಂದ ಕವಲೂರಗೆ ರೈತರಿಗೆ 1 ಕೋಟಿ ರೂಪಾಯಿ ಪ್ರತಿ ಟಾವರಿಗೆ ನೀಡಿರುತ್ತಾರೆ ಹಾಗೂ ಕಾರಿಡಾರ್‌ಗೆ ಪ್ರತಿ ಮೀಟರ್‌ಗೆ ರೂ. 500 ನೀಡಿರುತ್ತಾರೆ. ಟಾಟಾ ಕಂಪನಿ ತಳಕಲ್‌ದಿಂದ ಕವಲೂರಗೆ ರೈತರಿಗೆ 18 ಲಕ್ಷ ರೂಪಾಯಿ ಪ್ರತಿ ಟಾವರಿಗೆ ನೀಡಿರುತ್ತಾರೆ ಹಾಗೂ ಕಾರಿಡಾರ್‌ಗೆ ಪ್ರತಿ ಮೀಟರ್‌ಗೆ ರೂ. 500 ನೀಡಿರುತ್ತಾರೆ ಹಲವಾರು ಕಂಪನಿಯವರು ಬಂದು ರೈತರಿಗೆ ಸೂಕ್ತವಾದ ಪರಿಹಾರ ಹಣ ಕೊಡದೇ ವಂಚನೆ ಮಾಡುತ್ತಿದ್ದಾರೆ. ರೈತರ ಜಮೀನನ್ನು ಸೋಲಾರ್, ವಿಂಡ್ ಪವರ್ ಹಾಗೂ ಟಾವರ್‌ಗಳಿಗೆ ಜಮೀನನ್ನು ನೀಡಲು ಸರಕಾರ ಸೂಕ್ತವಾದ ನಿಯಮವನ್ನು ಜಾರಿಗೆ ತರಬೇಕು ಇಲ್ಲವಾದಲ್ಲಿ ಆಹಾರದ ಅಭಾವ ಉಂಟಾಗುವ ಸಂಭವ ಹೆಚ್ಚಾಗಿರುತ್ತದೆ ಎಂದರು.

ಈ ವೇಳೆಯಲ್ಲಿ ಭೀಮಣ್ಣ ಬಂಡಿ, ಶರಣಪ್ಪ ಚೆಂಡೂರು, ಬಸವರಾಜ ಸಬರದ, ಬಸಪ್ಪ ಮಂಡಲಗಿರಿ, ಸಾಕಷ್ಟು ರೈತ ಮಹಿಳೆಯರು ಇದ್ದರು.

ಮತದಾರರ ಪಟ್ಟಿ ಪರಿಷ್ಕರಣೆ: ಸಹಕಾರಕ್ಕೆ ಜಿಪಂ ಸಿಇಒ ಮನವಿ

ಕಲಬುರಗಿ: ಜಿಲ್ಲೆಯಲ್ಲಿ ಮ್ಯಾಪಿಂಗ್ ಪ್ರಕ್ರಿಯೆ ಯಶಸ್ವಿಯಾಗಿ ಮುಗಿದಿದ್ದು, ಪ್ರಸ್ತುತ 3ನೇ ಹಂತದ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿ 'ಎನ್ಯುಮರೇಷನ್ ಫಾರ್ಮ್' ಭರ್ತಿ ಮಾಡುತ್ತಿದ್ದು, ಸಾರ್ವಜನಿಕರು ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೆ ಪೂರ್ಣ ಸಹಕಾರ ನೀಡಬೇಕೆಂದು ಜಿಪಂ ಸಿಇಒ ರಾಹುಲ್ ಎಸ್. ಸಂಕನೂರ ಹೇಳಿದರು.

ಸೋಮವಾರ ನಗರದ ಜಗತ್ ವೃತ್ತದಲ್ಲಿ ಭಾರತದ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳು ಕರ್ನಾಟಕ, ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ ಸಮಿತಿ ಮತ್ತು ಸರಕಾರಿ ಮಹಾವಿದ್ಯಾಲಯ, (ಸ್ವಾಯತ್ತ) ಕಾಲೇಜು ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-2026ರ ಬೈಕ್ ರ‍್ಯಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



ಊರಿನಲ್ಲಿ ಇಲ್ಲದವರನ್ನು ಫೋನ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಲಾಗುತ್ತಿದ್ದು, ಈ ಕಾರ್ಯದಲ್ಲಿ ಶಿಕ್ಷಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಶ್ರಮಿಸುತ್ತಿದ್ದಾರೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, 2026ರ ಜೂ.30 ರಿಂದ ಜು. 30ರವರೆಗೆ ನಡೆಯಲಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣಾ ಕಾರ್ಯಕ್ರಮದ ಬಗ್ಗೆ ಜನ ಸಾಮಾನ್ಯರಿಗೆ ಅರಿವು ಮೂಡಿಸುವುದು ಮತ್ತು ಅರ್ಹರಾದ ಪ್ರತಿಯೊಬ್ಬ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಕಲಬುರಗಿ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಕುರಿತು ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ,ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಕಲಬುರಗಿ ಇವರ ಸಹಯೋಗದೊಂದಿಗೆ ಜಿಲ್ಲೆಯ ಜನರಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಅರಿವು ಮೂಡಿಸಲು ಜಗತ ವೃತ್ತದಿಂದ ಅನ್ನಪೂರ್ಣ ಕ್ರಾಸ್, ಲಾಹೋಟಿ ಪೆಟ್ರೋಲ್ ಬಂಕ್‌ದಿಂದ ತಿಮ್ಮಾಪೂರ ಸರ್ಕಲ್‌ದಿಂದ ಜಗತ್ ವೃತದವರೆಗೆ ಮುಕ್ತಾಯವಾಯಿತು.

ಬೈಕ್ ರ‍್ಯಾಲಿಗೆ ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ ಶಿಂಧೆ, ಸ್ವೀಪ್ ನೋಡಲ್ ಅಧ್ಯಕ್ಷರಾದ ಜಿ.ಪಂ. ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ ಜಿ.ಪಂ. ಯೋಜನಾ ನಿರ್ದೇಶಕ ಜಗದೇವಪ್ಪ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ, ಚೆನ್ನಪ್ಪ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ, ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆಯ ಕಛೇರಿಯ ಅಧಿಕಾರಿ, ಪದವಿ ಕಾಲೇಜು.ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಅಧಿಕಾರಿ, ಪದವಿ ಕಾಲೇಜಿನ ಉಪನ್ಯಾಸಕರು, ಅಂಗವಿಕಲರು, ಬಿ.ಎಲ್.ಒ.ಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಿರುಸುದ್ದಿ

ಸಿಸಿ ರಸ್ತೆ-ಚರಂಡಿ ಕಾಮಗಾರಿಗೆ ಚಾಲನೆ

• **ಕುರುಗೋಡು:** ಸಮೀಪದ ಹಾವಿನಾಳ್ ನವಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ 2025-26ನೇ ಸಾಲಿನ ಕೆ ಕೆ ಆರ್ ಡಿ ಬಿ ಅನುದಾನದ ಯೋಜನೆ ಅಡಿಯಲ್ಲಿ ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ 50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಸಿಸಿ ಚರಂಡಿ ನಿರ್ಮಾಣದ ಕಾಮಗಾರಿಯ ಭೂಮಿ ಪೂಜೆಯನ್ನು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ. ನಾಗರಾಜ ಅವರು ನೆರವೇರಿಸಿದರು. ಈ ವೇಳೆ ಮುಖಂಡ ಶ್ರೀನಿವಾಸ್ ರಾವ್, ಪಂಪನಗೌಡ, ಪೂಜಾರಿ ಸತ್ಯನಾರಾಯಣ, ಭರತ, ಭೀಮನಾಯಕ, ಶರಣಪ್ಪ, ಮಾರೆಪ್ಪ, ಯರಿಸ್ವಾಮಿ, ಪಿ. ನಾಗರಾಜ, ಬಿ.ವೆಂಕಟೇಶ್, ಹೆಚ್. ಗಣೇಶ್, ಗೋವರ ಶ್ರೀನಿವಾಸ್, ರಂಜಾನ್ ಸಲಾಫಿ ಗ್ರಾಮದ ಇತರರು ಇದ್ದರು.



ಕುರುಗೋಡು: ಸಮೀಪದ ಕುಡುತಿನಿ ಪಟ್ಟಣದಲ್ಲಿ ಸೋಮವಾರ ಸಂಜೆ ಕಾರ ಹುಣ್ಣಿಮೆಯ ಪ್ರಯುಕ್ತ ನಡೆದ ಎತ್ತುಗಳ ಕರಿ ಎರೆಯುವ ಸ್ಪರ್ಧೆಯಲ್ಲಿ ಸತತವಾಗಿ ಮೂರು ವರ್ಷ ಬಿಳಿ ಬಣ್ಣದ ಎತ್ತು ಅಕ್ಕಿ ಜಿಜೆ ಓಟದ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿವೆ. ಈ ವೇಳೆ ನೂರಾರು ರೈತರು ಇದ್ದರು.

ಕಾಂಗ್ರೆಸ್ ಪ್ರಚಾರ ಸಮಿತಿಗೆ ನೇಮಕ



• **ಯಾದಗಿರಿ:** ಇಲ್ಲಿನ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷರನ್ನಾಗಿ ಪಕ್ಷದ ಹಿರಿಯ ಮುಖಂಡ ಪರಶುರಾಮ ಚೌವಾಣ್ ಚಾಮನಳ್ಳಿ ತಾಂಡಾ ಅವರನ್ನು ನೇಮಕ ಮಾಡಿ ಆದೇಶಿಸಲಾಗಿದೆ ಎಂದು ಸಮಿತಿಯ ಜಿಲ್ಲಾಧ್ಯಕ್ಷ ಮರೆಪ್ಪ ಬಿಳ್ಹಾರ್ ತಿಳಿಸಿದ್ದಾರೆ. ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ ಸೊರಕೆ ಹಾಗೂ ಪಕ್ಷದ ಜಿಲ್ಲಾಧ್ಯಕ್ಷ ಬಸರೆಡ್ಡಿ ಅನಪುರ ಸೂಚನೆ ಮೇರೆಗೆ ಈ ಆದೇಶ ಹೊರಡಿಸಿದ್ದು, ಕೂಡಲೇ ಜವಾಬ್ದಾರಿ ವಹಿಸಿಕೊಂಡು ಜಿಲ್ಲಾದ್ಯಂತ ಪಕ್ಷ ಸಂಘಟನೆಗೆ ಅಣಿಯಾಗುವಂತೆ ಆದೇಶದಲ್ಲಿ ತಿಳಿಸಿದೆ.

ಬೆಳೆ ವಿಮೆ ಮಾಡಿಸಿ: ಗರ್ಜಪ್ಪ

• **ಕುರುಗೋಡು:** 2026-27ನೇ ಸಾಲಿನ ಮುಂಗಾರು ಹಂಗಾಮಿನ ಕೃಷಿ ಬೆಳೆಗಳಿಗೆ ವಿಮೆ ನೋಂದಣಿಯನ್ನು ಪ್ರಾರಂಭಿಸಿದ್ದು, ಬಳ್ಳಾರಿ ಹಾಗೂ ಕುರುಗೋಡು ತಾಲೂಕಿನ ರೈತರು ಪ್ರಸಕ್ತ ಸಾಲಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ವಿವಿಧ ಕೃಷಿ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿಕೊಳ್ಳಲು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಗರ್ಜಪ್ಪ ಅವರು ತಿಳಿಸಿದ್ದಾರೆ. ಸದರಿ ರೈತರಿಗೆ ನೈಸರ್ಗಿಕ ಪ್ರಕೃತಿ ವಿಕೋಪಗಳಿಂದಾಗಿ ಬೆಳೆ ಹಾನಿಯಾದರೆ, ವಿಮಾ ಯೋಜನೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ. ನೊಂದಣಿ ಗಾಗಿ ಮಳೆಯಾಶ್ರಿತ ಸೂರ್ಯಕಾಂತಿ ಬೆಳೆಗೆ ಎಕರೆಗೆ 390ರೂ., ನೀರಾವರಿ ಸೂರ್ಯಕಾಂತಿ ಬೆಳೆಗೆ ಎಕರೆಗೆ 469 ರೂ., ಮಳೆಯಾಶ್ರಿತ ಹಾಗೂ ನೀರಾವರಿ ಹತ್ತಿಗೆ ಕ್ರಮವಾಗಿ ಎಕರೆಗೆ 1208 ರೂ. ಹಾಗೂ 1748 ರೂ, ನೀರಾವರಿ ಮುಸುಕಿನ ಜೋಳ ಎಕರೆಗೆ 617ರೂ., ಮಳೆಯಾಶ್ರಿತ ಮುಸುಕಿನ ಜೋಳ ಎಕರೆಗೆ 546 ರೂ., ಮಳೆಯಾಶ್ರಿತ ಹಾಗೂ ನೀರಾವರಿ ಜೋಳ ಬೆಳೆಗೆ ಕ್ರಮವಾಗಿ ಎಕರೆಗೆ 359ರೂ. ಹಾಗೂ 426 ರೂ. ಇದ್ದು, ಜು.31ರಂದು ಕೊನೆಯ ದಿನಾಂಕವಾಗಿರುತ್ತದೆ. ಮುಂದುವರೆದು, ನೀರಾವರಿ ಭತ್ತ ಎಕರೆಗೆ 879ರೂ., ಮಳೆಯಾಶ್ರಿತ ಬೆಳೆಗಳಾದ ಸಜ್ಜೆ (282 ರೂ.), ನವಣೆ (261 ರೂ.), ತೊಗರಿ (466 ರೂ.), ಹುರುಳಿ (380ರೂ.) ಹಾಗೂ ನೆಲಗಡಲೆ/ಶೇಂಗಾ (529 ರೂ.) ಮತ್ತು ನೀರಾವರಿ ಬೆಳೆಗಳಾದ ತೊಗರಿಗೆ 488 ರೂ., ಸಜ್ಜೆ ಬೆಳೆಗೆ 350 ರೂ. ಇದ್ದು, ದಿನಾಂಕ 14/08/2026 ರಂದು ಕೊನೆಯ ದಿನಾಂಕವಾಗಿರುತ್ತದೆ. ಮೇಲೆ ತಿಳಿಸಿದ ಬೆಳೆಗಳ ವಿಮೆ ನೊಂದಣಿ ಹೋಬಳಿ ಹಾಗೂ ಗ್ರಾಮ ಪಂಚಾಯಿತಿಗಳಿಗೆ ನಿಗದಿಪಡಿಸಿದ್ದು ನಿಗದಿತ ಘಟಕದಲ್ಲಿ ಬೆಳೆ ನೋಂದಣಿ ಮಾಡಲಾಗುವುದು. ಬೆಳೆ ವಿಮೆ ನೊಂದಣಿಗೆ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ/ಗ್ರಾಮ ಒನ್ ಕೇಂದ್ರ/ರೈತರು ತಮ್ಮ ವ್ಯವಹಾರದ ಬ್ಯಾಂಕ್ ಗಳಿಗೆ ಸಂಪರ್ಕಿಸಬಹುದು. ಕರ್ನಾಟಕರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯ ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಬಳ್ಳಾರಿ ಯನ್ನು ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆ ವತಿಯಿಂದ ಪ್ರಕಟಣೆ ತಿಳಿಸಿದ್ದಾರೆ.



ಕುರುಗೋಡು: ಸಮೀಪದ ಹಾವಿನಾಳ್ ನವಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ 2025-26ನೇ ಸಾಲಿನ ಕೆ ಕೆ ಆರ್ ಡಿ ಬಿ ಅನುದಾನದ ಯೋಜನೆ ಅಡಿಯಲ್ಲಿ ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ 50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಸಿಸಿ ಚರಂಡಿ ನಿರ್ಮಾಣದ ಕಾಮಗಾರಿಯ ಭೂಮಿ ಪೂಜೆಯನ್ನು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ. ನಾಗರಾಜ ಅವರು ನೆರವೇರಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ಯಶಸ್ವಿಗೊಳಿಸಿ

• **ಬಳ್ಳಾರಿ:** ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಏಜೆಂಟ್ ಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಅರ್ಹ ಮತದಾರರ ಹೆಸರು ಸೇರ್ಪಡೆ ಹಾಗೂ ಅಗತ್ಯ ತಿದ್ದುಪಡಿಗಳನ್ನು ಸಮಯಕ್ಕೆ ಸರಿಯಾಗಿ ಮಾಡಿಸುವುದು ತಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಕಾಂಗ್ರೆಸ್ ಮುಖಂಡ ಬಿ.ವೆಂಕಟೇಶ್ ಪ್ರಸಾದ್ ಅವರು ಹೇಳಿದರು.

ನಗರದ ನೆಹರೂ ಕಾಲೋನಿಯ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರ ಗೃಹ ಕಚೇರಿ ಆವರಣದಲ್ಲಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (ಎಸ್‌ಐಆರ್) ಕುರಿತು ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಏಜೆಂಟ್‌ಗಳು (ಬಿಎಲ್‌ಎ), ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಹಮ್ಮಿಕೊಂಡಿದ್ದ ವಿಶೇಷ ತರಬೇತಿ ಕಾರ್ಯಾಗಾರ ಮಾತನಾಡಿದರು. ಕೌಲ್ ಬಜಾರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಲ್ಲ ಬಕಾಶ್ ಹಾಗೂ ಅಫಾಕ್ ಹುಸೇನ್ ಅವರೂ ಮಾತನಾಡಿ, ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಪ್ರಕ್ರಿಯೆ, ಅರ್ಜಿ ಸಲ್ಲಿಕೆ, ದಾಖಲೆಗಳ ಪರಿಶೀಲನೆ ಹಾಗೂ ಬೂತ್ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸಂಗನಕಲ್ಲು ವಿಜಯ್ ಕುಮಾರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಎಲ್‌ಎಗಳು, ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು, ಮಹಾನಗರ ಪಾಲಿಕೆ ಸದಸ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಬಳ್ಳಾರಿ: ನಗರದ ನೆಹರೂ ಕಾಲೋನಿಯ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ, ಅವರ ಗೃಹ ಕಚೇರಿ ಆವರಣದಲ್ಲಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (ಎಸ್ ಐಆರ್) ಕುರಿತು ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಏಜೆಂಟ್ ಗಳು (ಬಿಎಲ್‌ಎ), ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಹಮ್ಮಿಕೊಂಡಿದ್ದ ವಿಶೇಷ ತರಬೇತಿ ಕಾರ್ಯಾಗಾರದಲ್ಲಿಕಾಂಗ್ರೆಸ್ ಮುಖಂಡ ಬಿ.ವೆಂಕಟೇಶ್ ಪ್ರಸಾದ್ ಮಾತನಾಡಿದರು.

ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ

• **ವಿಜಯನಗರ:** ರಾಜ್ಯದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸುಮಾರು 2.7 ಲಕ್ಷ ಅಲ್ಪಸಂಖ್ಯಾತ ಸಮುದಾಯದ ಮಕ್ಕಳು ಶಿಕ್ಷಣ ಪಡೆಯಬೇಕಿತ್ತು. ಆದರೆ ಪ್ರಸ್ತುತ ಕೇವಲ 1.7 ಲಕ್ಷ ಮಕ್ಕಳು ಮಾತ್ರ ವಿದ್ಯಾಭ್ಯಾಸ ಮಾಡುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಈ ಕುರಿತು ಶಾಲೆಗಳಿಂದ ಬಳಿ ನಿಖರ ಮತ್ತು ಸ್ಪಷ್ಟ ದತ್ತಾಂಶದ ಕೊರತೆಯಿದ್ದು, ಅಧಿಕಾರಿಗಳು ತಕ್ಷಣವೇ ನಿಖರವಾದ ಮಾಹಿತಿ ನೀಡಬೇಕು ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2011ರ ಶೈಕ್ಷಣಿಕ ಸರ್ವೆ ವರದಿಯನ್ನು ಉಲ್ಲೇಖಿಸಿದ ಅವರು, ಅಲ್ಪಸಂಖ್ಯಾತ ಸಮುದಾಯದಲ್ಲಿ ಕೇವಲ ಶೇ. 42.73ರಷ್ಟು ವಿದ್ಯಾರ್ಥಿಗಳು ಮಾತ್ರ ಸಾಕ್ಷರತೆ ಪ್ರಮಾಣ ಹೊಂದಿರುವುದು ಆತಂಕ ಮೂಡಿಸಿದೆ.

ಮಕ್ಕಳ ಭವಿಷ್ಯವನ್ನು ಕಸಿಯುತ್ತಿರುವ ಪೋಷಕರಲ್ಲಿ ಶಿಕ್ಷಣದ ಬಗ್ಗೆ ವ್ಯಾಪಕ ಅರಿವು ಮೂಡಿಸಬೇಕು. ಜಿಲ್ಲೆಯ ಯಾವೊಬ್ಬ ವಿದ್ಯಾರ್ಥಿಯೂ ಶಾಲೆಯಿಂದ ಹೊರಗುಳಿಯದಂತೆ ಇಲಾಖೆಗಳು ಕಟ್ಟೆಚ್ಚರ ವಹಿಸಬೇಕು ಎಂದು ಅವರು ತಾಕೀತು ಮಾಡಿದರು.



» ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಆದೇಶ

ಜಿಲ್ಲೆಯ್ಯಂತ ಹಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ, ಅಗತ್ಯಕ್ಕನುಗುಣವಾಗಿ ತಕ್ಷಣವೇ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಿಕೊಂಡು ಗುಣಮಟ್ಟದ ಶಿಕ್ಷಣ ನೀಡಲು ಸೂಚಿಸಲಾಯಿತು.

ಜಿಲ್ಲಾದ್ಯಂದ 748 ಶಾಲೆಗಳಿದ್ದು, ಅದರಲ್ಲಿ 46 ಸರ್ಕಾರಿ ಉರ್ದು ಶಾಲೆ, 2 ಅನುದಾನಿತ ಮತ್ತು 2 ಅನುದಾನ ರಹಿತ ಉರ್ದು ಶಾಲೆ ಕಾರ್ಯನಿರ್ವಹಿಸುತ್ತಿವೆ.

ಇಲ್ಲಿನ ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ಅಗತ್ಯವಾಗಿ ಬೇಕಾದ ಕುಡಿಯುವ ನೀರು, ಸುಸಜ್ಜಿತ ಶೌಚಾಲಯ, ಉತ್ತಮ ಶಾಲಾ ಕೊಠಡಿಗಳು ಹಾಗೂ ಆಟದ ಮೈದಾನದ ವ್ಯವಸ್ಥೆಯನ್ನು ಆದ್ಯತೆಯ ಮೇರೆಗೆ ಕಲ್ಪಿಸಬೇಕು. ಲೀಡ್ ಬ್ಯಾಂಕ್ ಮತ್ತು ವಿವಿಧ ಇಲಾಖಾ ನಿಗಮ-ಸಂಸ್ಥೆಗಳಿಂದ ಅರ್ಹ ಫಲಾನುಭವಿಗಳಿಗೆ ಶೈಕ್ಷಣಿಕ ಸಾಲ, ವಸತಿ ಸಾಲ ಹಾಗೂ ಕೃಷಿ ಸಂಬಂಧಿತ ಸಾಲಗಳನ್ನು ಸಕಾಲದಲ್ಲಿ ಒದಗಿಸಬೇಕು.

ಕಳೆದ ವರ್ಷ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 772 ಮನೆ ಮಂಜೂರಾಗಿದ್ದು, ಈ ಪೈಕಿ 561 ಪೂರ್ಣಗೊಂಡಿವೆ. ಬಾಕಿ ಉಳಿದಿರುವ 211 ಮನೆಗಳ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿ ಹಂತಗಳಲ್ಲಿದ್ದು, ಮುಂಬರುವ ಸೆಪ್ಟೆಂಬರ್ ವೇಳೆಗೆ ಸಂಪೂರ್ಣವಾಗಿ ಮುಕ್ತಾಯಗೊಳ್ಳಬೇಕು ಎಂದರು. ಸಭೆಯಲ್ಲಿ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರ ವಿಶೇಷ ಕಾರ್ಯದರ್ಶಿ ಮುಜೀಬುಲ್ಲಾ ಖಾನ್, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಎಸ್ಪಿ ಎಸ್.ಜಾಹ್ನವಿ, ಎಎಸ್‌ಪಿ ಮಂಜುನಾಥ್ ಉಪಸ್ಥಿತರಿದ್ದರು.

ವಿಜಯದಾಸರ ಮಹಿಮೆ ಅಪಾರ: ನ್ಯಾ. ಶ್ರೀಶಾನಂದ

• **ಬಳ್ಳಾರಿ:** ದಾಸರಲ್ಲಿ ಶ್ರೇಷ್ಠ ದಾಸರು ಶ್ರೀ ವಿಜಯದಾಸರು, ಅವರ ಮಹಿಮೆ ಬಲು ಅಪಾರ, ಭಕ್ತಿಯಿಂದ ವಿಜಯರಾಯರನ್ನು ಸ್ಮರಿಸಿದರೆ ಸಕಲ ಕಷ್ಟಗಳು ನಿವಾರಣೆಯಾಗಲಿವೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ವಿ. ಶ್ರೀಶಾನಂದ ಅವರು ಹೇಳಿದರು.

ನಗರದ ಸತ್ಯನಾರಾಯಣ ಪೇಟೆ ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದ ಸಭಾಂಗಣದಲ್ಲಿ ಭಾನುವಾರ ಸಂಜೆ ಶ್ರೀರಾಘವೇಂದ್ರ ಸ್ವಾಮಿ ಮಠ, ವಸುಧೈವ ಕುಟುಂಬಕಂ ಪ್ರತಿಷ್ಠಾನ ಹಾಗೂ ಪುನರುತ್ಥಾನ ಅಧ್ಯಯನ ಕೇಂದ್ರ ಬಳ್ಳಾರಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ಬೀಸಿ ಬಿಸಾಟದಿರು ಬಿಂಕದ ದೈವ - ವಿಜಯರಾಯ' ಪುಸ್ತಕ ಅನಾವರಣ ನಿಮಿತ್ತ ಹಮ್ಮಿಕೊಂಡಿದ್ದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಷ್ಟ ಗಳು ಬಂದಾಗ ದೇವರನ್ನು, ಯತಿಗಳನ್ನು, ದಾಸವರೇಣ್ಯರನ್ನು ಸ್ಮರಿಸಿದರೆ ಸಾಲದು, ದೇವರ ಸ್ಮರಣೆ ನಿತ್ಯದ ನಮ್ಮ ಭಕ್ತಿಯ ಕೆಲಸ ವಾಗಬೇಕು, ನಮ್ಮ ಸ್ಮರಣೆ, ನಮ್ಮ ಭಕ್ತಿ ನಿರಂತರವಾಗಿದ್ದರೆ, ಖಂಡಿತ ಎದುರಾಗುವ ಎಲ್ಲ ಕಷ್ಟಗಳು ನಿವಾರಣೆಯಾಗಲಿವೆ ಎಂದರು.

ಹೈದರಾಬಾದ್ ನ ಖ್ಯಾತ ಅನುವಾದಕರಾದ, ಕವಿ ರಮೇಶ್ ಬಾಬು ಚಂದಕ ಚರ್ಲ ಅವರು, 'ಬೀಸಿ ಬಿಸಾಟದಿರು ಬಿಂಕದ ದೈವ-ವಿಜಯರಾಯ' ಪುಸ್ತಕ ಅನಾವರಣಗೊಳಿಸಿ ಮಾತನಾಡಿ, ದಾಸಪರಂಪರೆಯ ಶ್ರೀ ವಿಜಯದಾಸರನ್ನು ಎಷ್ಟು ಸ್ಮರಿಸಿದರು ಸಾಲದು, ಅವರೊಬ್ಬ ಮಹಾಮಹಿಮರು. ವಿಜಯದಾಸರ ಕುರಿತು ರಚಿಸಿದ ಈ ಪುಸ್ತಕ ಅತ್ಯಂತ ಅದ್ಭುತವಾಗಿ ಮೂಡಿಬಂದಿದೆ, ಪ್ರತಿಯೊಬ್ಬರು ಖರೀದಿ ಸಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಮಂತ್ರಾಲಯದ ಶ್ರೀ ರಾಘವೇಂದ್ರ ಸಾಹಿತ್ಯ ಪ್ರತಿಷ್ಠಾನದ ಸಂಚಾಲಕಪಂ.ಸುಳಾದಿಹನುಮೇಶದಾಸರು ಅವರಿಂದ ದಾಸವರೇಣ್ಯ ಶ್ರೀ ವಿಜಯದಾಸರ ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಶ್ರೀರಾಘವೇಂದ್ರ ಸ್ವಾಮಿ ಮಠದ ಆಡಳಿತಾಧಿಕಾರಿ ಪಂ.ಪ್ರಸನ್ನಾಚಾರ, ಬಳ್ಳಾರಿಯ ಪುನರುತ್ಥಾನ ಅಧ್ಯಯನ ಕೇಂದ್ರದ ಶ್ರೀನಾಥ್ ಜೋಶಿ, ಹಿರಿಯ ನ್ಯಾಯವಾದಿಗಳಾದ ಡಾಣಾಪೂರ ಶ್ರೀನಿವಾಸ್, ಮಧುಸೂಧನ್ ರಾವ್, ಹೊಸಪೇಟೆಯ ಡಾ.ರಾಘವೇಂದ್ರ ಆಚಾರ, ಶ್ರೀನಿವಾಸ್ ದಾಸ್, ನರಸಿಂಹ ಮೂರ್ತಿ, ರಘುನಂದನ್ ಸೇರಿದಂತೆ ಇತರರಿದ್ದರು.



ಪತ್ರಕರ್ತರು ಆರೋಗ್ಯದ ಕಡೆ ಗಮನ ಹರಿಸಲಿ

• **ಯಾದಗಿರಿ:** ನಿತ್ಯ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸುವುದು ತುಂಬ ಅಗತ್ಯವಿದೆ ಎಂದು ಆಶೀರ್ವಾದ ಆಸ್ಪತ್ರೆ ಮುಖ್ಯಸ್ಥ ಡಾ. ಸಿ.ಎಂ. ಪಾಟೀಲ ಹೇಳಿದರು.

ವೈದ್ಯರ ದಿನಾಚರಣೆ ಅಂಗವಾಗಿ ಆಶೀರ್ವಾದ ಆಸ್ಪತ್ರೆ ಮತ್ತು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಪತ್ರಕರ್ತರಿಗಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ವೈದ್ಯರೊಂದಿಗೆ ಸಮಾಲೋಚನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪತ್ರಕರ್ತರು ಸಮಾಜದ ಕನ್ನಡಿ ಆಗಿದ್ದಾರೆ. ವ್ಯವಸ್ಥೆಯ ಲೋಪದೋಷಗಳನ್ನು ನಿವಾರಿಸಲು ಪ್ರಾಮಾಣಿಕವಾಗಿ ಸೇವೆ ಮಾಡುತ್ತಿದ್ದಾರೆ. ಹೀಗಾಗಿ ಆರೋಗ್ಯ ಕಾಪಾಡಿಕೊಂಡು ಜೀವನ ನಡೆಸುವುದು ಅಗತ್ಯವಿದೆ ಎಂದು ಹೇಳಿದರು.

ದೃಷ್ಟಿ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ. ಎಚ್. ಭೀಮರಡ್ಡಿ ಮಾತನಾಡಿ, ಮನುಷ್ಯನಿಗೆ ಎಲ್ಲ ಅಂಗಾಂಗಳ ಪೈಕಿ ನೇತ್ರಗಳು ಅತೀ ಮುಖ್ಯವಾಗಿವೆ .ನೇತ್ರಗಳ ಸುರಕ್ಷಿತೆಗೆ ಆಧ್ಯತೆ ನೀಡಬೇಕಿದೆ. ಯಾವುದೇ ಕಾರಣಕ್ಕೂ ಕೂಡ ನಿರ್ಲಕ್ಷ್ಯ ಮಾಡಬಾರದು.ಇದರಿಂದಾಗಿ ವ್ಯತಿರಿಕ್ತವಾಗಿ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಮಾತನಾಡಿ, ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ಜೀವನ ಕಳೆದುಕೊಂಡಿರುವುದು ಕಾಣಬಹುದು. ಹೀಗಾಗಿ ನಾವು ಮೊದಲು ಆರೋಗ್ಯದ ಕಡೆಗೆ ಗಮನ ಹರಿಸಬೇಕು ಎಂದರು.

ಇದೇ ವೇಳೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಶೀರ್ವಾದ ಆಸ್ಪತ್ರೆ ಮುಖ್ಯಸ್ಥ ಡಾ.ಸಿ.ಎಂ. ಪಾಟೀಲ್ ಮತ್ತು ದೃಷ್ಟಿ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ. ಎಚ್.ಭೀಮರಡ್ಡಿ ಅವರಿಗೆ ಸನ್ಮಾನಿಸಲಾಯಿತು.

ಹಲವು ವೈದ್ಯಕೀಯ ತಪಾಸಣೆ

ಮಧುಮೇಹ ಪರೀಕ್ಷೆ,ಇಸಿಜಿ, ಬಿಪಿ, ನೇತ್ರ ಪರೀಕ್ಷೆ, ರಕ್ತ ಪರೀಕ್ಷೆ, ಎಕ್ಸ್‌ರೇ ಸೇರಿದಂತೆ ಇನ್ನಿತರ ಪರೀಕ್ಷೆಗಳನ್ನು ವೈದ್ಯರು ಮಾಡುವ ಮೂಲಕ ಅಗತ್ಯವಾದ ಸಲಹೆಗಳನ್ನು ಪತ್ರಕರ್ತರಿಗೆ ನೀಡಿದರು. ಶಿಬಿರದಲ್ಲಿ 60ಕ್ಕೂ ಅಧಿಕ ಪತ್ರಕರ್ತರು ಭಾಗವಹಿಸುವ ಮೂಲಕ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿದರು. ಜಿಲ್ಲೆಯ ಎಲ್ಲ ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶದ ಪತ್ರಕರ್ತರು ಭಾಗವಹಿಸಿದ್ದರು.



ಕಾಂಗ್ರೆಸ್ ಸರ್ಕಾರದ ವಿರುದ್ಧ ಬಂಜಾರಾ ಸಮಾಜದ ಬೃಹತ್ ಆಕ್ರೋಶ

• **ಬೀದರ್:** ಒಳ ಮೀಸಲಾತಿಯ ಅವೈಜ್ಞಾನಿಕ ಹಂಚಿಕೆಯ ಮೂಲಕ ಬಂಜಾರಾ ಸಮಾಜಕ್ಕೆ ಅನ್ಯಾಯ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾಜಿ ಸಚಿವರು ಹಾಗೂ ಔರಾದ(ಬಿ) ಕ್ಷೇತ್ರದ ಶಾಸಕರಾದ ಪ್ರಭು ಬಿ. ಚವ್ಹಾಣ ಅವರ ನೇತೃತ್ವದಲ್ಲಿ ಸೋಮವಾರ ಬೀದರ ನಗರದಲ್ಲಿ ಬೃಹತ್ ಜನಜಾಗೃತಿ ಸಮಾವೇಶ ಹಾಗೂ ಪ್ರತಿಭಟನಾ ಮೆರವಣಿಗೆ ನಡೆಯಿತು.

ಪ್ರತಿಭಟನೆಯ ಆರಂಭಕ್ಕೂ ಮುನ್ನ ಜಿಲ್ಲಾ ಬಂಜಾರಾ ಭವನದ ಬಳಿಯಿರುವ ಭವಾನಿ ದೇವಿ ಹಾಗೂ ಸಂತ ಶ್ರೀ ಸೇವಾಲಾಲ ಮಹಾರಾಜರ ಮಂದಿರಕ್ಕೆ ಸಮಾಜದ ಮುಖಂಡರು ತೆರಳಿ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಬಳಿಕ ಅಲ್ಲಿಂದಲೇ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಸಾವಿರಾರು ಸಂಖ್ಯೆಯ ಬಂಜಾರಾ ಸಮಾಜದ ಮುಖಂಡರು, ಮಹಿಳೆಯರು, ಯುವಕರು ಹಾಗೂ ಸಮಾಜ ಬಾಂಧವರು ಕಾಲ್ನಡಿಗೆಯ ಮೂಲಕ ಮೆರವಣಿಗೆ ನಡೆಸಿ ಝೀರಾ ಫಂಕ್ಷನ್ ಹಾಲ್ ವರೆಗೆ ತೆರಳಿದರು. ಈ ವೇಳೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಬಂಜಾರಾ ಸಮಾಜಕ್ಕೆ ಆಗಿರುವ ಅನ್ಯಾಯವನ್ನು ಖಂಡಿಸಿ ಸರ್ಕಾರಕ್ಕೆ ತೀವ್ರ ಎಚ್ಚರಿಕೆ ನೀಡಿದರು.



ಶಾಸಕ ಪ್ರಭು ಚವ್ಹಾಣ, ಕಲಬುರಗಿಯ ಮಾಜಿ ಸಂಸದ ಡಾ.ಉಮೇಶ ಜಾಧವ, ಶಾಸಕ ಡಾ.ಚಂದ್ರು ಲಮಾಣಿ, ಮುಖಂಡರಾದ ಮಣಿಕಂಠ ರಾಠೋಡ, ಲಿಂಬಾ ನಾಯಕ್, ಮುಖಂಡರಾದ ಅಣ್ಣಾರಾವ ರಾಠೋಡ, ತಾನಾಜಿ ರಾಠೋಡ, ರಾಮಶೆಟ್ಟಿ ಪನ್ನಾಳೆ, ಗುರುನಾಥ ರಾಜಗೀರೆ, ಶಿವಾಜಿರಾವ ಪಾಟೀಲ ಮುಂಗನಾಳ, ಸಚಿನ್ ರಾಠೋಡ, ಸುಜಿತ್ ರಾಠೋಡ, ಪ್ರದೀಪ್ ಪವಾರ, ಭಗುಸಿಂಗ್ ಜಾಧವ, ಗೋಪಾಲಸಿಂಗ್ ರಾಠೋಡ, ವೀರಶೆಟ್ಟಿ ರಾಠೋಡ, ಮಾಣಿಕ ಪವಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.


ಹಳೆಯ ದಿನಗಳು ಮರುಕಳಿಸುವಂತೆ ಮಾಡಿದ ಸ್ನೇಹ ಸಮ್ಮಿಲನ

• **ಹಗರಿಬೊಮ್ಮನಹಳ್ಳಿ:** ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ ಎಂಬ ಶ್ಲೋಕದಂತೆ ಗುರುಗಳ ಗುರುತರನಾದ ಜವಾಬ್ದಾರಿಯನ್ನು ರುವಾರಿಯಂತೆ ನಿರ್ವಹಿಸಿದ ಗುರುಗಳಿಗೆ ವಂದನೆ ಸಲ್ಲಿಸುವ ಗುರುವಂದನ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಅರ್ಥಪೂರ್ಣವಾಗಿ ಭಾವನಾತ್ಮಕವಾಗಿ ನಡೆಯಿತು.

ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕೆ. ಪಾಮ ಸ್ವಾಮಿ ಜಿಲ್ಲಾ ಪರಿಷತ್ ಪ್ರೌಢಶಾಲೆ 1985 ರಿಂದ 1995 ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ವಿಶ್ವಕರ್ಮ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸ್ನೇಹ ಸಮ್ಮಿಲನ ಹಾಗೂ ಗುರು ವಂದನಾ ಕಾರ್ಯಕ್ರಮದಲ್ಲಿ ವಿದ್ಯಾ ಕಲಿಸಿದ ಗುರುಗಳ ಬಗ್ಗೆ ಗುಣಗಾನ ಮಾಡಲಾಯಿತು.

ಒಂದಕ್ಷರ ಕಲಿಸಿದಾತಂ ಗುರುಂ ಎಂಬಂತೆ ತಮಿಗೆ ವಿದ್ಯಾ ಕಲಿಸಿದ ಗುರುಗಳಿಂದ ಕಲಿತ ಆಟ ಪಾಠ ಜೊತೆಗಿದ್ದ ಒಡನಾಟಗಳ ಬಗ್ಗೆ ಮೆಲುಕು ಹಾಕಿದರು. ಗುರುಗಳಿಂದ ಶಿಸ್ತು ಸಂಯಮ ರೂಡಿಸಿ ಕೊಂಡ ಬಗೆ ಗುರುಗಳ ಕಲಿಸಿದ ವಿದ್ಯಾದ ಫಲವಾಗಿ ಜೀವನವನ್ನು ಕಂಡು ಕೊಂಡ ರೀತಿ ತಾವು ಮಾಡುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಹಳೆಯ ದಿನಗಳ ನೆನಪುಗಳ ಬುತ್ತಿಗಳನ್ನು ಹೊರ ಹಾಕಿದರು.

ಈ ವೇಳೆ ವಿದ್ಯೆ ಕಲಿಸಿದ ಶಂಭುಲಿಂಗಪ್ಪ ,ಜಾತಯ್ಯ, ಚಂದ್ರಶೇಖರ್, ನಾಗರತ್ನಮ್ಮ, ಮಲ್ಲಿಕಾರ್ಜುನ, ಚಿದಾನಂದಪ್ಪ, ನಾಗಪ್ಪ, ಉಮಾಪತಿ ಸೇರಿದಂತೆ ಇತರ ಗುರುಗಳಿಗೆ ಸನ್ಮಾನ ಮಾಡುವ ಮೂಲಕ ಗೌರವಿಸಲಾಯಿತು.ಇದಕ್ಕೂ ಮುನ್ನ ಅಗಲಿದ ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಸಂತಾಪ ಸೂಚಿಸಲಾಯಿತು.



ಈ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿನಿ ಪುರಸಭೆ ಸದಸ್ಯೆ ಚೆನ್ನಮ್ಮ ಎಚ್. ಎಂ, ಸೌಭಾಗ್ಯ, ಮಹೇಶ್ವರಿ, ಕಾಂಚನ, ಶಿವಲೀಲಾ, ಪ್ರಮೋದ್ ಮದ್ವಾರಾಜ, ಪಚ್ಚಿ ಕೊಟ್ರೇಶ್, ವೆಂಕಟೇಶ್, ಗಾರ್ಗಿ ನಾಗರಾಜ್, ರಾಘವೇಂದ್ರ ಆಚಾರ್, ಕುಷ್ಟಗಿ ಹುಸೇನ್ , ಹರೆಗೊಂಡನಹಳ್ಳಿಯ ಭೀಮಪ್ಪ, ಗೂಳಪ್ಪ ಮುಂತಾದ ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಭರತನಾಟ್ಯ ಪರೀಕ್ಷೆ: ವಚನಾ ಕುಂಬಾರಗೆ ದ್ವಿತೀಯ ಸ್ಥಾನ

• **ಸುರಪುರ:** ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲ ಮುಂಬೈ ವತಿಯಿಂದ ಕಳೆದ ಏಪ್ರಿಲ್ ತಿಂಗಳಲ್ಲಿ ಹುಬ್ಬಳ್ಳಿಯ ಮಹಾ ಸರಸ್ವತಿ ನಾಟ್ಯ ಕಲಾ ಮಂದಿರದಲ್ಲಿ ನಡೆಸಿದ ಭರತನಾಟ್ಯ ಪ್ರವೇಶಿಕ ಪರೀಕ್ಷೆಯಲ್ಲಿ ಪಟ್ಟಣದ ಶ್ರೀ ಖಾಸ್ಗತೇಶ್ವರ ನೃತ್ಯ ಕಲಾ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಸಾಧನೆ ಮಾಡಿದ್ದಾರೆ.

ರಾಯಚೂರು ವಿಭಾಗದಿಂದ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳಲ್ಲಿ ಈ ಸಂಸ್ಥೆಯ ವಿದ್ಯಾರ್ಥಿನಿ ವಚನಾ ರಾಜು ಕುಂಬಾರ ವಿಭಾಗಕ್ಕೆ ದ್ವಿತೀಯ ಹಾಗೂ ಯಾದಗಿರಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಸಾಧನೆ ಮಾಡಿದ್ದಾಳೆ. ಇದೇ ಶ್ರೀ ಖಾಸ್ಗತೇಶ್ವರ ನೃತ್ಯ ಕಲಾ ಸಂಸ್ಥೆಯಿಂದ ಪರೀಕ್ಷೆಗೆ ಹಾಜರಾಗಿದ್ದ ಇನ್ನುಳಿದ ಮೂರು ಜನ ವಿದ್ಯಾರ್ಥಿನಿಯರಾದ ಹಂಸಿನಿ ರೆಡ್ಡಿ, ಭಾವನ ಗುರುರಾಜ ಹಾಗೂ ಶಾಲಿನಿ ಶಿವಪುತ್ರ ಕುಂಬಾರ ಈ ಮಕ್ಕಳು ಕೂಡ ಕ್ರಮವಾಗಿ ಜಿಲ್ಲೆಗೆ ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡೆಯುವ ಮೂಲಕ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಸಂಸ್ಥೆಯ ಮಕ್ಕಳ ಈ ಸಾಧನೆಯ ಕುರಿತು ತರಬೇತುದಾರ ಅನಿಲಕುಮಾರ ಕೆ. ಮಾತನಾಡಿ, ನಮ್ಮ ಸಂಸ್ಥೆಯ ಮಕ್ಕಳು ಇಂತಹ ಉನ್ನತ ಮಟದ ಸಾಧನೆ ಮಾಡಿರುವುದು ತುಂಬಾ ಖುಷಿ ಮೂಡಿಸಿದೆ. ಮಕ್ಕಳಿಗೆ ಸಾಧನೆ ಮಾಡಲು ಉನ್ನತ ಮಾರ್ಗದರ್ಶನ ನೀಡಿರುವ ಭರತನಾಟ್ಯ ಕಲಾವಿದೆಯಾಗಿರುವ ಗುರುಗಳಾದ ಸಹನಾ ಭಟ್ ಅವರಿಗೂ ಹಾಗೂ ನನ್ನ ವಿದ್ಯಾ ಗುರುಗಳಾದ ಅಂತರಾಷ್ಟ್ರೀಯ ಭರತನಾಟ್ಯ ಕಲಾವಿದರಾದ ಮಂಜುನಾಥ ಗೋರ್ಕಲ್ ಗುರುಗಳಿಗೆ ಎಲ್ಲ ಮಕ್ಕಳು ಹಾಗೂ ಸಂಸ್ಥೆಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು. ಇನ್ನೂ ಅನೇಕ ಮಕ್ಕಳು ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದು ಆ ಎಲ್ಲ ಮಕ್ಕಳು ಕೂಡ ಇವರಂತೆಯೇ ಭರತನಾಟ್ಯದಲ್ಲಿ ಉನ್ನತ ಸಾಧನೆ ಮಾಡುವ ವಿಶ್ವಾಸವಿದೆ ಎಂದರು ಅಲ್ಲದೆ ಪೋಷಕರು ತಮ್ಮ ಮಕ್ಕಳನ್ನು ನಮ್ಮ ಸಂಸ್ಥೆಗೆ ಸೇರಿಸುವ ಮೂಲಕ ಮಕ್ಕಳಲ್ಲಿ ಉತ್ತಮ ಪ್ರತಿಭೆಯನ್ನು ಮೂಡಿಸಲು ಸಂಸ್ಥೆಯ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ರಕ್ತದಾನ ಮಹತ್ವದ ಕಾರ್ಯ: ತಿಪ್ಪೇಸ್ವಾಮಿ

• **ಕಾನಹೊಸಹಳ್ಳಿ:** ಅಪಘಾತವಾದಾಗ ಮತ್ತೊಂದು ಜೀವ ಉಳಿಸಲು ರಕ್ತ ಮಹತ್ವವಹಿಸುತ್ತದೆ ಆದ್ದರಿಂದ ರಕ್ತದಾನ ಮಾಡುವುದು ಕೂಡ ಒಂದು ಮಹತ್ವದ ಕಾರ್ಯ ಎಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ ತಿಳಿಸಿದರು.

ಸಮೀಪದ ಗುಂಡುಮುಣುಗು ಗ್ರಾಮದಲ್ಲಿ ತಮ್ಮ ಕುಟುಂಬದ ಯುವಕ ರೋಹನ್ ಸ್ಮರಣಾರ್ಥವಾಗಿ ರಕ್ತದಾನ ಶಿಬಿರ ಉದ್ಘಾಟಿಸಿ ನಂತರ ಅವರು ಮಾತನಾಡಿದರು. ನಮ್ಮ ಕುಟುಂಬದ ಯುವಕ ರೋಹನ್ ಅಕಾಲಿಕ ಮರಣವಾಗಿದ್ದು ಇಂದು ಅವರ ಜನ್ಮದಿನದ ಪ್ರಯುಕ್ತ ಮತ್ತಷ್ಟು ಜೀವಗಳು ಉಳಿಯಲಿ ಎನ್ನುವ ದೃಷ್ಟಿಯಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ. ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಬೇಕು ಇದರಿಂದಾಗಿ ಮತ್ತೊಂದು ಜೀವ ಉಳಿಸುವ ಪುಣ್ಯ ಸಿಗುತ್ತದೆ ಎಂದರು. ಮುಖಂಡರಾದ ಕೆ. ನಾಗೇಂದ್ರಪ್ಪ, ಕೆ.ಬಿ. ಚಿದಾನಂದ ಗೌಡ, ಕೆ. ಶರಣೇಶ, ಮಾಜಿ ಜಿಪಂ ಸದಸ್ಯ ಎಚ್. ರೇವಣ್ಣ, ಗ್ರಾಪಂ ಸದಸ್ಯರಾದ ಶ್ರೀಕಾಂತ್, ಚಂದ್ರಗೌಡ ಕೆ.ಬಿ., ಆಶಾ ಕಾರ್ಯಕರ್ತೆ ಲಕ್ಷ್ಮೀ ಎಸ್., ಶರಣೇಶ್ ಗೌಡ ಜಿ., ಆಕಾಶ್ ಎಸ್.ಪಿ., ಬಳ್ಳಾರಿ ವಿಮ್ಸ್ ಆಸ್ಪತ್ರೆಯ ತಿಪ್ಪೇಸ್ವಾಮಿ, ಸಂತೋಷ್ ಸಿಎಚ್‌ಓ ರಾಘವೇಂದ್ರ, ಎನ್ ಸಿ ಡಿ ಆಪ್ತಸಮಾಲೋಚಕ ಅಂಜಿನಪ್ಪ, ಚಿಕ್ಕಜೋಗಿಹಳ್ಳಿ ಆಸ್ಪತ್ರೆಯ ಅಂಜಲಿ ಇತರರಿದ್ದರು.



ಜುಲೈ ಮೊದಲ ವಾರದಲ್ಲಿ ರಾಜ್ಯಾದ್ಯಂತ ಧರಣಿ: ಡಾ.ಜಗದೀಶ್

• **ಕೊಟ್ಟೂರು:** ಪದವಿ ಪೂರ್ವ ಉಪನ್ಯಾಸಕರು 9 ಮತ್ತು 10ನೇ ತರಗಳಿಗೆ ಬೋಧನೆ ಮಾಡಬೇಕೆಂಬ ನಿಯಮ ಜಾರಿ ಮಾಡಿರುವ ಸರ್ಕಾರ, ತನ್ನ ಆದೇಶವನ್ನು ತಕ್ಷಣ ವಾಪಸ್ಸು ಪಡೆಯದಿದ್ದರೆ ಜುಲೈ ಮೊದಲ ವಾರದಲ್ಲಿ ರಾಜ್ಯಾದ್ಯಂತ ನಮ್ಮ ಸಂಘದಿಂದ ಧರಣಿ ಕೈಗೊಳ್ಳಲಾಗುವುದು ಎಂದು ತಾಲೂಕು ಉಪನ್ಯಾಸಕ ಸಂಘದ ಅಧ್ಯಕ್ಷ ಡಾ.ಜಗದೀಶ್ ಚಂದ್ರಭೋಸ್ ಎಚ್ಚರಿಸಿದರು.

ಪಟ್ಟಣದಲ್ಲಿ ಈ ಕುರಿತು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಬಿ.ಇಡಿ, ಸ್ನಾತಕೋತ್ತರ ಪದವಿಗಳ ವಿದ್ಯಾರ್ಹತೆಯನ್ನು ಪಡೆದು ಗೆಜೆಟೆಡ್ ಬಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಿಯು ಉಪನ್ಯಾಸಕರಿಗೆ ಪ್ರೌಢ ಶಾಲಾ ಶಿಕ್ಷಕರ ಸಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಸರ್ಕಾರ ತಂದಿರುವ ನಿಯಮ, ಉಪನ್ಯಾಸಕರ ವೃತ್ತಿ ಗೌರವಕ್ಕೆ ಧಕ್ಕೆ ತರಲಿದೆ. ಇರುವ ಹುದ್ದೆಯಲ್ಲಿ ಭಡ್ತಿ ನೀಡಿ ಪದವಿ ತರಗತಿಗಳಿಗೆ ಬೋಧನೆ ಮಾಡಲು ಸರಕಾರ ಸೂಚಿಸಿದರೆ ಅದನ್ನು ಗೌರವದಿಂದ ಮಾಡುತ್ತೇವೆ. ಆದರೆ ನಮಗೆ ಅಗೌರವವಾಗುವಂತೆ ಕಾರ್ಯ ನಿರ್ವಹಿಸಲು ಸರಕಾರ ಮುಂದಾಗಬಾರದು ಎಂದರು.

ಪಿಯು ಉಪನ್ಯಾಸಕರು ಪ್ರೌಢ ಶಾಲೆಗೆ ಬೋಧನೆ ಮಾಡಬೇಕೆಂಬ ನಿಯಮ ಜಾರಿಗೆ ತರುವ ಮೊದಲು ಸರ್ಕಾರ, ಶಿಕ್ಷಣ ತಜ್ಞರಿಂದ ಸೂಕ್ತ ಸಲಹೆ ಪಡೆಯಬೇಕಿತ್ತು. ಪಿಯು ಉಪನ್ಯಾಸಕರ ಸಂಘದ ಪದಾಧಿಕಾರಿಗಳ ಜೊತೆ ಸಭೆ ನಡೆಸಿ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಬೇಕಿತ್ತು. ಆದರೆ ಸರ್ಕಾರ ಇದ್ಯಾವುದನ್ನೂ ಮಾಡದೇ ಏಕಾಏಕಿಯಾಗಿ ಇಂತಹ ಅಗೌರವದ ನಿಯಮ ಜಾರಿಗೆ ತರುವ ಮೂಲಕ ಉಪನ್ಯಾಸಕರ ವಿರೋಧವನ್ನು ಮಾಡಿಕೊಂಡಿದೆ.



ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಬಾರದೆಂಬ ಎಚ್ಚರಿಕೆ ವಹಿಸಿ ಸರಕಾರದ ನಿಯಮದ ವಿರುದ್ಧ ಪತ್ರ ಚಳುವಳಿ ನಡೆಸಿ ಗಮನಕ್ಕೆ ತಂದಿದ್ದೇವೆ. ಇದರ ಮೇಲೂ ಸರಕಾರ ನಿಯಮದ ಆದೇಶವನ್ನು ವಾಪಸ್ಸು ಪಡೆಯದಿದ್ದರೆ ಜುಲೈ ಮೊದಲ ವಾರದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಮ್ಮ ಸಂಘದ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದೇವೆ. ನಮ್ಮ ಮನವಿಯನ್ನು ಸರಕಾರ ಪುರಸ್ಕರಿಸಿ ತನ್ನ ಆದೇಶ ವಾಪಸ್ಸು ಪಡೆಯಬೇಕು. ಇಲ್ಲವಾದಲ್ಲಿ ಇದು ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಲಿದೆ ಎಂದು ಹೇಳಿದರು.

ಪಿಯು ಉಪನ್ಯಾಸಕರ ಸಂಘದ ತಾಲೂಕು ಗೌರವಾಧ್ಯಕ್ಷ ಕೆ.ಎಂ.ಜಯಣ್ಣ ಮಾತನಾಡಿದರು. ಸಂಘದ ಜಿಲ್ಲಾ ಸಂಚಾಲಕಿ ಶಶಿರೇಖಾ, ಉಪನ್ಯಾಸಕರಾದ ಪರಶುರಾಮ, ಡಿ. ಅಂಜಿನಪ್ಪ, ಡಾ.ಪ್ರಶಾಂತಕುಮಾರ್, ಕುಮಾರಸ್ವಾಮಿ, ಸತ್ರಪ್ಪರೆಡ್ಡಿ, ನಾಗಯ್ಯ, ಸಿದ್ದಲಿಂಗಗೌಡ, ಮೂಗಪ್ಪ, ರವಿಕುಮಾರ್ ಇದ್ದರು.